ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಷ್ಪಕ್ ಪ್ರಯೋಗ 3ನೇ ಬಾರಿಯೂ ಯಶಸ್ವಿ

- ಉಪಗ್ರಹ ವಾಹಕ ಗಗನ ನೌಕೆ ಪುಷ್ಪಕ್
- ಇಸ್ರೋ ನಿರ್ಮಿತ ಮರು ಬಳಕೆ ನೌಕೆ
- ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಬಳಿ ಪ್ರಯೋಗ
- ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಸಾಧನೆ
- 4.5 ಕಿ.ಮೀ ಎತ್ತರದಿಂದ ಸುರಕ್ಷಿತ ಲ್ಯಾಂಡಿಂಗ್
- ಮುಂದೆ ಆರ್ಬಿಟಲ್ ಪರೀಕ್ಷೆಗೆ ಬಳಕೆಗೆ ಚಿಂತನೆ
- ಇಸ್ರೋಗೆ ಸಿಕ್ಕ ಗಗನಯಾನ ಗೇಮ್ ಚೇಂಜರ್

ಪುಷ್ಪಕ್ ದೇಶೀಯವಾಗಿಯೇ ಅಭಿವೃದ್ಧಿ ಪಡಿಸಿದ ಮರು ಬಳಕೆ ಗಗನನೌಕೆಯಾಗಿದೆ. ಆತ್ಮನಿರ್ಭರ ಭಾರತದ ಸಾಧನೆಗೆ ಉತ್ತಮ ಉದಾಹರಣೆಯಾಗಿದೆ. ಮರು ಬಳಕೆ ಅವಕಾಶ ಇರುವುದರಿಂದ ಭವಿಷ್ಯದಲ್ಲಿ ಉಪಗ್ರಹಗಳ ಉಡಾವಣೆ ವೆಚ್ಚದಲ್ಲಿ ಭಾರೀ ಉಳಿತಾಯ ನಿರೀಕ್ಷೆ ಮಾಡಬಹುದಾಗಿದೆ. ಇಸ್ರೋ ಮಟ್ಟಿಗೆ ಇದು ಬಹಳ ದೊಡ್ಡ ಗೇಮ್ ಚೇಂಜರ್ ಆಗಿದೆ.
-ಎಸ್.ಸೋಮನಾಥ್ ಇಸ್ರೋ ಮುಖ್ಯಸ್ಥ

ಪುಟ ತೆರೆದಂತೆ...

ಸಂತೋಷದ ಪ್ರಭಾವಳಿ ಹೆಚ್ಚುತ್ತಿದೆ
ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಆತ ಆಟಗಾರ, ಮಾಟಗಾರ, ಮಾತುಗಾರ!
ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದ ಮೇಲೆ ಒಂದು ಕೈಗಾರಿಕೆಯೂ ಬಂದಿಲ್ಲ. ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರವು ಕೈಗಾರಿಕೆಗಳನ್ನು ಸ್ಥಾಪಿಸಲು ಹೊರಟಾಗ ಅದಕ್ಕೂ ಕಾಂಗ್ರೆಸ್ ತಕರಾರು ಮಾಡುತ್ತಿದೆ. ಎಲ್ಲದರಲ್ಲೂ ರಾಜಕೀಯ ಮಾಡುತ್ತಾ ಕುಳಿತರೆ ರಾಜ್ಯದ ಅಭಿವೃದ್ಧಿ ಹೇಗಾಗುತ್ತದೆ ಹೇಳಿ?
ಬಿ.ವೈ.ವಿಜಯೇಂದ್ರ
ರಾಜ್ಯಾಧ್ಯಕ್ಷ

ದಾರಿದೀಪೋಕ್ತಿ

ಜೀವನದ ಯಾವ ಸನ್ನಿವೇಶವೂ ಶಾಶ್ವತವಲ್ಲ. ಬದುಕು ಚೆನ್ನಾಗಿದ್ದಾಗ, ನೀವು ಸಂತೋಷಪಡುತ್ತೀರಿ. ಬದುಕು ಚೆನ್ನಾಗಿ ಇಲ್ಲದಾಗ ಒಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಿ. ಅದೇನೆಂದರೆ ಅದು ಸಹ ಶಾಶ್ವತವಲ್ಲ ಮತ್ತು ಒಳ್ಳೆಯ ದಿನಗಳು ಸನಿಹದಲ್ಲಿವೆ. ಹೀಗಾಗಿ ಚಿಂತೆ ಮಾಡುವ ಅಗತ್ಯವಿಲ್ಲ.

ವಕ್ರತುಂಡೋಕ್ತಿ

ಕುಡಿತ ಕೆಟ್ಟದ್ದು. ಅದಕ್ಕಾಗಿ ಆಲ್ಕೋಹಾಲ್ ಜಾಹೀರಾತಿನಲ್ಲಿ ಕುಡಿದವರನ್ನು ಎಂದೂ ತೋರಿಸುವುದಿಲ್ಲ.

ಮಹಿಳಾ ಪೇದೆ ನಂಟು: ಡಿವೈಎಸ್‌ಪಿಗೆ ಹಿಂಬಡ್ತಿ

ಲಖನೌ: ಡಿವೈಎಸ್‌ಪಿಯೊಬ್ಬ ಮಹಿಳಾ ಪೇದೆ ಜತೆ ಅಕ್ರಮ ಸಂಬಂಧ ಹೊಂದಿದ್ದ ಕಾರಣಕ್ಕೆ ಡಿವೈಎಸ್‌ಪಿ ಹುದ್ದೆಯಿಂದ ಸಾಮಾನ್ಯ ಪೇದೆ ಶ್ರೇಣಿಗೆ ಹಿಂಬಡ್ತಿ ನೀಡಲಾಗಿದೆ.

ಉನ್ನಾವೋ ಬಿಘಪುರ ಠಾಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಶಂಕರ್ ಕನೌಜಿಯಾ ಬಳಿಕ ಡಿವೈಎಸ್‌ಪಿಯಾಗಿದ್ದರು. ನಂತರದಲ್ಲಿ ಮಹಿಳಾ ಪೇದೆ ಜತೆ ಅಕ್ರಮ ಸಂಬಂಧ ಬೆಳೆಸಿದ್ದರು. ಒಂದು ವಾರ ರಜೆ ಪಡೆದ ಶಂಕರ್, ಪೇದೆ ಜತೆ ಲಾಡ್ಜ್‌ನಲ್ಲಿ ಇದ್ದಾಗಲೇ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಪರಿಣಾಮ ಸರಕಾರವು ಶಂಕರ್ ಕನೌಜಿಯಾ ಅವರನ್ನು ಪೇದೆ ಹುದ್ದೆಗೆ ಹಿಂಬಡ್ತಿ ನೀಡಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -



ಪರಪ್ಪನ ಅಗ್ರಹಾರ ಸೇರಿದ ವಿಧಾನ ಪರಿಷತ್ ಸದಸ್ಯ

ಸೂರಜ್‌ಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ಸಲಿಂಗ ಕಾಮ, ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದ್ದು, ಭಾನುವಾರ ಸಂಜೆ ಪರಪ್ಪನ ಅಗ್ರಹಾರ ಜೈಲುಪಾಲಾಗಿದ್ದಾರೆ.

ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದಲ್ಲಿ ಆರೋಪಿಯಾಗಿರುವ ಸೂರಜ್ ರೇವಣ್ಣ ಅವರನ್ನು ತನಿಖಾಧಿಕಾರಿ ಸಕಲೇಶಪುರ ಡಿವೈಎಸ್‌ಪಿ ಪ್ರಮೋದ್ ಕುಮಾರ್ ಅವರು ಭಾನುವಾರ ಮುಂಜಾನೆವರೆಗೂ ಹಾಸನದ ಸಿಇಎನ್ ಠಾಣೆಯಲ್ಲಿ ಪೊಲೀಸರು ವಿಚಾರಣೆ ನಡೆಸಿ, ಭಾನುವಾರ ಬೆಳಗ್ಗೆ ಬಂಧಿಸಿದ್ದರು. ಹಾಸನದಲ್ಲಿ ವೈದ್ಯಕೀಯ ಪರೀಕ್ಷೆ ಬಳಿಕ ಸೂರಜ್‌ನ್ನು ಬೆಂಗಳೂರಿನ ಕೋರಮಂಗಲದ 42ನೇ ಎಸಿಎಂಎಂ ನ್ಯಾಯಾಧೀಶರ ನಿವಾಸಕ್ಕೆ ಭಾನುವಾರ ಹಾಜರು ಪಡಿಸಲಾಗಿತ್ತು. ಪ್ರಕರಣದ ವಿಚಾರಣೆ ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಲು ನ್ಯಾಯಾಧೀಶರು ಸೂಚಿಸಿದ್ದಾರೆ. ಸೋಮವಾರ ಬಾಡಿವಾರೆಂಟ್ ಮೇಲೆ ಸಿಐಡಿ ವಶಕ್ಕೆ ಪಡೆಯುವ ಸಾಧ್ಯತೆಯಿದೆ.

ಈಗಾಗಲೇ ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆಯ ಹೊಣೆ ಹೊತ್ತಿರುವ ಸಿಐಡಿ, ಆರ್ಥಿಕ ಅಪ ರಾಧಗಳ ವಿಭಾಗದ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ತಂಡಕ್ಕೆ ತನಿ ಖೆಯ ಜವಾಬ್ದಾರಿ ನೀಡಿದೆ. ಇದು ವರೆಗಿನ ತನಿಖಾ ವರದಿ ಯನ್ನು ಸಿಐಡಿ ತನಿಖಾಧಿಕಾರಿಗಳಿಗೆ ಹಸ್ತಾಂ ತರಿಸುವಂತೆ ಹೊಳೆನರಸೀಪುರ ಪೊಲೀಸರಿಗೆ ಸೂಚಿಸಲಾಗಿದೆ.

ಸೂರಜ್ ಮೊಬೈಲ್ ಜಪ್ತಿ: ಸೂರಜ್ ರೇವಣ್ಣ ಮೊಬೈಲ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಬ್ಲ್ಯಾಕ್ ಮೇಲ್ ವಿಚಾರವಾಗಿ ಮೊಬೈಲ್ ಸಾಕ್ಷ್ಯಗಳನ್ನು ನೀಡಲು ಸೂರಜ್ ಮುಂದಾಗಿದ್ದಾಗ ಅವರನ್ನು ಪೊಲೀಸರು ಬಂಧಿಸಿದ್ದರು. ಇದೀಗ ಅವರ ಮೊಬೈಲ್ ಜಪ್ತಿ ಮಾಡಿ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಪಟ್ಟ ಸಾಕ್ಷ್ಯ ಸಂಗ್ರಹಕ್ಕೆ ಪೊಲೀಸರು ಮುಂದಾಗಿದ್ದಾರೆ. ಮೊಬೈಲ್‌ನಿಂದ ಹೋಗಿರುವ ಸಂದೇಶಗಳು, ವಾಟ್ಸ್ ಆಫ್ ಕಾಲ್, ಫೋನ್ ಕಾಲ್ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

→ 4

- ಸೂರಜ್ ರೇವಣ್ಣ ವಿರುದ್ಧ ಜೆಡಿಎಸ್ ಕಾರ್ಯಕರ್ತನ ಜತೆ ಬಲವಂತದ ಸಲಿಂಗಕಾಮ ನಡೆಸಿದ ಆರೋಪ
- ಸೆನ್ ಠಾಣೆಯಲ್ಲಿ ಶನಿವಾರ ರಾತ್ರಿಯಿಂದ ವಿಚಾರಣೆ ನಡೆಸಿ, ಸೂರಜ್‌ನನ್ನು ಬೆಳಗ್ಗೆ ಬಂಧಿಸಿದ ಪೊಲೀಸರು
- 5 ಕೋಟಿ ರು. ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡಲಾಗಿದೆ ಎಂದು ಸಂತ್ರಸ್ತನ ವಿರುದ್ಧವೂ ಪ್ರತಿದೂರು ನೀಡಿದ ಸೂರಜ್

ಕಾನೂನು ಸಂಕಷ್ಟದಲ್ಲಿ ಇಡೀ ಕುಟುಂಬ

ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ಕುಟುಂಬದ ಎಲ್ಲ ಸದಸ್ಯರ ವಿರುದ್ಧ ಒಂದಲ್ಲಾ ಒಂದು ರೀತಿ ಪ್ರಕರಣಗಳು ದಾಖಲಾಗಿದ್ದು, ಇಡೀ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ಬಂಧನವಾದರೆ, ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಭವಾನಿ ಮತ್ತು ರೇವಣ್ಣ ಅವರ ಮೇಲೆ ಪ್ರಕರಣ ದಾಖಲಾಗಿದೆ. ಇದೀಗ ಹಿರಿಯ ಪುತ್ರ ಸೂರಜ್ ಕೂಡ ಬಂಧಿತರಾಗಿದ್ದಾರೆ. ಒಟ್ಟಿನಲ್ಲಿ ಸಾಲು ಸಾಲು ಸಂಕಷ್ಟಗಳು ರೇವಣ್ಣ ಕುಟುಂಬವನ್ನು ಹೈರಾಣು ಮಾಡಿದೆ.

ಆರೋಪ ಸಾಬೀತಾದರೆ ಶಿಕ್ಷೆ ಏನು?

ಸೂರಜ್ ರೇವಣ್ಣ ವಿರುದ್ಧ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಸೆಕ್ಷನ್ 342, 377, 506 ಅಡಿ ಎಫ್‌ಐಆರ್ ದಾಖಲಾಗಿದೆ. ಇದರಲ್ಲಿ ಸೆಕ್ಷನ್ 342 ಅಕ್ರಮವಾಗಿ ಬಂಧನಕ್ಕೆ ಸಂಬಂಧಿಸಿದ್ದು, 1 ವರ್ಷ ಶಿಕ್ಷೆ ಹಾಗೂ ದಂಡ, ಜಾಮೀನು ಸಹಿತ ಪ್ರಕರಣವಾಗಿದೆ. ಸೆಕ್ಷನ್ 377 ಅಸಹಜ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ್ದು, ಜೀವಾವಧಿ ಶಿಕ್ಷೆ ಅಥವಾ 10 ವರ್ಷ ಶಿಕ್ಷೆ, ದಂಡ ಮತ್ತು ಜಾಮೀನುರಹಿತ ಪ್ರಕರಣವಾಗಿದೆ. ಸೆಕ್ಷನ್ 506 ಕ್ರಿಮಿನಲ್ ಬೆದರಿಕೆ, ಪ್ರಾಣ ಬೆದರಿಕೆಗೆ ಸಂಬಂಧಿಸಿದ್ದು, ಕ್ರಿಮಿನಲ್ ಬೆದರಿಕೆ ಆಗಿದ್ದರೆ ಎರಡು ವರ್ಷ ಜೈಲು ಶಿಕ್ಷೆ, ಪ್ರಾಣ ಬೆದರಿಕೆ ಆಗಿದ್ದರೆ ಏಳು ವರ್ಷ ಶಿಕ್ಷೆ ಹಾಗೂ ದಂಡ ವಿಧಿಸಲಾಗುತ್ತದೆ.

ಸಂಸತ್ ಅಧಿವೇಶನ ಇಂದಿನಿಂದ ಶುರು

ದೆಹಲಿ: 18ನೇ ಲೋಕಸಭೆಯ ಮೊದಲ ಅಧಿವೇಶನ ಜೂ.24ರಿಂದ ಆರಂಭವಾಗಲಿದ್ದು ಜುಲೈ 3 ರವರೆಗೆ ನಡೆಯಲಿದೆ. ಲೋಕಸಭೆಗೆ ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮಹತಾಬ್ ಕಾರ್ಯ ನಿರ್ವ ಹಿಸಲಿದ್ದಾರೆ. ಅವರಿಂದ ನೂತನ ಸಂಸದರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಜೂ. 26ರಂದು ಲೋಕ ಸಭಾ ಸ್ಪೀಕರ್ ಚುನಾವಣೆ ನಡೆಯಲಿದೆ. 27 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು 18ನೇ ಲೋಕ ಸಭೆಯ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲಿದ್ದಾರೆ. ಎನ್‌ಡಿಎ 3ನೇ ಅವಧಿಯ ಸರಕಾರವನ್ನು ಮೊದಲ ಸಂಸತ್ ಅಧಿವೇಶನದಲ್ಲೇ ಕಟ್ಟಿಹಾಕಲು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಸಿದ್ಧತೆ ನಡೆಸಿವೆ.

- 18ನೇ ಲೋಕ ಸಭೆಯ ಮೊದಲ ಕಲಾಪ
- ನೀಟ್-ನೆಟ್ ಚರ್ಚೆಗೆ ಪ್ರತಿಪಕ್ಷಗಳು ಸಜ್ಜು
- ಬೆಲೆ ಏರಿಕೆ, ಬಿಸಿಗಾಳಿ, ಪ್ರವಾಹ ವಿಚಾರ ಚರ್ಚೆ

ಬಿ.ಆರ್.ಪಾಟೀಲ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷ?

ಬೆಂಗಳೂರು: ರಾಜ್ಯ ಪರಿವರ್ತನಾ ಸಂಸ್ಥೆಯ (ಹಿಂದಿನ ಕರ್ನಾಟಕ ರಾಜ್ಯ ಯೋಜನಾ ಮಂಡಳಿ) ಉಪಾಧ್ಯಕ್ಷರನ್ನಾಗಿ ಆಳಂದ ಶಾಸಕ ಬಿ. ಆರ್.ಪಾಟೀಲ ಅವರನ್ನು ನೇಮಿಸಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಇದೇ 19ರಂದು ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿರುವ ಸಿಎಂ, ಪಾಟೀಲ ಅವರಿಗೆ ಸಂಪುಟ ದರ್ಜೆ ಸ್ಥಾನಮಾನದೊಂದಿಗೆ ತಕ್ಷಣ ನೇಮಕ ಆದೇಶ ಹೊರಡಿಸಬೇಕು ಎಂದೂ ಹೇಳಿದ್ದಾರೆ.

ಕಾಂಗ್ರೆಸ್‌ನಲ್ಲಿ ಡಿಸಿಎಂ ಹುದ್ದೆ ಸದಾ ಬೂದಿಮುಚ್ಚಿದ ಕೆಂಡ ಸಿದ್ದು ಆಪ್ತ ಸಚಿವರು, ಡಿಕೆಶಿ ಬಣದ ನಡುವೆ ಪೈಪೋಟಿ

ಮೂರು ಡಿಸಿಎಂ ಹುದ್ದೆ ಸೃಷ್ಟಿ ಮತ್ತೆ ಮುನ್ನೆಲೆಗೆ

ಬೆಂಗಳೂರು: ಸಿದ್ದರಾಮಯ್ಯ ಸರಕಾರದಲ್ಲಿ ಬೂದಿ ಮುಚ್ಚಿದ ಕೆಂಡದಂತಿದ್ದ ಮೂರು ಡಿಸಿಎಂ ಹುದ್ದೆ ಸೃಷ್ಟಿ ಮತ್ತೆ ಮುನ್ನೆಲೆಗೆ ಬಂದಿದೆ.

ಸಂಪುಟದ ಸದಸ್ಯರು ಒಬ್ಬೊಬ್ಬರಾಗಿ ಸರತಿ ಮೇಲೆ ಅಭಿಪ್ರಾಯ ಹೊರಹಾಕುತ್ತಿದ್ದು, ಈಗಾಗಲೇ ಆರು ಸಚಿವರು, ಕೆಲವು ಶಾಸಕರು ಡಿಸಿಎಂ ಸೃಷ್ಟಿ ಬಗ್ಗೆ ಪ್ರತಿಕ್ರಿಯೆ ನೀಡಿ ಚರ್ಚೆ ನಡೆಸಿದ್ದಾರೆ. ಇದು ಪಕ್ಷದೊಳಗಿನ ಶೀತಲ ಸಮರಕ್ಕೂ ಮುನ್ನುಡಿ ಬರೆದಿದ್ದು, ಹೈಕಮಾಂಡ್ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಇತ್ತೀಚೆಗೆ ನಡೆದಿರುವ ಬೆಳವಣಿಗೆ ಬಗ್ಗೆ ವರದಿ ಪಡೆದುಕೊಂಡಿದೆ.

ಕೈ ಪಾಳಯದಲ್ಲಿ ದಲಿತ, ಮುಸ್ಲಿಂ ಲಿಂಗಾಯತ ಮೂರು ಸಮುದಾಯವಾರು ಡಿಸಿಎಂ ಹುದ್ದೆ ಮೇಲೆ ಕಣ್ಣಿಟ್ಟಿದ್ದಾರೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣದ ನಡುವೆ ಪೈಪೋಟಿ ಜೋರಾಗಿದೆ. ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್ ಅವರು ಡಿಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದು, ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ.

ಡಿಸಿಎಂ ಹುದ್ದೆ ಸೃಷ್ಟಿ ಆಗಬೇಕು ಎಂದು ಸಚಿವ ಕೆ.ಎನ್ ರಾಜಣ್ಣ ಈ ಹಿಂದಿನಿಂದಲೇ ಹೇಳುತ್ತಾ ಬರುತ್ತಿದ್ದು, ಇದೀಗ ಮತ್ತೊಮ್ಮೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. 'ಬಿಜೆಪಿಯಲ್ಲಿ ಸಮುದಾಯವಾರು ಡಿಸಿಎಂ ಮಾಡಲಾಗಿತ್ತು.

→ 4

- ಡಿಸಿಎಂ ಹುದ್ದೆ ಮೇಲೆ ಕಣ್ಣಿಟ್ಟ ದಲಿತ, ಮುಸ್ಲಿಂ ಹಾಗೂ ಲಿಂಗಾಯತ ಸಮುದಾಯದ ಸಚಿವರು
- ಬಹಿರಂಗವಾಗಿ ಹೇಳಿಕೆ ನೀಡುತ್ತಿರುವ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್
- ಅಗತ್ಯಬಿದ್ದರೆ ಮೂರು ಡಿಸಿಎಂ ಹುದ್ದೆ ಸೃಷ್ಟಿ, ಎಲ್ಲವೂ ಹೈಕಮಾಂಡ್‌ಗೆ ಬಿಟ್ಟ ವಿಚಾರವೆಂದ ಪರಂ

ಡಿಸಿಎಂ ಹುದ್ದೆ ಕೇಳುವುದರಲ್ಲಿ ತಪ್ಪೇನಿಲ್ಲ, ಎಲ್ಲ ಸಮಾಜಕ್ಕೂ ಬೇಕು ಎನ್ನುವುದು ಇರುತ್ತದೆ. ನಮ್ಮ ಮುಸ್ಲಿಂ ಸಮುದಾಯಕ್ಕೆ ಡಿಸಿಎಂ ಹುದ್ದೆ ನೀಡಲಿ, ನಾವು ಬೇಡಿಕೆ ಇಟ್ಟಿದ್ದೇವೆ.
-ಜಮೀರ್ ಅಹ್ಮದ್ ಸಚಿವ

ಬೇಡಿಕೆ ಹಿಂದಿನ ಮರ್ಮವೇನು?

ಕೆಪಿಸಿಸಿ ಸಾರಥಿಯೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಕಾಂಗ್ರೆಸ್‌ನಲ್ಲಿ ದಿನೇ ದಿನೆ ಗಟ್ಟಿಯಾಗುತ್ತಿದ್ದಾರೆ. ಈಗಾಗಲೇ ಸರಕಾರದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದ್ದಾರೆ. ಸಿಎಂಗೆ ಪರ್ಯಾಯವಾಗಿ ತಮ್ಮ ನಾಯಕತ್ವ ಮತ್ತು ವರ್ಚಸ್ಸು ಸ್ಥಾಪಿಸಲು ಡಿ.ಕೆ. ಶಿವಕುಮಾರ್ ಹೆಜ್ಜೆ ಇಟ್ಟಿದ್ದಾರೆ. ಆದರೆ ಈ ಬೆಳವಣಿಗೆ ಕಾಂಗ್ರೆಸ್ ಪಾಳಯದ ಕೆಲ ಹಿರಿಯ ನಾಯಕರಿಗೆ ಇಷ್ಟವಾಗುತ್ತಿಲ್ಲ. ಜತೆಗೆ ಮುಂದೊಂದು ದಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಿಎಂ ಆದರೆ ಇತರೆ ನಾಯಕರ ಅಸ್ತಿತ್ವಕ್ಕೂ ಧಕ್ಕೆಯಾಗಲಿದೆ. ಹೀಗಾಗಿಯೇ ಹಾಲಿ ಡಿಸಿಎಂ ಜತೆ ಮೂವರು ಡಿಸಿಎಂ ಹುದ್ದೆ ಸೃಷ್ಟಿ ಮಾಡಬೇಕು ಎಂಬ ಕೂಗು ಜೋರಾಗಿದೆ.

ಪ್ರಭಾವಿಗಳು ಭಾಗಿಯಾಗಿರುವ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸಿದ ಕರ್ನಾಟಕ ಪೊಲೀಸ್

ಸಾರ್ವಜನಿಕರ ಎದುರು ಸೈ ಎನಿಸಿಕೊಂಡ ಖಾಕಿ

ಬೆಂಗಳೂರು: 'ಪೊಲೀಸರ ಕ್ರಮ ಏನಿದ್ದರೂ ಬಡವರ ಮೇಲೆಯೇ, ಶ್ರೀಮಂತರ, ಪ್ರಭಾವಿ ವ್ಯಕ್ತಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುವುದು ಅಷ್ಟಕ್ಕಷ್ಟೇ' ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಆಗಾಗ ಕೇಳಿ ಬರುತ್ತಿರುತ್ತದೆ. ಆದರೆ ಇತ್ತೀಚೆಗೆ ರಾಜ್ಯದಲ್ಲಿ ನಡೆದ ಪ್ರಭಾವಿ ವ್ಯಕ್ತಿಗಳು ಭಾಗಿಯಾಗಿದ್ದಾರೆ ಎನ್ನಲಾದ ಪ್ರಕರಣಗಳನ್ನು ಬೇಧಿಸಿರುವ ಪೊಲೀಸರು ಆ ಮಾತನ್ನು ಸುಳ್ಳು ಮಾಡಿದ್ದಾರೆ. ಆ ಮೂಲಕ ಪೊಲೀಸ್ ಇಲಾಖೆ ಬಗ್ಗೆ ಸಮಾಜದ ಪ್ರತಿಯೊಬ್ಬರಲ್ಲೂ ಸದಾಭಿಪ್ರಾಯ ಮೂಡುವಂತೆ ಮಾಡಿದ್ದಾರೆ.

ಹೌದು..! ನಟ ದರ್ಶನ್ ಭಾಗಿಯಾಗಿದ್ದಾರೆ ಎನ್ನಲಾದ ರೇಣುಕಾಸ್ವಾಮಿ ಕೊಲೆ, ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಕೇಳಿಬಂದ ಅತ್ಯಾಚಾರ ಪ್ರಕರಣ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಕೋಟ್ಯಂತರ ರುಪಾಯಿ ಗೋಲ್ಮಾಲ್ ಪ್ರಕರಣವನ್ನು ಪೊಲೀಸರು ಸಮರ್ಥವಾಗಿ ಬೇಧಿಸಿದ್ದಾರೆ. ಆ ಮೂಲಕ ದಕ್ಷತೆಗೆ ಕರ್ನಾಟಕ ಪೊಲೀಸ್ ಸಾಕ್ಷಿ ಎಂಬು ದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಜೂನ್ 9ರಂದು ಬೆಳಗ್ಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಸುಮನಹಳ್ಳಿ ಬ್ರಿಡ್ಜ್ ಬಳಿ ಅನುಮಾನಸ್ಪದವಾಗಿ ರೇಣುಕಾಸ್ವಾಮಿ ಎಂಬ ವ್ಯಕ್ತಿಯ ಶವ ಪತ್ತೆಯಾಗಿತ್ತು. ಮೃತದೇಹ ಪರಿಶೀಲಿಸಿದ ಪೊಲೀಸರು ಕೊಲೆ ಗುಮಾನಿ ವ್ಯಕ್ತಪಡಿಸಿ ಪ್ರಕರಣ ದಾಖಲಿಸಿಕೊಂಡಿದ್ದರು. ಮೃತದೇಹ ಪತ್ತೆಯಾ ಗುತ್ತಿದ್ದಂತೆ ರಾಘವೇಂದ್ರ, ಕಾರ್ತಿಕ್, ನಿಖಿಲ್ ಹಾಗೂ ಕೇಶವಮೂರ್ತಿ ಎಂಬವರು ನೇರ ವಾಗಿ ಠಾಣೆಗೆ ಬಂದು ಹಣಕಾಸಿನ ವಿಚಾರ ಕ್ಕಾಗಿ ರೇಣುಕಾಸ್ವಾಮಿ ಹತ್ಯೆ ಮಾಡಿದ್ದೇವೆ ಎಂದು ಹೇಳಿಕೆ ನೀಡಿದ್ದರು. ಅಚ್ಚರಿಗೊಂಡ ಪೊಲೀ ಸರು, ಪ್ರತ್ಯೇಕವಾಗಿ ವಿಚಾರಣೆ ನಡೆಸಿ ದಾಗ ಆರೋಪಿಗಳು ನೀಡಿದ ಭಿನ್ನ ಹೇಳಿಕೆ ಗಳು ಅನು ಮಾನ ಮೂಡಿಸಿದ್ದವು. ಪೊಲೀಸ್ ಶೈಲಿಯಲ್ಲೇ ವಿಚಾರಿಸಿದಾಗ ನಟ ದರ್ಶನ್ ಹತ್ಯೆ ಪ್ರಕರಣ ದಲ್ಲಿ ನೇರವಾಗಿ ಭಾಗಿಯಾ ಗಿರುವುದಾಗಿ ಬೆಳಕಿಗೆ ಬಂದಿತ್ತು. ಆರೋಪಿಗಳ ಹೇಳಿಕೆಯ ಸತ್ಯಾಸತ್ಯತೆ ಪರಾಮರ್ಶಿಸಿದ ಪೊಲೀಸರು ದರ್ಶನ್ ದುಷ್ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದರು.

→ 8

- ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ ಎಲ್ಲ ಆರೋಪಿಗಳ ಹೆಡೆಮುರಿ ಕಟ್ಟಿದ ಪೊಲೀಸರು
- ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯರಿಗೆ ಬೆನ್ನೆಲುಬಾಗಿ ನಿಂತ ಇಲಾಖೆ
- ವಾಲ್ಮೀಕಿ ನಿಗಮದ ಕೋಟ್ಯಂತರ ರು. ಗೋಲ್ಮಾಲ್ ಪ್ರಕರಣದಲ್ಲಿ ಪ್ರಭಾವಕ್ಕೆ ಒಳಗಾಗದ ಖಾಕಿ

ನ್ಯಾಯ ಒದಗಿಸುವಲ್ಲಿ ಕರ್ನಾಟಕ ಪೊಲೀಸ್ ನಂಬರ್ 1

ದೇಶದಲ್ಲಿ ನ್ಯಾಯ ಒದಗಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಮೊದಲ ಸ್ಥಾನದಲ್ಲಿದೆ ಎಂದು ಇತ್ತೀಚಿನ ಇಂಡಿಯಾ ಜಸ್ಟಿಸ್ ರಿಪೋರ್ಟ್ ತಿಳಿಸಿದೆ. ಎರಡು ಮತ್ತು ಮೂರನೇ ಸ್ಥಾನಗಳಲ್ಲಿ ತಲಾ 6.11 ಅಂಕಗಳೊಂದಿಗೆ ದಕ್ಷಿಣದ ರಾಜ್ಯಗಳಾದ ತಮಿಳುನಾಡು ಮತ್ತು ತೆಲಂಗಾಣ ರಾಜ್ಯ ಸ್ಥಾನ ಪಡೆದಿವೆ. ಕರ್ನಾಟಕವು 10 ಅಂಕದಲ್ಲಿ 6.38 ರೇಟಿಂಗ್ ಪಡೆದುಕೊಂಡಿದೆ. ಕರ್ನಾಟಕವು ಮಹಾರಾಷ್ಟ್ರಕ್ಕಿಂತ 183 ಹೆಚ್ಚು ಪೊಲೀಸ್ ಠಾಣೆಗಳನ್ನು ಹೊಂದಿದೆ. ಈ ವರ್ಷದ ವರದಿಯಲ್ಲಿ ಕರ್ನಾಟಕದ ರಾಜ್ಯ ಪೊಲೀಸ್ ಪಡೆ ಮೊದಲ ಸ್ಥಾನ ಪಡೆದುಕೊಂಡಿದೆ. 2022-2023 ರ ಆರ್ಥಿಕ ವರ್ಷದಲ್ಲಿ ಕರ್ನಾಟಕ ಸರಕಾರವು ಪೊಲೀಸ್ ವ್ಯವಸ್ಥೆಗೆ ಸುಮಾರು 8,007 ಕೋಟಿ ರು. ಖರ್ಚು ಮಾಡಿದೆ.

ಶೆಟ್ಟರ್ ರಾಜೀನಾಮೆಯಿಂದ ತೆರವಾಗಿರುವ ಮೇಲ್ಮನೆ ಸ್ಥಾನ ಪರಿಷತ್‌ನ ಒಂದು ಸದಸ್ಯ ಸ್ಥಾನಕ್ಕೆ ನಾಳೆ ಅಧಿಸೂಚನೆ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನ ಪರಿಷತ್‌ನ ಒಂದು ಸದಸ್ಯ ಸ್ಥಾನಕ್ಕೆ ಉಪಚುನಾವಣೆ ಘೋಷಣೆಯಾಗಿದ್ದು, ಜೂ.25ರಂದು ಅಧಿಸೂಚನೆ ಹೊರಬೀಳಲಿದೆ.

ಜೂ.25ರಿಂದ ಜುಲೈ 2ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ. ಜು.3ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ವಾಪಸ್ಸಿಗೆ ಜು.5ರವರೆಗೂ ಅವಕಾಶವಿದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿ ಉಳಿದರೆ, ಜು.12ರಂದು ಬೆಳಗ್ಗೆ 9ರಿಂದ ಸಂಜೆ ನಾಲ್ಕು ಗಂಟೆವರೆಗೆ ಮತದಾನ ನಡೆಯಲಿದೆ. ಅಂದು 5 ಗಂಟೆಯ ನಂತರ ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ. ಈ ಚುನಾವಣೆಯಲ್ಲಿ ಆಯ್ಕೆಯಾಗುವ ಸದಸ್ಯರ ಅವಧಿ 2028ರ ಜೂ.14 ರವರೆಗೆ ಇರಲಿದೆ.

ಕೃಪಾಂಕಿತ 1563 ಮಂದಿಗೆ ಮರುಪರೀಕ್ಷೆ ಆಯೋಜನೆ

ನೀಟ್ ಮರು ಪರೀಕ್ಷೆಗೆ 750 ಅಭ್ಯರ್ಥಿಗಳು ಗೈರು

ದೆಹಲಿ: ವೈದ್ಯಕೀಯ ಶಿಕ್ಷಣದ ಪ್ರವೇಶ ಪರೀಕ್ಷೆ 'ನೀಟ್-ಯುಜಿ' 2024ರ ಪರೀಕ್ಷೆಯಲ್ಲಿ ಕೃಪಾಂಕ ಪಡೆದ 1563 ಅಭ್ಯರ್ಥಿಗಳಿಗೆ ಭಾನುವಾರ ಮರುಪರೀಕ್ಷೆ ವ್ಯವಸ್ಥೆ ಮಾಡಲಾಗಿತ್ತು. ಅಚ್ಚರಿ ಎಂದರೆ 750 ಮಂದಿ ಪರೀಕ್ಷಾರ್ಥಿಗಳು ಮರು ಪರೀಕ್ಷೆಗೆ ಗೈರು ಹಾಜರಾಗಿದ್ದರು.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಬಯಸಿದ್ದವರಿಗೆ ಪ್ರತಿ ವರ್ಷ ನಡೆಸಲಾಗುವ 'ನೀಟ್'ಗೆ ಈ ಬಾರಿ 2024ರಲ್ಲಿ 24 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಹಾಜರಾಗಿದ್ದರು. ಅವರಲ್ಲಿ ಕೃಪಾಂಕ ಪಡೆದು ಮೊದಲ ಸಾಲಿನ ರ್‍ಯಾಂಕ್‌ಗಳನ್ನು ಗಿಟ್ಟಿಸಿಕೊಂಡಿದ್ದ 1563 ವಿದ್ಯಾರ್ಥಿಗಳು ಫಲಿತಾಂಶದ ಬಗ್ಗೆ ಅನುಮಾನ ಮೂಡಿದ್ದರಿಂದ ಮರುಪರೀಕ್ಷೆ ಬರೆಯಲು ಸೂಚಿಸಲಾಗಿತ್ತು. ದೇಶದ 6 ರಾಜ್ಯಗಳ 7 ಕೇಂದ್ರಗಳಲ್ಲಿ 1563 ಮಂದಿಗೆ ಭಾನುವಾರ ಮರು ಪರೀಕ್ಷೆ ಆಯೋಜಿಸಲಾಗಿದ್ದು, 813 ಮಂದಿ ಮಾತ್ರ ಹಾಜರಾಗಿದ್ದರು.

ಪರೀಕ್ಷಾ ಕೇಂದ್ರಗಳನ್ನು ಈ ಬಾರಿ ಬದಲಾಯಿಸಲಾಗಿದೆ. ಚಂಡೀಗಢದ ಒಂದು ಪರೀಕ್ಷಾ ಕೇಂದ್ರ ಹೊರತುಪಡಿಸಿ ಬಾಕಿ 6 ಕೇಂದ್ರಗಳನ್ನು ಬದಲಿಸಿ ಹೊಸ ಕೇಂದ್ರಗಳಲ್ಲಿ ಮರು ಪರೀಕ್ಷೆ ನಡೆಸಲಾಗಿದೆ.

ಸಿಬಿಐ ತನಿಖೆ ಆರಂಭ

ನೀಟ್ ಯುಜಿ-2024 ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿರುವ ಸಿಬಿಐ ತನಿಖೆ ಆರಂಭಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಬಿಹಾರದಲ್ಲಿ ಕೇಂದ್ರೀಕರಿಸಿರುವುದರಿಂದ ಪಟನಾಗೆ ತನಿಖಾಧಿಕಾರಿಗಳ ತಂಡವೊಂದನ್ನು ಭಾನುವಾರ ರವಾನಿಸಿದೆ.

ಬಜರಂಗ್ ಪೂನಿಯಾ ಮತ್ತೆ ಅಮಾನತು



ದೆಹಲಿ: ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ ಮತ್ತೊಮ್ಮೆ ಅಮಾನತು ಮಾಡಿದೆ.

ಮಾರ್ಚ್ 10ರಂದು ಸೋನೆಪತ್‌ನಲ್ಲಿ ನಡೆದ ಆಯ್ಕೆ ಟ್ರಯಲ್ಸ್ ವೇಳೆ ಉದ್ದೀಪನ ಮದ್ದು ಪರೀಕ್ಷೆಗೆ ಮೂತ್ರದ ಮಾದರಿ ನೀಡಲು ನಿರಾಕರಿಸಿದ್ದ ಆರೋಪದಲ್ಲಿ ಬಜರಂಗ್ ಅವರನ್ನು ಏಪ್ರಿಲ್ 23ರಂದು ನಾಡಾ ಅಮಾನತು ಮಾಡಿತ್ತು. ಅದರಂತೆ ವಿಶ್ವ ಕುಸ್ತಿ ಒಕ್ಕೂಟವೂ ಬಜರಂಗ್ ಅವರನ್ನು ಅಮಾನತು ಮಾಡಿತ್ತು. ತನ್ನ ಕ್ರಮಕ್ಕೆ ಸಂಬಂಧಿಸಿದಂತೆ ನಾಡಾ ನೋಟಿಸ್ ನೀಡದ ಹಿನ್ನೆಲೆಯಲ್ಲಿ ಉದ್ದೀಪನ ಮದ್ದು ತಡೆ ಶಿಸ್ತು ಸಮಿತಿಯು (ಎಡಿಡಿಪಿ) ಮೂರು ವಾರಗಳ ಬಳಿಕ (ಮೇ 31 ರಂದು) ಅಮಾನತು ಆದೇಶ ರದ್ದು ಮಾಡಿತ್ತು. ಇದೀಗ ಮತ್ತೊಮ್ಮೆ ಬಜ ರಂಗ್ ಅವರನ್ನು ಅಮಾನತು ಮಾಡಿರುವ ನಾಡಾ, ಈ ಬಾರಿ ಕ್ರಮದ ನೋಟಿಸ್ ಅನ್ನೂ ನೀಡಿದೆ.

ಪೊಲೀಸ್ ಕಸ್ಟಡಿ ವಿಚಾರಣೆಯಲ್ಲಿ ಹಣ್ಣುಗಾಯಿ ನೀರುಗಾಯಿ ಆಗಿದ್ದ ದರ್ಶನ್

ಪರಪ್ಪನ ಅಗ್ರಹಾರದಲ್ಲಿ ಮೌನಕ್ಕೆ ಜಾರಿದ ದಾಸ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್ ಸರಿಯಾಗಿ ಊಟ, ನಿದ್ದೆ ಮಾಡದೆ ಇಡೀ ರಾತ್ರಿ ಕಳೆದಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಹಾಗೂ ನಾಲ್ವರು ಆರೋಪಿಗಳನ್ನು ನ್ಯಾಯಾಲಯ ಶನಿವಾರ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸುತ್ತಿದ್ದಂತೆ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿತ್ತು. ದರ್ಶನ್ ಜೈಲು ಸೇರುತ್ತಿದ್ದಂತೆ ವಿಚಾರಣಾಧೀನ ಕೈದಿ ನಂಬರ್ ನೀಡಿ ಬ್ಯಾರಕ್‌ಗೆ ಕಳುಹಿಸಲಾಗಿತ್ತು. ಶನಿವಾರ ರಾತ್ರಿ ಊಟಕ್ಕೆ ಚಪಾತಿ, ಅನ್ನ-ಸಾಂಬಾರ್, ಮಜ್ಜಿಗೆ ನೀಡಲಾಯಿತು. ಆದರೆ ದರ್ಶನ್ ಸರಿಯಾಗಿ ಊಟ ಮಾಡಿಲ್ಲ. ಪೊಲೀಸ್ ಕಸ್ಟಡಿ ವಿಚಾರಣೆಯಲ್ಲಿ ಹಣ್ಣುಗಾಯಿ ನೀರುಗಾಯಿ ಆಗಿದ್ದ ದರ್ಶನ್, ಜೈಲಿನಲ್ಲಿ ಸುಮನೆ ಕುಳಿತಿದ್ದರು. ತಡರಾತ್ರಿ ನಿದ್ರೆಗೆ ಜಾರಿದರು. ಬೆಳಗ್ಗೆ 6 ಗಂಟೆಗೆ ಎದ್ದು ಚಿಂತಾಕ್ರಾಂತರಾಗಿಯೇ ಕುಳಿತಿದ್ದರು ಎಂದು ತಿಳಿದುಬಂದಿದೆ.

ಒಂದು ಕೆಜಿ ಕಡಿಮೆಯಾದ ದರ್ಶನ್: ಬರೋಬ್ಬರಿ 11 ದಿನ ಪೊಲೀಸ್ ಕಸ್ಟಡಿಯಲ್ಲಿದ್ದ ನಟ ದರ್ಶನ್ ಅವರು ಸರಿಯಾಗಿ ಆಹಾರ ಸೇವನೆ ಮಾಡದೇ, ಚಿಂತೆಗೀಡಾ ಗಿದ್ದು, ಅವರ ದೇಹದ ತೂಕ ಒಂದು ಕೆಜಿ ಕಡಿಮೆಯಾಗಿದೆ. ಸದ್ಯ ದರ್ಶನ್ 106 ಕೆಜಿ ತೂಕ ಇದ್ದಾರೆ. ದರ್ಶನ್ ಜೂ.11ರಂದು ಬಂಧನಕ್ಕೆ ಒಳಗಾದ ದಿನ 107 ಕೆ.ಜಿ ತೂಕವಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ಗೊತ್ತಾಗಿತ್ತು. ರಕ್ತದೊತ್ತಡವು 134/86ರ ಪ್ರಮಾಣದಲ್ಲಿತ್ತು. ಕಸ್ಟಡಿ ದಿನಗಳು ಉರುಳಿದಂತೆ ಮಾನಸಿಕ ಒತ್ತಡ, ಆತಂಕಕ್ಕೆ ಒಳಗಾಗಿದ್ದರಿಂದ ದರ್ಶನ್ ಬಿಪಿಯಲ್ಲಿ ಏರುಪೇರಾಗಿತ್ತು. ಕಸ್ಟಡಿಯ ಎರಡನೇ ದಿನ ಬಿಪಿ 165/95 ಪ್ರಮಾಣ ಹೆಚ್ಚಾಗಿತ್ತು. ಹೀಗಾಗಿ, ಫಿಜಿಶಿಯನ್‌ಗಳು ಪರಿಶೀಲನೆ ನಡೆಸಿ ಚಿಕಿತ್ಸೆ ಕೊಡುತ್ತಿದ್ದರು. ಜೂನ್ 22 ರಂದು ದರ್ಶನ್ ಅವರ ವೈದ್ಯಕೀಯ ತಪಾಸಣೆಯಲ್ಲಿ ಅವರ ದೇಹದ ತೂಕ 106 ಕೆ.ಜಿ ಇರುವುದು ಗೊತ್ತಾಗಿದೆ. ರಕ್ತದೊತ್ತಡ ಕೂಡ 130/90 ಸಾಧಾರಣ ಪ್ರಮಾಣಕ್ಕೆ ಬಂದಿದೆ ಎಂದು ತಿಳಿದುಬಂದಿದೆ.

- ಜೈಲು ಸೇರಿದ ನಂತರ ಸರಿಯಾಗಿ ಊಟ, ನಿದ್ದೆ ಮಾಡದ ದರ್ಶನ್
- ದೇಹದ ತೂಕ 107ರಿಂದ 106 ಕೆಜಿಗೆ ಇಳಿಕೆ, ಹೆಚ್ಚಳವಾದ ಬಿಪಿ
- ಬೆಳಗ್ಗೆ 6 ಗಂಟೆಗೇ ಎದ್ದು ಚಿಂತಾಕ್ರಾಂತರಾಗಿ ಕುಳಿತ ಕಾಟೇರ

ಬೇರೆ ಜೈಲಿಗೆ ಶಿಫ್ಟ್ ಮಾಡುವ ಸಾಧ್ಯತೆ

ರೇಣುಕಾಸ್ವಾಮಿ ಕೊಲೆ ಪ್ರಕರಣ ತನಿಖೆ ಚುರುಕುಗೊಳಿಸಿರುವ ಪೊಲೀಸರು ಎಲ್ಲ ಆಯಾಮಗಳಲ್ಲೂ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಆರೋಪಿಗಳು ಜೈಲಿನಲ್ಲಿದ್ದುಕೊಂಡು ಕುತಂತ್ರ ನಡೆಸುವ ಸಾಧ್ಯತೆ ಇರುವುದರಿಂದ ಕೆಲ ಕೈದಿಗಳನ್ನು ಮಂಗಳೂರು ಜೈಲಿಗೆ ಶಿಫ್ಟ್ ಮಾಡುವ ಸಾಧ್ಯತೆ ಇದೆ. ಇಂದು (ಸೋಮವಾರ) ನ್ಯಾಯಾಲಯದ ಮುಂದೆ ವಿಚಾರಣೆ ಇದ್ದು, ಬೇರೆ ಜೈಲಿಗೆ ಶಿಫ್ಟ್ ಮಾಡುವ ಸಂಬಂಧ ಅನುಮತಿ ನೀಡುವ ಸಾಧ್ಯತೆ ಇದೆ.

ಸಮಾಚಾರ ಸಣ್ಣದಲ್ಲ

ಅಸಭ್ಯ ವರ್ತನೆ: ಆರೋಪ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಯುವತಿ ಖಾಸಗಿ ಅಂಗ ಮುಟ್ಟಿ ಓರ್ವ ಆಸಾಮಿ ಅಸಭ್ಯ ವರ್ತನೆ ಆರೋಪ ಮಾಡಲಾಗಿದೆ. ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯ 5ನೇ ಬ್ಲಾಕ್‌ನಲ್ಲಿ ಜೂನ್ 19 ರಂದು ರಾತ್ರಿ 12 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಆ ಮೂಲಕ ಬೆಂಗಳೂರು ಕಾಮುಕರ ಅಡ್ಡೆ ಆಗುತ್ತಿದ್ದೆಯಾ ಎಂಬ ಅನುಮಾನಗಳು ಮೂಡಿವೆ.ಕೋರಮಂಗಲ 5ನೇ ಬ್ಲಾಕ್‌ನಲ್ಲಿ ಯುವತಿ ನಡೆದುಕೊಂಡು ಹೋಗುತ್ತಿದ್ದರು. ಎದುರಿನಿಂದ ಬೈಕ್‌ನಲ್ಲಿ ಬಂದ ಓರ್ವ ಆಸಾಮಿ ಅಸಭ್ಯ ವರ್ತನೆ ಮಾಡಿದ್ದಾನೆ. ಖಾಸಗಿ ಅಂಗ ಮುಟ್ಟಿ ವಿಕೃತಿ ಮೆರೆದಿದ್ದಾನೆ. ಘಟನೆ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿದೆ. ಆಸಾಮಿ ಅಸಭ್ಯ ವರ್ತನೆ ತೋರುತ್ತಿದ್ದಂತೆ ಯುವತಿ ಆತನನ್ನ ಬೈದಿದ್ದಾರೆ ಮತ್ತು ಬೈಕ್‌ನ್ನು ಅಟ್ಟಿಸಿಕೊಂಡು ಹೋಗಿದ್ದಾರೆ. ಆದರೆ ಆತ ತಪ್ಪಿಸಿಕೊಂಡಿದ್ದಾನೆ. ಘಟನೆ ಬಗ್ಗೆ ಯುವತಿ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು ಜೊತೆಗೆ ಬೆಂಗಳೂರು ಪೊಲೀಸರಿಗೆ ಟ್ಯಾಗ್ ಮಾಡಿದ್ದಾರೆ. ಆದರೆ ಘಟನೆ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ವಿಚಾರಗೋಷ್ಠಿ ನಾಳೆ

ಬೆಂಗಳೂರು: ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ಸಂಘಟನೆಯಿಂದ ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ ಎಂಬ ವಿಚಾರಕ್ಕೆ ಸಂಬಂಧಿಸಿದ್ದಂತೆ ಚರ್ಚಿಸಲು ವಿಚಾರಗೋಷ್ಠಿ ಏರ್ಪಡಿಸಲಾಗಿದೆ. ಕಾರ್ಯಕ್ರಮವು ಮಂಗಳವಾರ ಸಂಜೆ ಐದು ಗಂಟೆಗೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆಯಲಿದೆ. ತಮಿಳುನಾಡಿನ ಬಿಜೆಪಿ ಅಧ್ಯಕ್ಷ ಎಸ್.ಅಣ್ಣಾಮಲೈ, ರಾಜಕೀಯ ಚಿಂತಕ ರವೀಂದ್ರ ರೇಷ್ಮೆ, ತುರ್ತು ಪರಿಸ್ಥಿತಿ ಹೋರಾಟಗಾರರಾದ ಗಾಯತ್ರಿ ಹನುಮಂತ ರಾವ್, ದಲಿತ ಮುಂಖಂಡ ಪಟಾಪಟ್ ಶ್ರೀನಿವಾಸ್ ವಿಚಾರ ಮಂಡಿಸಲಿದ್ದಾರೆ. ಡಾ.ಅಂಬೇಡ್ಕರ್‌ರವರು ರಚಿಸಿದ ಸಂವಿಧಾನದ ಆಶಯಗಳನ್ನೇ ಬುಡಮೇಲು ಮಾಡಿದ ಕುಟಿಲ ರಾಜಕಾರಣ ಸಂಕಷ್ಟಗಳನ್ನು ಅನುಭವಿಸಿ ಸವಾಲುಗಳನ್ನು ಮೆಟ್ಟಿ ನಿಂತ ಹೋರಾಟದ ವೀರಗಾಥೆ ಕುರಿತು ಚರ್ಚಿಸಲಾಗುತ್ತದೆ.

ಪೆಟ್ಟಿಗೆ, ಬೇಕರಿ, ದಿನಸಿ ಅಂಗಡಿಗಳಲ್ಲಿ ಗುಟ್ಕಾ ಲಭ್ಯ | ಹಲವೆಡೆ ದಾಳಿ

ನಗರದಲ್ಲಿ ಗುಟ್ಟಾಗಿ ಗುಟ್ಕಾ ದಂಧೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿಯಲ್ಲಿ ಗುಟ್ಕಾ ಮಾರಾಟ ಕದ್ದುಮುಚ್ಚಿ ನಡೆಯುತ್ತಿದೆ. ರಾಜ್ಯದಲ್ಲಿ ಗುಷ್ಕಾ ನಿಷೇಧವಾಗಿದ್ದರೂ ಪೆಟ್ಟಿಗೆ, ಬೇಕರಿ, ದಿನಸಿ ಅಂಗಡಿಗಳಲ್ಲಿ ಮಾತ್ರ ಗುಟ್ಕಾ ವಹಿವಾಟು ಗುಟ್ಟಾಗಿ ನಡೆಯುತ್ತಿದೆ.

ಮಾದಕ ವಸ್ತುಗಳಿಂದ ಸಾವು ಸಂಭವಿಸುತ್ತದೆ ಎಂದು ಗೊತ್ತಿದ್ದರೂ ಇಂದಿನ ಪೀಳಿಗೆ ಗಾಂಜಾ, ಅಫೀಮು, ಗುಟ್ಕಾ, ತಂಬಾಕುಗಳಿಗೆ ಮಾರು ಹೋಗುತ್ತಿದೆ. ಅದರಲ್ಲೂ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುವ ಗುಟ್ಕಾ, ಪಾನ್ ಮಸಾಲಗಳಿಗೆ ಬಹುತೇಕರು ದಾಸರಾಗುತ್ತಿದ್ದಾರೆ. ತಂಬಾಕು ಹಾಗೂ ಗುಟ್ಕಾ ಸೇವನೆಯಿಂದ ಕ್ಯಾನ್ಸರ್ ರೋಗಕ್ಕೀಡಾಗುವ ಅಪಾಯ ಹೆಚ್ಚಿರುತ್ತದೆ. ಆದರೂ ಜನರು ಅಗಿಯುವುದನ್ನು ಮಾತ್ರ ನಿಲ್ಲಿಸುತ್ತಿಲ್ಲ. ತಂಬಾಕು ಮತ್ತು ನಿಕೋಟಿನ್ ಅಂಶ ಒಳಗೊಂಡ ಗುಟ್ಕಾವನ್ನು ನಿಷೇಧಿಸಿಲಾಗಿದೆ. ತಂಬಾಕುಯುಕ್ತ ಆಹಾರ ಪದಾರ್ಥಗಳನ್ನ ಮಾರಾಟ ಮಾಡಲು ಅವಕಾಶವಿದೆ. ಗುಟ್ಕಾದಲ್ಲಿನ ತಂಬಾಕು ಪದಾರ್ಥ ಬೇರ್ಪಡಿಸಿ ಪಾನ್ ಮಸಾಲ್ ಮಾರಾಟ ಮಾಡಲಾಗುತ್ತಿದೆ. ನಿಷೇಧಿತ ಗುಟ್ಕಾಗಳನ್ನು ಮಾರಾಟ ಮಾಡುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ದಾಳಿ ಮಾಡಿ, ಪ್ರಕರಣ ದಾಖಲಿಸಲಾಗುತ್ತಿದೆ.

ಗಡಿ ಜಿಲ್ಲೆಗಳಲ್ಲಿ ಪ್ರಕರಣ ಹೆಚ್ಚಳ: ಗಣಿನಾಡು ಬಳ್ಳಾರಿ ಜಿಲ್ಲಾದ್ಯಂತ ಗುಟ್ಕಾ ಮಾರಾಟ ಸಂಪೂರ್ಣ ನಿಷೇಧಿಸಲಾಗಿದೆ. ಕೇವಲ ಪಾನ್‌ಮಸಾಲ ಪದಾರ್ಥವನ್ನು ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಗುಟ್ಕಾ ಮಾರಾಟ ಹಾಗೂ ಪೂರೈಕೆ ಇಲ್ಲ ಎನ್ನುತ್ತಾರೆ ಅಧಿಕಾರಿಗಳು. ತಂಬಾಕು ಸೇವನೆಯಿಂದ ಕಳೆದ ವರ್ಷ ಹತ್ತು ಮಂದಿಯಲ್ಲಿ ಕ್ಯಾನ್ಸರ್ ಕಾಯಿಲೆ ಕಾಣಿಸಿದೆ. ಗಡಿ ಜಿಲ್ಲೆಗಳಲ್ಲಿ ತಂಬಾಕು ಬಳಕೆ ಹೆಚ್ಚು ಪ್ರಕರಣ ದಾಖಲಾಗಿರುವುದು ತಿಳಿದುಬಂದಿದೆ.

ಯುವ ಸಮೂಹ ಗುಟ್ಕಾಗೆ ಹೊಂದಿಕೊಂಡು ತಮ್ಮ ಜೀವನವನ್ನೇ ನರಕ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಬೆಣ್ಣೆ ನಗರಿಯಲ್ಲಿ ಮಾತ್ರ ಈ ಬಗ್ಗೆ ಜಾಗೃತಿ ನಡೆಯುತ್ತಿದ್ದು, ಯುವ ಸಮೂಹ ಇದರಿಂದ ಹೊರ ಬಂದಿರುವ ಶುಭ ಸುದ್ದಿಯೊಂದನ್ನು ಅಧಿಕಾರಿಗಳು ನೀಡಿದ್ದಾರೆ. ಗುಟ್ಕಾ ನಿಯಂತ್ರಣಕ್ಕೆ ಅಂಗಡಿಗಳ ಮೇಲೆ ದಾಳಿಗಳು ನಡೆಯುತ್ತಿದ್ದು, ದಂಡ ಕೂಡ ವಿಧಿಸಲಾಗುತ್ತಿದೆ. ದಾವಣಗೆರೆಯಲ್ಲಿ ಈ ಬಾರಿಯ ವರದಿ ಪ್ರಕಾರ 25 ರಿಂದ 30 ವರ್ಷದ ವಯೋಮಿತಿಯ ಯುವಕರು ಈ ಗುಟ್ಕಾ ವ್ಯಾಮೋಹದಿಂದ ಹೊರ ಬಂದಿದ್ದಾರೆ. 14 ರಿಂದ 21 ವಯಸ್ಸಿನ ಶೇ.25ರಷ್ಟು ಯುವಕರು ಗುಟ್ಕಾ ಸೇವನೆ ಮಾಡುತ್ತಿಲ್ಲವೆಂದು ವರದಿ ಹೇಳುತ್ತಿದೆ.

ಆರೋಗ್ಯ ಇಲಾಖೆಯಿಂದ ತಂಡ ರಚನೆ

ಮೈಸೂರು ನಗರ ವ್ಯಾಪ್ತಿಯಲ್ಲಿ ನಿಷೇಧಿತ ಗುಟ್ಕಾ ಮಾರಾಟವಿಲ್ಲ. ಆದರೂ ಅಕ್ರಮ ಗುಟ್ಕಾ ತಡೆಯಲು ಆರೋಗ್ಯ ಇಲಾಖೆಯಿಂದ ತಂಡ ರಚನೆ ಮಾಡಲಾಗಿದೆ. ಕಾನೂನು ಉಲ್ಲಂಘನೆ ಮಾಡಿದರೆ ದಾಳಿ ಮಾಡಿ ದಂಡ ವಿಧಿಸಲಾಗುತ್ತದೆ. ಗುಟ್ಕಾ, ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬ ಎಚ್ಚರಿಕೆಯ ಸಾಲು ಪ್ಯಾಕೇಟ್ ಮೇಲಿದ್ದರೂ, ಸೇವಿಸುವವರ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ ಎಂದು ವೈದ್ಯರೊಬ್ಬರು ಮಾಹಿತಿ ನೀಡಿದ್ದಾರೆ.

ಶಾಲಾ ಆವರಣದಲ್ಲಿ ಗುಟ್ಕಾ ಮಾರಾಟ: 100 ಪ್ರಕರಣ

2023-24ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿರುವ ಶಾಲಾ-ಕಾಲೇಜು ಅಥವಾ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿದ್ದವರ ವಿರುದ್ಧ ಸುಮಾರು 100 ಪ್ರಕರಣಗಳು ದಾಖಲಾಗಿವೆ. ಕೇಂದ್ರ ಸರಕಾರವು ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ 100 ಮೀ. ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ ಅಡಿ ನಿಷೇಧಿಸಿದೆ. ಈ ನಿಷೇಧ ಜಾರಿಯಾಗಿ ಎರಡು ದಶಕಗಳು ಕಳೆದಿವೆ. ಆದರೂ, 2023-24ರಲ್ಲಿ 100ಕ್ಕೂ ಹೆಚ್ಚು ನಿಷೇಧ ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ. ಕಾನೂನಿನ ಪರಿಣಾಮಕಾರಿ ಅನುಷ್ಠಾನವಾಗದೇ ಇರುವುದೇ ಇದಕ್ಕೆ ಕಾರಣ. ಬಿಬಿಎಂಪಿಯ ತಂಬಾಕು ನಿಯಂತ್ರಣ ಮಂಡಳಿಯ ಅಧಿಕಾರಿಗಳು, ಕಾನೂನು ಜಾರಿಯನ್ನು ಬಿಗಿಗೊಳಿಸಲಾಗಿದೆ. ಕಣ್ಗಾವಲು ಹೆಚ್ಚಿಸಲಾಗಿದೆ. ಆದರೆ, ಶಾಲಾ-ಕಾಲೇಜು ಕ್ಯಾಂಪಸ್‌ಗಳ 100 ಮೀಟರ್ ವ್ಯಾಪ್ತಿಯೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ಮುಂದುವರೆಸಿದ್ದಾರೆ ಎಂದು ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ದೂರಿದ್ದಾರೆ.

ಟ್ಯಾಂಕರ್‌ಗಳಿಂದ ದುಪ್ಪಟ್ಟು ಹಣ ವಸೂಲಿ

ನಗರದಲ್ಲಿ ನೀರಿಗಾಗಿ ಹಾಹಾಕಾರ

ಬೆಂಗಳೂರು: ಮುಂಗಾರು ಮಳೆ ಸಮಯಕ್ಕೆ ಸರಿಯಾಗಿ ಆರಂಭವಾಗಿದ್ದರೂ ಬೆಂಗಳೂರಿನಲ್ಲಿ ಟ್ಯಾಂಕರ್‌ಗಳ ನೀರು ಅವಲಂಬಿಸುವುದರಿಂದ ಮುಕ್ತಿ ಸಿಕ್ಕಿಲ್ಲ.

ಟ್ಯಾಂಕರ್ ನೀರು ದರವೂ ಇಳಿಕೆಯಾಗಿಲ್ಲ ಎಂದು ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಷನ್‌ಗಳ ಸದಸ್ಯರು ಮತ್ತು ನಗರದ ಹೊರವಲಯದಲ್ಲಿರುವ ಅಪಾರ್ಟ್ ಮೆಂಟ್ ಸಂಕೀರ್ಣಗಳಲ್ಲಿ ವಾಸಿಸುವವರು ಬಿಬಿಎಂಪಿಯಲ್ಲಿ ದೂರು ನೀಡಿದ್ದಾರೆ. ಸರಕಾರದ ನಿಗದಿತ ಮಿತಿಗಿಂತ ಹೆಚ್ಚಿನ ಬೆಲೆ ಈಗ ಚಾಲ್ತಿಯಲ್ಲಿದೆ. ಬೇಸಿಗೆ ಅವಧಿಗೆ ಎಂದು ಸರಕಾರ ನಿಗದಿಪಡಿಸಿದ ಬೆಲೆ. ಅದು ಈಗ ಮುಂಗಾರು ಮಳೆ ಬಂದ ಮೇಲೆ ಅನ್ವಯವಾಗುವುದಿಲ್ಲ ಎಂದು ಟ್ಯಾಂಕರ್‌ನವರು ಹೇಳುತ್ತಿರುವುದಾಗಿ ಸ್ಥಳೀಯರು ದೂರಿದ್ದಾರೆ.

ನೀರಿಗಾಗಿ ಟ್ಯಾಂಕರ್ ಅವಲಂಬನೆ: ಇಂದಿರಾನಗರ, ಶಾಂತಿನಗರ, ಜಯನಗರ ಮತ್ತು ಬನಶಂಕರಿ ಪ್ರದೇಶಗಳಲ್ಲಿ ಈಗಲೂ ನೀರಿನ ಸಮಸ್ಯೆ ಬೇಸಿಗೆಯಂತೆಯೇ ಸಂಕಷ್ಟದಲ್ಲಿದೆ. ಪೂರ್ವ ಬೆಂಗಳೂರಿನ ವೈಟ್‌ಫೀಲ್ಡ್ ಮತ್ತು ದಕ್ಷಿಣ ಬೆಂಗಳೂರಿನ ಕನಕಪುರ ರಸ್ತೆಯಂತಹ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಕಡಿಮೆಯಾಗಿಲ್ಲ. ಕಾವೇರಿ ನೀರು ಇಲ್ಲದಿರುವ ಅನೇಕ ಬಡಾವಣೆಗಳು ಬೆಂಗಳೂರಿನಲ್ಲಿದ್ದು, ಅಲ್ಲಿ ಎಲ್ಲರೂ ನೀರಿಗಾಗಿ ಟ್ಯಾಂಕರ್‌ಗಳನ್ನೇ ಅವಲಂಬಿಸಿದ್ದಾರೆ. ವೈಟ್‌ಫೀಲ್ಡ್‌ನಲ್ಲಿ ಟ್ಯಾಂಕರ್‌ನಲ್ಲಿ ತರುವ 1200 ಲೀಟರ್ ನೀರಿಗೆ 1800 ರು. ವಸೂಲಿ ಮಾಡಲಾಗುತ್ತಿದೆ. ಕನಕಪುರ ರಸ್ತೆಯ ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ದಿನಕ್ಕೆ 50 ಟ್ಯಾಂಕರ್ ನೀರು ಬೇಕು. ತಕ್ಷಣಕ್ಕೆ ನೀರು ಬೇಕೆಂದರೆ ಅವರು ವಿಧಿಸುವ 1,800 ರು.ಗೂ ಹೆಚ್ಚು ದರವನ್ನು ಪಾವತಿಸಬೇಕು. ಇದು ಕೆಲವು ಸಲ 200 ರು.ಗಳಿಂದ 500 ರು. ಹೆಚ್ಚಾಗಿರುತ್ತದೆ ಎಂಬುದನ್ನು ಅಪಾರ್ಟ್‌ಮೆಂಟ್ ನಿವಾಸಿಗಳು ದೂರಿದ್ದಾರೆ.

ಟ್ಯಾಂಕರ್ ದರ ಏಕರೂಪ ಇಲ್ಲ

ವಾಟರ್ ಟ್ಯಾಂಕರ್‌ಗಳ ನೀರು ಪೂರೈಕೆಗೆ ಏಕರೂಪದ ದರ ಇಲ್ಲ. ಇದು ಯಾವ ಪ್ರದೇಶ ಮತ್ತು ಎಷ್ಟು ದೂರಕ್ಕೆ ನೀರು ಪೂರೈಸಲಾಗುತ್ತದೆ ಎಂಬುದರ ಮೇಲೆ ನಿಗದಿಯಾಗುತ್ತದೆ. ಕಲ್ಯಾಣನಗರದಲ್ಲಿರುವ ಅಪಾರ್ಟ್‌ಮೆಂಟ್‌ಗಳಿಗೆ 4000 ಲೀಟರ್ ನೀರು 700 ರೂಪಾಯಿಗೆ, 7000 ಲೀಟರ್ ನೀರು 1,200 ರು.ಗೆ ಪೂರೈಸಲಾಗುತ್ತದೆ. ವೈಟ್‌ಫೀಲ್ಡ್‌ನಲ್ಲಿ 5,500 ಲೀಟರ್ ನೀರು 1200 ರು.ಗೆ ಪೂರೈಸಲಾಗುತ್ತಿದೆ. 5 ಕಿಮೀ ವ್ಯಾಪ್ತಿಯಲ್ಲಿ 12000 ಲೀಟರ್ ನೀರು ಪೂರೈಸಿದರೆ ನೀರಿನ ಟ್ಯಾಂಕರ್‌ಗಳ ಬೆಲೆ 1000 ರು., 6000 ಲೀಟರ್ ನೀರು 600 ರು.ಗಿಂತ ಹೆಚ್ಚಿಲ್ಲ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಮಂಗಳವಾರ ಬೆಳಗ್ಗೆ 10:30ರಿಂದ ಮಧ್ಯಾಹ್ನ 3:30ರವರೆಗೆ ಎಚ್‌ಬಿಆರ್ ಸ್ಟೇಷನ್‌ಲ್ಲಿ ತುರ್ತುನಿರ್ವಹಣಾ ಕೆಲಸಗಳನ್ನು ಬೆಸ್ಕಾಂ ಕೈಗೆತ್ತಿಕೊಂಡಿದೆ. ಹೀಗಾಗಿ ಬೆಂಗಳೂರಿನ ಅರ್ಧದಷ್ಟು ಭಾಗ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಚ್.ಬಿ.ಆರ್‌ನ 1, 2 ಮತ್ತು 3ನೇ ಬ್ಲಾಕ್, ಯಾಸಿನ್‌ನಗರ, ಸುಭಾಶ್ ಲೇಔಟ್, ರಾಮ ದೇವಸ್ಥಾನದ ರಸ್ತೆ, ರಾಮದೇವ್ ಗಾರ್ಡನ್, ಕೃಷ್ಣಾರೆಡ್ಡಿ ಲೇಔಟ್, ಟೀಚರ್ಸ್ ಕಾಲೋನಿ, ಶಿವರಾಮಯ್ಯ ಲೇಔಟ್, ರಿಂಗ್ ರಸ್ತೆ, ಸರ್ವೀಸ್ ರಸ್ತೆ, ಕೆ.ಕೆ. ಹಳ್ಳಿ ಗ್ರಾಮ, ಸಿ.ಎಂ.ಆರ್.ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ರಾಮಯ್ಯ ಲೇಔಟ್, ಲಿಂಗರಾಜಪುರ, ಜಾನಕೀರಾಮ್ ಲೇಔಟ್, ಕನಕದಾಸ ಲೇ ಔಟ್, ಗೋವಿಂದಪುರ ಮುಖ್ಯರಸ್ತೆ.

ಎಚ್.ಡಿ.ಕುಮಾರಸ್ವಾಮಿಗೆ ತೀರುಗೇಟು ನೀಡಲು ಡಿಕೆ ಸೋದರರ ಸಿದ್ಧತೆ

ಸಂಚಲನ ಮೂಡಿಸಿದ ಚನ್ನಪಟ್ಟಣ ಉಪಚುನಾವಣೆ

ಬೆಂಗಳೂರು: ರಾಜಕೀಯ ಜಿದ್ದಾಜಿದ್ದಿನ ಕ್ಷೇತ್ರವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಭಾರಿ ಸಂಚಲನ ಮೂಡಿಸಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಸೋಲಿನಿಂದ ಕಂಗೆಟ್ಟಿರುವ ಸಹೋದರ ಡಿ.ಕೆ.ಸುರೇಶ್‌ಗೆ ಮತ್ತೆ ಜೀವ ನೀಡುವುದು ಒಂದು ಕಡೆಯಾದರೆ ಬದ್ಧ ವೈರಿಯಾದ ಕುಮಾರಸ್ವಾಮಿಗೂ ಪಾಠ ಕಲಿಸಲು ತಂತ್ರ ರೂಪಿಸಲು ಮುಂದಾಗಿದ್ದಾರೆ.

ಇತ್ತೀಚಿಗೆ ಡಿ.ಕೆ.ಶಿವಕುಮಾರ್ ಚನ್ನಪಟ್ಟಣದಿಂದ ಸ್ಪರ್ಧಿಸುವುದಾಗಿ ಸಿಡಿಸಿದ ಬಾಂಬ್ ಭಾರಿ ಸಂಚಲನವನ್ನೇ ಸೃಷ್ಟಿಸಿದೆ. ಇದರಿಂದಾಗಿ ವಿರೋಧಿಗಳ ನಿದ್ದೆಗೆಡಿಸಿರುವುದಂತು ಸತ್ಯ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪಕ್ಷದ ನೆಲೆ ಉಳಿಸಿಕೊಳ್ಳುವ ಸವಾಲು ಎದುರಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮಗ ನಿಖಿಲ್‌ಗೆ ರಾಜಕೀಯ ಪುನರ್ಜನ್ಮ ನೀಡುವ ಲೆಕ್ಕಾಚಾರವೆಲ್ಲಾ ಡಿಕೆ ಹೇಳಿಕೆಯಿಂದ ತಲೆಕೆಳಗಾಗಿದೆ. ಇತ್ತ ಬಿಜೆಪಿ ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ ಯಾರಿಗೆ ಲಾಭವಾಗಲಿದೆ ಎಂಬ ಚರ್ಚೆಗಳು ಸಹ ಜೋರಾಗಿ ನಡೆಯುತ್ತಿವೆ. ಪ್ರತಿಷ್ಠೆಯ ಕಣವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆ ಮಾಡುವುದೇ ಬಿಜೆಪಿ ಹಾಗೂ ಜೆಡಿಎಸ್‌ಗೆ ಸವಾಲಾಗಿ ಪರಿಣಮಿಸಿದೆ. ಎರಡೂ ಪಕ್ಷಗಳಿಂದ ಒಮ್ಮತದ ಅಭ್ಯರ್ಥಿ ಕಣಕ್ಕಿಳಿಸಬೇಕೆಂಬ ಲೆಕ್ಕಾಚಾರ ಎಲ್ಲಾ ನಾಯಕರಲ್ಲೂ ಇದೆ. ಆದರೆ ಕ್ಷೇತ್ರವನ್ನು ಯಾರು ತ್ಯಾಗ ಮಾಡುತ್ತಾರೆ ಎಂಬುದೇ ಇದೀಗ ಪ್ರಶ್ನೆಯಾಗಿದೆ. ನಿಖಿಲ್ ಕುಮಾರಸ್ವಾಮಿಗೆ ರಾಜಕೀಯ ಪುನರ್ಜನ್ಮ ನೀಡಬೇಕೆಂಬ ಮಹಾದಾಸೆ ಎಚ್.ಡಿ.ಕುಮಾರಸ್ವಾಮಿ ಅವರು ಹೊಂದಿದ್ದು, ಆದರೆ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಮೈತ್ರಿ ಕೂಟಕ್ಕೆ ಲಾಭವಾಗುತ್ತದೆ ಎಂಬುದು ಸಾಧ್ಯವಿಲ್ಲ. ಇಬ್ಬರ ಜಗಳದಲ್ಲಿ ಮೂರನೇಯವರಿಗೆ ಲಾಭವಾಗುವಂತೆ ಬಿಜೆಪಿ-ಜೆಡಿಎಸ್ ಪ್ರತ್ಯೇಕ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ ಕಾಂಗ್ರೆಸ್‌ಗೆ ಲಾಭವಾಗಲಿದೆ ಎಂಬುದು ತಿಳಿದಿರುವ ವರಿಷ್ಠರಿಗೆ ಅಭ್ಯರ್ಥಿ ಆಯ್ಕೆ ಕಂಗ್ಗಂಟಾಗಿ ಉಳಿದಿದೆ. ಇನ್ನು ಹಾಲಿ ವಿಧಾನಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಚನ್ನಪಟ್ಟಣದ ಮೇಲೆ ಕಣ್ಣಿಟ್ಟಿದ್ದಾರೆ. ಚನ್ನಪಟ್ಟಣ ಕ್ಷೇತ್ರದಲ್ಲಿ ಯೋಗೇಶ್ವರ್ ಹಿಡಿತ ಸಾಧಿಸಿದ್ದು, ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಆದರೆ ಜೆಡಿಎಸ್ ಹಿಡಿತ ಕಳೆದುಕೊಳ್ಳುತ್ತದೆ ಎಂಬ ಯೋಚನೆ ಜೆಡಿಎಸ್ ಪಾಳಯದಲ್ಲಿ ತಲೆದೋರಿದ್ದು, ತಮ್ಮ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದರೆ ಸೂಕ್ತ ಎಂದು ಒಂದು ಬಣ ಒತ್ತಡ ಹೇರುತ್ತಿದೆ.

ಎರಡೂ ಪಕ್ಷದಲ್ಲಿ ಆಕಾಂಕ್ಷಿಗಳು ಹೆಚ್ಚು

ಉಪಚುನಾವಣೆಯಲ್ಲಿ ಯಾರಿಗೆ ಟಿಕೆಟ್ ಎಂಬ ಸುಳಿವನ್ನು ಬಿಜೆಪಿ ಜೆಡಿಎಸ್ ಬಿಟ್ಟುಕೊಟ್ಟಿಲ್ಲ. ಲೋಕಸಭೆ ಚುನಾವಣೆಯಲ್ಲಿ ಚನ್ನಪಟ್ಟಣದಲ್ಲಿ ನಿರೀಕ್ಷೆಗೂ ಮೀರಿ ಮತ ಪಡೆದ ಕಾಂಗ್ರೆಸ್‌ಗೆ ವರದಾನವಾಗಲಿದೆ ಎಂಬ ಲೆಕ್ಕಾಚಾರದಿಂದಲೇ ಇಡೀ ಕ್ಷೇತ್ರದಲ್ಲಿ ಡಿಕೆ ತಿರುಗಾಡಿ ಜನರ ನಾಡಿ ಮಿಡಿತ ತಿಳಿಯುವ ಕೆಲಸ ಮಾಡಿದ್ದಾರೆ. ಆದರೆ ಎಚ್‌ಡಿಕೆ ಹಾಗೂ ಬಿಜೆಪಿ ನಾಯಕ ಸಿ.ಪಿ.ಯೋಗೇಶ್ವರ್‌ಗೆ ಹೊಸ ಸವಾಲು ತಂದೊಡ್ಡಿರುವ ಶಿವಕುಮಾರ್ ಈ ಹೊಸ ತಂತ್ರಕ್ಕೆ ಪ್ರತಿತಂತ್ರ ಹೆಣೆಯಲು ಭಾರಿ ಚರ್ಚೆಯನ್ನೇ ಮಾಡುತ್ತಿದ್ದಾರೆ. ಆದರೆ ಎರಡು ಪಕ್ಷಗಳಲ್ಲಿ ಆಕಾಂಕ್ಷಿಗಳ ದೊಡ್ಡ ಪಟ್ಟಿ ಸಿದ್ಧವಾಗಿದ್ದು ಇದನ್ನು ಸರಿಪಡಿಸುವುದು ಬಿಜೆಪಿ ಜೆಡಿಎಸ್‌ಗೆ ಭಾರಿ ತಲೆನೋವಾಗುವುದಂತು ಖಂಡಿತ.

NOTICE
Titan Company Limited
Registered office: 3, Sipcot Industrial Complex, Hosur, Tamil Nadu – 635126

NOTICE is hereby given that the certificates for the under mentioned securities of the Company havebeen lost/misplaced and the holders of the said securities have applied to the Company to release the new certificate. The Company has informed the holders/ applicants that the said shares have been transferred to IEPF as per IEPF Rules. Any person who has a claim in respect of the said securities should lodge such claim with the Company at its Registered Office within 15 days from this date, else the Company will proceed to issue duplicate certificate without further intimation.

Name of the holder And jt. Holder	Kind of securities	Folio no.	No. of Securities	Distinctive no.
Sanjay Kumar Loiwal Baleshwardas Loiwal	Equity shares of Face Value Re. 1/-	TWS0012554	1960	28985621-28987580

Place : Kolkata, Date: 24/06/2024 **Name of Applicant : Sanjay Kumar Loiwal**

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBAG00273113 1. ಅಭಿಷೇಕ್ ಮಾಥುರ್ (ಪಿಓಎ ಹೋಲ್ಡರ್ ಅಲೋಕ್ ಕುಮಾರ್ ಮಾಥುರ್ ಮೂಲಕ) 2. ನಮಿತಾ ಮಾಥುರ್ (ಪಿಓಎ ಹೋಲ್ಡರ್ ಅಲೋಕ್ ಕುಮಾರ್ ಮಾಥುರ್ ಮೂಲಕ)	ಡ್ಯುಪ್ಲೆಕ್ಸ್ ಅಪಾರ್ಟ್ಮೆಂಟ್ ಹೊಂದಿರುವ ಸಂ. ಟಿ-ಜಿ 03, ನೆಲ ಮಹಡಿ, ಬ್ಲಾಕ್ ನಂ. ಟಿ, ಅರ್ಬಾನಾ ಅವೆನ್ಯೂ, ಕನ್ನಮಂಗಲ ಗ್ರಾಮ ಕಸಬಾ ಹೋಬಳಿ ಬೆಂಗಳೂರು - 560045 ಕರ್ನಾಟಕದಲ್ಲಿ ಸ್ಥಿತವಾಗಿದೆ	05.05.2024	12.06.2024 ರಂದಿನಂತೆ ರೂ. 86,06,592.43/- (ರೂಪಾಯಿ ಎಂಬತ್ತ ಆರು ಲಕ್ಷ ಆರು ಸಾವಿರದ ಐದು ನೂರ ತೊಂಬತ್ತ ಎರಡು ಮತ್ತು ಪೈಸೆ ನಲವತ್ತ ಮೂರು ಮಾತ್ರ)
2.	ಸಾಲ ಖಾತೆ ನಂ. HHLBAG00411356 1. ಸಂತೋಷ ಕೋತಮಂಗಲ ಶಂಕರನಾರಾಯಣ (ಪಿಓಎ ಹೋಲ್ಡರ್ ಶ್ರೀಹರಿ ಎಂ ಸತ್ಯಮೂರ್ತಿ ಅಲಿಯಾಸ್ ಶ್ರೀಹರಿ ಮಾಣಿಕ್ಕಂ ಸತ್ಯಮೂರ್ತಿ ಮೂಲಕ) 2. ರಮ್ಯಾ ಮಾಣಿಕ್ಕಂ ಸತ್ಯಮೂರ್ತಿ ಅಲಿಯಾಸ್ ರಮ್ಯಾ ಸತ್ಯಮೂರ್ತಿ (ಪಿಓಎ ಹೋಲ್ಡರ್ ಶ್ರೀಹರಿ ಎಂ ಸತ್ಯಮೂರ್ತಿ ಅಲಿಯಾಸ್ ಶ್ರೀಹರಿ ಮಾಣಿಕ್ಕಂ ಸತ್ಯಮೂರ್ತಿ ಮೂಲಕ)	ಫ್ಲಾಟ್ ನಂ. ಟಿ-1004, ಹತ್ತನೇ ಮಹಡಿ, ಬ್ಲಾಕ್ ಟಿ, ಅರ್ಬಾನಾ ಅವೆನ್ಯೂ ಬೆಂಗಳೂರು ಗ್ರಾಮಾಂತರ ಬೆಂಗಳೂರು - 562114 ಕರ್ನಾಟಕ	05.05.2024	12.06.2024 ರಂದಿನಂತೆ ರೂ. 71,94,695.24/- (ರೂಪಾಯಿ ಎಪ್ಪತ್ತ ಒಂದು ಲಕ್ಷ ತೊಂಬತ್ತ ನಾಲ್ಕು ಸಾವಿರದ ಆರು ನೂರ ತೊಂಬತ್ತ ಐದು ಮತ್ತು ಪೈಸೆ ಇಪ್ಪತ್ತ ನಾಲ್ಕು ಮಾತ್ರ)
3.	ಸಾಲ ಖಾತೆ ನಂ. HHLMAL00330202 1. ಮಾಧವಿ ಎ (ಸಹ-ಸಾಲಗಾರ, ಪತ್ನಿ ಹಾಗೂ ದಿವಂಗತ ರಮೇಶ್ ಎಸ್ ಅವರ ಕಾನೂನು ಉತ್ತರಾಧಿಕಾರಿ) 2. ರಂಜನ್ ರಮೇಶ್ (ಮಗ ಹಾಗೂ ದಿವಂಗತ ರಮೇಶ್ ಎಸ್ ಅವರ ಕಾನೂನು ಉತ್ತರಾಧಿಕಾರಿ ಎಸ್) 3. ರಿತಿಕ್ ರಮೇಶ್ (ಮಗ ಹಾಗೂ ದಿವಂಗತ ರಮೇಶ್ ಎಸ್ ಅವರ ಕಾನೂನು ಉತ್ತರಾಧಿಕಾರಿ ಎಸ್) 4. ರಸಜ್ಞ ರಮೇಶ್ (ಅಪ್ರಾಪ್ತ ಮಗಳು ದಿವಂಗತ ರಮೇಶ್ ಎಸ್ ಅವರ ಕಾನೂನು ಉತ್ತರಾಧಿಕಾರಿ, ನ್ಯಾಚುರಲ್ ಗಾರ್ಡಿಯನ್ ಮೂಲಕ)	ಪ್ಲಾಟ್/ಸೈಟ್ ನಂ. ಬಿ2-ಎಸ್.ಐ - 2391, ನಾಡ ಪ್ರಭು ಕೆಂಪೇಗೌಡ ಲೇಔಟ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು - 560028, ಕರ್ನಾಟಕ	09.02.2024	05.06.2024 ರಂದಿನಂತೆ ರೂ. 18,98,350.65/- (ರೂಪಾಯಿ ಹದಿನೆಂಟು ಲಕ್ಷ ತೊಂಬತ್ತ ಎಂಟು ಸಾವಿರದ ಮುನ್ನೂರ ಐವತ್ತು ಮತ್ತು ಪೈಸೆ ಅರವತ್ತ ಐದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗಾಗಿ
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

ಲೇಖಕಿಯರ ಸಂಘದ ವಾರ್ಷಿಕೋತ್ಸವ ಶಿವಪ್ರಕಾಶ್ ಅಭಿಮತ

ಬರವಣಿಗೆಯಲ್ಲಿ ಮಹಿಳೆಯರ ಪಾರಮ್ಯ

ವಿವಿಧ ದತ್ತಿ ಪ್ರಶಸ್ತಿಗಳನ್ನು ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್. ಪುಷ್ಪ ಪ್ರದಾನ ಮಾಡಿದರು.

ಬೆಂಗಳೂರು: ಒಂದುಕಾಲದಲ್ಲಿ ಸಮಾಜ ಹೆಣ್ಣನ್ನು ನೋಡುವಂತಹ ದೃಷ್ಟಿ ಬೇರೆಯಾಗಿತ್ತು. ಆದರೆ ಅದೆಲ್ಲವನ್ನೂ ಮೀರಿದ ಸ್ತ್ರೀ, ತನ್ನನ್ನು ಬರವಣಿಗೆಯಲ್ಲಿ ತೊಡಗಿಸಿಕೊಂಡು ಕಾವ್ಯದ ಪ್ರಕಾರವನ್ನು ಆಯ್ಕೆಮಾಡಿಕೊಂಡು ಹಂತಹಂತವಾಗಿ ಎಲ್ಲವನ್ನೂ ಆವರಿಸಿಕೊಂಡಳು ಎಂದು ಹಿರಿಯ ಕವಿ ಡಾ.ಎಚ್.ಎಸ್.ಶಿವಪ್ರಕಾಶ್ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ಲೇಖಕಿಯರ ಸಂಘದಿಂದ 45ನೇ ವರ್ಷದ ವಾರ್ಷಿಕೋತ್ಸವ ಮತ್ತು 2023ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕನ್ನಡದ ಲೇಖಕಿಯರ ಸಂಘಕ್ಕೆ ಬಹಳಷ್ಟು ವರ್ಷಗಳ ಇತಿಹಾಸವಿದ್ದು, 40 ವರ್ಷಗಳಷ್ಟು ಹಳೆಯ ಪರಂಪರೆಯನ್ನು ಈ ಸಂಘವು ಉಳಿಸಿ, ಬೆಳೆಸುತ್ತಾ ಬಂದಿದೆ ಎಂದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, ಹಿಂದಿನ ಕಾಲದಲ್ಲಿ ಪ್ರಶಸ್ತಿಗಳಿಗೆ ಇದ್ದಂತಹ ಮೌಲ್ಯ ಈಗ ಇಲ್ಲ ಎನ್ನುವಂತಹ ಮಾತಿದೆ. ಆದರೆ ಅದೆಲ್ಲದಕ್ಕೂ ಸ್ಪರ್ಧೆಯನ್ನು ನೀಡುವ ಹಾಗೆ ಹಲವು ಜನರು ಹಲವು ರೀತಿಯ ಪ್ರಶಸ್ತಿಗಳನ್ನು ನೀಡುತ್ತಿದ್ದಾರೆ. ಆದರೆ ಲೇಖಕಿಯರ ಸಂಘ ಇವೆಲ್ಲದಕ್ಕಿಂತ ಭಿನ್ನವಾಗಿದ್ದು, ಇಲ್ಲಿ ಮೌಲಿಕವಾದ ಕೃತಿಗಳನ್ನು ಆರಿಸುವುದಲ್ಲದೇ ವಿಶೇಷವಾಗಿ ತಮ್ಮ ತಮ್ಮ ಕ್ಷೇತ್ರಗಳ ವಿಚಾರಗಳನ್ನು ಒಳಗೊಂಡ ಹಲವಾರು ಕತೆ, ಕಾದಂಬರಿ, ಕವನಸಂಕಲನಗಳು, ಸಂಶೋಧನೆ, ಪ್ರವಾಸ ಸಾಹಿತ್ಯ, ನಾಟಕ, ಆತ್ಮಚರಿತ್ರೆ ಸೇರಿದಂತೆ ಅದರಲ್ಲಿ ಆಯಾ ಕ್ಷೇತ್ರದಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಅಕ್ಷರ ಯೋಗಕೇಂದ್ರಕ್ಕೆ 5 ಗಿನ್ನೆಸ್ ದಾಖಲೆ

ಬೆಂಗಳೂರು: ಖ್ಯಾತ ಯೋಗಿ ಮತ್ತು ಅಕ್ಷರ ಯೋಗ ಕೇಂದ್ರದ ಸಂಸ್ಥಾಪಕ ಸಿದ್ಧಾ ಅಕ್ಷರ ಅವರು ಅಂತಾರಾಷ್ಟ್ರೀಯ ಯೋಗ ದಿನ ದಂದು 5 ಹೊಸ ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸಿ ಇತಿಹಾಸ ದಾಖಲಿಸಿದ್ದಾರೆ.

ಸಮಾಜದ ವಿವಿಧ ಕ್ಷೇತ್ರಗಳ ಸಾವಿರಾರು ಯೋಗಾಭ್ಯಾಸಿಗಳು ಮತ್ತು ಉತ್ಸಾಹಿಗಳು ನೌಕಾಸನ, ಕೌಂಡಿನ್ಯಾಸನ, ಹನುಮಾನಾಸನ, ಚಕ್ರಾಸನ, ನಟರಾಜಾಸನ, ಏಕಪಾದಾಸನ ಮತ್ತು ಸೂರ್ಯ ನಮಸ್ಕಾರ ಒಳಗೊಂಡು 5 ಆಸನಗಳನ್ನು ಬೆಂಗಳೂರಿನ ಅಕ್ಷರ ಯೋಗ ಕೇಂದ್ರದಲ್ಲಿ ಪ್ರದರ್ಶಿಸಿದರು. ಭಾರತೀಯ ಸೇನೆ, ಎನ್‌ಸಿಸಿ, ವಾಯುಪಡೆ, ಕರ್ನಾಟಕ ರಾಜ್ಯ ಪೊಲೀಸ್ ಅಲ್ಲದೆ ವಿಶೇಷ ಚೇತನ ವ್ಯಕ್ತಿಗಳು, ಅನಾಥಾಶ್ರಮದ ಮಕ್ಕಳು ಮತ್ತು ಉದ್ಯಮ ಹಾಗೂ ಕಾರ್ಪೊರೇಟ್ ಸಮುದಾಯದ ಸದಸ್ಯರು ಭಾಗವಹಿಸಿದ್ದರು.

ಕಳೆದ ವಾರಕ್ಕಿಂತಲೂ ಈ ವಾರ ತರಕಾರಿಗಳ ಬೆಲೆ 3 ಪಟ್ಟು ಹೆಚ್ಚಳ

ಶತಕ ದಾಟಿದ ಟೊಮೇಟೊ, ಬೆಳ್ಳುಳ್ಳಿ 300

ಬೆಂಗಳೂರು: ತೈಲದರ ಏರಿಕೆಯ ಬಳಿಕ ನಗರದ ಮಾರುಕಟ್ಟೆಗಳಲ್ಲಿ ತರಕಾರಿಗಳ ಬೆಲೆ ದಿಢೀರನೆ ಬಡವರಿಗೆ ಮತ್ತೊಂದು ಬೆಲೆ ಏರಿಕೆಯ ಬಿಸಿ ತಟ್ಟಿದೆ.

ನಗರದಲ್ಲಿ ಟೊಮೇಟೊ ದರ ಶತಕವನ್ನು ದಾಟಿದ್ದರೆ, ಬೀನ್ಸ್ ಇನ್ನೂರು ರು. ದಾಟಿದೆ. ಬೆಳ್ಳುಳ್ಳಿ ಬೆಲೆ 300 ರು. ದಾಟಿದೆ. ಕಳೆದ ವಾರಕ್ಕಿಂತಲೂ ಈ ವಾರ ತರಕಾರಿಗಳ ಬೆಲೆ ಮೂರು ಪಟ್ಟು ಹೆಚ್ಚಳವಾಗಿದೆ. ಇದರಿಮದ ಸಾರ್ವಜನಿಕರು ತರಕಾರಿ ಕೊಳ್ಳಲು ಹಿಂದೆ ಮುಂದೆ ನೋಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕೆಆರ್ ಮಾರುಕಟ್ಟೆ, ಮಲ್ಲೇಶ್ವರ, ಗಾಂಧಿ ಬಜಾರ್, ಹೆಬ್ಬಾಳ ಮಾರುಕಟ್ಟೆ ಸೇರಿದಂತೆ ಎಲ್ಲಾ ಕಡೆಗಳಲ್ಲೂ ತರಕಾರಿ ಬಲು ತುಟ್ಟಿಯಾಗಿದೆ. ಇದರಿಂದ ಜನಸಾಮಾನ್ಯರು ಹೈರಾಣಾಗಿದ್ದಾರೆ.

ರಾಜ್ಯದಲ್ಲಿ ಭಾರೀ ಪ್ರಮಾಣದಲ್ಲಿ ಟೊಮೇಟೋ ಇಳುವರಿಯಲ್ಲಿಮ ಕುಸಿತವಾಗಿದ್ದು, ಈ ಹಿನ್ನೆಲೆ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಹೇಳಲಾಗುತ್ತಿದ್ದು, ಮಂಡ್ಯ, ಕೋಲಾರ, ಕನಕಪುರ, ಕಡೂರು, ಮದ್ದೂರು ಕಡೆಗಳಲ್ಲಿ ಟೊಮೇಟೋ ಇಳುವರಿ ಕುಸಿತವಾಗಿದೆ. ಸದ್ಯ ಮಹಾರಾಷ್ಟ್ರದಿಂದ ಆಮದಾಗುವ ಟೊಮೇಟೊ ನೆಚ್ಚಿಕೊಂಡಿವೆ ಬೆಂಗಳೂರಿನ ಮಾರುಕಟ್ಟೆಗಳು. ಟೊಮೇಟೊ ಜತೆಗೆ ಬೀನ್ಸ್, ಬೆಳ್ಳುಳ್ಳಿ ಸೇರಿದಂತೆ ಇತರೆ ತರಕಾರಿ ದರವೂ ತುಟ್ಟಿಯಾಗಿದೆ. ಮುಂದಿನ ಒಂದು ತಿಂಗಳ ಕಾಲ ದರ ಇದೇ ರೀತಿ ಏರಿಕೆಯಾಗಲಿದೆಯಂತೆ. ಒಂದು ಎಕರೆ ಟೊಮೇಟೊ ಬೆಳೆದಿರುವವರು ಲಕ್ಷಾಧಿಪತಿಗಳಾಗುತ್ತಿದ್ದಾರೆ. ಈರುಳ್ಳಿ ದರ ಕೂಡ ಕಳೆದ ಎರಡು ವಾರದಿಂದ ಹೊಯ್ದಾಟದಲ್ಲಿದ್ದು, ಬಜ್ಜಿ ಮೆಣಸಿನಕಾಯಿ, ಬಿಳಿ ಬದನೆ, ನುಗ್ಗಿಕಾಯಿ, ನವಿಲುಕೋಸು ದರವೂ ಏರುಗತಿಯಲ್ಲೇ ಇದೆ. ಬೀನ್ಸ್ ಕಳೆದ ಹದಿನೈದು ದಿನಗಳಿಂದಲೂ 220 ಆಸುಪಾಸಿನಲ್ಲೇ ಇದೆ. ಉಳಿದಂತೆ ಕೊತ್ತಂಬರಿ ಸೊಪ್ಪು ಒಂದು ಕಂತೆಗೆ 100 ಮುಟ್ಟಿದೆ ಮೆಂತ್ಯ, ಪಾಲಕ್, ಬಸಳೆ, ಸಬ್ಬಸಗಿ ಸೊಪ್ಪುಗಳೆಲ್ಲ ಸಾಮಾನ್ಯ ದಿನಕ್ಕಿಂತ 40- 70ವರೆಗೂ ಬೆಲೆ ಹೆಚ್ಚಿಸಿಕೊಂಡಿವೆ.

ಪ್ರಸ್ತುತ ತರಕಾರಿ ದರ

ಟೊಮೇಟೊ	100 - 130
ಬೀನ್ಸ್	180 - 220
ಬಿಳಿ ಬದನೆ	100
ಬಜ್ಜಿ ಮೆಣಸಿನಕಾಯಿ	80 - 100
ಕ್ಯಾಪ್ಸಿಕಂ	100 - 120
ಮೂಲಂಗಿ	60 - 90
ನುಗ್ಗೇಕಾಯಿ	175 - 190
ಶುಂಠಿ	190 - 260
ಬೆಳ್ಳುಳ್ಳಿ	290 - 360
ಹೀರೇಕಾಯಿ	90 - 120

ಎಲೆಕ್ಟ್ರಿಷಿಯನ್ ವಿರುದ್ಧದ ಕೇಸ್ ರದ್ದತಿಗೆ ಹೈಕೋರ್ಟ್ ನಕಾರ

ಬೆಂಗಳೂರು: ಮಹಿಳೆಯೊಬ್ಬರ ಮನೆಯ ಸ್ವಿಚ್ ಬೋರ್ಡ್‌ನಲ್ಲಿ ಮೊಬೈಲ್ ಇಟ್ಟು ಆಕೆಯ ಖಾಸಗಿ ದೃಶ್ಯಗಳನ್ನು ಸೆರೆಹಿಡಿದಿದ್ದ ಶಿವಮೊಗ್ಗ ಮೂಲದ ಎಲೆಕ್ಟ್ರಿಷಿಯನ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ತನ್ನ ವಿರುದ್ಧದ ಪ್ರಕರಣ ರದ್ದುಗೊಳಿಸುವಂತೆ ಕೋರಿ ಎಲೆಕ್ಟ್ರಿಷಿಯನ್ ಎಸ್. ವಿರಭದ್ರಸ್ವಾಮಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಆಲಿಸಿದ ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಮೇಲ್ನೋಟಕ್ಕೆ ಇದು ವಾಯರಿಸಂ (ಲೈಂಗಿಕ ದರ್ಶನದ ತೃಪ್ತಿ) ಪ್ರಕರಣದಂತೆ ಇದ್ದು, ಅದರಲ್ಲಿ ಆರೋಪಿ ಕನಿಷ್ಠ ವಿಚಾರಣೆಯನ್ನು ಎದುರಿಸಲಿ ಎಂದು ನ್ಯಾಯಾಲಯ ಹೇಳಿದೆ. ಅರ್ಜಿದಾರ ಮೊಬೈಲ್‌ನಲ್ಲಿ ಯಾವುದೇ ಚಿತ್ರ ಅಥವಾ ವಿಡಿಯೊಗಳನ್ನು ಸೆರೆ ಹಿಡಿದಿರಲಿಲ್ಲವೆಂದು ಹೇಳಿದ್ದಾರೆ. ಇದು ವಿಚಾರಣೆಯಲ್ಲಿ ದೃಢಪಡಬೇಕಾಗಿದೆ. ಜತೆಗೆ ಯಾವುದೇ ವ್ಯಕ್ತಿ ತಮ್ಮ ಮೊಬೈಲ್‌ಗಳಲ್ಲಿ ಮಹಿಳೆಯರ ಖಾಸಗಿ ಚಿತ್ರಗಳನ್ನು ನೋಡುವುದು ಅಥವಾ ಸೆರೆಹಿಡಿಯುವುದನ್ನು ಮಾಡಿದರೆ ಅದು ವಾಯರಿಸಂ ಕೃತ್ಯ ಎಸಗಿದಂತೆ. ಹಾಗಾಗಿ ಅಂತಹ ಗಂಭೀರ ಆರೋಪ ಇರುವುದರಿಂದ ಪ್ರಕರಣ ರದ್ದುಗೊಳಿಸಲಾಗದು ಎಂದು ಪೀಠ ಸ್ಪಷ್ಟಪಡಿಸಿದೆ. ಪೊಲೀಸರು ತನಿಖೆ ನಡೆಸಿ ಆರೋಪ ಪಟ್ಟಿ ಸಲ್ಲಿಸಿದ್ದರು. ಅದರಲ್ಲಿ ಆರೋಪಿಯು ಆ ಮಹಿಳೆಯ ವಿಡಿಯೋ ಹಾಗೂ ಚಿತ್ರಗಳನ್ನು ಎಲ್ಲರಿಗೂ ಹಂಚುವುದಾಗಿ ಬೆದರಿಕೆಯೊಡಿದ್ದರು ಎಂದು ಹೇಳಲಾಗಿತ್ತು. ಅಲ್ಲದೇ, ದೂರುದಾರ ಮಹಿಳೆಗೆ ಆರೋಪಿಯು ಜೀವ ಬೆದರಿಕೆ ಹಾಕಿರುವುದನ್ನು ಆರೋಪಪಟ್ಟಿಯಲ್ಲಿ ತಿಳಿಸಲಾಗಿತ್ತು. ಹಾಗಾಗಿ ಆರೋಪಿಯು ಪ್ರಕರಣ ರದ್ದುಗೊಳಿಸುವಂತೆ ಹೈಕೋರ್ಟ್ ಮೊರೆ ಹೋಗಿದ್ದ.

ಪ್ರಕರಣದ ಹಿನ್ನೆಲೆ

2021ರ ಜನವರಿಯಲ್ಲಿ ಎಲೆಕ್ಟ್ರಿಷಿಯನ್ ಹಾಗೂ ತಮ್ಮ ಕುಟುಂಬಕ್ಕೆ ಪಎಲೆಕ್ಟ್ರಿಷಿಯನ್ ವಿರುದ್ಧರಿಚಯವಿದ್ದ ಎಸ್.ವಿರಭದ್ರಸ್ವಾಮಿ ತಮ್ಮ ಮನೆಯ ಹಾಲ್‌ನಲ್ಲಿನ ಸ್ವಿಚ್ ಬೋರ್ಡ್‌ನಲ್ಲಿ ಮೊಬೈಲ್ ಇಟ್ಟು ತಮ್ಮ ಖಾಸಗಿ ಚಿತ್ರ ಹಾಗೂ ವಿಡಿಯೊಗಳನ್ನು ಸೆರೆಹಿಡಿದಿದ್ದಾರೆ ಎಂದು ಮಹಿಳೆಯೊಬ್ಬರು ಶಿವಮೊಗ್ಗ ಠಾಣೆಗೆ ದೂರು ನೀಡಿದ್ದರು. ಅಲ್ಲದೇ, ಆ ದೃಶ್ಯಗಳನ್ನು ತಮ್ಮ ಕುಟುಂಬದವರೊಂದಿಗೆ ಹಂಚಿಕೊಂಡಿದ್ದಾರೆ. ಇದರಿಂದ ತನ್ನ ಹಾಗೂ ಪತಿಯ ಘನತೆಗೆ ಕುಂದಾಗಿದೆ ಎಂದು ಆರೋಪಿಸಿದ್ದರು.

ವಾಡಿಕೆಗಿಂತ ಅಧಿಕ ಮಳೆ: ಹೆಚ್ಚಿದ ಜಲಾಶಯಗಳ ನೀರಿನ ಮಟ್ಟ

ರಾಜ್ಯಾದ್ಯಂತ ಕಳೆದ ಒಂದು ವಾರದಿಂದ ಧಾರಾಕಾರ ಮಳೆ | ಉತ್ತರ ಕರ್ನಾಟಕದ ನದಿಗಳಿಗೆ ಜೀವಕಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜೂನ್ ಮೊದಲ ವಾರದಲ್ಲಿ ರಾಜ್ಯಕ್ಕೆ ಮುಂಗಾರು ಆಗಮಿಸಿದ್ದು, ಈ ಅವಧಿಯಲ್ಲಿ ವಾಡಿಕೆಗಿಂತ ಅಧಿಕ ಮಳೆ ಬಿದ್ದಿದೆ. ಇದರಿಂದ ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಹೆಚ್ಚಿನ ನೀರಿನ ಸಂಗ್ರಹವಾಗಿದೆ.

ರಾಜ್ಯಾದ್ಯಂತ ಕಳೆದ ಒಂದು ವಾರದಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದೆ. ಜೂನ್ ಮೊದಲ ವಾರದಲ್ಲಿ 173 ಟಿಎಂಸಿ ನೀರು ಸಂಗ್ರಹವಾಗಿತ್ತು. 3460 ಸಾವಿರ ಕ್ಯೂಸೆಕ್ ನೀರು ಒಳ ಹರಿವು ಹಾಗೂ 12,662 ಕ್ಯೂಸೆಕ್ ನೀರು ಹೊರ ಹರಿವು ಇತ್ತು. ಆದರೆ, ಈಗ 190 ಟಿಎಂಸಿ ನೀರು ಸಂಗ್ರಹವಾಗಿದ್ದು, 15,680 ಕ್ಯೂಸೆಕ್ ಒಳ ಹಾಗೂ 7,414 ಕ್ಯೂಸೆಕ್ ಹೊರ ಹರಿವು ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಜಲಾಶಯಗಳಲ್ಲಿ 178 ಟಿಎಂಸಿ ನೀರು ಸಂಗ್ರಹವಾಗಿತ್ತು.

ಕೃಷ್ಣಾನದಿ ಪಾತ್ರದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ ಭದ್ರಾ, ತುಂಗಭದ್ರಾ, ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಗೆ ಒಳ ಹರಿವು ಅಧಿಕವಾಗಿದೆ. ಈಗಾಗಲೇ 87 ಟಿಎಂಸಿ ನೀರು ಹರಿದು ಬಂದಿದೆ. ವಿದ್ಯುತ್ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಸೂಪಾ, ಲಿಂಗನಮಕ್ಕಿ ಹಾಗೂ ವರಾಹಿ ಜಲಾಶಯಗಳಿಗೆ 48 ಟಿಎಂಸಿ ಹಾಗೂ ಕಾವೇರಿ ಕೊಳ್ಳದಲ್ಲಿಯೂ ಉತ್ತಮ ಮಳೆಯಾಗುತ್ತಿದ್ದು, ಕೆಆರ್ ಎಸ್, ಕಬಿನಿ, ಹಾರಂಗಿ ಹಾಗೂ ಹೇಮಾವತಿ ಜಲಾಶಯಗಳಿಗೆ 38 ಟಿಎಂಸಿ ನೀರು ಹರಿದು ಬಂದಿದೆ. ಒಟ್ಟಾರೆ ಮುಂಗಾರು ಆರಂಭವಾದ ಬಳಿಕ ರಾಜ್ಯದ ಜಲಾಶಯಗಳಲ್ಲಿ 16 ಟಿಎಂಸಿ ನೀರು ಸಂಗ್ರಹವಾಗಿದೆ. ಕಳೆದ ವರ್ಷ ತೀವ್ರ ಮಳೆಯ ಕೊರತೆಯಿಂದ ಬತ್ತಿ ಹೋಗಿದ್ದ ಜಲಾಶಯಗಳು, ಈ ವರ್ಷ ಸುರಿಯುತ್ತಿರುವ ಮಳೆಗೆ ಮೈದುಂಬಿವೆ. ಮಹಾರಾಷ್ಟ್ರ, ಬೆಳಗಾವಿ ಜಿಲ್ಲೆಯಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಉತ್ತರ ಕರ್ನಾಟಕದ ನದಿಗಳಿಗೆ ಜೀವಕಳೆ ಬಂದಿದೆ. ಆಲಮಟ್ಟಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ.

ಲಿಂಗನಮಕ್ಕಿಯಲ್ಲಿ 13.90 ಟಿ.ಎಂ.ಸಿ, ಸೂಪಾ ಜಲಾಶಯದಲ್ಲಿ 30.24, ವರಾಹಿಯಲ್ಲಿ 3.10, ಹಾರಂಗಿಯಲ್ಲಿ 3.27, ಹೇಮಾವತಿಯಲ್ಲಿ 10.73, ಕೆಆರ್ ಎಸ್‌ನಲ್ಲಿ 14.51, ಕಬಿನಿಯಲ್ಲಿ 8.97, ಭದ್ರಾ ಜಲಾಶಯದಲ್ಲಿ 15.17, ತುಂಗಭದ್ರಾದಲ್ಲಿ 5.69, ಘಟಪ್ರಭಾದಲ್ಲಿ 7.91, ಮಲಪ್ರಭಾದಲ್ಲಿ 6.45, ಆಲಮಟ್ಟಿಯಲ್ಲಿ 29.13, ನಾರಾಯಣಪುರ ಡ್ಯಾಮ್‌ನಲ್ಲಿ 21.16, ವಾಣಿವಿಲಾಸ ಸಾಗರದಲ್ಲಿ 18.24 ಟಿ.ಎಂ.ಸಿ ನೀರು ಸಂಗ್ರಹವಾಗಿದೆ.

ಕಳೆದ ವರ್ಷ ನೀರಿನ ಮಟ್ಟ ಕುಸಿತ

ಕಳೆದ ವರ್ಷ ಮುಂಗಾರು ಮಳೆ ವಿಳಂಬದಿಂದಾಗಿ ರಾಜ್ಯದ 10 ಅಣೆಕಟ್ಟುಗಳು ಬರಿದಾಗಿದ್ದವು. ನೀರಿನ ಅಭಾವದಿಂದ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿತ್ತು. ತುಂಗಭದ್ರಾ, ಲಿಂಗನಮಕ್ಕಿ ಜಲಾಶಯಗಳ ಮಟ್ಟ 10 ವರ್ಷದ ಕನಿಷ್ಠಕ್ಕೆ ಕುಸಿದಿದ್ದರೆ, ಆಲಮಟ್ಟಿ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ 7 ವರ್ಷ ಹಾಗೂ ಕೃಷ್ಣರಾಜಸಾಗರ ಜಲಾಶಯ (ಕೆಆರ್‌ಎಸ್)ದಲ್ಲಿನ ನೀರಿನ ಮಟ್ಟ 5 ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿಸಿತ್ತು. ಕಬಿನಿ, ಹಾರಂಗಿ, ಬಸವಸಾಗರ, ಘಟಪ್ರಭಾ, ಮಲಪ್ರಭಾ, ವಾಣಿವಿಲಾಸ ಸಾಗರಗಳಲ್ಲಿಯೂ 2022ಕ್ಕೆ ಕಳೆದ ಬಾರಿಗೆ ಹೋಲಿಸಿದರೆ 2023ರಲ್ಲಿ ನೀರಿನ ಮಟ್ಟದಲ್ಲಿ ಗಣನೀಯ ಪ್ರಮಾಣದ ಕುಸಿದಿತ್ತು. ಕೆಆರ್‌ಎಸ್‌ನಲ್ಲಿ 3 ಟಿಎಂಸಿಯಷ್ಟುಮಾತ್ರ ನೀರು ಬಳಕೆಗೆ ಲಭ್ಯವಿತ್ತು.

3 ದಿನ ಬೆಂಗಳೂರಿನಲ್ಲಿ ತಾಪಮಾನ ಹೆಚ್ಚಳ

ಬೆಂಗಳೂರಿನಲ್ಲಿ ಮಳೆ ಕಡಿಮೆಯಾಗಿರುವ ಕಾರಣ ಮುಂದಿನ ಎರಡು ಅಥವಾ ಮೂರು ದಿನಗಳ ಅವಧಿಯಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನ ಪ್ರಮಾಣದಲ್ಲಿ ಏರಿಕೆ ಉಂಟಾಗಬಹುದು. ನೈಋತ್ಯ ಮಾರುತಗಳಲ್ಲಿ ತೇವಾಂಶ ಕಡಿಮೆಯಾಗುವುದು ತಾತ್ಕಾಲಿಕ ಪ್ರಕ್ರಿಯೆ. ಇದು ಮತ್ತೆ ತುಂಬಿಕೊಳ್ಳಲಿದ್ದು, ಮುಂದಿನ ವಾರ ಮತ್ತೆ ಮಳೆಯ ಪ್ರಮಾಣ ಹೆಚ್ಚಾಗಲಿದೆ. ಸದ್ಯದ ಈ ಹವಾಮಾನ ಏರುಪೇರಿನ ಕಾರಣ ಮುಂದಿನ ಎರಡು ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಸರಾಸರಿ ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕಳೆದ ವಾರಗಳಿಗಿಂತ ಒಂದು ಡಿಗ್ರಿ ಹೆಚ್ಚಾಗಲಿದೆ. ಗರಿಷ್ಠ ತಾಪಮಾನ 31 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರುತ್ತದೆ ಎಂದು ಹವಾಮಾನ ಇಲಾಖೆ ತಜ್ಞರು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ-3

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-3 ಇಂದಿನಿಂದ (ಸೋಮವಾರ) 24ರಿಂದ ಜುಲೈ 5ರವರೆಗೆ ಪರೀಕ್ಷೆ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಗೆ ಮೂರು ವಾರ್ಷಿಕ ಪರೀಕ್ಷಾ ಪದ್ಧತಿ ಜಾರಿಯಾದ ನಂತರ ನಡೆಯುತ್ತಿರುವ ದ್ವಿತೀಯ ಪಿಯುಸಿ ಮೊದಲ ವರ್ಷದ ಮೂರನೇ ಪರೀಕ್ಷೆಗೆ ರಾಜ್ಯದಲ್ಲಿ ಒಟ್ಟು 248 ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದೆ. ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆಗಳು ನಡೆಯಲಿದೆ. ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ವಿಚಕ್ಷಣ ದಳಗಳನ್ನು ನಿಯೋಜಿಸಲಾಗುತ್ತಿದೆ. ಕಲಾ ವಿಭಾಗದಲ್ಲಿ 19,113 ಬಾಲಕರು, 11,698 ಬಾಲಕಿಯರು ಸೇರಿ 30,811 ವಿದ್ಯಾರ್ಥಿಗಳು, ವಿಜ್ಞಾನ ವಿಭಾಗದಲ್ಲಿ 8,817 ಬಾಲಕರು, 10,966 ಬಾಲಕಿಯರು ಸೇರಿ ಒಟ್ಟು 19,783 ವಿದ್ಯಾರ್ಥಿಗಳು ಹಾಗೂ ವಾಣಿಜ್ಯ ವಿಭಾಗದಲ್ಲಿ 16,428 ಬಾಲಕರು, 8,973 ಬಾಲಕಿಯರು ಸೇರಿ ಒಟ್ಟು 25,401 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಒಟ್ಟಾರೆ, 44,358 ಬಾಲಕರು, 31,637 ಬಾಲಕಿಯರು ಸೇರಿ ಒಟ್ಟು 75,995 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆ-3 ಬರೆಯಲಿದ್ದಾರೆ.

ನಾಳೆಯಿಂದ ದಾಖಲೆಗಳ ಪರಿಶೀಲನೆ

ಬೆಂಗಳೂರು: ಯುಜಿಸಿಇಟಿ-2024ರ ಆನ್‌ಲೈನ್ ಅರ್ಜಿಯಲ್ಲಿ ಅರ್ಹತಾ ಕಂಡಿಕೆಗಳಾದ ಬಿ. ಸಿ. ಡಿ. ಐ. ಜೆ. ಕೆ. ಎಲ್. ಎಂ. ಎನ್. ಜೆಡ್. ಈ ಕ್ಲಾಸ್‌ಗಳನ್ನು ಕ್ಲೇಮ್ ಮಾಡಿರುವ ಹಾಗೂ ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳಿಗೆ ಆಫ್ ಲೈನ್ ದಾಖಲಾತಿ ಪರಿಶೀಲನೆಯು ಜೂನ್ 25 ರಿಂದ 29ರ ವರೆಗೆ ಮಲ್ಲೇಶ್ವರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ. ಸಂಬಂಧಿಸಿದ ಅಭ್ಯರ್ಥಿಗಳಿಗೆ ಖುದ್ದು ಹಾಜರಾಗಲು ಸೂಚಿಸಿದ್ದಾರೆ. ವೈ ಅರ್ಹತಾ ಕಂಡಿಕೆಯನ್ನು ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅಗತ್ಯವಿಲ್ಲ. ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ನ್ಯಾಚುರೋಪತಿ, ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಕೃಷಿ ವಿಜ್ಞಾನ ಕೋರ್ಸುಗಳು, ಬಿ.ಎಸ್ಸಿ (ಆನರ್ಸ್) ಕೃಷಿ, ಬಿ.ಎಸ್ಸಿ (ಆನರ್ಸ್) (ರೇಷ್ಮೆ ಕೃಷಿ) ಮುಂತಾದವು, ಬಿ.ಎಸ್ಸಿ (ನರ್ಸಿಂಗ್), ಬಿ.ಫಾರ್ಮಾ, 2ನೇ ವರ್ಷದ ಬಿ-ಫಾರ್ಮಾ ಮತ್ತು ಫಾರ್ಮಾ-ಡಿ ಕೋರ್ಸುಗಳ ಪ್ರವೇಶಕ್ಕೆ ಇದು ಅನ್ವಯವಾಗುತ್ತದೆ. ವಿದ್ಯಾರ್ಥಿಗಳ ರ್‍ಯಾಂಕ್ ಆಧರಿಸಿ ಅವರು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕಾದ ವೇಳಾಪಟ್ಟಿಯನ್ನು ಕೆಇಎ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಆರೋಪ ಹೊತ್ತ ಅಧಿಕಾರಿ ವಿರುದ್ಧ ಕ್ರಮ ಅಗತ್ಯ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ, ಭ್ರಷ್ಟಾಚಾರ, ಲಂಚ ಪ್ರಕರಣಗಳ ಆರೋಪ ಹೊತ್ತಿರುವ ಅಧಿಕಾರಿಗಳ ವಿಚಾರಣೆಗೆ ಸಂಬಂಧಪಟ್ಟ ಪ್ರಾಧಿಕಾರಿಗಳು ಅನುಮತಿ ನೀಡದಿರುವುದು ಬೆಳಕಿಗೆ ಬಂದಿದೆ. ರಾಜ್ಯ ಸರಕಾರದ 22 ಇಲಾಖೆಗಳಲ್ಲಿ 156 ಪ್ರಕರಣಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಮಂಜೂರಾತಿ ಬಾಕಿ ಇದೆ. ಹಾಗಾಗಿ ಈ ಪ್ರಕರಣಗಳಲ್ಲಿ ಆರೋಪಿಗಳ ವಿಚಾರಣೆ ನಡೆಸಲು ಸಾಧ್ಯವಿಲ್ಲ ಎಂಬುದು ತಿಳಿದುಬಂದಿದೆ. ಈ ಪೈಕಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಅತಿ ಹೆಚ್ಚು ಅಂದರೆ 36 ಪ್ರಕರಣಗಳಲ್ಲಿ ಮಂಜೂರಾತಿ ನೀಡಲು ಬಾಕಿ ಇದೆ. ನಂತರ ಸ್ಥಾನದಲ್ಲಿ ಕಂದಾಯ ಇಲಾಖೆ (26) ಇದೆ. ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಜ್, ವಕ್ಫ್ ಅಭಿವೃದ್ಧಿ ಮತ್ತು ವಿಧಾನಸಭಾ ಸಚಿವಾಲಯವು ತಲಾ ಒಂದೊಂದು ಪ್ರಕರಣದಲ್ಲಿ ಮಂಜೂರಾತಿ ನೀಡಬೇಕಿದೆ.

ತೃತೀಯ ವಾರ್ಷಿಕ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ತೃತೀಯ ವಾರ್ಷಿಕ ಘಟಿಕೋತ್ಸವವು ಜೂನ್ 29 ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ. ಚಿನ್ನದ ಪದಕ ವಿಜೇತ / ರ್‍ಯಾಂಕ್ ವಿಜೇತ ದ್ಯಾರ್ಥಿಗಳು ಪದ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳು ಹಾಗೂ ಪಿಎಚ್.ಡಿ. ಪದ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳು (ಪ್ರಾಂಶುಪಾಲರು ನೀಡಿರುವ ಗುರುತಿನ ಪತ್ರದೊಂದಿಗೆ) ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜ್‌ಗಳನ್ನು ಬೆಂಗಳೂರು ನಗರ ಶ್ವದ್ಯಾನಿಲಯದ ಮೌಲ್ಯಮಾಪನ ಭಾಗದ ಕುಲಸಚಿವರು (ಮೌಲ್ಯಮಾಪನ) ಅವರ ಕಛೇರಿ, ಪರೀಕ್ಷಾ ಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು-560001 ಇಲ್ಲಿ ಜೂನ್ 25 ರಂದು ಕಛೇರಿ ಕೆಲಸದ ಸಮಯದಲ್ಲಿ ಖುದ್ದಾಗಿ ಬಂದು ಪಡೆಯಬೇಕೆಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರು(ಮೌಲ್ಯಮಾಪನ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಕೆ.ಎಂ.ಶಿವಲಿಂಗೇಗೌಡ} ಶಾಸಕ

ಸರಕಾರ ರೂಪಿಸಿರುವ ಯೋಜನೆ ಸರಿಯಾದ ಫಲಾನುಭವಿಗೆ ಸಿಗುವಂತೆ ಮಾಡಬೇಕು. ಇದ್ದರಿಂದ ಮಾತ್ರ ಮಾಡಿದ ಕೆಲಸಕ್ಕೆ ಗೌರವ ಸಿಗುತ್ತದೆ. ಅಧಿಕಾರ ಶಾಶ್ವತ ಅಲ್ಲ ಕೆಲಸಗಳು ಶಾಶ್ವತವಾಗಿರುತ್ತವೆ. ಗ್ರಾಮಗಳು ಮತ್ತು ರೈತರು ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸಹಕಾರವಿರುತ್ತದೆ. ಗ್ರಾಮಗಳಲ್ಲಿ ಅಧ್ಯಕ್ಷರು ಸಂಕಷ್ಟಗಳಿಗೆ ಸ್ಪಂದಿಸುವ ಮನೋಭಾವ ಬೆಳಸಿಕೊಳ್ಳಬೇಕು.

ಸೋಲೇ ಗೆಲುವಿನ ಸೋಪಾನ: ಐಶ್ವರ್ಯ ಡಿಕೆಎಸ್ ಹೆಗ್ಡೆ

ಸೌಂದರ್ಯ ಕಾಲೇಜಿನ ಇಗ್ನೈಟ್ 2024ಗೆ ಚಾಲನೆ

ಬೆಂಗಳೂರು: ಸೋಲನ್ನು ಗೆಲುವಿನ ಮೆಟ್ಟಿಲಾಗಿ ಪರಿವರ್ತಿಸಿಕೊಳ್ಳುವ ಮನಸ್ಥಿತಿ ಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಯಶಸ್ಸಿಗೆ ಕೇವಲ ಅದೃಷ್ಟ ಅಷ್ಟೇ ಅಲ್ಲ ಅದನ್ನ ಸಾಕಾರಗೊಳಿಸಲು ಅಗತ್ಯ ತಯಾರಿಯೂ ಅಷ್ಟೇ ಮುಖ್ಯ ಎಂದು ಗ್ಲೋಬಲ್ ಅಕಾಡೆಮಿ ಅಪ್ ಟೆಕ್ನಾಲಜಿಯ ವ್ಯವಸ್ಥಾಪಕ ನಿರ್ದೇಶಕಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಅಭಿಪ್ರಾಯಪಟ್ಟರು.

ಹೆಸರುಘಟ್ಟ ರಸ್ತೆಯಲ್ಲಿನ ಸೌಂದರ್ಯ ಕಾಂಪೋಸಿಟ್ ಕಾಲೇಜಿನ ಇಗ್ನೈಟ್ 2024 ಗೆ ಚಾಲನೆ ನೀಡಿ ಮಾತನಾಡಿದ ಅವರು, ಜೀವನದಲ್ಲಿ ಶಿಕ್ಷಣ ಬಹಳ ಪ್ರಮುಖ ಪಾತ್ರವನ್ನು ವಹಿಸಲಿದ್ದು, ಉತ್ತಮ ಶಿಕ್ಷಣ ನಮ್ಮ ಉತ್ತಮ ಜೀವನದ ಗಟ್ಟಿ ಬೇರುಗಳಾಗಿ ಮಕ್ಕಳು ತಮ್ಮ ಸರ್ವತೋಮುಖ ಬೆಳವಣಿಗೆಯತ್ತ ಗಮನ ಹರಿಸಬೇಕು ಎಂದರು.

ಸೌಂದರ್ಯ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್‌ನ ಸಂಸ್ಥಾಪಕರಾದ ಸೌಂದರ್ಯ ಮಂಜಪ್ಪ ಮಾತನಾಡಿ, ಜೀವನ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹಳಷ್ಟು ಹಿರಿದಾಗಿದ್ದು, ಶಿಕ್ಷಕರು ಹಾಗೂ ಸಿಬ್ಬಂದಿಗಳ ಅಪಾರ ಶ್ರಮದಿಂದ ಕಳೆದ 18 ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಕೆಲವೊಮ್ಮೆ ಕಠಿಣವಾದ ನಿರ್ಧಾರಗಳನ್ನು ಶಿಕ್ಷಕರು ತಗೆದುಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ಅಂತಹ ಸಂಧರ್ಭಗಳಲ್ಲಿ ಪೋಷಕರು ಶಿಕ್ಷಕರ ಜತೆ ನಿಲ್ಲಬೇಕು ಎಂದು ಅಭಿಪ್ರಾಯಪಟ್ಟರು.

ಸೌಂದರ್ಯ ಕಂಪೋಸಿಟ್ ಕಾಲೇಜಿನ ಕಾರ್ಯಕ್ರಮದಲ್ಲಿ ಗ್ಲೋಬಲ್ ಅಕಾಡೆಮಿ ಅಪ್ ಟೆಕ್ನಾಲಜಿಯ ವ್ಯವಸ್ಥಾಪಕ ನಿರ್ದೇಶಕಿ ಐಶ್ವರ್ಯ ಡಿಕೆಎಸ್ ಹೆಗ್ಡೆ, ಸೌಂದರ್ಯ ಎಜುಕೇಷನಲ್ ಟ್ರಸ್ಟ್‌ನ ಟ್ರಸ್ಟಿಗಳಾದ ವರುಣ್ ಕುಮಾರ್, ಡಾ. ಪ್ರತಿಕ್ಷಾ ಎಸ್ ಕೀರ್ತನ್, ನಿಶ್ಮಿತಾ ವರುಣ್ ಇದ್ದರು.

ಯಶಸ್ಸು ಪಡೆಯಲು ಅದೃಷ್ಟ ಸಾಕಾಗಲ್ಲ

ಯಾವುದೇ ಕ್ಷೇತ್ರದಲ್ಲಾದರೂ ಕೂಡಾ ಯಶಸ್ಸು ಪಡೆಯಲು ಕೇವಲ ಅದೃಷ್ಟ ಸಾಕಾಗಲ್ಲ. ಅದೃಷ್ಟದಿಂದ ದೊರೆತಂತಹ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಅಗತ್ಯ ತಯಾರಿ ಮಾಡಿಕೊಳ್ಳುವುದು ಬಹಳ ಮುಖ್ಯ. ತಂದೆಯ ಮಾತಿನಂತೆ ದೇವರು ವರವನ್ನೂ ಕೊಡುವುದಿಲ್ಲ ಶಾಪವನ್ನೂ ಕೊಡುವುದಿಲ್ಲ. ಕೇವಲ ಅವಕಾಶವನ್ನು ಕೊಡುತ್ತಾನೆ. ಅದರ ಸದುಪಯೋಗ ಅಥವಾ ದುರಪಯೋಗ ನಮ್ಮ ಪ್ರಯತ್ನದಲ್ಲಿದೆ ಎಂದು ಗ್ಲೋಬಲ್ ಅಕಾಡೆಮಿ ಅಪ್ ಟೆಕ್ನಾಲಜಿಯ ವ್ಯವಸ್ಥಾಪಕ ನಿರ್ದೇಶಕಿ ಐಶ್ವರ್ಯ ಡಿಕೆಎಸ್ ಹೆಗ್ಡೆ ತಿಳಿಸಿದರು.

ಸಮಾಜದಲ್ಲಿ ಜ್ಞಾನವಂತರೇ ನಿಜವಾದ ಶ್ರೀಮಂತ

ರಕ್ಷಾ ಫೌಂಡೇಷನ್ ವತಿಯಿಂದ 2 ಲಕ್ಷ ಉಚಿತ ನೋಟ್ ಪುಸ್ತಕ ವಿತರಣೆ

ಬೆಂಗಳೂರು: ಸಾಮಾಜಿಕ ಸೇವಾ ಸಂಘಟನೆಗಳು ಸಹ ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿದ್ದು, ಅದರಲ್ಲಿ ರಕ್ಷಾ ಫೌಂಡೇಷನ್ ಮಕ್ಕಳ ಶಿಕ್ಷಣದ ಉನ್ನತಿಗಾಗಿ ನೋಟ್ ಪುಸ್ತಕ ವಿತರಿಸುತ್ತಿರುವುದು ಉತ್ತಮ ಬೆಳವಣಿಗೆ ಹತ್ತಾರು ಜನರ ಸೇವೆ ಮಾಡುವುದು ದೇವರ ಕೆಲಸ ಎಂದು ಸಿದ್ದಗಂಗಾ ಮಠದ ಡಾ.ಸಿದ್ದಲಿಂಗಾ ಸ್ವಾಮೀಜಿ ತಿಳಿಸಿದ್ದಾರೆ.

ಜಯನಗರದ ಚಂದ್ರಗುಪ್ತ ಮೌರ್ಯ(ಶಾಲಿನಿ) ಆಟದ ಮೈದಾನದಲ್ಲಿ ರಕ್ಷಾ ಫೌಂಡೇಷನ್‌ನ 12ನೇ ವರ್ಷದ 10ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದಿಂದ ಮಾತ್ರ ಶಕ್ತಿ ಬರುತ್ತದೆ, ಜ್ಞಾನಕ್ಕೆ ಸಮಾನಾದ ಪರ್ಯಾಯ ಯಾವುದು ಇಲ್ಲ. ಸಮಾಜದಲ್ಲಿ ಜ್ಞಾನವಂತರೇ ನಿಜವಾದ ಶ್ರೀಮಂತ ಎಂದರು.

ನಟ ಸುದೀಪ್ ಮಾತನಾಡಿ, ಮಕ್ಕಳು ದೇವರ ಸಮಾನ, ಅವರ ಜತೆ ಭಾಗವಹಿಸುವುದು ಸಂತೋಷಕರವಾದ ವಿಷಯ. ಶಿಕ್ಷಣಕ್ಕೆ ಅಗತ್ಯವಾಗಿರುವ ಎಲ್ಲಾ ರೀತಿಯ ನೆರವು ಮತ್ತು ಸೌಕರ್ಯ ಕಲ್ಪಿಸಿದರೆ ಬೆಳವಣಿಗೆ ಸಾಧಿಸಲು ಸಾಧ್ಯ. ಅನಾಥರು ಯಾರು ಇಲ್ಲ, ಎಲ್ಲರನ್ನು ದೇವರು ಕಾಪಾಡುತ್ತಾನೆ. ಮಹಿಳೆಯರು ಪೊಲೀಸ್ ಸೇವೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.



ಜಯನಗರದಲ್ಲಿ ರಕ್ಷಾ ಫೌಂಡೇಷನ್‌ನ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲಾಯಿತು. ಈ ವೇಳೆ ಸಿದ್ದಗಂಗಾ ಮಠದ ಡಾ. ಸಿದ್ದಲಿಂಗ ಮಹಾಸ್ವಾಮೀಜಿ, ನಟ ಸುದೀಪ್, ಶಾಸಕರಾದ ಸಿ.ಕೆ. ರಾಮಮೂರ್ತಿ, ಸತೀಶ್ ರೆಡ್ಡಿ, ಮಾಜಿ ಮಹಾಪೌರರಾದ ಎಸ್.ಕೆ.ನಟರಾಜ್, ಬಿಬಿಎಂಪಿ ಮಾಜಿ ಸದಸ್ಯೆ ನಾಗರತ್ನ ರಾಮಮೂರ್ತಿ ಇದ್ದರು.

ಬಿಜೆಪಿ ರಾಜಕಾರಣ ರಾಷ್ಟ್ರಹಿತಕ್ಕಾಗಿ

ಬೆಂಗಳೂರು: ಬಿಜೆಪಿ ರಾಷ್ಟ್ರಹಿತವನ್ನು ಬಿಟ್ಟುಕೊಡದೆ ರಾಷ್ಟ್ರಹಿತದ ಹಿನ್ನೆಲೆಯಲ್ಲೇ ರಾಜಕಾರಣ ಮಾಡುತ್ತ ಬಂದಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದ್ದಾರೆ.

ನಗರದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಏರ್ಪಡಿಸಿದ್ದ ಜಗನ್ನಾಥ ರಾವ್ ಜೋಶಿಯವರ ಜನ್ಮ ದಿನ ಮತ್ತು ಶ್ಯಾಮಪ್ರಸಾದ ಮುಖರ್ಜಿಯವರ ಬಲಿದಾನ ದಿವಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾರ್ಯಕರ್ತರಿಗೆ ಪ್ರೇರಕರಾಗಿದ್ದ ಜಗನ್ನಾಥ ರಾವ್ ಜೋಶಿ ಕರ್ನಾಟಕದಿಂದ ಹೊರಗೆ, ಮಧ್ಯಪ್ರದೇಶದ ಸಂಸದರಾಗಿ ಆಯ್ಕೆಯಾಗಿದ್ದರಲ್ಲದೇ ಸಂಘಟಕ, ಮಾರ್ಗದರ್ಶಕರಾಗಿ ಪಕ್ಷದ ರಾಜ್ಯ ಮತ್ತು ದೇಶದ ಸಂಘಟನೆಯ ನಾಯಕತ್ವ ವಹಿಸಿ ಕರ್ನಾಟಕ ಕೇಸರಿ ಎಂಬ ಹೆಸರಿಗೆ ತಕ್ಕಂತೆ ಬದುಕಿದವರು ಎಂದು ತಿಳಿಸಿದರು.

ನರಗುಂದದಲ್ಲಿ ವರ್ತಮಾನ ಮತ್ತು ಭವಿಷ್ಯದ ಪೀಳಿಗೆಗೂ ಅವರ ಜೀವನಾನುಭವ ಸಿಗಲಿ ಎಂದು ಸ್ಮಾರಕ ಮಾಡಲಾಗಿದ್ದು, ಅವರು ಹುಟ್ಟಿದ ಮನೆಯನ್ನು ಸ್ಮಾರಕವಾಗಿ ಪರಿವರ್ತನೆ ಮಾಡಿ ಅಲ್ಲಿ ಅವರ ಬದುಕಿನ ಸಂಗತಿಗಳ ಚಿತ್ರಣ ಲಭಿಸುತ್ತದೆ ಎಂದು ಹೇಳಿದರು.

ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ಜಗನ್ನಾಥ ರಾವ್ ಜೋಶಿಯವರ ಜನ್ಮ ದಿನ ಮತ್ತು ಶ್ಯಾಮಪ್ರಸಾದ ಮುಖರ್ಜಿಯವರ ಬಲಿದಾನ ದಿವಸ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್, ಪ್ರೀತಮ್ ಗೌಡ, ಶಾಸಕ ಬಸವರಾಜ್ ಮತ್ತಿಮೂಡ್ ಭಾಗವಹಿಸಿದ್ದರು.

ಯಶಸ್ಸಿಗೆ ಶಿಕ್ಷಣವೇ ಸೂತ್ರ: ಕೃಷ್ಣ ಬೈರೇಗೌಡ

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ

ಬೆಂಗಳೂರು: ಶಿಕ್ಷಣದಿಂದ ಮಕ್ಕಳು ದೊಡ್ಡ ಮಟ್ಟದ ಯಶಸ್ಸು ಸಾಧಿಸಿ ಉತ್ತಮ ಭವಿಷ್ಯ ರೂಪಿಸಲು ಸಹಕಾರಿಯಾಗಿದೆ. ಹೀಗಾಗಿ ಎಲ್ಲಾ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಸಲಹೆ ನೀಡಿದರು.

ಕುವೆಂಪು ವಾರ್ಡ್‌ನ ಸುಜನಾ ಕಾನ್ವೆಂಟ್‌ನಲ್ಲಿ ಏರ್ಪಡಿಸಲಾಗಿದ್ದ ನಮ್ಮೂರ ಹೆಮ್ಮೆ-2024 ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಮಾತನಾಡಿದ ಅವರು, ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ವಿದ್ಯಾರ್ಥಿಗಳ ಶ್ರಮವನ್ನು ಗೌರವಿಸಿ ಮತ್ತಷ್ಟು ಉತ್ತೇಜಿಸುವ ದೃಷ್ಟಿಯಲ್ಲದೇ ಇತರರಿಗೂ ಸ್ಫೂರ್ತಿಯಾಗುವಂತೆ ಮಾಡುವುದೇ ಕಾರ್ಯಕ್ರಮದ ಉದ್ದೇಶ ಎಂದರು.

ಮಕ್ಕಳ ಯಶಸ್ಸಿನಲ್ಲಿ ಪೋಷಕರದ್ದು ಪಾತ್ರ: ಈ ವರ್ಷ ವಿವಿಧ ವಾರ್ಡ್‌ಗಳ ಕನಿಷ್ಟ 4,000 ವಿದ್ಯಾರ್ಥಿಗಳನ್ನು ಗುರುತಿಸಲಾಗಿದ್ದು, ಉತ್ತಮ ಅಂಕ ಪಡೆಯುವ ಮಕ್ಕಳು ನಮ್ಮ ಮನೆಗೆ ಮಾತ್ರವಲ್ಲ ಇಡೀ ಸಮಾಜಕ್ಕೆ-ನಾಡಿಗೆ ಹೆಮ್ಮೆಯ ವಿಚಾರ ಹೀಗಾಗಿ ಕಾರ್ಯಕ್ರಮಕ್ಕೆ ನಮ್ಮೂರ ಹೆಮ್ಮೆ ಎಂದು ಹೆಸರಿಡಲಾಗಿದೆ. ಇಡೀ ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುವ ಶಕ್ತಿ ವಿದ್ಯಾರ್ಥಿಗಳಿಗಿರುತ್ತದೆ. ಇಂತಹ ಪ್ರತಿಭಾವಂತ ಮಕ್ಕಳೇ ಸಮಾಜದ ಹಾಗೂ ದೇಶದ ಆಸ್ತಿ. ಹೀಗಾಗಿ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಉತ್ತೇಜನ ನೀಡಬೇಕು. ಅಲ್ಲದೆ, ಮಕ್ಕಳ ಯಶಸ್ಸಿನಲ್ಲಿ ಪೋಷಕರದ್ದೂ ಪಾತ್ರವಿದ್ದು ಮಕ್ಕಳ ಗೆಲುವಿನ ಶ್ರೇಯಸ್ಸು ಪೋಷಕರಿಗೂ ಸಲ್ಲಬೇಕು ಎಂದು ತಿಳಿಸಿದ್ದಾರೆ.

ಬ್ಯಾಟರಾಯನಪುರ ಕ್ಷೇತ್ರದ ಕುವೆಂಪು ನಗರ ವಾರ್ಡ್‌ನಲ್ಲಿ ನಡೆದ ನಮ್ಮೂರ ಹೆಮ್ಮೆ ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇ ಗೌಡ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಕೇಂದ್ರ ಸಚಿವ ವಿ. ಸೋಮಣ್ಣ ಅವರು ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಧನ್ಯವಾದ ಅರ್ಪಿಸಿದರು. ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಹಾಗೂ ಪುತ್ರ ಮಯೂರ್ ಲಿಂಬಾವಳಿ ಇದ್ದರು.

ಬಿಬಿಎಂಪಿ ಹೋಳು ಮಾಡಿದ ಬಳಿಕ ಚುನಾವಣೆ?

ಪಾಲಿಕೆಯನ್ನು ಐದು ವಿಭಾಗಗಳನ್ನಾಗಿ ಮಾಡಲು ರಾಜ್ಯ ಸರಕಾರ ಚಿಂತನೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಭಜನೆ ಮಾಡುವ ಪ್ರಸ್ತಾವನೆ ಮತ್ತೆ ಮುನ್ನೆಲೆಗೆ ಬಂದಿದ್ದು, ರಾಜಕೀಯ ಪಾಳಯದಲ್ಲಿ ಚರ್ಚೆಗೊಳಪಟ್ಟಿದೆ. ಬಿಬಿಎಂಪಿ ವಿಭಜನೆ ಬಳಿಕ ಚುನಾವಣೇ ಘೋಷಣೆಯಾಗುವ ಸಾಧ್ಯತೆ ಇದೆ.

ಬೆಂಗಳೂರಿನಲ್ಲಿ 1.50 ಕೋಟಿಗೂ ಹೆಚ್ಚು ಜನರಿದ್ದು, ಇಷ್ಟು ಜನರಿಗೆ ಮೂಲಸೌಕರ್ಯ ಕಲ್ಪಿಸಲು ಒಂದೇ ಮಹಾನಗರ ಪಾಲಿಕೆ ಇದೆ. ಕಳೆದ ಒಂದು ದಶಕಕ್ಕೂ ಹೆಚ್ಚು ಅವಧಿಯಿಂದಲೂ ಬಿಬಿಎಂಪಿ ವಿಭಜನೆಯ ಬಗ್ಗೆ ಚರ್ಚೆ ನಡೆಯುತ್ತಿದೆಯಾದರೂ, ಅದು ತಾರ್ಕಿಕ ಅಂತ್ಯ ಕಂಡಿಲ್ಲ. ಇದೀಗ ಮತ್ತೆ ಬಿಬಿಎಂಪಿ ವಿಭಜನೆಯ ಬಗ್ಗೆ ಚರ್ಚೆ ನಡೆದಿದೆ.

ಆಡಳಿತ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ವಿಭಾಗಗಳನ್ನಾಗಿ ಮಾಡಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಆದರೆ, ಇದೀಗ ವಿಭಜನೆಗೆ ಕಾಂಗ್ರೆಸ್ಸಿಗರಿಂದಲೇ ವಿರೋಧ ವ್ಯಕ್ತವಾಗಿದೆ. ಕಾಂಗ್ರೆಸ್ ಮಾಜಿ ಮೇಯರ್ ಹಾಗೂ ಉಪ ಮೇಯರ್‌ಗಳಿಂದ ರಾಜ್ಯ ಸರಕಾರ ನಡೆಗೆ ವಿರೋಧ ವ್ಯಕ್ತವಾಗಿದ್ದು, ಯಾವುದೇ ಕಾರಣಕ್ಕೂ ಬಿಬಿಎಂಪಿ ವಿಭಜನೆ ಮಾಡಬೇಡಿ ಎಂದು ಸಲಹೆ ನೀಡಿದ್ದಾರೆ.

ಬಿಬಿಎಂಪಿ ಚುನಾವಣೆ ತಯಾರಿಗಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ನಡೆಸಿದ ಸಭೆಯಲ್ಲಿ ಕೆಲ ಮಾಜಿ ಮೇಯರ್‌ಗಳು, ಬಿಬಿಎಂಪಿ ವಿಭಜನೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ನಡೆದ ಮಾಜಿ ಮೇಯರ್, ಉಪ ಮೇಯರ್‌ಗಳ ಸಭೆಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿಕೆಶಿಗೆ ಸಲಹೆ ನೀಡಿದ್ದಾರೆ. ಅಲ್ಲದೇ ಯಾಕೆ ವಿಭಜನೆ ಬೇಡ ಎನ್ನುವುದು ಸೇರಿ ಕೆಲ ಮಹತ್ವ ಅಂಶಗಳ ಮಾಹಿತಿ ಕಲೆ ಹಾಕಲು ಮಾಜಿ ಮೇಯರ್ , ಉಪಮೇಯರ್‌ಗಳ ನೇತೃತ್ವದಲ್ಲಿ ಸಮಿತಿ ರಚನೆಗೆ ನಿರ್ಧಾರ ಮಾಡಲಾಗಿದೆ.

ವಿಭಜನೆಯಿಂದ ಆಡಳಿತ ವಿಕೇಂದ್ರೀಕರಣಗೊಂಡು ಜನರಿಗೆ ಉತ್ತಮ ಸೌಲಭ್ಯ ನೀಡಬಹುದು. ಭವಿಷ್ಯದ ಬೆಂಗಳೂರನ್ನು ವ್ಯವಸ್ಥಿತವಾಗಿ ರೂಪಿಸಬಹುದು ಎಂಬುವುದು ಕಾಂಗ್ರೆಸ್ ನಿಲುವಾಗಿದೆ. ಆದರೆ, ಇದಕ್ಕೆ ಬಿಜೆಪಿ, ಜೆಡಿಎಸ್ ವಿರೋಧ ವ್ಯಕ್ತಪಡಿಸಿದ್ದು, ವಿಕೇಂದ್ರೀಕರಣ ನೆಪದಲ್ಲಿ ವಿಭಜಿಸಿದರೆ ಬೆಂಗಳೂರು ಅಭಿವೃದ್ಧಿ ಕುಂಠಿತವಾಗಲಿದೆ. ಬೆಂಗಳೂರು ಅಖಂಡವಾಗಿರಲು ಬಿಬಿಎಂಪಿ ಅಸ್ತಿತ್ವ ಮುಂದುವರಿಯಬೇಕು ಎಂದು ಒತ್ತಾಯಿಸಿದ್ದಾರೆ.

ವಿಭಜನೆಗೆ ವಿರೋಧ ಏಕೆ?

- ವಿಭಜನೆಯಾದರೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಕಷ್ಟ
- ಬಿಜೆಪಿ ಸಹಜವಾಗಿ ವಿಭಜನೆಯನ್ನು ಚುನಾವಣಾ ಅಸ್ತ್ರ
- ಕಳೆದೊಂದು ದಶಕದಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಜೆಪಿ ಹಿಡಿತ
- ವಿಧಾನಸಭೆ, ಲೋಕಸಭೆಯಲ್ಲಿ ಬಿಜೆಪಿ ಮೇಲುಗೈ ಸಾಧಿಸಿದೆ

ಬಿ.ಎಸ್. ಪಾಟೀಲ್ ನೇತೃತ್ವದ ಸಮಿತಿ ಮಾಡಿರುವ ಶಿಫಾರಸ್ಸು

- ಬಿಬಿಎಂಪಿಯಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆ ಜಾರಿಗೆ
- ಬೆಂಗಳೂರು ಸುತ್ತಲಿನ ಹಲವು ಪ್ರದೇಶವನ್ನು ಸೇರಿಸಿ 400 ವಾಡ್ ರಚಿಸುವಂತೆ ಶಿಫಾರಸು
- ಬೆಂಗಳೂರು ಕೇಂದ್ರ, ಉತ್ತರ, ಪೂರ್ವ, ಪಶ್ಚಿಮ, ದಕ್ಷಿಣ ಎಂಬ ಐದು ಪಾಲಿಕೆ ರಚನೆಗೆ ಸಲಹೆ
- ಬೆಂಗಳೂರು ಸುತ್ತಮುತ್ತಲಿನ ನಗರಗಳು ಬಿಬಿಎಂಪಿ ವ್ಯಾಪ್ತಿಗೆ

ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ

ಬೆಂಗಳೂರು: ಕುರುಡು ಕಾಂಚಾಣ ಕುಣಿಯುತ್ತದೆ ಎಂಬುದಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ಅವರು ನಡೆಸುತ್ತಿರುವ ಅಂಧ ದರ್ಬಾರ್ ಸಾಕ್ಷಿಯಾಗಿದೆ ಎಂದು ಬಿಜೆಪಿ ಟ್ವೀಟ್ ಮೂಲಕ ವಾಗ್ದಾಳಿ ನಡೆಸಿದೆ. ನಮ್ಮ ಕಾಸ್ಟ್ಲಿ ಕುಮಾರ್ ಅವರು ಧರಿಸಿರುವ ಶಾಲಿನ ಬೆಲೆ ಬರೋಬ್ಬರಿ 59,500 ಆಗಿದೆ. ಬೆಲೆ ಏರಿಕೆಯಿಂದ ಜನ ಒಂದು ಹೊತ್ತಿನ ಊಟಕ್ಕೂ ತತ್ವಾರ ಅನುಭವಿ ಸುತ್ತಿದ್ದಾರೆ. ಆದರೆ, ಜನಪ್ರತಿನಿಧಿಗಳು ಮಾತ್ರ ಜನರ ತೆರಿಗೆ ದುಡ್ಡಿನಲ್ಲಿ ಶೋಕಿ ಮಾಡುತ್ತಿರುವುದು ನಿಜಕ್ಕೂ ದುರಂತ ಎಂದು ಕಿಡಿಕಾರಿದ್ದಾರೆ.

KAMMAVARI SANGHAM (R) - 1952
K S GROUP OF INSTITUTIONS
Kanakapura Road, Bengaluru - 560109 | Web : www.ksgi.edu.in

REQUIRED

Invites Applications From Suitable Candidates
For Our New Institution
K S DEGREE COLLEGE
#14, Raghuvanahalli, Kanakapura Road, Bengaluru - 560109

Faculty Required For : BBA / BCA / B.Com
- PRINCIPAL
- HoD's
- ASSISTANT PROFESSORS

*Qualification & Experience as per AICTE / University Norms

Interested / Eligible candidates can send their resume to directorksgi@ksit.edu.in within 15 days from the date of this advertisement.

ಸಮಾಚಾರ ಸಣ್ಣದಲ್ಲ

ಮದುವೆಗೆ ನಿರಾಕರಣೆ: ಯುವತಿ ಆತ್ಮಹತ್ಯೆ

ರಾಯಚೂರು: ಮಹಿಳಾ ಸ್ವಾಧಾರ ಕೇಂದ್ರದಲ್ಲಿದ್ದ ಯುವತಿಯೋರ್ವಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಯಚೂರು ನಗರದಲ್ಲಿ ದೇವರ ಕಾಲೋನಿಯಲ್ಲಿ ನಡೆದಿದೆ.

ಅನುರಾಧ (19) ಆತ್ಮಹತ್ಯೆಗೆ ಶರಣಾದ ಯುವತಿ. ಯುವತಿ ಶನಿವಾರ ರಾತ್ರಿ ಸ್ವಾಧಾರ ಕೇಂದ್ರದಲ್ಲಿ ಆತ್ಮಹತ್ಯೆಗೆ ಯತ್ನಿಸಿ ಗಂಭೀರವಾಗಿ ಗಾಯಗೊಂಡಿದ್ದಳು, ಕೂಡಲೇ ಯುವತಿಯನ್ನು ರಿಮ್ಸ್ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನು ವಾರ ಬೆಳಗ್ಗೆ ಮೃತಪಟ್ಟಿದ್ದಾಳೆ. ಯುವಕನೊಬ್ಬನನ್ನು ಅನುರಾಧ ಪ್ರೀತಿಸುತ್ತಿದ್ದಳು. ಪ್ರೇಮಿಗಳಿಬ್ಬರು ಮದುವೆ ವಿಚಾರವಾಗಿ ನಗರದ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು. ಮದುವೆಗೆ ಯುವತಿ ಮನೆಯವರು ಒಪ್ಪಿಗೆ ನೀಡದ ಹಿನ್ನೆಲೆ ಪೊಲೀಸರು ಯುವತಿಯನ್ನು ಮಹಿಳಾ ಸ್ವಾಧಾರ ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ್ದರು ಎಂದು ತಿಳಿದುಬಂದಿದೆ.

ಕೌಟುಂಬಿಕ ಕಲಹ: ವೃದ್ಧೆಯ ಕೊಲೆ

ಮಂಡ್ಯ: ಕುಡಿದ ಮತ್ತಿನಲ್ಲಿದ್ದ ವ್ಯಕ್ತಿಯೋರ್ವ ತನ್ನ ವೃದ್ಧ ದೊಡ್ಡಮ್ಮನನ್ನೇ ಮಾರಕಾಸ್ತ್ರದಿಂದ ಚುಚ್ಚಿ ಕೊಲೆ ಮಾಡಿ, ಪೊಲೀಸರಿಗೆ ಶರಣಾಗಿರುವ ಘಟನೆ ನಗರದ ಆನೆಕೆರೆ ಬೀದಿಯಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ. ಕೌಟುಂಬಿಕ ಕಲಹ ಹಾಗೂ ಅನೈತಿಕ ಸಂಬಂಧ ಆರೋಪ ಹಿನ್ನೆಲೆಯಲ್ಲಿ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ. ಕೆಂಪಮ್ಮ (80) ಹತ್ಯೆಯಾದ ವೃದ್ಧೆ. ಮೃತಳ ಮೈದುನನ ಮಗ ಹರೀಶ್ ಎಂಬಾತನೇ ಕೊಲೆ ಮಾಡಿ ನಗರದ ಸೆಂಟ್ರಲ್ ಪೊಲೀಸ್ ಠಾಣೆಗೆ ಶರಣಾದ ಆರೋಪಿ. ಗಂಡ ಮೃತಪಟ್ಟ ಬಳಿಕ ವೃದ್ಧೆಯು ಮೈದುನ ರಾಮಕೃಷ್ಣ ಹಾಗೂ ಆತನ ಮಗನಾದ ಹರೀಶನ ಜೊತೆ ಹಲವು ವರ್ಷಗಳಿಂದ ವಾಸವಾಗಿದ್ದರು. ಶನಿವಾರ ಮನೆಯಲ್ಲಿ ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ಗಲಾಟೆ ನಡೆದಿತ್ತು. ಭಾನುವಾರ ಬೆಳಗ್ಗೆ ಮದ್ಯ ಸೇವಿಸಿದ್ದ ವ್ಯಕ್ತಿಯು ದೊಡ್ಡಮ್ಮನ ಜೊತೆ ಜಗಳ ತೆಗೆದು, ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಬ್ಬಿಫಾಲ್ಸ್‌ನಲ್ಲಿ ಯುವಕ ನೀರುಪಾಲು

ಹೊಸನಗರ: ತಾಲೂಕಿನ ಯಡೂರು ಅಬ್ಬಿಫಾಲ್ಸ್ ನೋಡಲು ಬಂದ ಬೆಂಗಳೂರು ಪ್ರವಾಸಿಗ ನೀರುಪಾಲಾದ ಘಟನೆ ಭಾನುವಾರ ನಡೆದಿದೆ. ಬೆಂಗಳೂರು ಬಸವನಗುಡಿ ಉದ್ಯೋಗಿ, ಬಳ್ಳಾರಿ ನಿವಾಸಿ ವಿನೋದ್ (26) ಜಲಪಾತ ವೀಕ್ಷಿಸುವ ವೇಳೆ ಕಾಲು ಜಾರಿ ಅಬ್ಬಿಗುಂಡಿಗೆ ಬಿದ್ದಿದ್ದಾನೆ. ಆತ ಮತ್ತೆ ಗುಂಡಿಯಿಂದ ಮೇಲೆ ಬರದ ಹಿನ್ನೆಲೆ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ನಗರ ಠಾಣೆ ಪಿಎಸ್‌ಐ ರಮೇಶ್, ಅಗ್ನಿಶಾಮಕ ದಳ ಆಗಮಿಸಿದ್ದು ಕಾರ್ಯಾಚರಣೆ ನಡೆಸಲಾಗಿದೆ. ವಿನೋದ್ ಸೇರಿದಂತೆ 12 ಯುವಕರು ವೀಕೆಂಡ್ ಪ್ರವಾಸ ಬಂದಿದ್ದು ಕೊಡಚಾದ್ರಿ, ಗಿರಿಯ ಪ್ರವಾಸದ ನಂತರ ಯಡೂರು ಅಬ್ಬಿ ಫಾಲ್ಸ್ ಗೆ ಬಂದಿದ್ದರು. ಕಳೆದ ವರ್ಷ ಕೂಡ ಓರ್ವ ಪ್ರವಾಸಿಗ ಮೃತಪಟ್ಟ ಹಿನ್ನೆಲೆಯಲ್ಲಿ ಅಬ್ಬಿ ಫಾಲ್ಸ್ ಗೆ ತೆರಳುವ ಮಾರ್ಗಕ್ಕೆ ಟ್ರಂಚ್ ಹೊಡೆದು ನಿರ್ಬಂಧಿಸಲಾಗಿತ್ತು. ಆದರೆ ಯುವಕರು ಬಂದಿದ್ದ ಟಿಟಿ ವಾಹನವನ್ನು ನಿಲ್ಲಿಸಿ 1.5 ಕಿಮೀ ನಡೆದುಕೊಂಡೇ ಫಾಲ್ಸ್ ಗೆ ತೆರಳಿದ್ದರು.

ಅರಣ್ಯ ತೀರುವಳಿ ಅನುಷ್ಠಾನಗೊಳಿಸದಂತೆ ಅರಣ್ಯ ಅಧಿಕಾರಿಗಳಿಗೆ ಸಚಿವ ಖಂಡ್ರೆ ಪತ್ರ

ಗಣಿಗಾರಿಕೆ: ಎಚ್‌ಡಿಕೆ V/S ಸರಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇವದಾರಿ ಬೆಟ್ಟದಲ್ಲಿ ಗಣಿಗಾರಿಕೆಗೆ ಅನುಮತಿ ನಿರಾಕರಣೆ ವಿಚಾರ ಸದ್ಯ ರಾಜ ರಾಜಕೀಯದಲ್ಲಿ ಸಾಕಷ್ಟು ಚರ್ಚೆಗೊಳಪಟ್ಟಿದೆ.

ದೇವದಾರಿ ಬೆಟ್ಟದಲ್ಲಿ ಅದಿರು ಗಣಿಗಾರಿಕೆಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒಪ್ಪಿಗೆ ನೀಡಿದ್ದು, ಇದನ್ನು ಸಿದ್ದರಾಮಯ್ಯ ನೇತೃತ್ವದ ಸರಕಾರ ನಿರಾಕರಣೆ ಮಾಡಿದೆ. ಈ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಪತ್ರ ಬರೆದಿದ್ದಾರೆ. ಬೆಂಗಳೂರಿನ ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ಸಂಸ್ಥೆಯು ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಸ್ವಾಮಿಮಲೈ ಬ್ಲಾಕ್‌ನ ದೇವದಾರಿ ಹಿಲ್ ಪ್ರದೇಶದಲ್ಲಿ 401.5761 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗಾಗಿ ಅರಣ್ಯತೀರುವಳಿ ಪಡೆದಿದ್ದು, ಅರಣ್ಯ ಇಲಾಖೆ ವತಿಯಿಂದ ಅರಣ್ಯ ತೀರುವಳಿಗುತ್ತಿಗೆ ಪತ್ರ ಸಹಿಯೂ ಸೇರಿ ಜಮೀನು ಹಸ್ತಾಂತರ ಬಾಕಿ ಇರುವುದನ್ನು ಗಮನಿಸಲಾಗಿದೆ.

ಈ ಸಂಸ್ಥೆಯು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದ ಗಣಿಗಾರಿಕೆಯ ಲೋಪದೋಷ, ಅರಣ್ಯ ಕಾಯಿದೆ ಉಲ್ಲಂಘನೆಗಳಿಗಾಗಿ ನೀಡಿರುವ ನಿರ್ದೇಶನಗಳನ್ನು ನಿಗದಿತ ಕಾಲಮಿತಿಯಲ್ಲಿ ಸಂಪೂರ್ಣವಾಗಿ ಜಾರಿ ಮಾಡಲು ವಿಫಲವಾಗಿರುವ ಬಗ್ಗೆ ದೂರುಗಳು ಕೇಳಿಬಂದಿವೆ. ಹೀಗಾಗಿ ಕೆಐಒಸಿಎಲ್ ಸಂಸ್ಥೆಯು ನಿರ್ದೇಶನಗಳನ್ನು ಅನುಷ್ಠಾನಗೊಳಿಸುವವರೆಗೆ, ಆ ಸಂಸ್ಥೆಗೆ ದೇವದಾರಿ ಹಿಲ್ ಪ್ರದೇಶದಲ್ಲಿ ಗಣಿಗಾರಿಕೆಗಾಗಿ ನೀಡಲಾಗಿರುವ ಅರಣ್ಯ ತಿರುವಳಿಯನ್ನು ಅನುಷ್ಠಾನಗೊಳಿಸದಂತೆ. ಅಂದರೆ ಅರಣ್ಯ ತೀರುವಳಿಗುತ್ತಿಗೆ ಪತ್ರ ನೀಡಬಾರದು ಹಾಗೂ ಅರಣ್ಯ ಭೂಮಿ ಹಸ್ತಾಂತರಿಸಬಾರದು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾಗಿ ಎಚ್.ಡಿ. ಕುಮಾರಸ್ವಾಮಿ ಅವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ತಕ್ಷಣವೇ ದೇವದಾರಿ ಹಿಲ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿ ಸಹಿ ಹಾಕಿದ್ದರು. ಆದರೆ, ದೇವದಾರಿ ಹಿಲ್ ಗಣಿಗಾರಿಕೆಯಿಂದ ಆ ಭಾಗದಲ್ಲಿ ಅರಣ್ಯ ಮತ್ತು ಜೀವರಾಶಿಗಳಿಗೆ ಹಾನಿ ಆಗುತ್ತದೆ. 99 ಸಾವಿರ ಮರಗಳಿಗೆ ಧಕ್ಕೆ ಆಗುತ್ತದೆ ಎಂದು ವರದಿಯಾಗಿತ್ತು. ಆದರೆ, ಅರಣ್ಯ ನಾಶದ ಬಗ್ಗೆ ಆತಂಕ ಬೇಡ ಎಂದು ಎಚ್‌ಡಿಕೆ ಹೇಳಿದ್ದರು. ಮತ್ತೊಂದೆಡೆ ಇಲ್ಲಿ ಗಣಿಕಾರಿಕೆ ನಡೆಸದಂತೆ ಸ್ಥಳೀಯ ಹೋರಾಟಗಾರರ ವಿರೋಧವೂ ವ್ಯಕ್ತವಾಗುತ್ತಿದೆ. ಇದೀಗ ಅರಣ್ಯ ಭೂಮಿ ಹಸ್ತಾಂತರ ತಡೆ ಹಿಡಿಯುವಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ.

ಬಿಜೆಪಿಯ ಕೆಲವು ನಾಯಕರಿಗೂ ಅಕ್ರಮ ಗಣಿಗಾರಿಕೆಗೂ ಇದ್ದ ಸಂಬಂಧ ಜಗಜ್ಜಾಹೀರಾಗಿದ್ದು, ಪಕ್ಷದಿಂದ ಉಚ್ಚಾಟಿಸಿದ ಗಣಿ ಧಣಿಗಳನ್ನು ಈಗ ಅಪ್ಪಿಕೊಂಡು ರತ್ನಗಂಬಳಿ ಹಾಸಿ ಪಕ್ಷಕ್ಕೆ ಮತ್ತೆ ಬರಮಾಡಿಕೊಂಡಿರುವುದು ಪ್ರಾಮಾಣಿಕತೆ ಬಗ್ಗೆ ಮಾತನಾಡುವುದು ಭೂತದ ಬಾಯಲ್ಲಿ ಭಗವದ್ಗೀತೆ ಹೇಳಿದಂತೆ.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಸಿಟಿ ರವಿ ಹೇಳಿಕೆಗೆ ಈಶ್ವರ ಖಂಡ್ರೆ ತಿರುಗೇಟು

ತಾನು ಕಳ್ಳ ಪರರನ್ನು ನಂಬ ಎಂಬ ಗಾದೆಯಂತೆ ಇಡೀ ದೇಶಕ್ಕೆ ಅಕ್ರಮ ಗಣಿಗಾರಿಕೆಯ ಮೂಲ ಪಕ್ಷ ಯಾವುದೆಂಬುದು ತಿಳಿದಿದ್ದು, ಕಿಕ್ ಬ್ಯಾಕ್, ಸೂಟ್ ಕೇಸ್ ಪಡೆದು ಅಭ್ಯಾಸ ಇರೋರು ಬೇರೆಯವರೂ ತಮ್ಮಂತೆ ತಿಳಿಯುತ್ತಾರೆ ಎಂದು ಸಿ.ಟಿ.ರವಿ ಹೇಳಿಕೆಗೆ ಅರಣ್ಯಸಚಿವ ಈಶ್ವರ ಖಂಡ್ರೆ ತಿರುಗೇಟು ನೀಡಿದ್ದಾರೆ. ದೇವದಾರಿ ಅರಣ್ಯದಲ್ಲಿ ಗಣಿಗಾರಿಕೆಗೆ ಒಪ್ಪಂದ ನೀಡದ ವಿಚಾರಕ್ಕೆ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು, ಕೇಂದ್ರ ಸರಕಾರಿ ಸ್ವಾಮ್ಯದ ಕೆ.ಐ.ಓ.ಸಿ.ಎಲ್. ಈ ಹಿಂದೆ ನಿಯಮಗಳನ್ನು ಉಲ್ಲಂಘನೆ ಮಾಡಿದ್ದು, ನ್ಯಾಯಾಲಯಗಳ ಆದೇಶವನ್ನೂ ಪರಿಪಾಲನೆ ಮಾಡಿಲ್ಲ. ಹೀಗಾಗಿ ಸಿಇಸಿ ನೀಡಿರುವ ನಿರ್ದೇಶನಗಳನ್ನು ಪರಿಪಾಲನೆ ಮಾಡುವವರೆಗೆ ಒಪ್ಪಂದ ಮಾಡಿಕೊಳ್ಳದಂತೆ ತಿಳಿಸಲಾಗಿದೆ. ಹಿಂದೆ ಮಾಡಿರುವ ತಪ್ಪು ಸರಿಪಡಿಸಲಿ ನಂತರ ಅನುಮತಿ ಪಡೆದುಕೊಳ್ಳಲಿ ಎಂದು ಸ್ಪಷ್ಟಪಡಿಸಿದ್ದಾರೆ.

ಎಸ್ಸಿ ಜಾತಿ ಯುವಕನಿಗೆ ದೇಗುಲ ಪ್ರವೇಶಕ್ಕೆ ಅನುಮತಿ

ಮುಖ್ಯಮಂತ್ರಿ ಕ್ಷೇತ್ರದಲ್ಲೇ ಅಸ್ಪೃಶ್ಯತೆ ಆಚರಣೆಗೆ ಬ್ರೇಕ್

ಮೈಸೂರು: ಸಿಎಂ ತವರು ಕ್ಷೇತ್ರ ಮೈಸೂರು ಜಿಲ್ಲೆಯ ವರುಣಾ ವ್ಯಾಪ್ತಿಯ ಕಿರಾಳು ಗ್ರಾಮದಲ್ಲೇ ಅಸ್ಪೃಶ್ಯತೆ ಆಚರಣೆ ನಡೆದಿದೆ. ಸಿಎಂ ಸ್ವಕ್ಷೇತ್ರದಲ್ಲೇ ಅನುಷ್ಠಾನಗೊಂಡಿರುವ ಆಚರಣೆಯಿಂದ ಬೆಚ್ಚಿ ಬಿದ್ದಿರುವ ಜಿಲ್ಲಾಡಳಿತ ತನ್ನ ದಕ್ಷತೆ ಪ್ರದರ್ಶಿಸುವ ಮೂಲಕ ಅನಿಷ್ಟ ಪದ್ಧತಿಗೆ ಅಂತ್ಯ ಹಾಡಿದೆ.

ಕಿರಾಳು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಬೆಳಕಿಗೆ ಬಂದಿದೆ. ಈ ಬಗ್ಗೆ ದೂರು ಬಂದ ಹಿನ್ನಲೆ ತಹಸೀಲ್ದಾರ್ ಮಹೇಶ್ ಕುಮಾರ ಸ್ಥಳಕ್ಕೆ ಭೇಟಿ ನೀಡಿ ಅಸ್ಪೃಶ್ಯತೆಯ ಪಿಡುಗಿಗೆ ಬಿಸಿ ಮುಟ್ಟಿಸಿದ್ದಾರೆ. ಗ್ರಾಮದ ಮುಖಂಡರ ಜೊತೆ ಚರ್ಚಿಸಿ ಅಸ್ಪೃಶ್ಯತೆ ಆಚರಿಸದಂತೆ ಎಚ್ಚರಿಕೆ ನೀಡಿದ್ದಾರೆ.

ಎಸ್‌ಸಿ ಜಾತಿಗೆ ಸೇರಿದ ನವೀನ್ ದೂರು ನೀಡಿದ್ದರು. ವಿದ್ಯಾವಂತ ನಾಗರಿಕನಾದ ನನಗೆ ಗ್ರಾಮದ ಶಂಭುಮಹಾಲಿಂಗೇಶ್ವರ ದೇವಸ್ಥಾನಕ್ಕೆ ಪ್ರವೇಶಿಸಲು ಅರ್ಚಕರು ಹಾಗೂ ಗ್ರಾಮಸ್ಥರು ಅವಕಾಶ ನೀಡದೆ ಅಸ್ಪೃಶ್ಯತೆ ಆಚರಿಸುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದರು.

ಅಧಿಕಾರಿಗಳ ಸಮ್ಮುಖದಲ್ಲಿ ದೇವಸ್ಥಾನ ಪ್ರವೇಶ

ತಹಸೀಲ್ದಾರ್ ವರುಣಾ ಠಾಣೆಯ ಪಿಎಸ್‌ಐ ಚೇತನ್ ಹಾಗೂ ಇತರ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಮನವೊಲಿಸಿ ನಿರ್ಬಂಧಕ್ಕೆ ಒಳಗಾಗಿದ್ದ ನವೀನ್ ಅವರಿಗೆ ದೇವಸ್ಥಾನಕ್ಕೆ ಪ್ರವೇಶ ಕಲ್ಪಿಸಿದರು. ನವೀನ್ ಅಧಿಕಾರಿಗಳ ಸಮ್ಮುಖದಲ್ಲಿ ದೇವಸ್ಥಾನ ಪ್ರವೇಶಿಸಿ ಪೂಜೆ ಸಲ್ಲಿಸಿದರು. ಇದೇ ವೇಳೆ ದೇವಸ್ಥಾನದ ಆವರಣದಲ್ಲಿ ಸಭೆ ಕರೆದು ಅಸ್ಪೃಶ್ಯತೆ ಆಚರಿಸದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ. ತಹಸೀಲ್ದಾರ್ ಜತೆ ಉಪತಹಸೀಲ್ದಾರ್ ಲತಾ ಶರಣಮ್ಮ, ಗ್ರಾಮ ಆಡಳಿತಾಧಿಕಾರಿಗಳಾದ ಕೀರ್ತಿಕುಮಾರ ಮತ್ತು ಅಬ್ದುಲ್ ರಶೀದ್ ಸಾಥ್ ನೀಡಿದ್ದರು.

... 14 ದಿನ ನ್ಯಾಯಾಂಗ ಬಂಧನ

← ಮೊದಲಪುಟದಿಂದ

ಏನಿದು ಪ್ರಕರಣ?: ಅಸಹಜ ಲೈಂಗಿಕ ಕ್ರಿಯೆಗೆ ಒತ್ತಾಯಿಸಿ ದೌರ್ಜನ್ಯ ಎಸಗಿದ್ದು, ನನ್ನ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂದು ಸೂರಜ್ ರೇವಣ್ಣ ವಿರುದ್ಧ ಅರಕಲಗೂಡಿನ ಜೆಡಿಎಸ್ ಕಾರ್ಯಕರ್ತರೊಬ್ಬರು ಆರೋಪ ಮಾಡಿದ್ದರು. ಈ ಬಗ್ಗೆ ಡಿಜಿಪಿ, ಹಾಸನದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಗಳಿಗೆ ದೂರು ಸಲ್ಲಿಸಿದ್ದರು. ಬಳಿಕ ಜೂನ್ 22ರಂದು ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಸೂರಜ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಾಹಿತ್ತು. ಖಾಸಗಿ ಫೈನಾನ್ಸ್ ಕಂಪನಿಯಲ್ಲಿ ಉದ್ಯೋಗಿಯಾದ ಜೆಡಿಎಸ್ ಕಾರ್ಯಕರ್ತ, ಜೂನ್ 16ರಂದು ಸೂರಜ್ ತನಗೆ ವಾಟ್ಸ್ಯಾಪ್ ಮೂಲಕ ಸಂದೇಶ ಕಳುಹಿಸಿ, ಗನ್ನಿಕಡ ತೋಟದ ಮನೆಗೆ ಆಹ್ವಾನಿಸಿದ್ದರು. ಉದ್ಯೋಗ ನೀಡುವ ಭರವಸೆ ನೀಡಿ ತನ್ನನ್ನು ಕರೆಸಿಕೊಂಡು, ಸಲಿಂಗಕಾಮಕ್ಕೆ ಒತ್ತಾಯಿಸಿ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ್ದರು. ಇದರಿಂದ ನನ್ನ ದೇಹದ ಮೇಲೆ ಗಾಯಗಳಾಗಿದ್ದು, ಈ ಬಗ್ಗೆ ಎಲ್ಲಾದರೂ ಬಹಿರಂಗಪಡಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಕೂಡ ಹಾಕಿದ್ದಾರೆ ಎಂದು ಸಂತ್ರಸ್ತ ಆರೋಪಿಸಿದ್ದರು.

ಸಾರ್ವಜನಿಕರ ಎದುರು ಸೈ ಎನಿಸಿಕೊಂಡ ಖಾಕಿ

← ಮೊದಲಪುಟದಿಂದ

ಬಳಿಕ ವಿಜಯನಗರದ ವಿಭಾಗದ ಎಸಿಪಿ ಚಂದನ್ ಕುಮಾರ್ ನೇತೃತ್ವದ ತಂಡ ಮೈಸೂರಿನ ಖಾಸಗಿ ಹೋಟೇಲ್‌ನಲ್ಲಿದ್ದ ದರ್ಶನ್ ಅವರನ್ನು ಬಂಧಿಸಿತು. ವಿಚಾರಣೆಯಲ್ಲಿ ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ಶೆಡ್‌ನಲ್ಲಿ ಕೂಡಿಹಾಕಿ ಅಮಾನುಷವಾಗಿ ಹಲ್ಲೆಗೈದು ಕೊಲೆ ಮಾಡಿರುವುದು ಬೆಳಕಿಗೆ ಬಂದಿತ್ತು.

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ:

ರಾಜಕೀಯ ಕಾರಣಕ್ಕಾಗಿ ದೇಶಾದ್ಯಂತ ತೀವ್ರ ಚರ್ಚೆಯಾಗಿದ್ದ ಪ್ರಕರಣವೇ ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರದ್ದೆನ್ನಲಾದ ಅಶ್ಲೀಲ ವಿಡಿಯೋಗಳ ಪೆನ್‌ಡ್ರೈವ್. ಈ ವಿಡಿಯೋದಲ್ಲಿ ಪ್ರಜ್ವಲ್ ಎಸಗಿದ್ದರು ಎನ್ನಲಾದ ಲೈಂಗಿಕ ದೌರ್ಜನ್ಯಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ಲೋಕಸಭಾ ಚುನಾವಣೆಗೆ ಎರಡು ದಿನಗಳ ಮುನ್ನ ಹಾಸನದ ಬೀದಿ ಬೀದಿಯಲ್ಲಿ ಪೆನ್ ಡ್ರೈವ್‌ಗಳನ್ನು ಎಸೆಯಲಾಗಿತ್ತು. ಇದಕ್ಕೆ ಪೂರಕವಾಗಿ ಹೊಳೆನರಸೀಪುರ ಠಾಣೆಯಲ್ಲಿ ಪ್ರಜ್ವಲ್ ಜತೆಗೆ ಅವರ ತಂದೆ ಎಚ್.ಡಿ.ರೇವಣ್ಣ ವಿರುದ್ಧವೂ ಪ್ರಕರಣ ದಾಖಲಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ವಿಡಿಯೋಗಳು ಹರಿದಾಡಿದ್ದರಿಂದ ಸಂತ್ರಸ್ತೆಯರು ತಮಗಾಗಿರುವ ಅನ್ಯಾಯಗಳ ಕುರಿತು ದೂರು ನೀಡಿದರು.

ವಾಲ್ಮೀಕಿ ನಿಗಮದಲ್ಲಿ ಕೋಟ್ಯಂತರ ರುಪಾಯಿ ಗೋಲ್ಮಾಲ್: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಕೋಟ್ಯಂತರ ರುಪಾಯಿ ಅವ್ಯವಹಾರ ನಿಗಮದ ಅಧೀಕ್ಷಕ ಶಿವಮೊಗ್ಗ ಮೂಲದ ಚಂದ್ರಶೇಖರನ್ ಆತ್ಮಹತ್ಯೆಯಿಂದಾಗಿ ಬೆಳಕಿಗೆ ಬಂದಿತ್ತು. ಡೆತ್‌ನೋಟ್‌ನಲ್ಲಿ 85 ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಉಲ್ಲೇಖಿಸಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಪ್ರಕರಣದ ತನಿಖೆಗೆ ಸರಕಾರ ಎಸ್‌ಐಟಿ ರಚಿಸಿತ್ತು. ತನಿಖೆಯಲ್ಲಿ ನಿಗಮದ ಖಾತೆಯಿಂದ 18 ವಿವಿಧ ಬ್ಯಾಂಕ್ ಖಾತೆಗಳಿಗೆ 94.73 ಕೋಟಿ ರೂಪಾಯಿ ಅಕ್ರಮವಾಗಿ ವರ್ಗಾವಣೆಯಾಗಿದ್ದು ಗೊತ್ತಾಗಿತ್ತು. ಈ ಸಂಬಂಧ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ್, ಮಾಜಿ ಸಚಿವ ನಾಗೇಂದ್ರ, ಅವರ ಆಪ್ತ ಎನ್ನಲಾದ ನೆಕ್ಕುಂಟಿ ನಾಗರಾಜ್, ನಾಗೇಶ್ವರ್ ರಾವ್, ಹೈದರಾಬಾದ್ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸತ್ಯನಾರಾಯಣ್ ವರ್ಮ ಎಂಬವರನ್ನು ಬಂಧಿಸಿ 13.62 ಕೋಟಿ ರೂಪಾಯಿ ವಶಕ್ಕೆ ಪಡೆಯಲಾಗಿತ್ತು.

ಮುಂದೆ ಚುನಾವಣೆಗೆ ಸ್ಪರ್ಧಿಸಲ್ಲ | ಸಚಿವ ರಾಜಣ್ಣ ರಾಜಕೀಯ ನಿವೃತ್ತಿಯ ಮಾತು

ಉಪಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಲ್ಲ

ಬಾಗಲಕೋಟೆ: ನಾನು ಡಿಸಿಎಂ ಆಕಾಂಕ್ಷಿಯಲ್ಲ. ಇನ್ನು ಮುಂದೆ ಯಾವ ಚುನಾವಣೆಗೂ ನಾನು ನಿಲ್ಲುವವನಲ್ಲ ಎಂದು ಹೇಳುವ ಮೂಲಕ ಸಹಕಾರ ಸಚಿವ ಕೆ.ಎನ್. ರಾಜಣ್ಣ ರಾಜಕೀಯ ನಿವೃತ್ತದ ಮಾತುಗಳನ್ನಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲ ಸಮುದಾಯಗಳ ಮುಖಂಡರಿಗೆ ಡಿಸಿಎಂ ಸ್ಥಾನ ನೀಡಿದಾಗ ಜನರಿಗೆ ಪ್ರೀತಿ, ವಿಶ್ವಾಸ ಬರುತ್ತದೆ. ಕೆಲವೇ ಜನ ಅಧಿಕಾರಿ ಇಟ್ಟುಕೊಂಡಾಗ ಆ ಪಕ್ಷದ ಬಗ್ಗೆ ಜನರಲ್ಲಿ ಪ್ರೀತಿ ಬರುವುದಿಲ್ಲ ಎಂಬ ಕಾರಣಕ್ಕೆ ನಾನು ಲಿಂಗಾಯತ, ಪರಿಶಿಷ್ಟರು ಮತ್ತು ಅಲ್ಪಸಂಖ್ಯಾತ ಸಮುದಾಯದವರಿಗೆ ಒಬ್ಬರಿಗೆ ಡಿಸಿಎಂ ಮಾಡಬೇಕು ಎನ್ನುವುದು ನನ್ನ ವಾದ ಎಂದರು.

ಡಿಸಿಎಂ ಮಾಡಿದಾಕ್ಷಣ ಹೊಸದಾಗಿ ಬೇರೆ ಯಾವ ಸೌಲಭ್ಯ ಇರುವುದಿಲ್ಲ. ಸಂಪುಟ ಸಚಿವರಿಗೆ ಇರುವ ಸೌಲಭ್ಯಗಳೇ ಅವರಿಗೂ ಇರುತ್ತದೆ. ಆದರೂ ಒಂದು ಗೌರವಪೂರ್ವ ಸಮುದಾಯದ ಜನರಲ್ಲಿ ನಮ್ಮ ಸಮುದಾಯಕ್ಕೂ ಪ್ರಾತಿನಿಧ್ಯ ದೊರೆತಿದೆ. ಆ ದೃಷ್ಟಿಯಲ್ಲಿ ನಮಗೂ ಕೂಡ ಹೆಮ್ಮೆ, ಆಯಾ ಸಮುದಾಯದ ಜನರ ಪ್ರೀತಿ ಗಳಿಸಿಕೊಳ್ಳಲು ಇದೊಂದು ಉತ್ತಮ ಸಾಧನ. ಅದಕ್ಕಾಗಿ ನಾನು ಡಿಸಿಎಂ ಮಾಡಬೇಕು ಅಂತ ಹೇಳಿದ್ದು. ಮೊನ್ನೆ ಸಚಿವರಾದ ಜಮೀರ್ ಹಾಗೂ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಬಹಳಷ್ಟು ಸಂಪುಟ ಸಚಿವರ ಸಹಮತ ಇದಕ್ಕಿದ್ದು, ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರಕ್ಕೆ ನಾವೆಲ್ಲ ಬದ್ಧ ಎಂದು ಸಚಿವ ರಾಜಣ್ಣ ನುಡಿದರು.

ಗ್ಯಾರಂಟಿ ಯೋಜನೆಗಳು ನಿಲ್ಲದು

ಗ್ಯಾರಂಟಿ ಯೋಜನೆಗಳ ಕೈ ಶಾಸಕರ ಅಪಸ್ವರ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವರು, ಇವೆಲ್ಲವೂ ಮಾಧ್ಯಮಗಳ ಸೃಷ್ಟಿ. ಗ್ಯಾರಂಟಿ ನಿಲ್ಲಿಸಿಬಿಡುತ್ತಾರೆ, ಕ್ಯಾಬಿನೆಟ್ ನಲ್ಲಿ ಚರ್ಚೆ ಆಗಿದೆ, ಶಾಸಕರು ಚರ್ಚೆ ಮಾಡ್ತಿರೋದು ನಿಮ್ಮ ಸೃಷ್ಟಿ. ಯಾರೊಬ್ಬರೂ ಗ್ಯಾರಂಟಿ ನಿಲ್ಲಿಸಬೇಕೆಂಬ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಸಿಎಂ ಕೂಡಾ ಗ್ಯಾರಂಟಿ ನಿಲ್ಲಿಸಲ್ಲ .ಮುಂದುವರೆಸುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ನಾನೂ ಕೂಡಾ ಸ್ಪಷ್ಟ ಮಾಡ್ತೀನಿ. ಬಡವರಿಗೆ ನೀಡಿದ ಸೌಲಭ್ಯಗಳು ಕುಂಠಿತವೂ ಆಗಲ್ಲ, ಕಡಿತವೂ ಆಗಲ್ಲ ಎಂದರು.

ದೇವೇಗೌಡರಿಗೆ ಮಾನಸಿಕ ಹಿಂಸೆ

ಎಂಎಲ್‌ಸಿ ಸೂರಜ್ ರೇವಣ್ಣ ಬಂಧನ ವಿಚಾರವಾಗಿ ಮಾತನಾಡಿದ ಅವರು, ಕಾನೂನಿನ ಪ್ರಕಾರ ಪ್ರಕ್ರಿಯೆ ಅದು ನಡೆಯುತ್ತದೆ. ಯಾರದೇ ಹಸ್ತಕ್ಷೇಪ, ಒತ್ತಡ ಹಾಕೋಕೆ ನಾವು ಬಿಡಲ್ಲ. ಅಧಿಕಾರಿಗಳು ತನಿಖೆ ಮಾಡುತ್ತಾರೆ. ಸರಕಾರದ ಮೇಲಾಗಲಿ, ಎಸ್‌ಐಟಿ, ಅಧಿಕಾರಿಗಳ ಮೇಲಾಗಲಿ ನಾವು ಒತ್ತಡ ಹೇರಲ್ಲ. ಸೂರಜ್ ಹಾಗೂ ಪ್ರಜ್ವಲ್ ಪ್ರಕರಣದಿಂದ ಇಳಿವಯಸ್ಸಿನ ದೇವೇಗೌಡರಿಗೆ ಮಾನಸಿಕವಾಗಿ ಹಿಂಸೆ ಕೊಟ್ಟ ಹಾಗೆ ಆಗುತ್ತದೆ ಎಂದು ಸಚಿವ ರಾಜಣ್ಣ ಬೇಸರ ವ್ಯಕ್ತ ಪಡಿಸಿದರು.

ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರುವ ವಿಚಾರಗಳು ಮಾನವಕುಲ ತಲೆ ತಗ್ಗಿಸುವ ಕೆಲಸ. ಸಂತ್ರಸ್ತರಿಗೆ ಆಚೆ ಬಂದು ಹೇಳೋಕೆ ಧೈರ್ಯ ಇರಲಿಲ್ಲ. ಈಗ ನಾನು ಹಾಸನ ಉಸ್ತುವಾರಿ ಸಚಿವನಾದ ಮೇಲೆ ರಕ್ಷಣೆ ಕೊಡುವ ಧೈರ್ಯ ತುಂಬಿದ ಮೇಲೆ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಪ್ರಕ್ರಿಯೆ ವೇಳೆ ನಿಮ್ಮ ಜತೆ ಇರುತ್ತೇವೆ ಎಂದ ಮೇಲೆ ಒಬ್ಬೊಬ್ಬ ಸಂತ್ರಸ್ತರು ಬಂದು ಹೇಳುತ್ತಿದ್ದಾರೆ. ಈ ಪ್ರಕರಣಗಳು ನಿನ್ನೆ ಮೊನ್ನೆ ನಡೆದುದ್ದಲ್ಲ. ಬಹಳಷ್ಟು ವರ್ಷಗಳಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರೋದು.

-ಕೆ.ಎನ್.ರಾಜಣ್ಣ, ಸಹಕಾರ ಸಚಿವ

ಲೈಂಗಿಕ ದೌರ್ಜನ್ಯ ಕೇಸ್: ಬಿಜೆಪಿ ಮುಖಂಡ ಅರುಣ್ ಕುಗ್ವೆ ಸೆರೆ

ಸಾಗರ: ಯುವತಿಯೊಬ್ಬಳಿಗೆ ಮದುವೆ ಆಗುವ ಆಸೆ ತೋರಿಸಿ ನಾಲ್ಕು ವರ್ಷಗಳಿಂದ ದೈಹಿಕ ಸಂಬಂಧ ಬೆಳೆಸಿ, ಲೈಂಗಿಕ ದೌರ್ಜನ್ಯ ನಡೆಸುವ ಜತೆಗೆ ಕುಟುಂಬಕ್ಕೆ ಜೀವ ಬೆದರಿಕೆಯನ್ನೂ ಒಡ್ಡಿರುವ ಪ್ರಕರಣದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಗ್ವೆ ಎಂಬಾತನನ್ನು ಪೊಲೀಸರು ಭಾನುವಾರ ಬೆಳಗ್ಗೆ ಬಂಧಿಸಿದ್ದಾರೆ.

ಯುವತಿಯು ಶಿವಮೊಗ್ಗ ನಗರದ ಮಹಿಳಾ ಠಾಣೆಯಲ್ಲಿ ದಾಖಲಿಸಿರುವ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು ಅರುಣ್ ಕುಗ್ವೆಯನ್ನು ಪೊಲೀಸರು ಬಂಧಿಸಿದ್ದಾರೆ. ಕಾಲೇಜಿನಲ್ಲಿ ಓದುತ್ತಿದ್ದ ಸಂದರ್ಭದಲ್ಲಿಯೇ ಅರುಣ್ ಕುಗ್ವೆ ಅವರ ಪರಿಚಯವಾಗಿದೆ. ಸ್ನೇಹ ಪ್ರೀತಿಗೆ ತಿರುಗಿ ಒಂದೇ ಸಮುದಾಯದವರಾದ ಹಿನ್ನೆಲೆಯಲ್ಲಿ ಎರಡೂ ಮನೆಗಳಿಗೆ ಸಂಬಂಧ ಒಪ್ಪಿಗೆಯಾಗಿದೆ. ಉದ್ಯಮಿ ಮತ್ತು ರಾಜಕಾರಣಿ ಎಂದು ಹೇಳಿಕೊಂಡಿದ್ದ ಅರುಣ್ ಮುಂದೆ ವಿವಾಹವಾಗುವ ಹುಸಿ ಭರವಸೆ ನೀಡಿ ಜೋಗ, ಸಾಗರ, ಶಿವಮೊಗ್ಗ ಮತ್ತಿತರ ಕಡೆಗಳಲ್ಲಿ ತನ್ನೊಂದಿಗೆ ದೈಹಿಕ ಸಂಪರ್ಕ ಬೆಳೆಸಿದ್ದಾನೆ. ಬಲಾತ್ಕಾರವಾಗಿ ವಿಡಿಯೊ ಚಿತ್ರೀಕರಣ, ಫೋಟೊ ತೆಗೆದುಕೊಂಡಿದ್ದಾನೆ ಎಂದು ಮೂಲತಃ ಸಾಗರದವರಾದ ಯುವತಿ ದೂರಿನಲ್ಲಿ ವಿವರಿಸಿದ್ದಾರೆ.

ಸೋದರನ ಮೇಲೂ ಕೇಸ್

ಅರುಣ್ ಕುಗ್ವೆ ಮತ್ತು ಗಣೇಶ್ ಇಬ್ಬರ ಮೇಲೆ ಐಪಿಸಿ ಸೆಕ್ಷನ್ 354, 376, 506 ಮೊದಲಾದ ಕಲಂ ಅಡಿಯಲ್ಲಿ ಪ್ರಕರಣ ದಾಖಲಿಸಿ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಅರುಣ್ ಕುಗ್ವೆ ಮೇಲೆ ಈಗಾಗಲೇ ಹಲವಾರು ಪ್ರಕರಣಗಳು ದಾಖಲಾಗಿದ್ದು, ಗಡಿಪಾರು ಸೂಚನೆಯನ್ನೂ ಹಿಂದೆ ನೀಡಲಾಗಿದ್ದ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣದ ಗಂಭೀರತೆಯನ್ನು ಆಧರಿಸಿ ಕಠಿಣ ಕ್ರಮಕ್ಕೆ ಮುಂದಾಗಿದ್ದಾರೆ ಎನ್ನಲಾಗಿದೆ. ಅರುಣ್ ಕುಗ್ವೆ ಜತೆಯಲ್ಲಿ ಎರಡನೇ ಆರೋಪಿಯಾಗಿ ಆತನ ಸೋದರ ಗಣೇಶ್ ಮೇಲೂ ಪ್ರಕರಣ ದಾಖಲಿಸಲಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಎಚ್‌ಬಿಸಿ ವಿಭಾಗ,
ಅಥಣಿ – 591304 ತಾ॥ ಅಥಣಿ. ಜಿ॥ ಬೆಳಗಾವಿ.
ದೂರವಾಣಿ: 08289–251034, ಇ–ಮೇಲ್: knnlhbc.2008@rediffmail.com

ಸಂಖ್ಯೆ : ಕ.ನೀ.ನಿ.ನಿ./ಎಚ್.ಬಿ.ಸಿ./ಪಿಬಿ/ಟೆಂಡರ್/2024–25/646
ದಿನಾಂಕ: 12–06–2024

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ. ಪ್ರೋಟಲ್–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ. ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರ್‌ನ್ನು, ಪಿ.ಡಬ್ಲೂಡಿ ಕ್ಲಾಸ್–2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ : www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರ್‌ಗಿಟ್ಟ ಅಂದಾಜು ಮೊತ್ತ 1) ರೂ. 491.14 ಲಕ್ಷ, 2) ರೂ. 396.03 ಲಕ್ಷ, 3) ರೂ. 456.34 ಲಕ್ಷ, 4) ರೂ. 490.62 ಲಕ್ಷ.

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 24–06–2024 ರ 10.30 ಬೆಳಗ್ಗೆ ರಿಂದ 01–07–2024 ರ ಸಾಯಂಕಾಲ 4.00 ಗಂಟೆವರಗೆ, 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ : 29–06–2024 ರ ಸಾಯಂಕಾಲ 4.00 ವರೆಗೆ, 3) ಪ್ರಿ ಬಿಡ್ ಮಿಟಿಂಗ್ ದಿನಾಂಕ : (ಕಾ.ನಿ.ಇಂ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ) ದಿನಾಂಕ : 28–06–2024 ರ 11.00 ಬೆಳಗ್ಗೆ, 4) ಪೂರ್ಣವಾಗಿ ತುಂಬಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 24–06–2024 ರ 10.30 ಬೆಳಗ್ಗೆ ರಿಂದ 01–07–2024 ರ ಸಾಯಂಕಾಲ 4.00 ಗಂಟೆವರಗೆ, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ) 03–07–2024 ರ ಸಾಯಂಕಾಲ 4.00 ವರೆಗೆ, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 06–07–2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆ ನಂತರ) 7) ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ : 04–07–2024 ಬೆಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ–ಸಂಗ್ರಹಣಾ ಕೋಶ ವೆಬ್‌ಸೈಟ್ : http//:www.kppp.karnataka.gov.in/kpp-protal/index.seamlink ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಪ್ರವೀಣ .ಬ. ಹುಣಶೀಕಟ್ಟಿ,
ಕಾರ್ಯನಿರ್ವಾಹಕ ಇಂಜಿನೀಯರರು,
ಎಚ್.ಬಿ.ಸಿ. ವಿಭಾಗ, ಅಥಣಿ.

ಡಿಐಪಿಆರ್/ಬೆಳಗಾವಿ/162/ಮಣಿಪಾಲ್/2024–25

3 ಡಿಸಿಎಂ ಹುದ್ದೆ ಸೃಷ್ಟಿಗೆ ಮತ್ತೆ ಕೂಗು

← ಮೊದಲಪುಟದಿಂದ

ಅಧಿಕಾರ ಎಲ್ಲ ಸಮುದಾಯ ಗಳಿಗೆ ಹಂಚಿಕೆಯಾಗಬೇಕು. ಇದರಿಂದ ಎಲ್ಲರಿಗೂ ಸಮಾಧಾನವಾಗುತ್ತದೆ. ಡಿಸಿಎಂ ಹುದ್ದೆ ನೀಡಿದರೆ ಆ ಸಮುದಾಯಗಳ ಪ್ರೀತಿ, ವಿಶ್ವಾಸ ನಮ್ಮ ಪಕ್ಷದ ಮೇಲೆ ಇರುತ್ತದೆ. ಈ ಬಗ್ಗೆ ಹೈ ಕಮಾಂಡ್ ತೀರ್ಮಾನಿಸಬೇಕು' ಎಂದು ತಿಳಿಸಿದ್ದಾರೆ.

ಇನ್ನು ಈ ಬಗ್ಗೆ ಇತ್ತೀಚೆಗೆ ಪ್ರತಿಕ್ರಿಯಿಸಿದ್ದ ಸಚಿವ ಸತೀಶ್ ಜಾರಕಿಹೊಳಿ ಅವರು, 'ಹೆಚ್ಚುವರಿಯಾಗಿ ಡಿಸಿಎಂ ನೇಮಕ ಕುರಿತಂತೆ ಸಾಮೂಹಿಕ ಚರ್ಚೆ ಆಗಬೇಕು. ಎಐಸಿಸಿ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗಬೇಕು. ಸಿಎಂ ಮಟ್ಟದಲ್ಲೂ ಚಿಂತನೆ ಆಗಬೇಕು. ಇದರಿಂದ ಡಿಸಿಎಂ ಹುದ್ದೆ ಅಗತ್ಯದ ಬಗ್ಗೆ ದಾರಿ ಸ್ಪಷ್ಟವಾಗಲಿದೆ' ಎಂದು ಹೇಳಿದ್ದರು. ರಾಜಣ್ಣ ಮತ್ತು ಜಮೀರ್ ಅಹ್ಮದ್ ಮತ್ತೆ ಹೆಚ್ಚುವರಿ ಡಿಸಿಎಂ ಹುದ್ದೆ ಮಾಡಬೇಕು ಎಂದಿರುವ ವಿಚಾರದ ಬಗ್ಗೆ ಗೃಹ ಸಚಿವ ಡಾ. ಪರಮೇಶ್ವರ್ ಪ್ರತಿಕ್ರಿಯಿಸಿ, 'ನಾವು ಹೇಳಿರುವುದರಲ್ಲಿ ಏನೂ ತಪ್ಪಿಲ್ಲ ಅಂತ ಅವರು ಹೇಳಿದ್ದಾರೆ. ನಾವು ಅದಕ್ಕೆ ಏನೂ ಪ್ರತಿಕ್ರಿಯೆ ನೀಡಲ್ಲ. ಎಲ್ಲ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಅಗತ್ಯ ಇದ್ದರೆ ಮಾಡುತ್ತಾರೆ' ಎಂದರು. ಅಗತ್ಯತೆ ಇದೆಯಾ ಎಂಬ ಪ್ರಶ್ನೆಗೆ ಉತ್ತರಿಸಿ, 'ನನ್ನ ಅಭಿಪ್ರಾಯ ಕೇಳಿಕೊಂಡು ಯಾರೂ ಡಿಸಿಎಂ ಮಾಡಲ್ಲ' ಎಂದು ತಿಳಿಸಿದರು. ಡಿಸಿಎಂ ಹುದ್ದೆ ಸೃಷ್ಟಿ ಪ್ರಸ್ತಾಪವಿಲ್ಲ ಎಂದ ಹೈಕಮಾಂಡ್: ಸರಕಾರದ ರಚನೆಯಾದಾಗಿನಿಂದಲೂ ಮೂರು ಡಿಸಿಎಂ ಹುದ್ದೆ ಸೃಷ್ಟಿ ಕುರಿತು ಪರ–ವಿರೋಧಗಳು ನಡೆಯುತ್ತಲೇ ಇದೆ. ಇದಕ್ಕೆ ಕಡಿವಾಣ ಹಾಕಲು ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ ಸಿಂಗ್ ಸುರ್ಜೆವಾಲಾ ಅವರು ಡಿಸಿಎಂ ಹುದ್ದೆ ಸೃಷ್ಟಿ ಇಲ್ಲ ಎಂದು ಸ್ಪಷ್ಟವಾಗಿ ಹಲವು ಸಭೆಗಳಲ್ಲಿ ತಿಳಿಸಿದ್ದರು. ಸ್ವತಃ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಇನ್ನಷ್ಟು ಡಿಸಿಎಂ ವಿಚಾರ ಚರ್ಚೆಯಲ್ಲಿಲ್ಲ, ಸುಮ್ಮನಿರುವುದು ಲೇಸು ಎಂದಿದ್ದರು. ಆದರೂ ಇದೀಗ ಮತ್ತೆ ಮೂರು ಡಿಸಿಎಂ ಹುದ್ದೆ ಸೃಷ್ಟಿ ವಿಚಾರ ಮುನ್ನೆಲೆಗೆ ಬಂದಿದೆ.

ಕಾರು ಡಿಕ್ಕಿ: ವಿದ್ಯಾರ್ಥಿನಿ ಸಾವು

ಸಾಗರ: ಕಾಲೇಜಿನಿಂದ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಸ್ಕೂಟಿಗೆ ಹಿಂದಿನಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡ ವಿದ್ಯಾರ್ಥಿನಿ ಭಾನುವಾರ ಸಾವನ್ನಪ್ಪಿದ ಘಟನೆ ನಡೆದಿದೆ. ಅನುಷಾ(20) ಮೃತಪಟ್ಟ ವಿದ್ಯಾರ್ಥಿನಿ. ನಗರದ ಎಂಡಿಎಫ್ ಕಾಲೇಜಿನಲ್ಲಿ ದ್ವಿತೀಯ ಬಿಸಿಎ ಡಿಗ್ರಿ ಓದುತ್ತಿರುವ ಅನುಷಾ ಕಾಲೇಜು ಪೂರೈಸಿ ಸ್ಕೂಟಿಯಲ್ಲಿ ಮನೆಗೆ ತೆರಳುತ್ತಿದ್ದಳು. ಆಗ ಸಾಗರದಿಂದ ಜೋಗ ಕಡೆಗೆ ಚಲಿಸುತ್ತಿದ್ದ ಕಾರು ಕುಗ್ವೆ ಸಮೀಪ ಹಿಂದಿನಿಂದ ಡಿಕ್ಕಿ ಹೊಡೆದಿದ್ದರಿಂದ ತೀವ್ರವಾಗಿ ಗಾಯಗೊಂಡಾಕೆಯನ್ನು ಶಿವಮೊಗ್ಗದ ಆಸ್ಪತ್ರೆಗೆ ಸೇರಿಸಲಾಗಿತ್ತು.ಚಿಕಿತ್ಸೆ ಫಲಕಾರಿಯಾಗದೆ ಅನುಷ್ಕಾ ಸಾವನ್ನಪ್ಪಿದ್ದಾರೆ. ಅನುಷಾರ ತಂದೆ ಮೂಲತಃ ಕುಂದಾಪುರದವರಾಗಿದ್ದು ಸಾಗರದ ಕೆಎಸ್‌ಆರ್‌ಟಿಸಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆ ಮಂಡಳಿ ಸಭೆಯಲ್ಲಿ ತೀರ್ಮಾನ

ವೈದ್ಯಕೀಯ ನಿರ್ದೇಶಕರ ಶೀಘ್ರ ನೇಮಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ 9 ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾಯಂನಿರ್ದೇಶಕರನ್ನು ನೇಮಿಸಿ, ಪ್ರಭಾರಿಗೆ ಇತೀ ಶ್ರೀ ಹಾಡಲು ವೈದ್ಯಕೀಯ ಶಿಕ್ಷಣ ಇಲಾಖೆ ಮುಂದಾಗಿದೆ.

ಹಲವು ವರ್ಷಗಳಿಂದ ಪ್ರಭಾರಿ ನಿರ್ದೇಶಕರಿಂದಲೇ ರಾಜ್ಯದ ಹಲವು ಮೆಡಿಕಲ್ ಕಾಲೇಜು (ವೈದ್ಯಕೀಯ ವಿಜ್ಞಾನ ಸಂಸ್ಥೆ)ಗಳ ಆಡಳಿತ ಯಂತ್ರ ಕುಸಿದಂತಾಗಿ, ಪ್ರಭಾರಿ ಕುರ್ಚಿಗಾಗಿ ಹಗ್ಗ–ಜಗ್ಗಾಟಗಳಿಗೆ ಕಾರಣವಾಗಿತ್ತು. ಬೆಂಗಳೂರಿನಲ್ಲಿರುವ ಪ್ರಮುಖ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಾದ ನೆಫ್ರೋ ಯುರಾಲಜಿ ಸಂಸ್ಥೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ಸಂಜಯ್‌ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ಮಾತ್ರವಲ್ಲದೆ, ವಿಕ್ಟೋರಿಯಾ ಆಸ್ಪತ್ರೆಗಳಿಗೆ ಇದುವರೆಗೂ ಕಾಯಂನಿರ್ದೇಶಕರ ನೇಮಕಕ್ಕೆ ರಾಜ್ಯ ಸರಕಾರ ಮುಹೂರ್ತ ನಿಗದಿ ಮಾಡಿ ಇರಲ್ಲ. ಬರೀ ಪ್ರಭಾರ ಹುದ್ದೆಯಲ್ಲಿ ಹಲವು ವರ್ಷಗಳಿಂದ ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಆಸ್ಪತ್ರೆಗಳಿಗೆ ನಿರ್ದೇಶಕರ ನೇಮಕಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಮಂಡಳಿ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳುತ್ತಿದೆ.

ಕಾಯಂನಿರ್ದೇಶಕರನ್ನು ನೇಮಿಸುವುದು ರಾಜಕೀಯ ನಿರ್ಧಾರವಾಗಿರಬಹುದು, ಆದರೆ ಕೆಲವು ಸಂಸ್ಥೆಗಳಲ್ಲಿ ನೇಮಕಾತಿ ವಿಳಂಬಕ್ಕೆ ಕಳೆದ ವರ್ಷ ಹೊರಡಿಸಿದ ಹೊಸ ಬೈಲಾಗಳನ್ನು ಅಳವಡಿಸಿಕೊಳ್ಳುವಲ್ಲಿನ ಎಡವಟ್ಟು ಕಾರಣವಾಗಿದೆ. ಹೊಸ ಬೈಲಾದಲ್ಲಿ ನಿವೃತ್ತಿ ವಯಸ್ಸನ್ನು 60 ಕ್ಕೆ ತಿದ್ದುಪಡಿ ಮಾಡಿದೆ. ಆದರೆ, ಈ ಮೊದಲು ಇದು ಸಂಸ್ಥೆಗಳ ನಡುವೆ ಭಿನ್ನವಾಗಿತ್ತು. ಬೆಂಗಳೂರು ಮೂಲದ ಕೆಲವೊಂದು ವೈದ್ಯಕೀಯ ಸಂಸ್ಥೆಗಳ ಬೈಲಾಗಳನ್ನು ಅಳವಡಿಸಲಾಗಿಲ್ಲ. ಕಳೆದ ಎರಡು ಸಂಸ್ಥೆಗಳು ನಾಲ್ಕು ವರ್ಷಗಳಿಂದಕಾಯಂನಿರ್ದೇಶಕರಿಲ್ಲದೆ ಕಾರ್ಯನಿರ್ವಹಿಸುತ್ತಿವೆ. ಮೂರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷರಾಗಿದ್ದಾರೆ. ನಿವೃತ್ತಿ ವಯಸ್ಸನ್ನು ಔಪಚಾರಿಕಗೊಳಿಸುವ ಬೈಲಾಗಳನ್ನು ಅಳವಡಿಸಿಕೊಳ್ಳಲು ಮುಖ್ಯಮಂತ್ರಿಗೆ ಸಭೆ ಕರೆಯಲು ಸಾಧ್ಯವಾಗುತ್ತಿಲ್ಲ. ಚುನಾವಣಾ ಫಲಿತಾಂಶಗಳು ಹೊರಬೀಳುವವರೆಗೂ ಈ ಸಂಸ್ಥೆಗಳಲ್ಲಿ ಯಥಾಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ. ಅಂದರೆ, ಅವರು ನಿರ್ದೇಶಕರನ್ನು ನೇಮಿಸಲು ತಡವಾಗಲಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕಾಯಂ ನಿರ್ದೇಶಕರ ಹುದ್ದೆಯ ಉಪಯೋಗ

ಕಾಯಂ ನಿರ್ದೇಶಕರು ಮೂರು ವರ್ಷಗಳ ಅವಧಿಗೆ ನೇಮಕರಾಗುತ್ತಾರೆ. ಪ್ರಭಾರಿ ಇದ್ದರೆ ಯಾವ ಸಂದರ್ಭದಲ್ಲಾದರೂ ನಿರ್ದೇಶಕ ಸ್ಥಾನದಿಂದ ಇಳಿಸಬಹು ದು. ಆಗ ಅಧಿಕಾರದ ಖುರ್ಚಿ ಉಳಿಸಿಕೊಳ್ಳಲು ರಾಜಿ ಮೂಲಕವೇ ಆಡಳಿತ ಮಾಡಬೇಕಾಗುತ್ತದೆ. ಇನ್ನು ನಿರ್ದೇಶಕ ಕುರ್ಚಿಯ ಆಕಾಂಕ್ಷಿಗಳು ನಿರಂತರವಾ ಗಿ ಅಧಿಕಾರಕ್ಕಾಗಿ ಪ್ರಯತ್ನ ಮಾಡುತ್ತಿ ರುತ್ತಾರೆ. ಇಂತಹ ಬೆಳವಣಿಗೆಯಿಂದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಡಳಿತದ ಮೇಲೆ ಪ್ರಭಾವಕ್ಕೆ ಕಾರಣವಾಗುತ್ತಿತ್ತು. ಇದರಿಂದಾಗಿ ಹಲವು ವರ್ಷಗಳಿಂದ ಕಾಯಂ ನಿರ್ದೇಶಕ ನೇಮಕ ಬೇಡಿಕೆ ಇತ್ತು.

ಕಾಯಂ ನಿರ್ದೇಶಕರು ಇಲ್ಲದ ಸಂಸ್ಥೆಗಳು

- ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
- ಇನ್ಸಿಟ್ಯೂಟ್ ಆಫ್ ನೆಫ್ರೋ ಯುರಾಲಜಿ
- ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
- ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
- ಸಂಜಯ್ ಗಾಂಧಿ ಟ್ರಾಮಾ ಸಂಸ್ಥೆ
- ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ
- ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಕರ್ನಾಟಕ ಅಂತಃಸ್ರಾವಶಾಸ್ತ್ರ ಮತ್ತು ಸಂಶೋಧನಾ ಸಂಸ್ಥೆ

ಸಮಾಚಾರ ಸಣ್ಣದಲ್ಲ

ಬೇಲಿಯಲ್ಲಿ ಸಿಲುಕಿದ್ದ ಚಿರತೆ ರಕ್ಷಣೆ



ಹಿರಿಯಡಕ: ಕುಕ್ಕೆಹಳ್ಳಿ-ಹಿರಿಯಡಕ ರಸ್ತೆಯ ಬಕ್ಕಾರೆ ಎಂಬಲ್ಲಿ ಶನಿವಾರ ಸಂಜೆ ತಂತಿ ಬೇಲಿಯಲ್ಲಿ ಸಿಲುಕಿಕೊಂಡಿದ್ದ ಚಿರತೆಯೊಂದನ್ನು ಅರಣ್ಯ ಇಲಾಖೆಯವರು ರಕ್ಷಿಸಿದ್ದಾರೆ. ಸರಕಾರಿ ಜಾಗದಲ್ಲಿ ಅಳವಡಿಸಿದ್ದ ತಂತಿ ಬೇಲಿಯಲ್ಲಿ ಸಿಲುಕಿಕೊಂಡಿದ್ದ 4 ವರ್ಷ ಪ್ರಾಯದ ಚಿರತೆಯನ್ನು ಕಂಡ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ, ಅರಿವಳಿಕೆ ತಜ್ಞರು ಚಿರತೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಪ್ರಜ್ಞೆ ತಪ್ಪಿಸಿ, ರಕ್ಷಿಸಿದರು. ನಂತರ ಬೋನಿನಲ್ಲಿ ಬಂಧಿಸಿ ಪಶು ವೈದ್ಯಕೀಯ ತಜ್ಞರು ಪ್ರಾಥಮಿಕ ಚಿಕಿತ್ಸೆ ನೀಡಿದರು. ಚಿರತೆಯನ್ನು ವಲಯ ಅರಣ್ಯ ಇಲಾಖೆಯಲ್ಲಿ ಇರಿಸಲಾಗಿದ್ದು, ಚೇತರಿಸಿಕೊಂಡ ಬಳಿಕ ಸುರಕ್ಷಿತವಾಗಿ ಕಾಡಿಗೆ ಬಿಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿವಾಹಿತನ ಜತೆ ವಿದ್ಯಾರ್ಥಿನಿ ಆತ್ಮಹತ್ಯೆ

ತುಮಕೂರು: ವಿವಾಹಿತ ಪುರುಷನೊಂದಿಗೆ ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಘಟನೆ ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನಲ್ಲಿ ನಡೆದಿದೆ. ಅನನ್ಯ (19), ರಂಗಶಾಮಣ್ಣ (45) ಮೃತ ಪ್ರೇಮಿಗಳು. ಕೊರಟಗೆರೆ ತಾಲೂಕಿನ ಮಾವತ್ತೂರು ಕೆರೆಯಲ್ಲಿ ಇಬ್ಬರೂ ಪ್ರೇಮಿಗಳ ಶವ ಪತ್ತೆಯಾಗಿದೆ. ಶನಿವಾರ ಮಾವತ್ತೂರು ಕೆರೆಯ ದಡದಲ್ಲಿ ಇಬ್ಬರ ಚಪ್ಪಲಿ ಹಾಗೂ ಮೊಬೈಲ್ ಪತ್ತೆಯಾಗಿತ್ತು. ಭಾನುವಾರ ಬೆಳಗ್ಗೆ ಇಬ್ಬರ ಶವ ಪತ್ತೆಯಾಗಿದೆ. ಕೊಳಾಲ ಹೋಬಳಿ ಲಕ್ಕಯ್ಯನಪಾಳ್ಯದ ಅನನ್ಯ ಹಾಗೂ ಬೈರಗೊಂಡ್ಲು ಗ್ರಾಮದ ರಂಗಶಾಮಣ್ಣ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಕಳೆದ 4 ದಿನಗಳ ಹಿಂದೆ ಇಬ್ಬರು ಪ್ರೇಮಿಗಳು ಮನೆಯಿಂದ ನಾಪತ್ತೆಯಾಗಿದ್ದರು. ತಮ್ಮ ಪ್ರೀತಿಗೆ ಕುಟುಂಬದವರ ವಿರೋಧ ವ್ಯಕ್ತಪಡಿಸಿದ್ದರಿಂದ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಶಂಕಿಸಲಾಗಿದೆ.

ನೇಣಿಗೆ ಶರಣಾದ ಪೇದೆ

ಕಲಬುರಗಿ: ಜಿಲ್ಲೆ ಸೇಡಂ ತಾಲೂಕಿನ ಮಾಡಬೂಳ ಠಾಣೆಯ ಪೊಲೀಸ್ ಪೇದೆ ದೊಡ್ಡೇಶ್ (40) ನಗರದ ಹೊರವಲಯದ ಉದನೂರು ರಸ್ತೆಯ ಪಕ್ಕದ ಜಮೀನಿನಲ್ಲಿ ಇರುವ ಬೇವಿನ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ದೊಡ್ಡೇಶ್ ಅವರು ಕಲಬುರಗಿ ನಗರದ ಹೈ ಕೋರ್ಟ್ ಬಳಿಯ ಸಂತೋಷ ಕಾಲೋನಿಯ ಮನೆಯೊಂದರಲ್ಲಿ ವಾಸವಾಗಿದ್ದರು. ಸ್ಥಳಕ್ಕೆ ವಿವಿ ಠಾಣೆಯ ಪಿಐ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ನಂತರ ದೇಹವನ್ನು ಜಿಮ್ಸ್ ಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ. ಕೌಟುಂಬಿಕ ಕಲಹದ ಹಿನ್ನಲೆ ಆತ್ಮಹತ್ಯೆಗೆ ಶರಣಾಗಿರುವ ಶಂಕೆ ವ್ಯಕ್ತಪಡಿಸಿರುವ ವಿಶ್ವವಿದ್ಯಾಲಯ ಪೊಲೀಸರು, ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ತಲ್ವಾರ್ ಝಳಪಿಸಿ ಪೋಸ್ಟ್: ಇಬ್ಬರ ಸೆರೆ

ಚಿಕ್ಕಮಗಳೂರು: ಜನರಿಗೆ ಭಯ ಹುಟ್ಟಿಸುವ ರೀತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ತಲ್ವಾರ್ ಹಿಡಿದು ಓಡಾಡಿದ್ದ ಹಾಗೂ ಇನ್ಸ್ಟಾಗ್ರಾಮ್‌ನಲ್ಲಿ ಫೋಟೋ ಹಂಚಿಕೊಂಡಿದ್ದ ಇಬ್ಬರನ್ನು ಎನ್ ಆರ್‌ಪುರ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳನ್ನು ಎನ್‌ಆರ್‌ಪುರದ ಸೈಯದ್ ಸಲ್ಮಾನ್ (22) ಮೊಹಮ್ಮದ್ ಸಾಧಿಕ್ (25) ಎಂದು ಗುರುತಿಸಲಾಗಿದೆ. ಆರೋಪಿ ಗಳು ತಲ್ವಾರ್ ಹಿಡಿದು ಕಾರಿನಲ್ಲಿ ಅಡ್ಡಾಡುತ್ತಿದ್ದರು. ಇದೀಗ ಪೊಲೀಸರು ಸಿನಿಮೀಯ ರೀತಿಯಲ್ಲಿ ಸೌತಿಕೆರೆ ಗ್ರಾಮದ ಬಳಿ ಕಾರನ್ನು ಅಡ್ಡಗಟ್ಟಿ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳು ಸಾರ್ವಜನಿಕ ಸ್ಥಳಗಳಲ್ಲಿ ಲಾಂಗ್ ಪ್ರದರ್ಶನ ಮಾಡಿದ್ದರು. ಈ ಸಂಬಂಧ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಖಚಿತ ಮಾಹಿತಿ ಆಧಾರದ ಮೇಲೆ ಪೊಲೀಸರು ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ. ಬಂಧಿತರು ಎನ್ ಆರ್‌ಪುರದಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ವಿ.ಸೋಮಣ್ಣ} ಕೇಂದ್ರ ಸಚಿವ

ಬಿಜೆಪಿ ಮತ್ತು ಜೆಡಿಎಸ್ ಒಂದಾಗುವ ಬಹುಕಾಲದ ಕನಸು ನನಸಾಗಿದ್ದು, ಇದು ಆಡಳಿತಾರೂಢ ಕಾಂಗ್ರೆಸ್ ಸರಕಾರ ನಿದ್ರೆಯಿಲ್ಲದ ರಾತ್ರಿ ಕಳೆಯುವಂತಹ ಸ್ಥಿತಿ ಎದುರಾಗುವಂತೆ ಮಾಡಿದೆ. ನಾವು ಸಣ್ಣ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಬಲಪಡಿಸಲು ಒಟ್ಟಾಗಿ ಕೆಲಸ ಮಾಡಬೇಕು.

ದೇವೇಗೌಡರ ರಾಜಕೀಯ ಕುಟುಂಬ, ಜೆಡಿಎಸ್‌ನ ವರ್ಚಸ್ಸಿಗೆ ರಾಷ್ಟ್ರೀಯ ಮಟ್ಟದಲ್ಲಿ ಹಾನಿ

ಕಾನೂನು ಸಂಕಷ್ಟದಲ್ಲಿ ರೇವಣ್ಣ ಕುಟುಂಬ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾಜಿ ಸಚಿವ ಎಚ್.ಡಿ ರೇವಣ್ಣ ಅವರ ಇಡೀ ಕುಟುಂಬದ ಮೇಲೆ ಒಂದಲ್ಲಾ ಒಂದು ರೀತಿಯಾದ ಆರೋಪಗಳು ಬೆಳಕಿಗೆ ಬರುತ್ತಿದ್ದು, ಈಗ ಕಾನೂನು ಕಟ್ಟಳೆಯಲ್ಲಿ ಸಿಲುಕಿದೆ.

ಹಾಸನ ಜಿಲ್ಲೆಯಲ್ಲಿ ರಾಜಕೀಯವಾಗಿ ಛಾಪು ಮೂಡಿಸಿದ್ದ ಮಾಜಿ ಸಚಿವ ರೇವಣ್ಣ ಕುಟುಂಬಕ್ಕೆ ಒಂದಲ್ಲಾ ಒಂದು ಸಂಕಷ್ಟಗಳು ಎದುರಾಗುತ್ತಲೇ ಇವೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹಿರಿಯ ಮಗ ರೇವಣ್ಣ ಕುಟುಂಬಕ್ಕೆ ಇದೀಗ ಭಾರಿ ಸಂಕಷ್ಟ ಎದುರಾಗಿದೆ. ಅತ್ಯಾಚಾರ ಕೇಸ್‌ನಲ್ಲಿ ಮಾಜಿ ಸಂಸದ ಪ್ರಜ್ವಲ್ ಬಂಧನವಾಗಿದೆ. ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಹತ್ತು ದಿನ ಜೈಲು ಅನುಭವಿಸಿ ರೇವಣ್ಣ ಹೊರಬಂದಿದ್ದಾರೆ. ಇದೇ ಸಂತ್ರಸ್ತೆ ಅಪಹರಣ ಕೇಸ್‌ನಲ್ಲಿ ಜಾಮೀನು ಅರ್ಜಿ ವಜಾ ಆಗಿ ಭವಾನಿ ರೇವಣ್ಣ ಬಂಧನ ಭೀತಿ ಎದುರಿಸಿದ್ದರು. ಇದೀಗ ಹಿರಿಯ ಪುತ್ರ, ವಿಧಾನ ಪರಿಷತ್ ಸದಸ್ಯ ಸೂರಜ್ ಕೂಡ ಬಂಧಿತರಾಗಿದ್ದಾರೆ. ಒಟ್ಟಿನಲ್ಲಿ ಸಾಲು ಸಾಲು ಸಂಕಷ್ಟ ಜೆಡಿಎಸ್ ನಾಯಕ ರೇವಣ್ಣ ಅವರನ್ನು ಹೈರಾಣು ಮಾಡಿದೆ.

ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೊ ಪ್ರಕರಣ ಬರೀ ರಾಜ್ಯ, ದೇಶ ಅಲ್ಲದೆ, ವಿದೇಶಗಳವರೆಗೂ ಸದ್ದು ಮಾಡಿತ್ತು. ಇದರ ಬೆನ್ನಲ್ಲೇ ಇದೀಗ ಪ್ರಜ್ವಲ್ ರೇವಣ್ಣ ಅಣ್ಣ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧವೂ ಸಹ ಅಸಹಜ ಲೈಂಗಿಕ ದೌರ್ಜನ್ಯ ಆರೋಪವೊಂದು ಬೆಳಕಿಗೆ ಬಂದಿದೆ. ಈಗಾಗಲೇ ಪ್ರಜ್ವಲ್ ರೇವಣ್ಣ ಅವರ ಪ್ರಕರಣದಿಂದ ಮುಜುಗರಕ್ಕೀಡಾಗಿದ್ದ ರೇವಣ್ಣ ಕುಟುಂಬ ಮತ್ತಷ್ಟು ಮುಜುಗರಕ್ಕೆ ಒಳಗಾಗುವಂತಾಗಿದೆ.

ಪ್ರಜ್ವಲ್ ರೇವಣ್ಣ ಹಾಗೂ ಸೂರಜ್ ರೇವಣ್ಣ ಪ್ರಕರಣದಿಂದ ದೇವೇಗೌಡರ ರಾಜಕೀಯ ಕುಟುಂಬ ಮತ್ತು ಜೆಡಿಎಸ್ ಪಕ್ಷದ ವರ್ಚಸ್ಸಿಗೆ ರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಹಾನಿ ಉಂಟಾಗುವ ಪರಿಸ್ಥಿತಿಯನ್ನು ಉಂಟುಮಾಡಿದೆ. ಡ್ಯಾಮೇಜ್ ಕಂಟ್ರೋಲ್ ಪ್ರಕ್ರಿಯೆಯಲ್ಲಿ ಪಕ್ಷ ನಿರತವಾಗಿದ್ದರೂ ರೇವಣ್ಣ ಕುಟುಂಬವನ್ನು ಉಳಿಸುವ ಸ್ಥಿತಿಯಲ್ಲಿ ಪಕ್ಷವಿಲ್ಲ. ಎಚ್. ಡಿ.ರೇವಣ್ಣ ಅವರು ಈಗಾಗಲೇ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರೂ ಕಾನೂನಿನ ಕುಣಿಕೆಯಲ್ಲಿ ಸಂಕಷ್ಟ ಎದುರಾಗಲಿದೆ. ಎಸ್‌ಐಟಿ ತನಿಖೆಯಲ್ಲಿ ಭವಾನಿ ಹೆಸರೂ ಹೊರಬಿದ್ದಿರುವುದರಿಂದ ಕುಟುಂಬ ಸದಸ್ಯರಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ಕುಮಾರಸ್ವಾಮಿಯವರೂ ಇಲ್ಲ ಎಂಬ ಮಾತುಗಳು ಪಕ್ಷ ಪಾಳಯದಲ್ಲಿ ಕೇಳಿಬಂದಿವೆ.

ನನ್ನ ಕುಟುಂಬದ ವಿರುದ್ಧ ವ್ಯವಸ್ಥಿತವಾಗಿ ಷಡ್ಯಂತ್ರ ಮಾಡಲಾಗಿದೆ. ನಾನು ಈ ರೀತಿಯ ಷಡ್ಯಂತ್ರಕ್ಕೆ ಹೆದರುವುದಿಲ್ಲ. ನಾನು, ದೇವರು, ನ್ಯಾಯಾಂಗದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ.

-ಎಚ್.ಡಿ.ರೇವಣ್ಣ, ಶಾಸಕ

ಮನೆ ಮಕ್ಕಳಿಗೆ ತಪ್ಪು ಮಾಡಿ ಎಂದು ಯಾರಾದರೂ ಹೇಳುತ್ತೇವೆಯೇ? ಯಾರೇ ತಪ್ಪು ಮಾಡಿದರೂ ತಪ್ಪೇ. ಕಾನೂನಿನ ಮುಂದೆ ಎಲ್ಲರೂ ತಲೆ ಬಾಗಲೇಬೇಕು.

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಆರೋಪಗಳೇನು

ಎಚ್.ಡಿ.ರೇವಣ್ಣ: ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತೆಯ ಅಪಹರಣ

ಭವಾನಿ ರೇವಣ್ಣ: ಹೊಳೆನರಸೀಪುರ ಪ್ರಕರಣದಲ್ಲಿ ಸಂತ್ರಸ್ತೆಯ ಅಪಹರಣ

ಪ್ರಜ್ವಲ್ ರೇವಣ್ಣ : ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಬೆದರಿಕೆ

ಸೂರಜ್ ರೇವಣ್ಣ : ಅಸಹಜ ಲೈಂಗಿಕ ದೌರ್ಜನ್ಯ

ರಾಜಕೀಯ ಭವಿಷ್ಯ ಅತಂತ್ರ

ಲೈಂಗಿಕ ದೌರ್ಜನ್ಯ ಹಾಗೂ ಮಹಿಳೆ ಅಪಹರಣ ಪ್ರಕರಣ ಬಯಲಾದ ಬಳಿಕ ದೇವಣ್ಣ ಕುಟುಂಬದಿಂದ ರೇವಣ್ಣ ಕುಟುಂಬದಿಂದ ಬೇರ್ಪಟ್ಟಿದೆ. ಕಾನೂನು ನೆರವು ಪಡೆಯಲು ಎಚ್.ಡಿ. ಕುಮಾರಸ್ವಾಮಿಗೆ ದೇವೇಗೌಡರ ಕುಟುಂಬಸ್ಥರು ಮನವರಿಕೆ ಮಾಡಿದ್ದಾರೆ. ತಮ್ಮ ಸಹೋದರನನ್ನು ಉಳಿಸಲು ಎಚ್‌ಡಿಕೆ ಉತ್ತಮ ವಕೀಲರು ಮತ್ತು ಕಾನೂನು ನೆರವು ಪಡೆಯುವ ಮೂಲಕ ರೇವಣ್ಣ ಅವರಿಗೆ ಸಹಾಯ ಮಾಡುತ್ತಿ ದ್ದಾರೆ. ಆದರೆ ಪ್ರಜ್ವಲ್ ಎದುರಿಸುತ್ತಿರುವ ಕ್ರಿಮಿನಲ್ ಆರೋಪಗಳು ಘೋರವಾಗಿರುವುದ ರಿಂದ ಪ್ರಜ್ವಲ್‌ಗೆ ಸಹಾಯ ಮಾಡಲು ಆಸಕ್ತಿ ಹೊಂದಿಲ್ಲ ಎಂದು ಎಚ್‌ಡಿಕೆ ಪಾಳಯದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಆದರೆ, ಮೂವರು ಸದಸ್ಯರು ಕಾನೂನು ಹೋರಾಟ ಎದುರಿಸಬೇಕಾಗಿರುವುದರಿಂದ ರೇವಣ್ಣ ಕುಟುಂಬಕ್ಕೆ ಇದು ಬಹುತೇಕ ರಾಜಕೀಯ ಅಂತ್ಯ ಎಂದು ಪರಿಗಣಿಸಲಾಗಿದೆ.

ಇದು ಮುಂದಿನ ರಾಜಕೀಯ ದಲ್ಲಿ ರೇವಣ್ಣನವರಿಗಿಂತ ಎಚ್‌ಡಿಕೆ ಕುಟುಂಬ ವನ್ನು ಹೆಚ್ಚು ಪರಿಗಣಿಸುವಂತೆ ಮಾಡಿದೆ. ರೇವಣ್ಣ ಮಕ್ಕಳಾದ ಪ್ರಜ್ವಲ್ ಹಾಗೂ ಸೂರಜ್‌ನಿಂದಾಗಿ ಎಚ್.ಡಿ.ರೇವಣ್ಣ ಕುಟುಂಬ ಹಾಗೂ ರಾಜಕೀಯ ಭವಿಷ್ಯವೇ ಬುಡಮೇಲಾಗಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ

ಚನ್ನಪಟ್ಟಣದಲ್ಲಿ ನಿಖಿಲ್ ಕಣಕ್ಕೆ ಇಳಿಯುವುದಿಲ್ಲ

ರಾಮನಗರ: ಚನ್ನಪಟ್ಟಣ ಉಪಚುನಾವಣೆಗೆ ನಿಖಿಲ್‌ನನ್ನು ಕಣಕ್ಕಿಳಿಸುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಬಹಿರಂಗವಾಗಿ ಸ್ಪಷ್ಟಪಡಿಸಿದ್ದಾರೆ.

ಚನ್ನಪಟ್ಟಣ ಬಮೂಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿಖಿಲ್ ಎರಡು ಬಾರಿ ಸೋತು ಅವನು ಅನುಭವಿಸುತ್ತಿರುವ ನೋವು ಏನೆಂದು ನನಗೆ ಮಾತ್ರ ಗೊತ್ತು. ಚನ್ನಪಟ್ಟಣ ಉಪಚುನಾವಣೆಗೆ ಯೋಗೇಶ್ವರ್ ಆಗಬಹುದು. ಇಲ್ಲ ಜೆಡಿಎಸ್ ನವರೇ ಆಗಬಹುದು, ಎನ್‌ಡಿಎ ಅಭ್ಯರ್ಥಿ ಯಾರೇ ಆದರೂ ನಾವು ಒಗ್ಗೂಡಿ ಕೆಲಸ ಮಾಡೋಣ ಎಂದರು.

ಹಾಲು ಉತ್ಪಾದಕರಿಗೆ ದೇಶಾದ್ಯಂತ ಪ್ರೋತ್ಸಾಹ ಧನ ಕೊಡುವಂತೆ ಪ್ರಧಾನಿ ಅವರಿಗೆ ಮನವಿ ಮಾಡುತ್ತೇನೆ. ಈ ಬಗ್ಗೆ ಪ್ರಧಾನಿ ಜತೆ ಮಾತನಾಡುತ್ತೇನೆ. ದೇಶದ ಎಲ್ಲಾ ರೈತರಿಗೆ 2 ರಿಂದ 3 ರು. ಪ್ರತಿ ಲೀಟರ್‌ಗೆ ಕೊಡುವಂತೆ ಮನವೊಲಿಸುತ್ತೇನೆ ಎಂದು ಹೇಳಿದರು.

ಚನ್ನಪಟ್ಟಣ ಉದ್ಧಾರ ಮಾಡುತ್ತೇನೆ ಎಂದು ಬಂದಿರುವವರನ್ನು ಮೊದಲು ಚನ್ನಪಟ್ಟಣ ತಾಲೂಕಿಗೆ ಬರ ಬೇಕಿರುವ 61 ಕೋಟಿ ಹಾಲಿನ ಪ್ರೋತ್ಸಾಹಧನ ಕೊಡಿ ಎಂದು ಕೇಳಿ ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಮನೆ ಮಕ್ಕಳಿಗೆ ತಪ್ಪು ಮಾಡಿ ಎಂದು ಯಾರಾದರೂ ಹೇಳುತ್ತೇವೆಯೇ? ಯಾರೇ ತಪ್ಪು ಮಾಡಿದರೂ ತಪ್ಪೇ. ಕಾನೂನಿನ ಮುಂದೆ ಎಲ್ಲರೂ ತಲೆ ಬಾಗಲೇಬೇಕು. ಕಾನೂನಿನ ಮುಂದೆ ಎಲ್ಲರೂ ಸಮಾನರು. ತಪ್ಪು ಮಾಡಿ ಎಂದು ನಾವು ಮಕ್ಕಳಿಗೆ ಹೇಳುವುದಿಲ್ಲ. ಉಪ್ಪು ತಿಂದವರು ನೀರು ಕುಡಿಯಬೇಕು. ಅದೇ ರೀತಿ, ತಪ್ಪು ಮಾಡಿದ ಯಾರೇ ಆದರೂ ಕಾನೂನಿನ ಎದುರು ತಲೆಬಾಗಬೇಕು.

-ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಕೆಆರ್‌ಎಸ್ ಮಟ್ಟ 110 ದಾಟಿದರೆ ನೀರು ಬಿಡುಗಡೆ

ಕೃಷಿಗೆ ನೀರು: ಸಚಿವರ ಸ್ಪಷ್ಟನೆ

ಮಂಡ್ಯ: ಶೀಘ್ರದಲ್ಲೇ ನೀರು ಸಲಹಾ ಸಮಿತಿ ಸಭೆ ಕರೆದು ನಾಲೆಗಳಿಗೆ ನೀರು ಹರಿಸುವ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾವು ನಿರೀಕ್ಷಿಸಿದ ಮಟ್ಟದಲ್ಲಿ ಮೇಲಿಂದ ನೀರು ಹರಿದು ಬರ್ತಿಲ್ಲ. ಭತ್ತ ನಾಟಿ ಮಾಡಲು ಜುಲೈ 15ರ ವರೆಗೂ ಟೈಂ ಇದೆ. ಹಾಗಾಗಿ ನಾವು ನಿರೀಕ್ಷೆ ಇಟ್ಟುಕೊಳ್ಳೋಣ. ಮಳೆ ಬಂದು ಡ್ಯಾಂ ನೀರಿನ ಮಟ್ಟ 110 ಅಡಿಗೆ ಏರಿದರೆ ಸಮಸ್ಯೆ ಇರೋದಿಲ್ಲ. ಆದರೆ ಈಗ ರೈತರು ನೀರು ಕೇಳ್ತಿರೋದು ಕೆರೆ ಕಟ್ಟೆ ತುಂಬಿಸಿಕೊಳ್ಳಲು. ಹಾಗಾಗಿ ಶೀಘ್ರವಾಗಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸೂರಜ್ ರೇವಣ್ಣ ಬಂಧನ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾನೂನಿದೆ ಎರಡೂ ಕಡೆಯಿಂದ ದೂರು ದಾಖಲಾಗಿದೆ. ಪೊಲೀಸರು ಮತ್ತು ಎಸ್‌ಐಟಿ ತಂಡ ತನಿಖೆ ನಡೆಸುತ್ತಿದೆ. ದೇವೇಗೌಡರ ಕುಟುಂಬಕ್ಕೆ ಈ ರೀತಿ ಆಗುತ್ತಿರುವುದು ನಮಗೂ ಮುಜುಗರ ಇದೆ. ರಾಜಕಾರಣ ತೀರಾ ವೈಯಕ್ತಿಕವಾಗಿ ಹೋಗಬಾರದು. ಅಭಿವೃದ್ಧಿ ಮೇಲೆ ರಾಜಕಾರಣ ಮಾಡಬಹುದು ಎಂದರು.

ರಾಜ್ಯ ಸರಕಾರ ಬೀಳಲಿದೆ ಎಂಬ ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿದ ಅವರು, ಅವರನ್ನ ಕಾಯ್ತಾ ಇರಲು ಹೇಳಿ. ಅವರೇನು ರಾಜ್ಯಕ್ಕೆ ಬರ್ತಾರಾ? ಹಾಗೆ ನೋಡಿದರೆ ನಮ್ಮ ಸರಕಾರ ಸುಭದ್ರವಾಗಿದೆ. ಕೇಂದ್ರ ಸರಕಾರವೇ ಅಪಾಯದಲ್ಲಿದೆ ಎಂದು ತಿರುಗೇಟು ನೀಡಿದರು.

ಚನ್ನಪಟ್ಟಣದಲ್ಲಿ ಗೆಲ್ಲುವ ಅಭ್ಯರ್ಥಿ ಕಣಕ್ಕೆ

ಚನ್ನಪಟ್ಟಣ ಉಪ ಚುನಾವಣೆ ವಿಚಾರದ ಬಗ್ಗೆ ಮಾತನಾಡಿದ ಸಚಿವರು, ಚುನಾವಣೆ ಘೋಷಣೆಯಾಗಲಿ. ಅಲ್ಲಿ ಗೆಲ್ಲುವ ಅಭ್ಯರ್ಥಿಯನ್ನ ಕಣಕ್ಕಿಳಿಸ್ತೀವಿ. ಯೋಗೇಶ್ವರ್ ಎತ್ತರದಲ್ಲಿದ್ದಾರೆ. ಕುಮಾರಸ್ವಾಮಿ ಅವರಿಗಿಂತಲೂ ಎತ್ತರದಲ್ಲಿದ್ದಾರೆ. ಅವರ ಹಾಗೆ ನಾವು ತೊಡೆ ತಟ್ಟುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು.

ಸೂರಜ್ ರೇವಣ್ಣ ಕೇಸ್ ವಿಚಿತ್ರ, ಅಸಹ್ಯಕರ

ಕಲಬುರಗಿ: ಸೂರಜ್ ರೇವಣ್ಣ ಬಂಧನ ಕುರಿತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ ನೀಡಿದ್ದು, ಇದರ ಬಗ್ಗೆ ಏನು ಮಾತಾಡಬೇಕು ಎಂದು ಗೊತ್ತಾಗುತ್ತಿಲ್ಲ. ಇವೆಲ್ಲಾ ವಿಚಿತ್ರ, ವಿಕೃತ, ಅಸಹ್ಯ ಪಡುವ ಪ್ರಕರಣಗಳಾಗಿವೆ ಎಂದು ಗೌಡರ ಕುಟುಂಬದ ವಿರುದ್ಧ ಹರಿಹಾಯ್ದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜ್ವಲ್ ರೇವಣ್ಣ, ಸೂರಜ್ ರೇವಣ್ಣ ಹಾಗೂ ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಪ್ರಕರಣಗಳನ್ನು ಯಾರು ಮಾಡಿದ್ದಾರೆ ಅವರಿಗೂ ಏನ್ ಅನ್ನಿಸ್ತಿಲ್ಲವಲ್ಲ. ಅವರು ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳತ್ತಿಲ್ಲ ಎಂದು ಟಾಂಗ್ ನೀಡಿದರು. ದೊಡ್ಡಮನೆಯವರು ದೊಡ್ಡ ಜವಾಬ್ದಾರಿ ಕುಟುಂಬದಿಂದ ಬಂದಿರೋದು. ಎಲ್ಲರೂ ಅಧಿಕಾರದಲ್ಲಿಯೇ ಇದ್ದಾರೆ. ಅವರ ಕುಟುಂಬದ ಮೇಲೆ ಇಂತಹ ಗಂಭೀರ ಆರೋಪ ಎದುರಿಸುತ್ತಿರುವಾಗ ಅವರೇಕೆ ಈ ಕಳಂಕ ಅಳಿಸೋವರೆಗೂ ಅಧಿಕಾರ ಬಿಡುತ್ತೇವೆ ಎಂದು ಹೇಳುತ್ತಿಲ್ಲ? ಎಂದು ಪ್ರಶ್ನಿಸಿದರು.

ನಾನು ಎಚ್.ಡಿ ದೇವೇಗೌಡರು, ಕುಮಾರಸ್ವಾಮಿ, ರೇವಣ್ಣ ಅವರ ಬಗ್ಗೆ ಮಾತಾಡೋದಿಲ್ಲ. ಅವರ ಆತ್ಮಸಾಕ್ಷಿಗೆ ತಿಳಿದಂತೆ ಅವರು ಕೆಲಸ ಮಾಡಬೇಕು. ಆದರೆ, ಅವರ ಎನ್‌ಡಿಎ ಪಾಟರ್ನರ್ ಬಿಜೆಪಿಯವರು ಏಕೆ ಮೌನ ವಹಿಸಿದ್ದಾರೆ ಎಂದು ಗೊತ್ತಾಗ್ತಿಲ್ಲ. ಉಳಿದ ಟೈಮ್ ನಲ್ಲಿ ನ್ಯಾಯದ ಬಗ್ಗೆ ಮಾತಾಡುವ ಬಿಜೆಪಿಯವರು ಇವಾಗ ಮೌನ ಏಕೆ? . -ಪ್ರಿಯಾಂಕ್ ಖರ್ಗೆ, ಸಚಿವ

ಬಿಎಸ್‌ವೈಗೆ ಬಸನಗೌಡ ಪಾಟೀಲ್ ಯತ್ನಾಳ ಹೊಸ ವ್ಯಾಖ್ಯಾನ

ವೀರಶೈವ ಮಹಾಸಭಾ ಮೂರು ಕುಟುಂಬಗಳ ಸಂಸ್ಥೆಯಾಗಿದೆ

ವಿಜಯಪುರ: ರಾಜ್ಯದ ವೀರಶೈವ ಮಹಾಸಭಾ ಮೂರು ಜನರ ಕುಟುಂಬದ ಸಂಸ್ಥೆಯಾಗಿದೆ. 'ಬಿ' ಅಂದ್ರೆ ಭೀಮಣ್ಣ ಖಂಡ್ರೆ, 'ಎಸ್' ಅಂದ್ರೆ ಶಾಮನೂರು ಶಿವಶಂಕರಪ್ಪ, 'ವೈ' ಅಂದ್ರೆ ಯಡಿಯೂರಪ್ಪ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಆರೋಪಿಸಿ ಬಿಎಸ್‌ವೈಗೆ ಹೊಸ ವ್ಯಾಖ್ಯಾನ ನೀಡಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಸೋಲಿಗೆ ಹೊಂದಾಣಿಕೆ ರಾಜಕಾರಣವೇ ಕಾರಣ ಎಂಬುದಕ್ಕೆ ಯಡಿಯೂರಪ್ಪ ಅವರು ನೀಡಿದ ಹೇಳಿಕೆಯೇ ಸಾಕ್ಷಿ. ವೀರಶೈವ ಮಹಾಸಭಾ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ ಹಾಗೂ ಯಡಿಯೂರಪ್ಪ ಅವರ ಕುಟುಂಬದ ಸಂಸ್ಥೆಯಾಗಿಬಿಟ್ಟಿದೆ. ರಾಜ್ಯದಲ್ಲಿ ಈ ಮೂವರ ಕುಟುಂಬದ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಅಳಿಯಂದಿರು ಚುನಾವಣೆಗೆ ನಿಲ್ಲುತ್ತಾರೆ. ಈ ಮೂವರಿಂದಾಗಿ ರಾಜ್ಯದ ಲಿಂಗಾಯಿತರು ಇವರ ಮನೆಗಳಲ್ಲಿ ಕಸ ಗುಡಿಸುವ, ಈರುಳ್ಳಿ ಕತ್ತರಿಸುವ ಕೆಲಸ ಮಾಡಬೇಕಾ?. ಈಗ ಇವರ ಸಾಲಿಗೆ ಸಚಿವ ಶಿವಾನಂದ ಪಾಟೀಲರ ಗಜಕೇಸರಿ ಕುಟುಂಬ ಸೇರಿಕೊಂಡಿದೆ ಎಂದು ವ್ಯಂಗ್ಯವಾಡಿದರು.

ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯ ಸರಕಾರ ದಿವಾಳಿಯಾಗಿದೆ. ಆಲಮಟ್ಟಿ ನೀರಾವರಿ ಯೋಜನೆಗಳಿಗೆ ಅನುದಾನ ನೀಡಿಲ್ಲ. ಗುತ್ತಿಗೆದಾರರು ತುಂಬಿದ ಇಎಂಡಿ ಹಣ ಹಿಂದಿರುಗಿಸುತ್ತಿಲ್ಲ. ಅನುದಾನದಲ್ಲಿ ರಸ್ತೆ ಕಾಮಗಾರಿ ಮಾಡುತ್ತಿದ್ದೇವೆ. ಡಿ.ಕೆ. ಶಿವಕುಮಾರ 50% ಕಮೀಷನ್ ಪಡೆಯುತ್ತಿದ್ದಾರೆ ಎಂದು ಬೆಂಗಳೂರಿನಲ್ಲಿ ಶಾಸಕ ಮುನಿರಾಜು ಹೇಳಿದ್ದಾರೆ. ಹಾಗಾಗಿ ಸಿಎಂ, ಡಿಸಿಎಂ ರಾಜ್ಯದಲ್ಲಿ ಹಗಲು ದರೋಡೆ ನಡೆಸಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ವಕ್ಫ್ ಆಸ್ತಿ ಜಮೀರ್‌ನ ಅಪ್ಪ ಮಾಡಿದ್ದಾನಾ?

ವಕ್ಫ್ ಆಸ್ತಿ ಯತ್ನಾಳ ಅಪ್ಪನ ಆಸ್ತಿಯಲ್ಲ ಎಂದ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಯತ್ನಾಳ, ವಕ್ಫ್ ಆಸ್ತಿಯನ್ನು ಜಮೀರ್‌ನ ಅಪ್ಪ ಮಾಡಿದ್ದಾನಾ? ದೇಶದಲ್ಲಿ ಮುಸ್ಲಿಮರಿಗಾಗಿ ಪಾಕಿಸ್ತಾನವನ್ನು ಆಗಲೇ ಒಡೆದುಕೊಟ್ಟಿದೆಯಲ್ಲ? ನೆಹರು ಮಾಡಿದ ದೊಡ್ಡ ಅನಾಹುತ ಅಂದರೆ ವಕ್ಫ್ ಕಾನೂನು ತಂದು ದೇಶದ 12 ಲಕ್ಷ ಎಕರೆಗಿಂತಲೂ ಹೆಚ್ಚು ಆಸ್ತಿ ವಕ್ಫ್‌ಗೆ ಕೊಟ್ಟಿರುವುದು, ಹಿಂದೂಗಳ ಜಮೀನು ಕೂಡ ವಕ್ಫ್‌ಗೆ ಕೊಟ್ಟಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯಾದ್ಯಂತ ಜೂನ್ 26ರವರೆಗೆ ಪ್ರತ್ಯೇಕ ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಸುತ್ತಮುತ್ತ ವ್ಯಾಪಕ ಮಳೆಯಾಗಲಿದ್ದು, ಬಲವಾದ ಗಾಳಿಯು ಬೀಸಲಿದೆ. ಕೆಲವೆಡೆ ಭೂ ಕುಸಿತವಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ ಸೇರಿದಂತೆ ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ರಾಮನಗರ, ತುಮಕೂರು, ವಿಜಯನಗರದ ಹಲವೆಡೆ ಬಿರುಗಾಳಿ ಸಹಿತ (40-50 ಕಿ.ಮೀ) ಗುಡುಗಿನೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಈ ಜಿಲ್ಲೆಗಳಿಗೆ ಎಚ್ಚರಿಕೆ: ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲಿ ಪ್ರತ್ಯೇಕ ಕಡೆಗಳಲ್ಲಿ ಭಾರಿ ಮಳೆಯಾಗುವ ಎಚ್ಚರಿಕೆಯನ್ನು ನೀಡಲಾಗಿದೆ. ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ, ಕೊಡಗು ಜಿಲ್ಲೆಗಳಲ್ಲಿ ಗಾಳಿ ವೇಗವು 40-50 ಕಿ,ಮೀ ವ್ಯಾಪ್ತಿಯಲ್ಲಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಬಾಗಲಕೋಟೆ, ಗದಗ, ಚಾಮರಾಜನಗರ, ಮೈಸೂರು, ಮಂಡ್ಯ, ದಾವಣಗೆರೆಯಲ್ಲೂ ವಿಪರೀತ ಮಳೆಯಾಗಲಿದೆ.

ಹೈವೇವ್ ಅಲರ್ಟ್!: ಜೂನ್ 24ರಂದು ಕರಾವಳಿಯಲ್ಲಿ ಗಂಟೆಗೆ 35 ರಿಂದ 55 ಕಿ.ಮೀ ವೇಗದಲ್ಲಿ ತೀವ್ರ ಗಾಳಿ ಬೀಸಲಿದೆ. ದಕ್ಷಿಣ ಕನ್ನಡದ ಮುಲ್ಕಿಯಿಂದ ಮಂಗಳೂರಿನವರೆಗೆ ಅಲೆಗಳ ಎಚ್ಚರಿಕೆ ನೀಡಲಾಗಿದೆ. 2.8 ರಿಂದ 3.1 ಮೀಟರ್ ವ್ಯಾಪ್ತಿಯಲ್ಲಿ ಎತ್ತರದ ಅಲೆಗಳು ಹೇಳಲಿದೆ. ಇನ್ನೂ ಉಡುಪಿಯ ಬೈಂದೂರಿನಿಂದ ಕಾಪುವರೆಗೆ ಹೈ ವೇವ್ ಅಲರ್ಟ್ ನೀಡಲಾಗಿದೆ. 2.9 ರಿಂದ 3.2 ಮೀಟರ್ ವ್ಯಾಪ್ತಿಯಲ್ಲಿ ಎತ್ತರದ ಅಲೆಗಳ ಮುನ್ಸೂಚನೆ ನೀಡಲಾಗಿದೆ. ಉತ್ತರ ಕನ್ನಡದ ಮಾಜಾಳಿಯಿಂದ ಭಟ್ಕಳದವರೆಗೆ 3.0 ರಿಂದ 3.3 ಮೀಟರ್ ವ್ಯಾಪ್ತಿಯಲ್ಲಿ ಎತ್ತರದ ಅಲೆಗಳು ಅಪ್ಪಳಿಸಲಿದೆ. ಹೀಗಾಗಿ ಪ್ರವಾಸಿಗರು ಹಾಗೂ ಮೀನುಗಾರರು ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾಂಗ್ರೆಸ್‌ಗೆ ಎಚ್ಚರಿಕೆ

ಚನ್ನಪಟ್ಟಣದಲ್ಲಿ ಡಿಕೆಶಿ ಆಟ ನಡೆಯುವುದಿಲ್ಲ

ಮೈಸೂರು: ಚನ್ನಪಟ್ಟಣ ಉಪಚುನಾವಣೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ ಅವರ ಆಟ ನಡೆಯುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆ ಚುನಾವಣೆ ಫಲಿತಾಂಶದಲ್ಲೇ ಕಾಂಗ್ರೆಸ್ ಬಂಡವಾಳ ಬಯಲಾಗಿದ್ದು, ಉಪ ಚುನಾವಣೆಯಲ್ಲೂ ಸಹ ಜನರು ಕಾಂಗ್ರೆಸ್ಸಿಗರನ್ನು ತಿರಸ್ಕರಿಸುತ್ತಾರೆ. ಹೀಗಾಗಿ ಡಿಕೆಶಿ ತಂತ್ರ ಮಾಡುತ್ತಿದ್ದಾರೋ, ಕುತಂತ್ರ ಮಾಡುತ್ತಿದ್ದಾರೋ ಗೊತ್ತಿಲ್ಲ, ಆದರೆ ಇವರ ಆಟ ಏನೂ ನಡೆಯಲ್ಲ ಎಂದರು.

ಕರ್ನಾಟಕದಲ್ಲಿ ಕಾಂಗ್ರೆಸ್‌ನ ಒಬ್ಬರೇ ಎಂಪಿ ಇದ್ದರು, ಈಗ ಒಂಭತ್ತು ಮಂದಿ ಇದ್ದಾರೆ ಎಂಬ ಸಿಎಂ ಹೇಳಿಕೆಗೆ ತಿರುಗೇಟು ನೀಡಿದ ವಿಜಯೇಂದ್ರ, ರಾಜ್ಯದ 146 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ,ಜೆಡಿಎಸ್ ಮೈತ್ರಿಗೆ ಹೆಚ್ಚು ಲೀಡ್ ಬಂದಿದೆ. ಕಾಂಗ್ರೆಸ್ ಪಕ್ಷವನ್ನು ಜನ ತಿರಸ್ಕರಿಸಿದ್ದಾರೆ. ಹೀಗಾಗಿ ಸಿಎಂ ಇದನ್ನೂ ಕೂಡ ನೆನಪಿನಲ್ಲಿ ಇಟ್ಟುಕೊಳ್ಳಬೇಕಿದೆ ಎಂದು ಸೂಚ್ಯವಾಗಿ ತಿಳಿಸಿದರು.

ಸಿದ್ದರಾಮಯ್ಯ ಗ್ಯಾರಂಟಿಗಳ ಬಗ್ಗೆ ಅಪಾರ ವಿಶ್ವಾಸ ಇಟ್ಟುಕೊಂಡಿದ್ದರು, ಆದರೆ ರಾಜ್ಯದ ಜನ ಎಲ್ಲವನ್ನೂ ಧಿಕ್ಕರಿಸಿ ಮೈತ್ರಿಗೆ ಹೆಚ್ಚಿನ ಮತ ನೀಡಿದ್ದಾರೆ. ಕಾಂಗ್ರೆಸ್ ಸರಕಾರದಲ್ಲಿ ವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತದೋ ಕಾದು ನೋಡಬೇಕಿದೆ. ಸರಕಾರದ ಬದಲಾವಣೆ ಬಗ್ಗೆ ನಾನು ಈಗಲೇ ಮಾತನಾಡಲ್ಲ ಎಂದು ಹೇಳಿದರು.

ಚನ್ನಪಟ್ಟಣ ಉಪ ಚುನಾವಣೆ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಮಂಗಳವಾರ ನವದೆಹಲಿಗೆ ತೆರಳಿ ಹೈಕಮಾಂಡ್ ಜತೆ ಚರ್ಚಿಸುತ್ತೇನೆ. ಸೀಟನ್ನು ಜೆಡಿಎಸ್‌ಗೆ ಬಿಟ್ಟು ಕೊಡುವ ಅಥವಾ ತೆಗೆದುಕೊಳ್ಳುವ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಪ್ರಾಥಮಿಕ ಚರ್ಚೆಯೂ ನಡೆದಿಲ್ಲ. ಜೆಡಿಎಸ್ ಮತ್ತು ಬಿಜೆಪಿ ನಾಯಕರು ಸೇರಿ ಚರ್ಚಿಸಿಯೇ ನಿರ್ಧಾರ ಮಾಡುತ್ತೇವೆ. ಕಾಂಗೆಸ್‌ನಿಂದ ಯಾರಾದರೂ ಸ್ಪರ್ಧಿಸಲಿ, ಅದು ಅವರಿಗೆ ಬಿಟ್ಟ ವಿಚಾರ.

-ವಿಜಯೇಂದ್ರ , ಬಿಜೆಪಿ ರಾಜ್ಯಾಧ್ಯಕ್ಷ

ಜನರ ಮೇಲೆ ಸೇಡಿನ ರಾಜಕಾರಣ

ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನ ನೀಡಲಿಲ್ಲವೆಂಬ ಕಾರಣಕ್ಕೆ ನಾಡಿನ ಜನರ ಮೇಲೆ ರಾಜ್ಯ ಸರಕಾರವು ದ್ವೇಷದ ರಾಜಕಾರಣ ಮಾಡುತ್ತಿದೆ. ಸೇಡು ತೀರಿಸಿಕೊಳ್ಳಲು ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಈ ಸರಕಾರ ಏರಿಸಿದೆ. ಗ್ಯಾರಂಟಿಗಳನ್ನು ಕೊಟ್ಟರೂ ಜನ ಅವರ ಕೈ ಹಿಡಿಯಲಿಲ್ಲ. ಈ ಸಿಟ್ಟು ಕಾಂಗ್ರೆಸ್‌ನವರಿಗಿದೆ. ಆದ್ದರಿಂದಲೇ ಜನ ವಿರೋಧಿ ನಿರ್ಧಾರಗಳನ್ನು ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಆಕಾಶ್ ಕೊಲೆ: 8 ಆರೋಪಿಗಳ ಬಂಧನ

ಹುಬ್ಬಳ್ಳಿ: ಇಲ್ಲಿನ ಆಟೋ ಚಾಲಕರ ಸಂಘದ ಅಧ್ಯಕ್ಷ ಶೇಖರಯ್ಯ ಮಠಪತಿ ಎಂಬವರ ಪುತ್ರ ಆಕಾಶ್ ಎಂಬಾತನ ಕೊಲೆ ಪ್ರಕರಣಕ್ಕೆ ಸಂಬಂಧಿಸಿಂತೆ ಎಂಟು ಆರೋಪಿಗಳನ್ನು ಹಳೇ ಹುಬ್ಬಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪೊಲೀಸ್ ಕಮೀಷನರ್ ರೇಣುಕಾ ಸುಕುಮಾರ್ ಪ್ರಕರಣದ ಕುರಿತು ಮಾಹಿತಿ ನೀಡಿದ್ದಾರೆ.

ಶನಿವಾರ ರಾತ್ರಿ ಆಕಾಶ್ ಹಿರೇಮಠ್ (30) ಎಂಬಾತನನ್ನು ಲೋಹಿಯಾ ನಗರದ ಪವನ್ ಸ್ಕೂಲ್ ಹಿಂಭಾಗ ಕೊಲೆ ಮಾಡಲಾಗಿತ್ತು. ಈ ಕೃತ್ಯ ಆತನಿಗೆ ಗೊತ್ತಿರುವವರಿಂದಲೇ ನಡೆದಿದೆ ಎಂದು ತಂದೆ ಶೇಖರಯ್ಯ ಮಠಪತಿ ಅನುಮಾನ ವ್ಯಕ್ತಪಡಿಸಿ, ಆಕಾಶ್ ಮಠಪತಿ ಪತ್ನಿ, ಅತ್ತೆ ಮತ್ತು ಮಾವ ಸೇರಿದಂತೆ 12 ಜನರ ವಿರುದ್ಧ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಆಕಾಶ್ ಪತ್ನಿ ಕಾವ್ಯಾ, ಅತ್ತೆ ಶ್ರೀದೇವಿ, ಮಾವ ಮೋಹನ ನಾಯಕ್, ಭರತ್ ನಾಯಕ್, ಅರ್ಜುನ್ ಮಗಲಿ, ಸಂಜು ಕೊಪ್ಪದ್, ರಾಹುಲ್ ಕಾಂಬಳೆ, ವಿನಾಯಕ ತಾಳಿಕೋಟಿ, ಮನೋಜ್, ಚಮಕ್ ಮೌನೇಶ್, ಮಹೇಶ್ ಮತ್ತು ಕಾರ್ತಿಕ್ ರಜಪೂತ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಕಾವ್ಯಾ, ಶ್ರೀದೇವಿ ಮತ್ತು ಮೋಹನ ನಾಯಕ್ ಅವರ ಕುಮ್ಮಕ್ಕಿನಿಂದಲೇ ಕೊಲೆ ನಡೆದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಪೈಕಿ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಸೂರಜ್ ವಿರುದ್ಧ ಕ್ರಮ ಪಕ್ಷದಲ್ಲಿ ಚರ್ಚಿಸಿ ತೀರ್ಮಾನ

ಮೈಸೂರು: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ವಿರುದ್ಧ ಕ್ರಮ ಜರುಗಿಸುವ ಕುರಿತು ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ತೀರ್ಮಾನ ಮಾಡುತ್ತೇವೆ' ಎಂದು ಜೆಡಿಎಸ್ ಪ್ರಮುಖರ ಸಮಿತಿಯ ಅಧ್ಯಕ್ಷ ಜಿ.ಟಿ. ದೇವೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸೂರಜ್ ಅವರನ್ನು ಬಂಧಿಸಿರುವ ವಿಷಯ ಮಾಧ್ಯಮದಿಂದ ತಿಳಿಯಿತು. ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿಚಾರದಲ್ಲೂ ನಮ್ಮ ಪಕ್ಷದ ಹಸ್ತಕ್ಷೇಪ ಇರಲಿಲ್ಲ. ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ. ನಾವು ತಪ್ಪು ಮಾಡಿದವರ ಪರ ನಿಲ್ಲುವುದಿಲ್ಲ. ನನ್ನ ಮಗನೇ ಇರಲಿ, ನನ್ನ ಸಂಬಂಧಿಗಳೇ ಇರಲಿ, ಯಾರೇ ತಪ್ಪು ಮಾಡಿದರೂ ತಪ್ಪೇ. ಜಾತ್ಯತೀತ ಜನತಾದಳ ಪಕ್ಷವು ತಪ್ಪು ಮಾಡಿದವರ ಪರವಾಗಿ ಎಂದಿಗೂ ನಿಲ್ಲುವುದಿಲ್ಲ' ಎಂದು ಹೇಳಿದರು.

ಸೂರಜ್ ರೇವಣ್ಣ ಬಂಧನದಿಂದ ಪಕ್ಷಕ್ಕೆ ಮುಜುಗರವೇಕೆ' ಎಂದು ಕೇಳಿದ ಅವರು, ರಾಜ್ಯದಲ್ಲಿ ಯಾರೋ ಒಬ್ಬ ತಪ್ಪು ಮಾಡಿದರೆ ಅದಕ್ಕೆ ಆರೂವರೆ ಕೋಟಿ ಜನ ಕಾರಣವೇ? ಅಲ್ಲ ತಾನೇ? ಇದೂ ಹಾಗೆಯೇ' ಎಂದು ಪ್ರತಿಕ್ರಿಯಿಸಿದರು.

ಸೂರಜ್ ಬಂಧನದಲ್ಲಿ ಷಡ್ಯಂತ್ರವಿಲ್ಲ: ಯತೀಂದ್ರ

ಮೈಸೂರು: ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಡಾ.ಸೂರಜ್ ರೇವಣ್ಣ ಬಂಧನ ವಿಷಯದಲ್ಲಿ ಯಾವುದೇ ಷಡ್ಯಂತ್ರವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೈಂಗಿಕ ದೌರ್ಜನ್ಯದ ಬಗ್ಗೆ ಸೂರಜ್ ವಿರುದ್ಧ ಯುವಕನೊಬ್ಬ ದೂರು ಕೊಟ್ಟಿದ್ದಾನೆ. ತಪ್ಪು ಯಾರೇ ಮಾಡಿದ್ದರೂ ತಪ್ಪೇ. ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುತ್ತಿದ್ದಾರೆ. ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ' ಎಂದರು.

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿ ವಿರುದ್ಧ ಪ್ರತಿಭಟಿಸಲು ಬಿಜೆಪಿಯವರಿಗೆ ಯಾವುದೇ ನೈತಿಕ ಹಕ್ಕಿಲ್ಲ. ದೇಶದಲ್ಲಿ ತೈಲ ಬೆಲೆ ಏರಿಕೆಯಾಗಲು ಬಿಜೆಪಿಯೇ ಕಾರಣ. ಚುನಾವಣೆ ಸಂದರ್ಭದಲ್ಲಿ ಕಡಿಮೆ ಮಾಡಿದರು. ಈಗ ಬೆಲೆ ಏರಿಕೆ ಮಾಡಲಾಗಿದೆ' ಎಂದು ಪ್ರತಿಕ್ರಿಯಿಸಿದರು.

ಚನ್ನಪಟ್ಟಣ ಕ್ಷೇತ್ರದ ಗ್ರೌಂಡ್ ರಿಯಾಲಿಟಿ ನನಗೆ ಗೊತ್ತಿಲ್ಲ. ಉಪ ಚುನಾವಣೆಗೆ ಸಂಬಂಧಿಸಿದಂತೆ ನಮ್ಮ ಪಕ್ಷದ ವರಿಷ್ಠರು, ಅಲ್ಲಿನ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಸೇರಿ ಅಭ್ಯರ್ಥಿ ಆಯ್ಕೆ ಮಾಡುತ್ತಾರೆ ಎಂದು ಹೇಳಿದರು.

ಕೊಲೆ ಪ್ರಕರಣ: ತನಿಖೆಗೆ ಆಗ್ರಹ

ಹುಬ್ಬಳ್ಳಿ: ಉತ್ತರ ಕರ್ನಾಟಕ ಆಟೋ ಚಾಲಕರ ಸಂಘದ ಅಧ್ಯಕ್ಷರಾದ ಶೇಖರಯ್ಯ ಮಠಪತಿಯವರ ಮಗ ಆಕಾಶ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ರೀತಿಯಲ್ಲಿ ತನಿಖೆಯಾಗಬೇಕು. ಅಲ್ಲದೇ ಮಠಪತಿಯವರ ಕುಟುಂಬಕ್ಕೆ ಆ ದೇವರು ನೋವನ್ನು ಸಹಿಸುವ ಶಕ್ತಿ ನೀಡಲಿ' ಎಂದು ಶಾಸಕ ಮಹೇಶ್ ಟೆಂಗಿನಕಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೇಖರಯ್ಯ ಮಠಪತಿಯವರ ಮಗನ ಕೊಲೆ ಪ್ರಕರಣದ ಬಗ್ಗೆ ಸ್ಪಷ್ಟತೆ ಇಲ್ಲ. ಈಗಾಗಲೇ ಮಠಪತಿಯವರು ಹೇಳಿರುವ ರೀತಿಯಲ್ಲಿ ಹತ್ಯೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಪೊಲೀಸರ ಜೊತೆಗೆ ಮಾತನಾಡಿದ್ದೇನೆ. ಪ್ರಕರಣದ ಬಗ್ಗೆ ಕುಲಂಕೂಷವಾಗಿ ತನಿಖೆ ನಡೆಸಿ ಸೂಕ್ತ ಕ್ರಮಗಳನ್ನು ಜರುಗಿಸಬೇಕಿದೆ. ಇನ್ನು ಮರಣೋತ್ತರ ಪರೀಕ್ಷೆಯಲ್ಲಿ ಕೇವಲ ಹಣೆಗೆ ಮಾತ್ರವೇ ಹೊಡೆತ ಬಿದ್ದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಯು ಸೂಕ್ತ ತನಿಖೆ ನಡೆಸಿ ಕಾನೂನು ರೀತಿಯಲ್ಲಿ ಕ್ರಮಗಳನ್ನು ಜರುಗಿಸಬೇಕಿದೆ' ಎಂದು ಮಹೇಶ್ ಟೆಂಗಿನಕಾಯಿ ಆಗ್ರಹಿಸಿದರು.

ವಿಶ್ವವಾಣಿ

ಸಂಪಾದಕೀಯ

ಪರೀಕ್ಷಾ ಅಕ್ರಮ ತಡೆಗೆ ಕಠಿಣ ಕಾನೂನು ಸ್ವಾಗತಾರ್ಹ

ನೀಟ್ ಮತ್ತು ನೆಟ್ ಪರೀಕ್ಷೆಯಲ್ಲಾದ ಲೋಪಗಳು ಪರೀಕ್ಷಾ ವ್ಯವಸ್ಥೆಯ ಬಗ್ಗೆಯೇ ಗಂಭೀರ ಪ್ರಶ್ನೆಗಳನ್ನು ಮೂಡಿಸಿದೆ. ಎನ್‌ಟಿಎ ಏಜೆನ್ಸಿಯ ವಿಶ್ವಾಸಾರ್ಹತೆಗೆ ಬಲವಾದ ಪೆಟ್ಟು ಕೊಟ್ಟಿವೆ. ಪರೀಕ್ಷೆಗಳಿಗೆ ಸಿದ್ಧರಾಗಲು ವಿದ್ಯಾರ್ಥಿಗಳು ಬಹಳಷ್ಟು ಸಮಯ, ಶಕ್ತಿ ಮತ್ತು ಹಣವನ್ನು ವ್ಯಯಿಸುತ್ತಾರೆ. ಕೆಲವು ವಿದ್ಯಾರ್ಥಿಗಳು ಯಾವುದೇ ಕೋಚಿಂಗ್ ಪಡೆಯದೆ ತಿಂಗಳುಗಳ ಕಾಲ ತಾವಾಗಿಯೇ ಅಧ್ಯಯನ ನಡೆಸಿರುತ್ತಾರೆ. ಅವರು ಎರಡನೆಯ ಬಾರಿ ಪರೀಕ್ಷೆ ಬರೆಯುವಂತಹ ಪರಿಸ್ಥಿತಿ ಸೃಷ್ಟಿಸುವುದು, ಅವರು ಮಾನಸಿಕವಾಗಿ ಸಂಕಟ ಅನುಭವಿಸುವಂತೆ ಮಾಡುವುದು ಎಷ್ಟರಮಟ್ಟಿಗೆ ಸರಿ? ಪರೀಕ್ಷೆ ನಡೆಸಲು ಅಗತ್ಯವಿರುವ ಅತ್ಯುತ್ತಮ ತಂತ್ರಜ್ಞಾನ ಲಭ್ಯವಿರು ವಾಗ ಎನ್‌ಟಿಎ ಅಥವಾ ಇತರ ಯಾವುದೇ ಸಂಸ್ಥೆಗೆ ಲೋಪರಹಿತವಾದ ಪರೀಕ್ಷೆ ನಡೆಸಲು ಸಾಧ್ಯವಾಗಬೇಕು. ಸರಿಯಾದ ಯೋಜನೆ ಇದ್ದಲ್ಲಿ, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಲ್ಲಿ ಲೋಪಗಳಿಗೆ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆಸಲು ಸಾಧ್ಯವಿದೆ. ಈಗ ಎದುರಾಗಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಿ, ಅವು ಮುಂದೆ ಮತ್ತೆ ಎದುರಾಗದಂತೆ ನೋಡಿಕೊಳ್ಳಬೇಕು. ಈಗಾಗಲೇ ನೆಟ್ ಪರೀಕ್ಷೆಯಲ್ಲಾದ ಲೋಪಗಳ ಕುರಿತು ತನಿಖೆ ಮಾಡಲು ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲಾಗಿದೆ. ಪ್ರಕರಣದ ತನಿಖೆಯೂ ಪ್ರಗತಿಯಲ್ಲಿದ್ದು, ಈಗಾಗಲೇ ಕೆಲವರನ್ನು ಬಂಧಿಸಿ ವಿಚಾರಣೆ ಮಾಡಲಾಗುತ್ತಿದೆ. ಇದರ ಹಿಂದೆ ಬಹುದೊಡ್ಡ ಜಾಲವೇ ಇದ್ದಂತಿದೆ. ಹಾಗಾಗಿ ತಪ್ಪೆಸಗಿದ ಎಲ್ಲರನ್ನೂ ಪತ್ತೆ ಹಚ್ಚಿ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು. ಆ ಮೂಲಕ ಮತ್ತೆ ಯಾರೂ ಇಂತಹ ಪ್ರಯತ್ನಕ್ಕೆ ಕೈ ಹಾಕದಂತೆ ಸಂದೇಶ ರವಾನಿಸಬೇಕು. ಈ ನಡುವೆ ಕೇಂದ್ರ ಸರಕಾರ ಸ್ಪರ್ಧಾತ್ಮಕ ಪರೀಕ್ಷೆಗಳ ಅಕ್ರಮ ತಡೆಗೆ ಜೂ.21 ರಿಂದಲೇ ಪೂರ್ವಾನ್ವಯವಾಗುವಂತೆ ಕಠಿಣ ಕಾನೂನನ್ನು ದೇಶಾದ್ಯಂತ ಜಾರಿ ಮಾಡಿದ್ದು ಸ್ವಾಗತಾರ್ಹ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ವರಿಗೆ ಕನಿಷ್ಠ 5 ವರ್ಷದಿಂದ ಗರಿಷ್ಠ 10 ವರ್ಷಗಳ ಸೆರೆವಾಸ ಮತ್ತು ಗರಿಷ್ಠ 1 ಕೋಟಿ ರು.ವರೆಗೂ ದಂಡ ವಿಧಿಸಲು ನೂತನ ಕಾಯಿದೆಯಲ್ಲಿ ಅವಕಾಶವಿದೆ. ಈ ಕಾಯಿದೆ ಕಟ್ಟುನಿಟ್ಟಾಗಿ ಜಾರಿಯಾಗಲಿ. ಆ ಮೂಲಕ ಪರೀಕ್ಷಾ ಅಕ್ರಮ ಗಳಿಗೆ ಕಡಿವಾಣ ಬೀಳಲಿ.

ಸೊಂಪಾದಕೀಯ

ಕತ್ತೆ ಹಾಲು ಹಿಡಿಬೇಕು..

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಅನ್ನೋ ಗಾದೆ ಮಾತನ್ನ ನಾವು ಕೇಳಿದ್ದೇವೆ. ಆದರೆ ಈ ವಿಷಯ ಕೇಳಿದರೆ ಕತ್ತೆಗೊಂದು ಕಾಲ ಅಂತ ಹೇಳೋ ಅನಿವಾರ್ಯತೆ ಎದುರಾಗುತ್ತದೆ. ಯಾಕಂದ್ರೆ, ಇದು ಕತ್ತೆಗೆ ಇರೋ ಡಿಮ್ಯಾಂಡ್ ವಿಷಯದ್ದು. ಹಾಗೆ ನೋಡಿದರೆ ಕತ್ತೆ ಹಾಲಿಗೆ ಇರೋ ಡಿಮ್ಯಾಂಡ್ ಇದು. ಕತ್ತೆ ಹಾಲಿಗೆ ಈಗ ಪ್ರತಿ ಲೀಟರ್‌ಗೆ 1350 ರುಪಾಯಿ ಆಗಿದೆಯಂತೆ. ಆದರೆ ಈ ಸುದ್ದಿ ಕೇಳಿ ಕತ್ತೆ ಹಾಲು ಯಾರು ಮಾರಾಟ ಮಾಡುತ್ತಾರೆ. ಅದರ ಮಾರಾಟ ಮಳಿಗೆ ಎಲ್ಲಿದೆ? ಕತ್ತೆ ಹಾಲನ್ನು ಹಸುವಿನ ಹಾಲಿನಂತೆ ಅಂಗಡಿಯಲ್ಲಿ ಮಾರಾಟ ಮಾಡ್ತಾರೆಯೇ ಅನ್ನೋ ಪ್ರಶ್ನೆಗಳು ಮೂಡುತ್ತವೆ. ಆದರೆ ಕತ್ತೆ ಹಾಲನ್ನು ದೈನಂದಿನ ಬಳಕೆಗೆ ಬಳಸದೆ ಕೇವಲ ಅದರ ಔಷಧೀಯ ಗುಣಗಳಿಗಾಗಿ ಬಳಸಲಾಗುತ್ತದೆ ಅನ್ನೋದು ವಾಸ್ತವ. ಹಾಗೆ ನೋಡಿದರೆ, ಮೇಕೆ ಮತ್ತು ಒಂಟೆ ಹಾಲಿಗೂ ಈ ರೀತಿಯ ಔಷಧೀಯ ಗುಣಗಳಿದ್ದರೂ ಕತ್ತೆ ಹಾಲು ಅವೆರಡಕ್ಕಿಂತ ಜಾಸ್ತಿ ಎಫೆಕ್ಟಿವ್ ಅಂತೆ. ಹಾಗಾಗಿ ಕೆಲಸಕ್ಕೆ ಬಾರದ ಕತ್ತೆ ಅಂತ ಬಯ್ಯೋರಿಗೆ ಕತ್ತೆ ಹಾಲಿಗೂ ಬೆಲೆ ಇದೆ ಅಂತ ಹೇಳಬೇಕಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕತ್ತೆಯ ಹಾಲಿಗೆ ಬೇಡಿಕೆ ಇದೆಯಂತೆ. ದೆಹಲಿಯ ಮಹಿಳೆಯೊಬ್ಬರು ಕತ್ತೆ ಹಾಲಿನಿಂದ ಲಿಪ್ ಬಾಮ್, ಸೋಪ್, ಸೌಂದರ್ಯ ವರ್ಧಕಗಳನ್ನು ತಯಾರಿಸುತ್ತಾರಂತೆ. ಹಾಗಾಗಿ ಸೆದರವಾದ ಹುಡುಗಿಯೊಬ್ಬಳಿಗೆ ಮುತ್ತು ಕೊಡುವ ಮುಂಚೆ ಆಕೆ ತುಟಿಗೆ ಕತ್ತೆ ಹಾಲಿನ ಲಿಪ್ ಬಾಮ್ ಹಚ್ಚಿಕೊಂಡಿರುವ ಎಲ್ಲ ಸಾಧ್ಯತೆ ಇರುತ್ತದೆ ಅನ್ನೋದನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಒಂದು ಹುಡುಗಿಯನ್ನ, ನೋಡೋಕೆ ಇಷ್ಟ್ ಚೆನ್ನಾಗಿದ್ದೀರಲ್ಲ ನೀವು ಯಾವ ಸೋಪಲ್ಲಿ ಸ್ನಾನ ಮಾಡೋದು ಅಂತ ಕೇಳಿದ್ರೆ, ಕತ್ತೆ ಹಾಲಿನ ಸೋಪ್ ಅನ್ನೋ ಉತ್ತರವೂ ಬರಬಹುದು. ಅಷ್ಟೇ ಅಲ್ಲದೆ ಕತ್ತೆ ಹಾಲಿಗೆ ಕೆಲವೊಂದು ರೋಗಗಳನ್ನು ಗುಣಪಡಿಸೋ ಶಕ್ತಿ ಇದೆಯಂತೆ. ಆದರೆ ಕೆಲಸಕ್ಕೆ ಬಾರದ ಕತ್ತೆಗಳಿಗೆ ಬುದ್ಧಿ ಕಲಿಸೋ ಶಕ್ತಿ ಕತ್ತೆ ಹಾಲಿನಲ್ಲಿ ಇದೆಯೇ ಅನ್ನೋದು ಇನ್ನಷ್ಟೇ ಗೊತ್ತಾಗಬೇಕಿದೆ. ಒಟ್ಟಿನಲ್ಲಿ ಕಾರ್ಯವಾಸಿ ಕತ್ತೆ ಕಾಲು ಹಿಡಿ ಅನ್ನೋ ಮಾತಿನಂತೆ ಈಗ ಕಾರ್ಯ ವಾಸಿ ಅಲ್ಲ, ರೋಗ ವಾಸಿ ಆಗಲು ಕತ್ತೆ ಬೇಕಿದೆ. ಆದರೆ ಹಿಡಿಯಬೇಕಾಗಿರೋದು ಕತ್ತೆಯ ಕಾಲನ್ನಲ್ಲ, ಕತ್ತೆ ಹಾಲನ್ನ.

ಸಂಪಾದಕರ ಸದ್ಯಶೋಧನೆ

ಟೈಮ್ ಝೋನ್ ಎಂಬ ಕಿರಿಕಿರಿ

ಅಮೆರಿಕದಲ್ಲಿರುವಾಗ ನೀವು ಯಾವ ಟೈಮ್ ಝೋನ್(ಸಮಯದ ಅಂತರದ ವಲಯ)ದಲ್ಲಿದ್ದೀರಿ ಎಂಬುದು ಬಹಳ ಮುಖ್ಯ. ನ್ಯೂಯಾರ್ಕಿನಲ್ಲಿರುವ ನೀವು ಬೆಳಗ್ಗೆ ಏಳು ಗಂಟೆಗೆ ಎದ್ದು, ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ಸ್ನೇಹಿತನಿಗೆ ಫೋನ್ ಮಾಡಿದರೆ, ಆತ ಒಂದೋ ನಿಮ್ಮ ಕರೆಯನ್ನು ಸ್ವೀಕರಿಸಲಿಕ್ಕಿಲ್ಲ. ಒಂದು ವೇಳೆ ಸ್ವೀಕರಿಸಿದರೆ, ನಿಮಗೆ ಶಾಪ ಹಾಕದೇ ಹೋಗುವುದಿಲ್ಲ. ಕಾರಣ ಆಗ ಆತನಿಗೆ ಬೆಳಗಿನ ನಾಲ್ಕು ಗಂಟೆ. ಅಂದರೆ ಅಮೆರಿಕದ ಪೂರ್ವ ತುದಿಯಲ್ಲಿರುವ ನ್ಯೂಯಾರ್ಕಿನಿಂದ ಪಶ್ಚಿಮ ತುದಿಯಲ್ಲಿರುವ ಸ್ಯಾನ್ ಫ್ರಾನ್ಸಿಸ್ಕೊಗೆ ಮೂರು ಗಂಟೆಗಳ ಸಮಯದ ಅಂತರ. ನ್ಯೂಯಾರ್ಕಿನಲ್ಲಿ ಬೆಳಗ್ಗೆ ಏಳು ಗಂಟೆಗೆ ಉಪಾಹಾರ ಮುಗಿಸಿ, ಆರೂಕಾಲು ಗಂಟೆ ವಿಮಾನ ಪ್ರಯಾಣ ಮಾಡಿ, ಸ್ಯಾನ್ ಫ್ರಾನ್ಸಿಸ್ಕೊಕ್ಕೆ ಬಂದರೆ, ಅಲ್ಲೂ ಆಗ ಉಪಾಹಾರದ ಸಮಯವೇ. ಒಂದು ವೇಳೆ ನೀವು ಬೆಳಗ್ಗೆ ಏಳು ಗಂಟೆಗೆ, ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಉಪಾಹಾರ ಮುಗಿಸಿ, ಆರೂಕಾಲು ಗಂಟೆ ವಿಮಾನ ಪ್ರಯಾಣ ಮಾಡಿ, ನ್ಯೂಯಾರ್ಕ್ ತಲುಪುವ ಹೊತ್ತಿಗೆ ಸಾಯಂಕಾಲ (ನಾಲ್ಕೂವರೆ) ಕಾಫಿ ಸಮಯ. ಹೆಚ್ಚು ಕಮ್ಮಿ ಇಡೀ ದಿನ ಹೋದಂತೆ. ಆರೂಕಾಲು ಗಂಟೆ ವಿಮಾನ ಪ್ರಯಾಣ ಮಾಡಿದ್ದರೂ, ಸಮಯದ ಅಂತರದಿಂದ ಆ ದಿನವೆಲ್ಲ ಕಳೆದುಹೋದ ಹಾಗೆ. ನೀವು ಸ್ಯಾನ್ ಫ್ರಾನ್ಸಿಸ್ಕೊದಿಂದ ನ್ಯೂಯಾರ್ಕಿಗೆ ಬಂದು, ಮರುದಿನ ವಾಪಸ್ ಸ್ಯಾನ್ ಫ್ರಾನ್ಸಿಸ್ಕೊಗೆ ಹೋದರೆ, ಅಂದರೆ ಅಮೆರಿಕದ ಒಂದು ತುದಿಯಿಂದ ಮತ್ತೊಂದು ತುದಿಗೆ, ಬಂದು ಹೋದರೆ, ತಲೆಯೆಲ್ಲ ಅಯೋಮಯ. ಅಂದ ಹಾಗೆ ಅಮೆರಿಕದಲ್ಲಿ ಐದು ಟೈಮ್ ಝೋನ್ ಗಳಿವೆ. ಅಂದರೆ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗುವುದರೊಳಗೆ, ಐದು ಬೇರೆ ಬೇರೆ ಟೈಮ್ ಝೋನ್‌ಗಳಲ್ಲಿ ಸಂಚರಿಸಬೇಕು. ಒಂದರಿಂದ ಮತ್ತೊಂದಕ್ಕೆ ಮೂರು, ಎರಡು ಗಂಟೆಯ ಸಮಯದ ಅಂತರ. ಇದು ಪ್ರಯಾಣಿಕರಿಗೊಂದೇ ಅಲ್ಲ, ಎಲ್ಲರಿಗೂ ಕಿರಿಕಿರಿಯೇ. ಸ್ಯಾನ್ ಫ್ರಾನ್ಸಿಸ್ಕೊ ಅಥವಾ ಲಾಸ್ ಏಂಜಲೀಸ್‌ನಲ್ಲಿರುವವರು ಮಧ್ಯಾಹ್ನ ಊಟ ಮುಗಿಸಿ ಎರಡು ಗಂಟೆಗೆ ಕಂಪ್ಯೂಟರ್ ಮುಂದೆ ಕುಳಿತು, ವಾಷಿಂಗ್ಟನ್ ಡಿಸಿಯಲ್ಲಿರುವ ತಮ್ಮದೇ ಸಂಸ್ಥೆಯ ಅಲ್ಲಿನ ಸಹೋದ್ಯೋಗಿಗೆ ಇಮೇಲ್ ಮಾಡಿದರೆ, ಅವರು ಅಂದಿನ ಕೆಲಸ ಮುಗಿಸಿ, ಮನೆಗೆ ಹೊರಟಿರುತ್ತಾರೆ. ಈ ಎಲ್ಲ ಸಂಗತಿಗಳನ್ನು ಗಮನಿಸಿಯೇ ಅಮೆರಿಕದಲ್ಲಿರುವವರು ಒಬ್ಬರಿಗೆ ಫೋನ್ ಮಾಡಬೇಕು, ಪ್ರಯಾಣಿಸಬೇಕು, ಸಂವಹನ ಮಾಡಬೇಕು. ಅಂದರೆ ಒಂದೇ ದೇಶದ, ಆದರೆ ಬೇರೆ ಊರಿನಲ್ಲಿರುವ ವ್ಯಕ್ತಿಗಳ ಜತೆ ವ್ಯವಹರಿಸುವಾಗ, ಸಮಯದ ಅಂತರವನ್ನು ಪರಿಗಣಿಸುವುದು ಮೊದಲ ಕೆಲಸ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಎಲ್ಲ ಕೆಲಸ ಮಾಡಬೇಕು. ಕೆನಡದಲ್ಲಿ ಇನ್ನೂ ಒಂದು ಟೈಮ್ ಝೋನ್ ಹೆಚ್ಚು. ಪಶ್ಚಿಮದಿಂದ ಪೂರ್ವಕ್ಕೆ, ಅಂದರೆ ಒಂದು ತುದಿಯಿಂದ, ಇನ್ನೊಂದು ತುದಿಗೆ ಆರು ಸಮಯ ವಲಯಗಳು. ಇದರಿಂದ ಆ ದೇಶ ಎಷ್ಟು ಅಗಲವಾಗಿರಬಹುದು ಅಥವಾ ವಿಸ್ತಾರವಾಗಿರಬಹುದು ಎಂಬುದನ್ನು ಊಹಿಸಬಹುದು. ಜಗತ್ತಿನಲ್ಲಿ ಅತಿ ಹೆಚ್ಚು ಟೈಮ್ ಝೋನ್‌ಗಳಿರುವ ದೇಶವೆಂದರೆ ರಷ್ಯಾ. ಅಲ್ಲಿ ಹನ್ನೊಂದು ಟೈಮ್ ಝೋನ್‌ಗಳಿವೆ. ರಷ್ಯಾದ ಒಂದು ಟೈಮ್ ಝೋನ್, ಭಾರತದ ಒಂದು ಟೈಮ್ ಝೋನ್‌ಗೆ ಸಮನಾಗಿದೆ. ಅಂದರೆ ಭಾರತ ಮತ್ತು ರಷ್ಯಾದಲ್ಲಿ ಏಕಕಾಲಕ್ಕೆ ಒಂದು ವಲಯದಲ್ಲಿ ಒಂದೇ ಸಮಯ ಇದೆ. ರಷ್ಯಾದ ಒಂದು ನಗರದಲ್ಲಿ ಭಾನುವಾರವಿದ್ದರೆ ಮತ್ತೊಂದು ನಗರದಲ್ಲಿ ಶನಿವಾರವೇ ಇರುತ್ತದೆ. ಇನ್ನೊಂದು ನಗರದಲ್ಲಿ ಆಗಲೇ ಸೋಮವಾರವಾಗಿರುತ್ತದೆ. ನಿನ್ನೆ, ಇಂದು ಮತ್ತು ನಾಳೆಯನ್ನು ಒಂದೇ ದೇಶದಲ್ಲಿ ನೋಡಲು ಸಾಧ್ಯವಾಗುವುದು ಆ ದೇಶದಲ್ಲೊಂದೇ. ಅಂದ ಹಾಗೆ ಭಾರತದಲ್ಲಿರುವುದು ಒಂದೇ ಟೈಮ್ ಜೋನ್. ವಿಸ್ತಾರದಲ್ಲಿ ಅಮೆರಿಕದಷ್ಟೇ ಚೀನಾವೂ ವಿಶಾಲ ದೇಶ. ಆದರೆ ಚೀನಾ ಮಾತ್ರ ರಾಷ್ಟ್ರೀಯ ಏಕತೆ ದೃಷ್ಟಿಯಿಂದ ಒಂದೇ ಟೈಮ್ ಜೋನ್ (ಬೀಜಿಂಗ್ ಟೈಮ್) ನನ್ನು ಇಟ್ಟುಕೊಂಡಿದೆ.

ಸಂತೋಷದ ಪ್ರಭಾವಳಿ ಹೆಚ್ಚುತ್ತಿದೆ



ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ರಾಜ್ಯ ಬಿಜೆಪಿಯ ನಾಯಕರೊಬ್ಬರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಸಂಪರ್ಕಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಜತೆ ಮಾತನಾಡಿದ ಸಂತೋಷ್ ಅವರು, ಆರು ತಿಂಗಳ ಕಾಲ ಸಹನೆಯಿಂದಿರಿ. ಎಲ್ಲವೂ ಸರಿ ಹೋಗುತ್ತದೆ ಎಂದರಂತೆ. ಅವರ ಈ ಮಾತು ಕರ್ನಾಟಕದ ಬಿಜೆಪಿ ಪಾಳಯದಲ್ಲಿ ಕುತೂಹಲ ಮೂಡಿಸಿದೆಯಷ್ಟೇ ಅಲ್ಲ, ಮುಂದಿನ ಆರು ತಿಂಗಳಲ್ಲಿ ನಡೆಯಬಹುದಾದ ಬೆಳವಣಿಗೆಗಳ ಬಗ್ಗೆ ಚರ್ಚೆ ಶುರುವಾಗುವಂತೆ ಮಾಡಿದೆ. ಅಂದ ಹಾಗೆ ವಿಧಾನಸಭಾ ಚುನಾವಣೆಯ ನಂತರ ಮಂಕಾಗುತ್ತಾ ಹೋಗಿದ್ದ ಬಿ.ಎಲ್.ಸಂತೋಷ್ ಸುತ್ತಲಿನ ಪ್ರಭಾವಳಿ ಲೋಕಸಭಾ ಚುನಾವಣೆಯ ನಂತರ ಹೊಳಪು ಪಡೆಯುತ್ತಿರುವುದು ನಿಜ. ಇತ್ತೀಚೆಗೆ ಕೇಂದ್ರದ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂತಲ್ಲ? ಈ ಸಂದರ್ಭದಲ್ಲಿ ಕರ್ನಾಟಕದಿಂದ ಸೋಮಣ್ಣ ಅವರ ಹೆಸರು ಸಂಪುಟಕ್ಕೆ ಸೇರುವಂತೆ ಮಾಡಿದವರು ಸಂತೋಷ್.

ಅಂದ ಹಾಗೆ ಈ ಹಿಂದೆ ಸೋಮಣ್ಣ ಅವರ ವಿಷಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ದೊಡ್ಡ ಮಟ್ಟದ ವಿಶ್ವಾಸ ಬೆಳೆಯಲು ಕಾರಣರಾದವರೇ ಅವರು. ಕರ್ನಾಟಕದ ಲಿಂಗಾಯತರು ಸಾಲಿಡ್ಡಾಗಿ ಯಡಿಯೂರಪ್ಪ ಅವರ ಜತೆಗಿದ್ದಾರೆ ಎಂಬುದು ಸುಳ್ಳು. ಅವಕಾಶ ಕೊಟ್ಟರೆ ಲಿಂಗಾಯತ ಶಕ್ತಿಯನ್ನು ಸೆಳೆಯಲು ಸೋಮಣ್ಣ ಸಮರ್ಥರು ಅಂತ ಸಂತೋಷ್ ಕೊಟ್ಟ ಭರವಸೆ ಅಮಿತ್ ಶಾ ಅವರಿಗೆ ಅಪ್ಯಾಯಮಾನವಾಗಿ ಕೇಳಿಸಿತ್ತು. ಹೀಗಾಗಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕಕ್ಕೆ ಬಂದ ಅಮಿತ್ ಶಾ ಅವರು ಸ್ವತಃ ಯಡಿಯೂರಪ್ಪ ಉಪಸ್ಥಿತರಿದ್ದ ಪ್ರಚಾರ ಸಭೆಯಲ್ಲಿ ಮಾತನಾಡುತ್ತಾ, ಈ ಸಲ ಸೋಮಣ್ಣ ಅವರು ಗೆದ್ದು ಪಕ್ಷ ಅಧಿಕಾರಕ್ಕೆ ಬಂದರೆ ಸೋಮಣ್ಣ ತುಂಬ ಎತ್ತರದ ಸ್ಥಾನಕ್ಕೆ ಹೋಗುತ್ತಾರೆ ಎಂದಿದ್ದರು.

ಅವತ್ತು ಅವರಾಡಿದ ಮಾತು ಯಡಿಯೂರಪ್ಪ ಕ್ಯಾಂಪಿಗೆ ಕಹಿಯಾಗಿ ಕೇಳಿಸಿತ್ತಲ್ಲದೆ, ಬಿಜೆಪಿ ಅಧಿಕಾರಕ್ಕೆ ಬಂದರೆ ಸೋಮಣ್ಣ ಮುಖ್ಯಮಂತ್ರಿ ಹುದ್ದೆಯ ರೇಸಿನಲ್ಲಿರುತ್ತಾರೆ ಎಂಬ ಮೆಸೇಜು ತಲುಪುವಂತೆ ಮಾಡಿತ್ತು. ಪರಿಣಾಮ? ಯಡಿಯೂರಪ್ಪ ಕ್ಯಾಂಪು ಸೋಮಣ್ಣ ಅವರ ವಿರುದ್ಧ ಮುಗಿಬಿದ್ದು ಚಾಮರಾಜನಗರ ಮತ್ತು ವರುಣಾ ಕ್ಷೇತ್ರಗಳಲ್ಲಿ ಸೋಲುವಂತೆ ಮಾಡಿತ್ತು. ವಾಸ್ತವವಾಗಿ ಸೋಮಣ್ಣ ಅವರ ಸೋಲು ಪರೋಕ್ಷವಾಗಿ ಸಂತೋಷ್ ಅವರ ಸೋಲೇ ಆಗಿತ್ತು. ಹೀಗಾಗಿ ಈ ಅವಮಾನಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ ಸಂತೋಷ್, ಲೋಕಸಭಾ ಚುನಾವಣೆಯ ಫಲಿತಾಂಶ ಬರುತ್ತಿದ್ದಂತೆಯೇ ಆ್ಯಕ್ಟೀವ್ ಆದರು. ಅಂದ ಹಾಗೆ ಈ ಸಲ ಮೋದಿ ಸಂಪುಟಕ್ಕೆ ಲಿಂಗಾಯತರ ಕೋಟಾದಿಂದ ಯಾರನ್ನು ಪರಿಗಣಿಸಬೇಕು ಎಂಬ ವಿಷಯ ಬಂದಾಗ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಮತ್ತು ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ ಅವರ ಹೆಸರುಗಳು ರೇಸಿನಲ್ಲಿದ್ದವು.

ಆದರೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗಲಿಲ್ಲ ಅಂತ ತಿರುಗಿಬಿದ್ದು ಕಾಂಗ್ರೆಸ್ ಸೇರಿದ್ದ, ಮತ್ತದೇ ಕಾಲಕ್ಕೆ ತಮ್ಮನ್ನು ಚುಚ್ಚಿದ್ದ ಜಗದೀಶ್ ಶೆಟ್ಟರ್ ಮಂತ್ರಿಯಾಗುವುದನ್ನು ಸಂತೋಷ್ ಸಹಿಸುವುದು ಹೇಗೆ? ಇದೇ ರೀತಿ ಯಡಿಯೂರಪ್ಪ ಮತ್ತು ಪ್ರಹ್ಲಾದ್ ಜೋಷಿ ಕ್ಯಾಂಪಿನ ನಡುವೆ ಜೀಕಾಡುವ ಬಸವರಾಜ ಬೊಮ್ಮಾಯಿ ವಿಷಯದಲ್ಲೂ ಸಂತೋಷ್ ಅವರಿಗೆ ಸಮಾಧಾನವಿಲ್ಲ. ಉಳಿದಂತೆ ರಾಘವೇಂದ್ರ ಅವರ ಹೆಸರನ್ನು ಸಂತೋಷ್ ಒಪ್ಪುವ ಮಾತು ದೂರವೇ ಉಳಿಯಿತು. ಹಾಗಂತಲೇ ಅಮಿತ್ ಶಾ ಅವರ ಜತೆ ಚರ್ಚಿಸುವಾಗ ಬೊಮ್ಮಾಯಿ ಕಾಲದಲ್ಲಿ ನಾವು ರಾಜ್ಯ ಕಳೆದುಕೊಂಡೆವು. ಇನ್ನು ಪಕ್ಷ ಬದಲಿಸುವುದನ್ನು ಹವ್ಯಾಸ ಮಾಡಿಕೊಂಡಿರುವ ಶೆಟ್ಟರ್ ಅವರನ್ನು ನಂಬುವುದು ಹೇಗೆ? ಅಂತ ಸಂತೋಷ್ ಹೇಳಿದರಂತೆ.

ಉಳಿದಂತೆ ರಾಘವೇಂದ್ರ ಅವರಿಗೆ ಮಂತ್ರಿಗಿರಿ ಕೊಡುವ ವಿಷಯದಲ್ಲಿ ಮೋದಿ-ಅಮಿತ್ ಶಾ ಜೋಡಿಗೇ ಆಸಕ್ತಿ ಇಲ್ಲದ್ದರಿಂದ ಸಂತೋಷ್ ಅವರು 'ಸಂಪುಟಕ್ಕೆ ಸೋಮಣ್ಣ ಸೇರಿದರೆ ಬೆಸ್ಟು. ಏಕೆಂದರೆ ಒಂದು ಕಡೆಯಿಂದ ಒಕ್ಕಲಿಗ ಮತ ಬ್ಯಾಂಕನ್ನು ಜೆಡಿಎಸ್‌ನ ಕುಮಾರಸ್ವಾಮಿ ಕ್ರೋಢೀಕರಿಸುತ್ತಾರೆ. ಮತ್ತೊಂದು ಕಡೆಯಿಂದ ಸೋಮಣ್ಣ ಅವರು ಗಣನೀಯ ಪ್ರಮಾಣದ ಲಿಂಗಾಯತ ಮತಗಳನ್ನು ಕ್ರೋಢೀಕರಿಸುತ್ತಾರೆ' ಅಂತ ಹೇಳಿದಾಗ ಯಸ್ ಯಸ್ ಎಂದಿದ್ದಾರೆ ಅಮಿತ್ ಶಾ. ಆದರೆ ಇದಕ್ಕೊಂದು ಕಾರಣ ಕೊಡಬೇಕಲ್ಲ? ಹಾಗಂತಲೇ ಮುಖ್ಯಮಂತ್ರಿಗಳಾದವರಿಗೆ ರಾಜ್ಯ ದರ್ಜೆ ಸ್ಥಾನಮಾನ ಕೊಡುವುದು ಗೌರವವಲ್ಲ, ಹೀಗಾಗಿ ಮುಂದೆ ನೋಡೋಣ ಅಂದವರು ಶೆಟ್ಟರ್, ಬೊಮ್ಮಾಯಿ ಹೆಸರನ್ನು ಬ್ಯಾಕ್ ಡೋರಿಗೆ ತಳ್ಳಿದ್ದಾರೆ.

ಬಿಜೆಪಿಯಲ್ಲಿ ಘಟಿಸಲಿದೆ ಕ್ರಾಂತಿ?

ಈ ಮಧ್ಯೆ ಆರು ತಿಂಗಳು ಸಹನೆಯಿಂದಿರಿ ಅಂತ ಸಂತೋಷ್ ಹೇಳಿದ ಮಾತು ರಾಜ್ಯ ಬಿಜೆಪಿಯನ್ನು ವಶಪಡಿಸಿಕೊಳ್ಳುವ ಮುನ್ಸೂಚನೆ ಎಂಬುದು ಯಡಿಯೂರಪ್ಪ ವಿರೋಧಿಗಳ ಮಾತು. ಅವರ ಪ್ರಕಾರ, ವಿಧಾನಸಭಾ ಚುನಾವಣೆಯ ನಂತರ ಯಡಿಯೂರಪ್ಪ ಕ್ಯಾಂಪಿನ ಹಿಡಿತಕ್ಕೆ ಹೋದ ರಾಜ್ಯ ಬಿಜೆಪಿ, ಇನ್ನು ಆರು ತಿಂಗಳಲ್ಲಿ ಸಂತೋಷ್ ಹಿಡಿತಕ್ಕೆ ಬರಲಿದೆ. ಅರ್ಥಾತ್, ಈಗ ರಾಜ್ಯ ಬಿಜೆಪಿಯ ಆಯಕಟ್ಟಿನಲ್ಲಿರುವ ಹಲವರು ಸೈಡ್ ಲೈನಿಗೆ ಸರಿದು ಸಿ.ಟಿ.ರವಿ, ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಲವರು ಪಕ್ಷದ ಆಯಕಟ್ಟಿನ ಜಾಗಗಳನ್ನು ಆಕ್ರಮಿಸಿಕೊಳ್ಳಲಿದ್ದಾರೆ.

ಅಂದ ಹಾಗೆ ರಾಜ್ಯ ಬಿಜೆಪಿಯ ಮುಂಚೂಣಿಯಲ್ಲಿರುವ ಟೀಮಿನಿಂದ ಸಿದ್ದರಾಮಯ್ಯ ನೇತೃತ್ವದ ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಯುತ್ತಿಲ್ಲ. ಈಗೇನಿದ್ದರೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಂತಹ ಹೋಲ್‌ಸೇಲ್ ವಿಷಯಗಳನ್ನು ಹಿಡಿದುಕೊಂಡು ಬೀದಿಗಿಳಿಯುವ ಕೆಲಸವಾಗುತ್ತಿದೆ. ಆದರೆ ವಾಸ್ತವದಲ್ಲಿ ಸಿಎಂ, ಡಿಸಿಎಂ ಮತ್ತು ಮಂತ್ರಿ ಪಡೆಯ ವಿರುದ್ಧದ ಆರೋಪಗಳನ್ನು ಹಿಡಿದು ಹೋರಾಟ ಸಂಘಟಿಸಬೇಕು. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕು ಸಾವಿರ ಕೋಟಿಯ ಟೆಂಡರ್ ಹಗರಣ ನಡೆದ ಆರೋಪವಿದೆ. ಬಿಬಿಎಂಪಿಯ ನೂರೈವತ್ತು ಆಸ್ತಿಗಳನ್ನು ಅಡವಿಟ್ಟು ಮೂರು ಸಾವಿರ ಕೋಟಿ ರು. ಸಾಲ ತರಲು ಸರಕಾರ ಹೊರಟಿದೆ. ಇದೇ ರೀತಿ ಬಿಬಿಎಂಪಿಯನ್ನು ಐದು ಭಾಗಗಳಾಗಿ ವಿಭಜಿಸುವ ಹುನ್ನಾರ ನಡೆಯುತ್ತಿದೆ. ವಾಸ್ತವವಾಗಿ ರಾಜ್ಯ ಬಿಜೆಪಿ ಇಂತಹ ವಿಷಯಗಳನ್ನು ಮುಂದಿಟ್ಟುಕೊಂಡು ಹೋರಾಡಬೇಕು. ಆಗ ಸಿಎಂ, ಡಿಸಿಎಂ ಕನಲುತ್ತಾರೆ. ಆದರೆ ಸಿಎಂ, ಡಿಸಿಎಂ ಕನಲುವಂತಹ ಯಾವುದೇ ವಿಷಯಗಳನ್ನು ಹಿಡಿದು ಹೋರಾಡಲು ಬಿಜೆಪಿಯ ಫ್ರಂಟ್ ಲೈನಿನಲ್ಲಿರುವ ನಾಯಕರು ರೆಡಿ ಇಲ್ಲ. ಹೀಗಾಗಿ ಇಂತಹ ವಿಷಯಗಳಲ್ಲಿ ವರಿಷ್ಠರಿಗೆ ದೂರು ರವಾನೆ ಯಾಗುತ್ತಲೇ ಇದೆ. ಮತ್ತು ಕೆಲವೇ ಕಾಲದಲ್ಲಿ ಪಕ್ಷಕ್ಕೆ ಮೇಜರ್ ಸರ್ಜರಿ ಆಗಲಿದೆ ಎಂಬುದು ಈ ಬಣದ ಮಾತು.

ಚನ್ನಪಟ್ಟಣದಲ್ಲಿ ಡಿಕೆಶಿ ಸ್ಪರ್ಧಿಸುತ್ತಾರಾ?

ಈ ಮಧ್ಯೆ ಎಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಣ್ಣಿಟ್ಟಿದ್ದಾರೆ. ಪಕ್ಷ ಮತ್ತು ಜನ ಬಯಸಿದರೆ ಚನ್ನಪಟ್ಟಣದ ಉಪ ಚುನಾವಣೆಯಲ್ಲಿ ಸ್ಪರ್ಧಿಸದೆ ವಿಧಿಯಿಲ್ಲ ಅಂತ ಡಿಕೆಶಿ ಕೂಡಾ ಹೇಳಿದ್ದಾರೆ. ಆದರೆ ವಾಸ್ತವದಲ್ಲಿ ಅವರು ಸ್ಪರ್ಧೆಗೆ ತಯಾರಿದ್ದಾರಾ? ಅಂತ ನೋಡಲು ಹೋದರೆ ಫಿಫ್ಟಿ ಫಿಫ್ಟಿ ಚಾನ್ಸಿನ ಲಕ್ಷಣ ಕಾಣುತ್ತದೆ. ಅರ್ಥಾತ್, ಉಪಚುನಾವಣೆಯ ಕಣದಲ್ಲಿ ದೇವೇಗೌಡರ ಕುಟುಂಬದವರು ಸ್ಪರ್ಧಿಸಿದರೆ ಮಾತ್ರ ಡಿಕೆಶಿ ಕಣಕ್ಕಿಳಿಯಲಿದ್ದಾರೆ. ಕಾರಣ? ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ದೇವೇಗೌಡರ ಅಳಿಯ ಡಾ.ಮಂಜುನಾಥ್ ಸ್ಪರ್ಧಿಸಿ ತಮ್ಮ ಸಹೋದರ ಡಿ.ಕೆ.ಸುರೇಶ್ ಅವರನ್ನು ಸೋಲಿಸಿದ ಬೆಳವಣಿಗೆ ಡಿಕೆಶಿ ಕೆರಳುವಂತೆ ಮಾಡಿದೆ.

ಹೀಗಾಗಿ ಚನ್ನಪಟ್ಟಣದಲ್ಲಿ ದೇವೇಗೌಡರ ಕುಟುಂಬದ ಯಾರೇ ಸ್ಪರ್ಧಿಸಿದರೂ ಕಣಕ್ಕಿಳಿಯುವುದು ಡಿಕೆಶಿ ಥಿಂಕಿಂಗು. ಈ ಮಧ್ಯೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುಮಾರಸ್ವಾಮಿ ಅವರಿಗೆ, ಚನ್ನಪಟ್ಟಣದಿಂದ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸುವ ಬಯಕೆ ಇಲ್ಲ. ಹಾಗಂತ ಬಿಜೆಪಿಯ ಸಿ.ಪಿ.ಯೋಗೇಶ್ವರ್ ಅವರಿಗೆ ಕ್ಷೇತ್ರ ಬಿಟ್ಟು ಕೊಡುವ ಇರಾದೆಯೂ ಇಲ್ಲ. ಕಾರಣ? ಇದು ಹೇಳಿ ಕೇಳಿ ಜೆಡಿಎಸ್‌ನ ಭದ್ರಕೋಟೆ ಎನಿಸಿಕೊಂಡಿರುವ ಕ್ಷೇತ್ರ. ಹೀಗಾಗಿ ಯೋಗೇಶ್ವರ್ ಅವರಿಗೆ ಈ ಕ್ಷೇತ್ರ ಬಿಟ್ಟುಕೊಡುವ ವಿಷಯದಲ್ಲಿ ಜೆಡಿಎಸ್‌ನ ಸ್ಥಳೀಯ ಕಾರ್ಯಕರ್ತರಿಗೂ ಒಲವಿಲ್ಲ.

ಈ ಮಧ್ಯೆ ಚನ್ನಪಟ್ಟಣ ಕ್ಷೇತ್ರದ ಬಿಜೆಪಿ ಟಿಕೆಟ್ಟನ್ನು ಯೋಗೇಶ್ವರ್ ಅವರಿಗೆ ಕೊಡಲು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕೂಡಾ ರೆಡಿ ಇಲ್ಲ. ಹೀಗಾಗಿ ಉಪ ಚುನಾವಣೆಯ ಕಣಕ್ಕೆ ಪಕ್ಷದ ಕಾರ್ಯಕರ್ತರೊಬ್ಬರನ್ನು ಇಳಿಸಲು ಕುಮಾರಸ್ವಾಮಿ ರೆಡಿ ಆಗಬೇಕು. ಆದರೆ ಆ ವಿಷಯದಲ್ಲೂ ಅವರಿಗೆ ಹೇಳಿಕೊಳ್ಳುವಂತಹ ಆಸಕ್ತಿ ಇಲ್ಲ. ಯಾಕೆಂದರೆ ಕಾರ್ಯಕರ್ತರೊಬ್ಬರನ್ನು ಕಣಕ್ಕಿಳಿಸಿ ತಾವು ಗೆಲ್ಲಿಸುವುದು, ಅನಂತರ ಅವರು ಆಪರೇಷನ್ ಹಸ್ತಕ್ಕೆ ಒಳಗಾಗಿ ಕಾಂಗ್ರೆಸ್ ಸೇರುವ ಕೆಲಸವಾದರೆ ಏನು ಗತಿ ಎಂಬುದು ಅವರ ಅನುಮಾನ. ಇಂತಹ ಅನುಮಾನದಲ್ಲಿರುವ ಕುಮಾರಸ್ವಾಮಿಯವರು ಇದ್ದಕ್ಕಿದ್ದಂತೆ ಡಾ.ಮಂಜುನಾಥ್ ಅವರ ಪತ್ನಿ ಅನಸೂಯ ಅವರನ್ನು ಕಣಕ್ಕಿಳಿಸಬಹುದು ಎಂಬುದು ಡಿಕೆಶಿ ಪಡೆಯ ಥಿಂಕಿಂಗು. ಹೀಗಾಗಿ ಉಪಚುನಾವಣೆಯ ಕಣಕ್ಕಿಳಿಯುವ ಸಂದೇಶ ರವಾನಿಸಿರುವ ಡಿಕೆಶಿ, ಆ ಮೂಲಕ ಕಾಂಗ್ರೆಸ್ ಕಾರ್ಯಕರ್ತರನ್ನು ಒಗ್ಗೂಡಿಸುವ ಕೆಲಸ ಮಾಡಿದ್ದಾರೆ.

ಸಿದ್ದು ಮುಂದಿದೆ ನಿಜವಾದ ಸವಾಲು

ಇನ್ನು ಐವತ್ತು ವರ್ಷಗಳ ಹಿಂದೆ ಮುಖ್ಯಮಂತ್ರಿ ದೇವರಾಜ ಅರಸು ಎದುರಿಸಿದ್ದ ಸವಾಲನ್ನು ಇವತ್ತು ಸಿಎಂ ಸಿದ್ದರಾಮಯ್ಯ ಎದುರಿಸುವ ಸನ್ನಿವೇಶ ಸೃಷ್ಟಿಯಾಗಿದೆ. ಅವತ್ತು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು, ಉಳುವವನೇ ಹೊಲದೊಡೆಯ ಎಂಬ ಮಂತ್ರ ಜಪಿಸಿದ್ದ ಅರಸರು ಇದಕ್ಕಾಗಿ ಪ್ರಬಲ ವರ್ಗಗಳ ವಿರೋಧ ಎದುರಿಸಬೇಕಾಯಿತು. ಕಾರಣ? ಉಳುವವನೇ ಭೂ ಒಡೆಯನಾಗಲು ಪ್ರಬಲ ವರ್ಗಗಳ ಕೈಲಿದ್ದ ಭೂಮಿಯನ್ನು ಕಿತ್ತು ಕೊಡಬೇಕಿತ್ತು. ಇಷ್ಟಾದರೂ ಅರಸರು ಜಗ್ಗಲಿಲ್ಲ, ತಮ್ಮ ಗುರಿ ಸಾಧನೆಯ ವಿಷಯದಲ್ಲಿ ಅವರು ನೂರಕ್ಕೆ ನೂರರಷ್ಟು ಯಶಸ್ವಿಯಾಗದಿದ್ದರೂ ವ್ಯವಸ್ಥೆಯಲ್ಲಿ ದೊಡ್ಡ ಮಟ್ಟದ ಪರಿವರ್ತನೆ ತರುವಲ್ಲಿ ಯಶಸ್ವಿಯಾದರು. ಅಂದ ಹಾಗೆ ಈಗ ಸಿದ್ದರಾಮಯ್ಯ ಅವರ ಸರದಿ. ಕಾರಣ? ಅವರ ಸರಕಾರ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳಿಗೆ ಈಗ ಹಣ ಸಾಲುತ್ತಿಲ್ಲ, ಅದೇ ಕಾಲಕ್ಕೆ ಗ್ಯಾರಂಟಿ ಯೋಜನೆಗಳಿಗೆ ಹಣ ಒದಗಿಸುವ ಕೆಲಸದಿಂದ ಶಾಸಕರಿಗೆ ನಿರೀಕ್ಷಿತ ಪ್ರಮಾಣದ ಅನುದಾನ ಸಿಗುತ್ತಿಲ್ಲ. ಪರಿಣಾಮ? ಶಾಸಕರ ಅಸಮಾಧಾನ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ.

ಈ ಬೆಳವಣಿಗೆ ಸಹಜವಾಗಿ ಸಿದ್ದರಾಮಯ್ಯ ಅವರಿಗೆ ಕಸಿವಿಸಿಯುಂಟು ಮಾಡಿದೆ. ಹಾಗಂತ ಅವರು ಗ್ಯಾರಂಟಿ ಯೋಜನೆಗಳನ್ನು ಕೈ ಬಿಡುವ ಸ್ಥಿತಿಯಲ್ಲಿಲ್ಲ, ಅದೇ ಕಾಲಕ್ಕೆ ಶಾಸಕರ ಅಸಮಾಧಾನವನ್ನು ನಿರ್ಲಕ್ಷಿಸುವ ಸ್ಥಿತಿಯಲ್ಲೂ ಇಲ್ಲ. ಇಂತಹ ಸಂದಿಗ್ಧತೆಯಲ್ಲಿರುವ ಸಿದ್ದರಾಮಯ್ಯ ಗ್ಯಾರಂಟಿಗಳಿಗಾಗಿ ಪರ್ಯಾಯ ಮೂಲ ಹುಡುಕುವುದು ಅನಿವಾರ್ಯ. ಈ ದಿಸೆಯಲ್ಲಿ ಅವರಿಗೆ ಆಪ್ತರು ಹಲವು ಸಲಹೆಗಳನ್ನು ನೀಡಿದ್ದಾರೆ. ಅದರ ಪ್ರಕಾರ, ರಾಜ್ಯದಲ್ಲಿ ಒಟ್ಟು 1.15 ಲಕ್ಷ ಎಕರೆ ಯಷ್ಟು ಸರಕಾರಿ ಭೂಮಿ ಪ್ರಭಾವಿಗಳಿಂದ ಒತ್ತುವರಿ ಯಾಗಿದೆ. ಇದನ್ನು ತೆರವು ಮಾಡುವ ಕೆಲಸಕ್ಕೆ ಕೈ ಹಾಕಬೇಕು ಎಂಬುದು ಒಂದು ಸಲಹೆ. ಇದೇ ರೀತಿ ಬೆಂಗಳೂರು- ಮೈಸೂರು ಎಕ್ಸ್ ಪ್ರೆಸ್ ಹೈವೇ ಯೋಜನೆಗೆ ಕೊಟ್ಟ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳಬೇಕು ಎಂಬುದು ಮತ್ತೊಂದು ಸಲಹೆ.

ಅದರ ಪ್ರಕಾರ ಈ ಯೋಜನೆಗಾಗಿ ಎಂಟು ಸಾವಿರ ಎಕರೆಯಷ್ಟು ಹೆಚ್ಚುವರಿ ಭೂಮಿ ನೀಡಲಾಗಿದೆ. ಈ ಭೂಮಿಯ ಪ್ರತಿ ಎಕರೆಗೆ ಇವತ್ತು ಹತ್ತು ಕೋಟಿ ರೂ ಮೌಲ್ಯವಿದೆ. ಹೀಗಾಗಿ ಇದನ್ನು ವಶಪಡಿಸಿಕೊಂಡರೆ ಸರಕಾರದ ಆರ್ಥಿಕ ಶಕ್ತಿ ಗಟ್ಟಿಯಾಗುತ್ತದೆ. ಆದರೆ ಇದನ್ನು ಮಾಡಲು ದೊಡ್ಡ ಮಟ್ಟದ ಇಚ್ಛಾಶಕ್ತಿ ಬೇಕು. ಯಾಕೆಂದರೆ ಪ್ರಬಲ ವರ್ಗಗಳ ಹಿಡಿತದಲ್ಲಿದ್ದ ಭೂಮಿಯನ್ನು ಕಿತ್ತು ಕೊಡುವುದಕ್ಕಿಂತ, ಪ್ರಭಾವಿಗಳ ಹಿಡಿತದಲ್ಲಿರುವ ಭೂಮಿಯನ್ನು ಕಿತ್ತುಕೊಳ್ಳುವುದು ಕಷ್ಟ. ಸಿದ್ದರಾಮಯ್ಯ ಇದನ್ನು ಸಾಧಿಸುತ್ತಾರಾ? ಅಂತ ಕಾದು ನೋಡಬೇಕು.

ಲೀಗ್ ಬಾರದ ಮಾತ್ರಕ್ಕೆ ಭಾರತ ಸಂವಿಧಾನ ವಂಚಿತವಾಗಬೇಕೆ?

ಅಭಿಮತ
ಸುಧಾಕರ ಹೊಸಳ್ಳಿ
vveditoped@gmail.com

ಭಾರತಕ್ಕೊಂದು ಸ್ವಂತ ಸಂವಿಧಾನ ರಚನೆ ಆಗಬೇಕೆಂಬ ಸದುದ್ದೇಶದಿಂದ ಡಿಸೆಂಬರ್ 9, 1946ರಲ್ಲಿ ಸಂವಿಧಾನ ರಚನಾ ಸಭೆಯು ತನ್ನ ಕಾರ್ಯ ಆರಂಭ ಮಾಡಿದಾಗ ಡಿಸೆಂಬರ್ 13, 1946ಕ್ಕೆ ನೆಹರುರವರು ಭಾರತ ಸಂವಿಧಾನದ ಚೌಕಟ್ಟು ಹೇಗಿರಬೇಕು ಎಂಬುದರ ಕುರಿತು ಗಣರಾಜ್ಯ ನಿರ್ಣಯವನ್ನು ಮಂಡಿಸುತ್ತಾರೆ. ಆ ನಿರ್ಣಯವನ್ನು ಮುಸ್ಲಿಂ ಲೀಗ್ ಸಭೆಗೆ ಹಾಜರಾಗುವವರೆಗೂ ಮುಂದೂಡಬೇಕೆಂದು ಜಯ್ಕರ್ ತಿದ್ದುಪಡಿ ಮಂಡಿಸಿದಾಗ, ಆ ನಿರ್ಣಯ ಮುಂದೂಡಬೇಕೆಂಬ ತಿದ್ದುಪಡಿಯ ಕುರಿತು ಮಾತನಾಡಲು ನಿಂತ ಶ್ಯಾಮ್ ಪ್ರಸಾದ್ ಮುಖರ್ಜಿ ಮುಸ್ಲಿಂ ಲೀಗ್ ಬರಲಿಲ್ಲ ಎಂಬ ಕಾರಣಕ್ಕಾಗಿ ಸಂವಿಧಾನ ರಚನೆ ನಿಲ್ಲಿಸಲು ಸಾಧ್ಯವಿಲ್ಲ. ಭಾರತ ತನ್ನೊಡಲಿನ ಪರಂಪರೆಯ ಆಧಾರಗಳನ್ನು ಇಟ್ಟು ಸಂವಿಧಾನ ರಚಿಸಿಯೇ ತೀರಬೇಕು. ಬಾರದವರಿಗಾಗಿ ಭಾರತಾಂಬೆಯ ಕಾರ್ಯ ನಿಲ್ಲುವುದಿಲ್ಲ ಎಂದು ಗುಡುಗಿದ್ದರು. ಮುಖರ್ಜಿಯವರನ್ನು ಕೇವಲ ರಾಜಕೀಯ ನೆಲೆಯಲ್ಲಿ ನಿಂತು ನೋಡಲು ಸಾಧ್ಯವಿಲ್ಲ. ಈ ನೆಲಮೂಲದ ಸಂಸ್ಕೃತಿಯ ಪ್ರತೀಕವಾಗಿ ಸಂವಿಧಾನ ರಚಿತವಾಗಬೇಕು. ಪರಕೀಯತೆಯ ಯಾವ ಸೊಗಡು ಮತ್ತು ಯಾವುದೇ ಮುಲಾಜು ಸಂವಿಧಾನದ ಭಾಗವಾಗದೆಂದು ಆಗ್ರಹಿಸಿದ್ದ ಧೀಮಂತ.

ಜೂನ್ 23ರ ಮುಖರ್ಜಿ ಹುತಾತ್ಮತೆಯ ದಿವಸವನ್ನು ದಾಸ್ಯದ ಸಂವಿಧಾನ ಸೃಷ್ಟಿ ತಡೆಗಟ್ಟಿದ ಐತಿಹಾಸಿಕ ಕೊಡುಗೆಯ ದಿವಸವಾಗಿಯೂ ಸ್ಮರಿಸಬಹುದು.

ಈ ನಿರ್ಣಯಕ್ಕೆ ತನ್ನದೇ ಆದ ಮಹತ್ವವಿದೆ. ಅಷ್ಟಕ್ಕೂ ನಾವು ಇಲ್ಲಿ ಕುಳಿತಿರುವುದು ನಮ್ಮ ವೈಯಕ್ತಿಕ ಬಲದಿಂದಲ್ಲ. ನಾವು ಈ ಮಹಾನ್ ದೇಶದ ಜನರನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿವೆ. ನಮ್ಮ ಮಂಜೂರಾತಿಯು ಬ್ರಿಟಿಷ್ ಸಂಸತ್ತು ಅಲ್ಲ; ನಮ್ಮ ಮಂಜೂರಾತಿಯು ಬ್ರಿಟಿಷ್ ಸರಕಾರವಲ್ಲ, ನಮ್ಮ ಮಂಜೂರಾತಿಯೂ ಭಾರತದ ಜನ ಸಮುದಾಯ. ಕೆಲವು ನಿಯಮ ನಿಬಂಧನೆಗಳನ್ನು ರಚಿಸುವುದಷ್ಟೇ ಅಲ್ಲ. ನಾವು ಇಲ್ಲಿ 9ನೇ ಡಿಸೆಂಬರ್ 1946 ರಲ್ಲಿ ಏಕೆ ಸಭೆ ಸೇರಿದ್ದೇವೆ ಎನ್ನುವುದನ್ನು ಕುರಿತು ಭಾರತದ ಜನತೆಗೆ ಮೂರ್ತರೂಪದಲ್ಲಿ ಏನಾದರು ಹೇಳಬೇಕಾಗುತ್ತದೆ.

ಡಾ. ಜಯಕರ್ ಅವರು ಹೇಳಿದ್ದೇ ಸರಿಯಾದ ನಿಲುವಾಗಿದ್ದರೆ, ಆಗ ಈ ಸಂವಿಧಾನ ರಚನಾಸಭೆಯನ್ನು ಕರೆಯಬೇಕಾದ ಅಗತ್ಯವೇ ಇರಲಿಲ್ಲ, ದಿಟದಲ್ಲಿ ಡಾ. ಜಯಕರ್ ಅವರು ಹಾಜರಾಗಬೇಕಾದ ಅವಶ್ಯಕತೆಯೇ ಇರಲಿಲ್ಲ, ಅವರು ಗವರ್ನರ್ ಜನರಲ್‌ಗೆ ತಿಳಿಸಬೇಕಾಗಿತ್ತು. 'ಮುಸ್ಲೀಂ ಲೀಗ್ ಮತ್ತು ಭಾರತದ ರಾಜ್ಯಗಳು ಹಾಜರಾಗದೇ ಇರುವುದರಿಂದ ಸಂವಿಧಾನ ರಚನಾಸಭೆ ಸಭೆಯನ್ನು ಕರೆಯುವಲ್ಲಿ ನೀವು ತಪ್ಪುಮಾಡುತ್ತಿದ್ದೀರಿ ಎಂದು ನಾನು ಭಾವಿಸಿರುವುದರಿಂದ ನಿಮ್ಮ ಆಹ್ವಾನ ಅಂಗೀಕರಿಸಲು ನನಗೆ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ಆದರೆ ಇಲ್ಲಿಗೆ ಬಂದು ಈ ವಿವಾದಾಂಶವನ್ನು ನಾವು ಎತ್ತುವುದೆಂದರೆ ಬಹುಮಟ್ಟಿಗೆ ಮುಸ್ಲಿಮ್ ಲೀಗ್‌ನ ಬೋನಿನೊಳಗೆ ನುಗ್ಗಿದಂತೆ ಸರಿ. ಆದು ಗ್ರೇಟ್ ಬ್ರಿಟನ್‌ನಲ್ಲಿರುವ ಪ್ರತಿಗಾಮಿಗಳ ಕೈಗಳನ್ನು ಬಲಪಡಿಸಿದಂತಾಗುತ್ತದೆ. ಆ ಕೆಲಸವನ್ನು ಮಾಡುವಲ್ಲಿ ಡಾ. ಜಯಕರ್ ಕೊನೆಯ ವ್ಯಕ್ತಿ ಎಂದು ನನಗೆ ಗೊತ್ತು. ನಾನು ಅವರ ಮತ್ತು ನಿಶ್ಚಿತಾಭಿಪ್ರಾಯವನ್ನು ಮೆಚ್ಚುತ್ತೇನೆ. ವಾಸ್ತವದಲ್ಲಿ ಏನಾದರೊಂದನ್ನು ಮಾಡಬೇಕೆಂದು ಬಯಸಿದವರು ಮುಂದೆ ಬಂದು, ತಮ್ಮ ದೃಷ್ಟಿಕೋನವನ್ನು ಮಂಡಿಸಲು ಸಮರ್ಥರಾಗಬೇಕು. ಆದರೆ ಈ ಸದನದಲ್ಲಿ ಮಂಡಿಸಲಾದ ಮುಗ್ಧವೆಂಬಂತೆ ತೋರುವ ತಿದ್ದುಪಡಿಯಲ್ಲಿ ಅಡಗಿರುವ ಮಹಾನ್ ಅಪಾಯ ಡಾ. ಜಯಕರ್ ಅವರಿಗೆ ಗೌರವಪೂರ್ಣವಾಗಿ ತೋರಿಸಿಯೂ ಕೊಡಬಹುದು. ಕಾಲಕ್ರಮದಲ್ಲಿ ಸಂದರ್ಭ ಬಂದಾಗ ಅವರು ಈ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ.

ಈ ಪ್ರಶ್ನೆಯ ಇನ್ನೊಂದು ಅಂಶವನ್ನು ಕುರಿತು ನಾನು ಕೆಲವು ಮಾತುಗಳನ್ನು ಆಡಲು ಇಷ್ಟಪಡುವ ನಿರ್ಣಯವೇನೋ ಇದೆ, ಆದರೆ ಅದನ್ನು ನಾವು ಹೇಗೆ ಅನುಷ್ಠಾನಗೊಳಿಸುತ್ತೇವೆ? ಈ ನಿರ್ಣಯ ಜಾರಿಗೆ ಬರುವಂತೆ ಮಾಡುವ ನಮ್ಮ ಪ್ರಯತ್ನವನ್ನು ತಡೆಯುವ, ನಾವು ಈಗಾಗಲೇ ನೋಡಿರುವ ಅಡೆ- ತಡೆ ಯಾವುವು? ಸಹಜವಾಗಿಯೇ ಮೊದಲನೆಯ ಅಡಚಣೆಯೆಂದರೆ ಸಂವಿಧಾನ ರಚನಾಸಭೆಯಲ್ಲಿ – ಲೀಗ್‌ನ ಅನುಪಸ್ಥಿತಿ. ನಿನ್ನೆ ಡಾ. ಜಯಕರ್ ಅವರು ಒಂದು ಭೋಜನಕೂಟದ ಸಾದೃಶ್ಯವನ್ನು ಅಲ್ಲೇ ಅವರು ಹೇಳಿದರು. ಅತಿಥಿಗಳನ್ನು ಆಹ್ವಾನಿಸಿದಾಗ ಕೆಲವು ಅತಿಥಿಗಳು ಬರದಿದ್ದರೆ? ಆಗ ಕೂಟವನ್ನು ಹೇಗೆ ನಡೆಸುತ್ತೀರಿ? ಆದರೆ ಈಗಾಗಲೇ ಬಂದಿರುವ ಅತಿಥಿಗಳ ಪಾಡೇನು ಎಂದು ಅವರು ಮರೆತಿದ್ದಾರೆ. ಒಂದು ಪಕ್ಷ ಅವರೇ ಆತಿಥೇಯರಾಗಿದ್ದು, ಆರು ಜನ ಅತಿಥಿಗಳನ್ನು ಆಹ ಅವರಲ್ಲಿ ಐವರು ಬಂದು ಒಬ್ಬರು ಗೈರುಹಾಜರಾಗಿದ್ದಾರೆ ಎಂದುಕೊಳ್ಳೋಣ. ಆ ಐದು ಜನರನ್ನು ಉಪವಾಸ ಕೆಡವುತ್ತಾರೆಯೆ? ಆರನೆಯವರು ಬಂದಿಲ್ಲ, ಆದ್ದರಿಂದ ನಿಮಗೂ ಊಟ ದೊರೆಯುವುದಿಲ್ಲ ಎಂದು ಹೇಳುತ್ತಾರೆಯೆ? ಖಂಡಿತವಾಗಿಯೂ ಇಲ್ಲ. ಇಲ್ಲೂ ಕೂಡ ಬಂದಿರುವವರ ಸ್ವಾತಂತ್ರ್ಯದ ಹಸಿವನ್ನು ತಣಿಸಬೇಕು.

ಚರ್ಚಿಲ್ ಹೇಳಿರುವುದೇನೆಂದರೆ, ಸಂವಿಧಾನ ರಚನಾಸಭೆಯಲ್ಲಿ ಮುಸ್ಲಿಮ್ ಲೀಗ್‌ನ ಗೈರುಹಾಜರಿಯು ಚರ್ಚಿನಲ್ಲಿ ಮದುವೆಯನ್ನು ಏರ್ಪಡಿಸಿದ್ದಾಗ ವಧುವು ನಾಪತ್ತೆಯಾದಂತೆ. ಭಾರತದ ರಾಜ್ಯಗಳು ಮತ್ತು ಮುಸ್ಲಿಮ್ ಲೀಗ್ ಕೂಡ ಯಾವಾಗ ಒಳಗೆ ಬರುತ್ತವೆಯೋ, ಮತ್ತು ಅಂತಿಮವಾಗಿ ಸಂವಿಧಾನ ರಚನಾಸಭೆಯು ಎಷ್ಟು ಜನ ವಧುಗಳನ್ನು ಪಡೆಯುತ್ತದೆಯೋ ನನಗೆ ಗೊತ್ತಿಲ್ಲ. ಏನೇ ಆಗಲಿ, ಅದು ಚರ್ಚಿಲ್ ಅವರ ಅಭಿಪ್ರಾಯವಾಗಿದ್ದರೆ, ಅವರು ಅತ್ಯಾಚಾರಿಯ ಪಾತ್ರವನ್ನು ವಹಿಸಬಾರದು. ಅವರು ಜಿನ್ನಾ ಅವರಿಗೆ ಭಾರತಕ್ಕೆ ಮರಳಿ ಹೋಗಿ ಸಂವಿಧಾನ ರಚನಾಸಭೆಯಲ್ಲಿ ಸೇರಿಕೊಂಡು ಭಾರತದ ಜನಸಮುದಾಯದ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸುವಂತೆ ಹೇಳಬೇಕಾಗಿತ್ತು. ಮುಸ್ಲಿಮ್ ಲೀಗ್ ಬರಬಾರದು ಎಂದು ಯಾರೂ ಹೇಳಿಲ್ಲ. ದಿಟದಲ್ಲಿ, ಮುಸ್ಲಿಮ್ ಲೀಗ್ ಬರಬೇಕು ಮತ್ತು ಅದರಿಂದ ನಾವು ಮುಖಾಮುಖಿ ನೋಡಲು ಸಾಧ್ಯವಾಗುತ್ತದೆ ಎನ್ನುವುದು ನಮ್ಮ ಇಚ್ಛೆ, ಕಷ್ಟಗಳು ಇದ್ದರೆ, ಅಭಿಪ್ರಾಯಭೇದಗಳು ಇದ್ದರೆ, ಅವನ್ನು ಕೇವಲ ಬಹುಮತದಿಂದಲೇ ಅಂಗೀಕರಿಸಬೇಕು ಎಂದು ನಾವು ಬಯಸುವುದಿಲ್ಲ. ಅಂತಿಮ ಉಪಾಯವಾಗಿ ಅದನ್ನು ಮಾಡಬೇಕಾಗಿಬರಬಹುದು. ಆದರೆ ಭಾರತದ ಭಾವೀ ಸಂವಿಧಾನಕ್ಕೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬರಲು ಪ್ರತಿಯೊಂದು ಪ್ರಯತ್ನವನ್ನೂ ಖಂಡಿತವಾಗಿಯೂ ಮಾಡಲಾಗುವುದು. ಆದರೆ ಮುಸ್ಲಿಮ್ ಲೀಗ್ ಅನ್ನು ಬರದಂತೆ ಏಕೆ ತಡೆಯಲಾಗುತ್ತಿದೆ, ನನ್ನ ಆರೋಪವೇನೆಂದರೆ ಬ್ರಿಟಿಷರ ನಿಲುವಿನಿಂದ ಮುಸ್ಲಿಮ್ ಲೀಗ್ ಪ್ರೋತ್ಸಾಹವನ್ನು ಪಡೆಯುತ್ತಿರುವುದರಿಂದ ಅದು ಬರುತ್ತಿಲ್ಲ. ಅದು ಬರದಿದ್ದರೆ ಸಂವಿಧಾನ ರಚನಾಸಭೆಯ ಅಂತಿಮ ತೀರ್ಮಾನವನ್ನು ಕುರಿತು ಅದು ನಿರಾಕರಣಾಧಿಕಾರವನ್ನು (ವೀಟೋ) ಚಲಾಯಿಸಬಹುದು ಎಂದು ಭಾವಿಸಿಕೊಳ್ಳುವಂತೆ ಮುಸ್ಲಿಮ್ ಲೀಗ್‌ಗೆ ಪ್ರೋತ್ಸಾಹವನ್ನು ಕೊಡಲಾಗುತ್ತಿದೆ. ವೀಟೋ ಅಧಿಕಾರವನ್ನು ಮುಸ್ಲಿಮ್ ಲೀಗ್‌ನ ಕೈಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಮತ್ತೆ ಕೊಡಲಾಗುತ್ತಿದೆ. ಈ ಮಹಾನ್ ಸಭೆಯ ಭಾವೀ ಚಟುವಟಿಕೆಗಳಿಗೆ ಬೆದರಿಕೆಯೊಡ್ಡುತ್ತಿರುವ ಅಪಾಯ ಇದಾಗಿದೆ.

ಮಾನ್ಯರೆ, ನಾನು ವಿವರವಾಗಿ ಚರ್ಚಿಸಲು ಹೋಗುವುದಿಲ್ಲ, ಏಕೆಂದರೆ ಬ್ರಿಟಿಷ್ ಹೇಳಿಕೆಗಳ ವಿವಿಧ ಉಪಬಂಧಗಳನ್ನು ಕುರಿತು ನಾನು ಚರ್ಚಿಸಲು ಇದು ಸಮಯವೂ ಅಲ್ಲ ಅಥವಾ ಸಂದರ್ಭವೂ ಅಲ್ಲ, ಆದರೆ ಖಂಡಿತವಾಗಿಯೂ ನಾನು ಇಷ್ಟನ್ನು ಹೇಳುತ್ತೇನೆ: ಸದ್ಯದ ಸಮಯದಲ್ಲಿ ಈ ಸಂವಿಧಾನ ರಚನಾಸಭೆಯು ಬ್ರಿಟಿಷರ ಒಂದು ಸೃಷ್ಟಿಯಾಗಿದ್ದರೂ, ಒಂದು ಸಲ ಅದು ಅಸ್ತಿತ್ವಕ್ಕೆ ಬಂದಿತೆಂದರೆ ಅದಕ್ಕೆ ಸಂಕಲ್ಪವಿದ್ದರೆ, ತನ್ನ ಹಕ್ಕನ್ನು ದೃಢವಾಗಿ ಹೇಳುವ ಅಧಿಕಾರವನ್ನು ಹೊಂದಿರುತ್ತದೆ. ಜಾತಿ, ಮತ, ಪಂಥ ಅಥವಾ ಸಮುದಾಯ ಏನೇ ಆಗಿರಲಿ ಭಾರತದ ಜನರ ಹಿತಕ್ಕಾಗಿ, ಭಾರತದ ಸ್ವಾತಂತ್ರ್ಯವನ್ನು ಗಳಿಸಲು ಯಾವುದು ಉತ್ತಮವೋ ಮತ್ತು ಯುಕ್ತವೋ ಅದನ್ನು ಮಾಡುತ್ತದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿ

ಇತ್ತೀಚಿಗೆ ಎನ್ ಟಿ ಎ ಯ ಪರೀಕ್ಷಾ ಅವಾಂತರಗಳು ಒಂದಲ್ಲ ಒಂದು ರೀತಿ ಸದ್ದು ಮಾಡುತ್ತಿವೆ. ನೆಟ್ ಪರೀಕ್ಷೆ ಆದ ಮಾರನೇ ದಿನವೇ ಪರೀಕ್ಷೆ ರದ್ದುಗೊಳಿಸಿದ್ದು, ಪ್ರಶ್ನೆ ಪತ್ರಿಕೆ ಲೀಕ್ ಭೀತಿಯಿಂದ ನೀಟ್ ಪಿಜಿ ಪರೀಕ್ಷೆಯನ್ನು ಪರೀಕ್ಷಾ ಹಿಂದಿನ ದಿನವೇ ಮುಂದೂಡಿದ್ದು, ಇವೆಲ್ಲಕ್ಕಿಂತ ಮುಖ್ಯವಾಗಿ ಯುಜಿ ನೀಟ್ 2024ರ ಪ್ರಶ್ನೆ ಪತ್ರಿಕೆ ಪೇಪರ್ ಲೀಕ್ ಪ್ರಕರಣ ಹಾಗೂ ಮೂರು ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡಿ, ಅವರಿಗೆ ಪುನರ್ ಪರೀಕ್ಷೆ ನಡೆಸಿ ಮುಜುಗರಕ್ಕೆ ಒಳಗಾಗಿದೆ.

2024ರ ಯುಜಿ ನೀಟ್ ಪ್ರಶ್ನೆ ಪತ್ರಿಕೆಯು ಅಷ್ಟೊಂದು ಸುಲಭವಾಗಿ ಇಲ್ಲದಿದ್ದರೂ, 720ಕ್ಕೆ 720 ಅಂಕ ಪಡೆದವರು ಕರ್ನಾಟಕದ ಮೂವರು ಸೇರಿದಂತೆ ಒಟ್ಟು 67 ಮಂದಿ ಇರುವುದು ಸೋಜಿಗದ ಸಂಗತಿಯಾಗಿದೆ. ಹರಿಯಾಣದ ಒಂದೇ ಪರೀಕ್ಷಾ ಕೇಂದ್ರದ ಏಳು ಮಂದಿ ಪೂರ್ಣ ಅಂಕ ಪಡೆದಿರುವುದು ಪೇಪರ್ ಲೀಕ್ ಪ್ರಕರಣಕ್ಕೆ ಪುಷ್ಠಿ ನೀಡಿದೆ. ಹಾಗೆಯೇ ಕರ್ನಾಟಕದ ಕೆಲವು ವಿದ್ಯಾರ್ಥಿಗಳು ಬೇರೆ ರಾಜ್ಯದ ಸ್ಕ್ಯಾಮ್ ಸೆಂಟರ್‌ಗಳಲ್ಲಿ ಪರೀಕ್ಷೆ ಬರೆದಿರುವುದು ಬೆಳಕಿಗೆ ಬಂದಿದೆ. ಇವೆಲ್ಲ ಹಗರಣಗಳ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿ ಸಂಘಟನೆಗಳು ಸಿಡಿದೆದ್ದಿದ್ದು, ದೇಶ ವ್ಯಾಪಿ ಪ್ರತಿಭಟನೆ ಕಾವು ಹೆಚ್ಚಾಗುತ್ತಿದೆ. ಹಲವು ರಾಜ್ಯಗಳ ಹೈಕೋರ್ಟ್‌ನಲ್ಲಿ ಈ ಪ್ರಕರಣಗಳು ದಾಖಲಾಗಿವೆ. ಸದ್ಯ ಸುಪ್ರೀಂಕೋರ್ಟ್‌ನಲ್ಲಿ ಈ ಎಲ್ಲಾ ವಿಚಾರಣೆಗಳು ನಡೆಯುತ್ತಿವೆ. ಜುಲೈ 8ರಂದು ಈ ಪ್ರಕರಣದ ತೀರ್ಪು ಹೊರಬೀಳಲಿದೆ. ಮೇಲ್ನೋಟಕ್ಕೆ ಯುಜಿ ನೀಟ್ 2024ರ ಪರೀಕ್ಷೆಯಲ್ಲಿ ಗೋಲ್ ಮಾಲ್ ನಡೆದಿದ್ದು, ದೇಶಾದ್ಯಂತ ಇದರಲ್ಲಿ ಪ್ರಭಾವಿ ಕೋಚಿಂಗ್ ಮಾಫಿಯಾ, ರಾಜಕಾರಣ ಮೂಗು ತೂರಿಸಿದೆ ಎಂಬುವುದನ್ನು ಅಲ್ಲಗಳೆಯುವಂತಿಲ್ಲ, ಇವುಗಳಿಂದ ಎನ್‌ಟಿಎಯು ತಡವಾಗಿ ಎಚ್ಚೆತ್ತುಕೊಂಡಿದ್ದು, ತನ್ನ ಡಿಜಿಯನ್ನು ಬದಲಾಯಿಸಿದೆ.

ಆದ್ದರಿಂದ ತಡವಾದರೂ ಸರಿಯೇ ಮತ್ತೊಮ್ಮೆ ನಿಷ್ಪಕ್ಷಪಾತ ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳಿಗೆ ನ್ಯಾಯ ನೀಡಬೇಕಿದೆ ಎಂದು ವಿದ್ಯಾರ್ಥಿ ಸಂಘಟನೆಗಳು ಆಗ್ರಹಿಸುತ್ತಿವೆ.

- ದೇವರಹಳ್ಳಿ ಲೋಕೇಶ್ ಪಾಂಡವಪುರ

ಹಾರ, ತುರಾಯಿ ಬೇಡ...

ರಾಜಕೀಯ ಸಭೆ, ಸಮಾರಂಭಗಳಲ್ಲಿ ಸಚಿವರು, ಮುಖ್ಯಮಂತ್ರಿಗಳಿಗೆ ಹಾರ ಹಾಕಲು, ಕೈಗೆ ತುರಾಯಿ ಕೊಟ್ಟು ಬೆಣ್ಣೆ ಸವರಲು ಬರುವ ಅವರ 'ಅಭಿಮಾನಿ (?)' ಸಾಲನ್ನು ಗಮನಿಸಿರಬಹುದು. ಮಂತ್ರಿಗಳು ಸಾಲಾಗಿ ತಮಗೆ ಹಾಕಿದ ಹಾರ, ತುರಾಯಿಗಳನ್ನು ಒಂದೊಂದಾಗಿ ತೆಗೆದು ಪಕ್ಕದ ತಮ್ಮವರ ಕೈಗೆ ಕೊಡುತ್ತಾರೆ. ಅವರು ಹಿಂದೆ ಮೂಲೆಯಲ್ಲಿ ಎಸೆಯುತ್ತಾರೆ. ಸಭೆ ಮುಗಿದ ನಂತರ ಎಲ್ಲವೂ ಹೊರಬದಿಯ ಕಸದ ತೊಟ್ಟಿಗೆ. ಹಸುಗಳು ತಿಂದು ಉಳಿದುದು ಹಸಿತ್ಯಾಜ್ಯವಾಗುತ್ತದೆ. ಅಲ್ಲಿಗೆ ಸುಂದರ, ಕೋಮಲ ಪುಷ್ಪಗಳ ಅವಸಾನವಾದಂತೆಯೇ! ಇಂದು ಉದ್ಘಾಟನೆ, ಹುಟ್ಟುಹಬ್ಬ, ಅರವತ್ತರ ವರ್ಧಂತಿ, ಅಂತಿಮ ದರ್ಶನ, ವಿವಾಹ, ನಿವೃತ್ತಿ ಸಮಾರಂಭ, ಸೀಮಂತ ಯಾವುದೇ ಇರಲಿ, ಆಮಂತ್ರಿತರು ಹೂವಿನ ಬೊಕೆ ಉಡುಗೊರೆ ಕೊಡುವುದು ಸರ್ವೇಸಾಮಾನ್ಯವಾಗುತ್ತಿದೆ. ಇದರ ಬದಲಾಗಿ ಕಾಲಕ್ಕೆ ತಕ್ಕಂತೆ ಅವರಿಗೆ ಉಪಯುಕ್ತವಾಗುವಂತಹ ಉಡುಗೊರೆ ಕೊಡುವುದು ಉಚಿತವಲ್ಲವೇ?

ಉದಾಹರಣೆಗೆ: ರಾಜಕೀಯ ಸಮಾರಂಭಗಳಲ್ಲಿ ಹಾರ, ತುರಾಯಿಗಳ ಬದಲಾಗಿ ಒಂದು ತಟ್ಟೆಯಲ್ಲಿ ವಿಧವಿಧ ಹಣ್ಣುಗಳನ್ನು ಅಥವಾ ತಾಜಾ ಹಸಿರು ತರಕಾರಿಗಳನ್ನು ಅಂದವಾಗಿ ಜೋಡಿಸಿ ಮೇಲೆ ಕಾಣುವಂತೆ ತೆಳು ಪ್ಲಾಸ್ಟಿಕ್ ಹಾಳೆಯನ್ನು ಭದ್ರವಾಗಿ ಸುತ್ತಿ ಕೈಗಿಡಬಹುದು. ಆಗ ಅವರ ಹಿಂಬಾಲಕರು ಅದನ್ನು ಬಿಸಾಡದೇ ತಮ್ಮ ಮನೆಗಾದರೂ ಕೊಂಡೊಯ್ಯುತ್ತಾರೆ. ಅದೇ ರೀತಿ ವಿವಾಹ ಸಮಾರಂಭದಲ್ಲಿ ಕವರಲ್ಲಿ ಹಣ ವಿಟ್ಟುಕೊಟ್ಟರೆ ಅಥವಾ ಮೊದಲೇ ಅವರ ಸಮ್ಮತಿ ಪಡೆದು ಹನಿಮೂನ್ ಪ್ಯಾಕೇಜ್ ಟಿಕೆಟ್ ಕೊಟ್ಟರೆ ಅವರಿಗೆ ಅಮಿತಾನಂದವಾಗುತ್ತದೆ. ಸಾಹಿತಿಗಳಿಗೆ ಸನ್ಮಾನದಲ್ಲಿ ಹಣ ಅಥವಾ ಮೌಲ್ಯಯುತ ಕನ್ನಡ ಗ್ರಂಥಗಳು, ರೋಗಿಗಳನ್ನು ನೋಡ ಹೋಗುವಾಗ ಹಣ್ಣು, ಬ್ರೆಡ್, ಬಿಸ್ಕತ್ತು, ಅರವತ್ತರ ಶಾಂತಿಯಲ್ಲಿ ರಾಮಾಯಣ, ಮಹಾಭಾರತ, ಪುರಾಣ ಪುಸ್ತಕಗಳು, ಸೀಮಂತ ಸಮಾರಂಭದಲ್ಲಿ ಬಸುರಿಗೆ ಡಾ. ಅನುಪಮಾ ನಿರಂಜನರ ತಾಯಿಮಗು ಪುಸ್ತಕ, ಗೊಂಬೆಗಳು, ಹೀಗೆ ಪ್ರಸಂಗಕ್ಕೆ ತಕ್ಕಂತೆ ಉಡುಗೊರೆ ಕೊಡುವುದು ವಿಹಿತ. ಸಾವಿನ ಮನೆಯಲ್ಲಿ ಅಂತಿಮದರ್ಶನ, ಸಮಾಧಿಗೆ ನಮನ ಮತ್ತಿತರ ಕಡೆಗಳಲ್ಲಿ ಹಾರ ಅತ್ಯವಶ್ಯ. ಯೋಚಿಸಿ.

-ಕೆ.ಶ್ರೀನಿವಾಸರಾವ್ ಹರಪನಹಳ್ಳಿ

ನಿಮ್ಮನ್ನು ಉಳಿಸುತ್ತೇನೆ

ಬೇಸಿಗೆ ಮುಗಿಯಿತು. ಮಳೆಗಾಲ ಬಂತು. ಗಿಡ ನೆಡೋದು ಬರೀ ಅರಣ್ಯ ಇಲಾಖೆ ಕಾಯಕ ಒಂದೇ ಅಲ್ಲ, ನಾವು ಕೈ ಜೋಡಿಸಿದರೆ ನಮಗೂ ನಿರಾಳತೆ. ಪ್ರಕೃತಿಗೆ, ಅರಣ್ಯಕ್ಕೆ ನೀಡುವ ಕೊಡುಗೆಯೂ ಆಗಬಹುದು. ಅರಣ್ಯ ಇಲಾಖೆ ಕಚೇರಿಗಳು ಹಾಗೂ ನರ್ಸರಿಗಳ ಕಡೆಗೆ ಹೋದರೆ 'ಸಸಿ ಕೊಡತೀರೇನ್ರಿ. ನಿಮಗೆ ಎಷ್ಟು ಸಸಿ ಬೇಕ್ರಿ?' ಎನ್ನುವ ಮಾತುಗಳನ್ನು ಕೇಳುವ ಸಮಯ. ಅರಣ್ಯ ಇಲಾಖೆಗೆ ವರ್ಷದಲ್ಲಿ ಆರೇಳು ತಿಂಗಳು ಒಂದು ರೀತಿಯಾದರೆ ಮತ್ತೆ ಆರೇಳು ತಿಂಗಳು ಅರಣ್ಯ ಬೆಳೆಸುವ ಕಾಯಕ. ಅದು ಕಾಡಲ್ಲೇ ಇರಬಹುದು. ಕಾಡಿನಂಚಿನಲ್ಲಿಯೇ ಆಗಬಹುದು. ಇಲ್ಲವೇ ನಗರ ಪ್ರದೇಶ ಇಲ್ಲವೇ ಗ್ರಾಮಾಂತರ ಪ್ರದೇಶವೇ ಇದ್ದಿರಬಹುದು. ಗಿಡ ನೆಡಿ, ಹಸಿರು ಹೆಚ್ಚಿಸಿ. ಅರಣ್ಯ ಉಳಿಸಿ ಎನ್ನುವ ಘೋಷಣೆಗಳೂ ಬರೀ ಮಾತಿನಲ್ಲಿ ಮಾತ್ರವಲ್ಲ ಅಕ್ಷರ ರೂಪದಲ್ಲಿ ಗೋಡೆಗಳಲ್ಲೂ ಕಾಣಸಿಗುತ್ತವೆ. ಏಕೆಂದರೆ ಅರಣ್ಯ ಇಲಾಖೆಯ ಮುಖ್ಯ ಉದ್ದೇಶವೇ ಸಸಿ ನೆಡುವುದು, ಮರ ಬೆಳೆಸುವುದು, ಅರಣ್ಯ ಉಳಿಸುವುದು.ಪರಿಸರ ಸ್ವಾಸ್ಥ್ಯದಿಂದರೇ ಮಾತ್ರ ಅದರ ಭಾಗವಾದ ಮಾನವರಾದ ನಾವು ಸ್ವಾಸ್ಥ್ಯದಿಂದಿರಬಹುದು. ನಮ್ಮ ಆರೋಗಕ್ಕೆ ಹೇಗೆ ಸಮತೋಲಿತ ಆಹಾರ, ವ್ಯಾಯಾಮ, ವಿಶ್ರಾಂತಿ ಅಗತ್ಯವೊ, ಪರಿಸರದ ಸ್ವಾಸ್ಥ್ಯಕ್ಕೆ ಗಿಡ- ಮರ, ಅರಣ್ಯ, ವನ್ಯಜೀವಿಗಳನ್ನೊಳಗೊಂಡ ಜೀವವೈವಿಧ್ಯ ಅಗತ್ಯ ಅದಕ್ಕಾಗಿ ಬನ್ನಿ ನಾವು ಗಿಡ ನೆಡುವುದರ ಮೂಲಕ ಸರಕಾರದ ಜವಾಬ್ದಾರಿ ಕಡಿಮೆ ಮಾಡಿ ಪರಿಸರವನ್ನು ಸಂರಕ್ಷಿಸೋಣ.

-ದೀಕ್ಷಾ ಮುಚ್ಚಂಡಿ ಮಹಿಳಾ ವಿವಿ ವಿಜಯಪುರ

ಬೊಕ್ಕಸ ತುಂಬಿದರೆ ಸಾಕೇ?

ರಾಜ್ಯ ಸರಕಾರವು ತನ್ನ ಬೊಕ್ಕಸ ತುಂಬಿಕೊಳ್ಳಲು ಸಂಪನ್ಮೂಲ ಸಂಗ್ರಹಕ್ಕೆ ಸಲಹೆ ಪಡೆಯಲು ವಿದೇಶಿ ಕಂಪನಿಯೊಂದನ್ನು ನೇಮಿಸಿಕೊಂಡಿರುವ ವರದಿಯಾಗಿದೆ. ಈ ಕುರಿತ ಪ್ರಶ್ನೆಗೆ ಸರಕಾರದ ಸಚಿವರು ಇದರಲ್ಲಿ ತಪ್ಪೇನಿದೆ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ. ಸಂಪನ್ಮೂಲ ಕ್ರೋಢೀಕರಿಸುವುದರಲ್ಲಿ ತಪ್ಪೇನೂ ಇಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಆಡಳಿತ ನಡೆಸಲು ಅದು ಅಗತ್ಯ ಕೂಡಾ. ಆದರೆ, ತುಂಬಿಕೊಂಡ ಬೊಕ್ಕಸದ ಹಣ ನಿಜವಾಗಿಯೂ ಸದ್ಬಳಕೆ ಆಗುತ್ತಿದೆಯೇ? ಎಲ್ಲಿಯೂ ಸಹ ಸೋರಿಕೆ ಆಗುತ್ತಿಲ್ಲವೇ? ಜನರ ತೆರಿಗೆ ಹಣ ಅಪವ್ಯಯ ಆಗುತ್ತಿಲ್ಲವೇ? ಅಭಿವೃದ್ಧಿ ಕಾರ್ಯ ನಿಜವಾಗಿ ನಡೆಯುತ್ತಿದೆಯೇ? ಕಳಪೆ ಕಾಮಗಾರಿಗಳು ಇವೆಯೇ? ಇದ್ದರೆ ಅಂತಹವರ ಮೇಲೆ ಕ್ರಮ ಏನು? ಸಚಿವರ ಕುಟುಂಬ, ಅಧಿಕಾರಿಗಳ ಕುಟುಂಬ, ಚಾಲಕರ ಕುಟುಂಬ ಮುಂತಾದವರು ಅನಾವಶ್ಯಕವಾಗಿ ಸರಕಾರದ ಕಾರುಗಳನ್ನು ಮತ್ತು ಇತರ ಸವಲತ್ತುಗಳನ್ನು ಬಳಸುತ್ತಾ ಬೊಕ್ಕಸದ ಹಣ ಹಾಳು ಮಾಡುತ್ತಿದ್ದಾರೆಯೇ? ಮುಂತಾದ ನೂರಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಅಥವಾ ಅಂತಹವುಗಳ ಮೇಲೆ ಕಣ್ಗಾವಲಿಡಲೂ ಸಹ ಒಂದು ಕಂಪನಿಯನ್ನು ನೇಮಿಸಲಿ. ಬೊಕ್ಕಸ ತುಂಬಿಕೊಳ್ಳುವ ಉತ್ಸಾಹ ಇರುವಂತೆ ಅದರ ಸದ್ಬಳಕೆಯ ಕುರಿತೂ ಸಹ ಗಮನವಿರಲಿ.

-ಪತ್ತಂಗಿ ಎಸ್ ಮುರಳಿ ಬೆಂಗಳೂರು

ಭಟ್ಟರ್ ಸ್ಕಾಚ್

● **ಪುಂಗನೂರು ಪೂರ್ಣಯ್ಯ, ಮೈಸೂರು**
ಭಟ್ರೇ, ಕೆಲವೊಮ್ಮೆ ನೀವೇ ಪ್ರಶ್ನೆಯನ್ನು ಕೇಳಿ-ಉತ್ತರಿಸುತ್ತೀರಿ ಅಂತಾರಲ್ಲ?
- ಲಿಕ್ಕರ್‌ನ್ನು ತಯಾರಿಸಿದವರು ಕುಡಿಯಬಾರದು ಅಂದ್ರೆ ಹೇಗೆ ಸ್ವಾಮಿ?!

● **ಪಿ.ಕಣ್ಣನ್, ಬೆಂಗಳೂರು**
ಭಟ್ರೇ, ನನ್ನ ಸಿನಿಮಾಕ್ಕೆ ನಿಮ್ಮ ಕಾಲ್ ಶೀಟ್ ಸಿಗಬಹುದಾ?
- ವಿಶ್ವೇಶ್ವರ ಭಟ್ರ ರೋಲ್ ಇದ್ರೆ ಹೇಳಿ!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಮೊಬೈಲ್ ಇಲ್ಲದೆ ಇರೋ ಹುಡುಗಿಯರು ಹೇಗೆ ಟೈಮ್ ಪಾಸ್ ಮಾಡುತ್ತಾರೆ?
- ಟೈಮೇ ಅವರನ್ನು ಪಾಸ್ ಮಾಡಬಹುದು!

● **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಗೃಹ ಸಚಿವ ಡಾ.ಪರಮೇಶ್ವರ್ ಅವರಿಗೆ ಕ್ರೇಜಿ ಐಡಿಯಾ ಕೊಡಬಾರದೇ?!
- ಬೆಂಗಳೂರಿನಲ್ಲಿ ಪಾದಚಾರಿಗಳಿಗೆ ಸ್ಪೀಡ್ ಲಿಮಿಟ್ ಬೋರ್ಡ್ ಹಾಕಿ ಅಂದ್ರೆ ಹೇಗೆ?!

● **ಸತೀಶ್ ಎಲ್.ವಿ., (ಇಮೇಲ್ ಮೂಲಕ)**
ಸಾರ್, ಇಲ್ಲೊಬ್ಬ ನಾನೇ ಬ್ಲೇಡ್ ಕಂಡು ಹಿಡಿದಿದ್ದು ಅಂತ ಹೇಳ್ತಾನಲ್ಲ?
- ಅದಕ್ಕೂ ಮುಂಚೆ ಗಂಡಸರು ಹೇಗೆ ಶೇವ್ ಮಾಡ್ಕೋತಾ ಇದ್ರು ಅಂತ ಕೇಳಬಾರದೇ?!

● **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಅಪಘಾತಕ್ಕೆ ಅವಸರ ಕಾರಣ ಆದ್ರೆ, ಮದುವೆಗೆ?
- ನಿಧಾನವೇ ಪ್ರಧಾನ!

● **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ರಾಜಕಾರಣಿಗಳಿಗೆ ಬಾಳೆ ಎಲೆಯಲ್ಲಿ ಊಟ ಬಡಿಸಿದರೆ?
- ಬಡಿಸಲಿ ಎಂದು ಕಾಯುತ್ತಾ ಇರ್ತಾರೆ.. ಬಾಳೆ ಸ್ವಚ್ಛ!

● **ಅನಂತ ಪದ್ಮನಾಭ, (ಇಮೇಲ್ ಮೂಲಕ)**
ವಿಧಾನಸೌಧದ ಪಕ್ಕದಲ್ಲೇ ಲೋಕಾಯುಕ್ತ ಕಚೇರಿ, ಸರಿಯೇ ಭಟ್ರೇ?
- ತೀರಾ ಪರಪ್ಪನ ಅಗ್ರಹಾರದ ಪಕ್ಕದಲ್ಲಿರಬೇಕಿತ್ತು ಅಂತೀರಾ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ವ್ಯರ್ಥ ಪ್ರಯತ್ನ ಅಂದ್ರೆ ಏನು?
- ಬೊಕ್ಕ ತಲೆಯಲ್ಲಿ ಬೈತಲೆ ತೆಗೆಯೋದು!

● **ಪಿ.ಪರಶಿವಯ್ಯ, ತುಮಕೂರು**
ಭಟ್ರೇ, ಹೆಂಗಸರು ತಮ್ಮ ಮಾತಿನಲ್ಲಿ 'ನಮ್ಮ ಅತ್ತೆ', 'ನಮ್ಮ ನಾದಿನಿ' ಅಂತ ಹೇಳ್ತಾರಲ್ಲ, ಯಾಕೆ?
- ಅದು ಒಂಥರ ಗಂಡಸರು ನನ್ನ ಅಕ್ಕನ್, ಅಮ್ಮನ್ ಅಂತ ಹೇಳಿದಂತೆ!

● **ಅಶೋಕ ಹೆಗಡೆ, ಶಿರಸಿ**
ಭಟ್ರೇ, ನನ್ನ ತಲೆಗೂದಲುಗಳು ಉದುರುತ್ತಿವೆಯಲ್ಲ?
- ಉದುರಿದರೂ ಚಿಗುರಲು ನೀನು ಮರವಲ್ಲ... ಮನುಷ್ಯ!

ಆತ ಆಟಗಾರ, ಮಾಟಗಾರ, ಮಾತುಗಾರ!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಆತ ಅಷ್ಟು ಅತ್ತಿದ್ದನ್ನು ನೋಡಿಯೇ ಇರಲಿಲ್ಲ, ಆತ ಯಾವತ್ತೂ ಆ ರೀತಿಯಾಗಿ ಅತ್ತವನಲ್ಲ. ಆತ ಗೆಲ್ಲಲಿ-ಸೋಲಲಿ, ಎಂದೂ ಮಾನಸಿಕ ಸಮತೋಲನ ಕಳೆದುಕೊಂಡವನಲ್ಲ, ಸೋತಾಗ ಕಣ್ಣೀರು ಹಾಕುವುದು, ಗೆದ್ದಾಗ ಜಿಗಿಯುವುದು, ಹಾಕಿಕೊಂಡ ಅಂಗಿ ಕಿತ್ತೆಸೆಯುವುದು, ಚೀರುವುದು, ಊಹೂ... ಯಾವುದೂ ಇಲ್ಲ. ಅಂಥ ವ್ಯಕ್ತಿ ಅಷ್ಟು ಅಳುತ್ತಾನೆ ಎಂದರೆ ನಂಬಲು ಸಾಧ್ಯವೇ? ಅಂದು ಅವನಷ್ಟೇ ಅಲ್ಲ, ಅವನ ಜತೆಗೆ ಕ್ರೀಡಾಂಗಣದಲ್ಲಿದ್ದ ಹದಿನಾರು ಸಾವಿರಕ್ಕೂ ಹೆಚ್ಚು ಜನ ಅಳುತ್ತಿದ್ದರು. ಅಂದು ವಿಶ್ವದಾದ್ಯಂತ ಕೋಟಿ ಕೋಟಿ ಜನರ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಅದರಲ್ಲಿ ಅವನ ಪ್ರತಿಸ್ಪರ್ಧಿಗಳೂ ಇದ್ದರು. ಅವನ ಜತೆ ಸೆಣಸಿ ಗೆದ್ದವರು, ಸೋತವರು ಎಲ್ಲರೂ ಇದ್ದರು. ಅಂದು ಆತ ತನ್ನ ಬದುಕಿನ ಕೊನೆಯ ಸೆಣೆಸಾಟ ಮುಗಿಸಿದ್ದ.

'ರೋಜರ್ ಫೆಡ್ರರ್' ಹೆಸರು ಕೇಳದ ಕ್ರೀಡಾಸಕ್ತರು ಇಲ್ಲ ಎಂದೇ ಹೇಳಬಹುದು. ಇದ್ದರೂ ಅಂಥವರ ಸಂಖ್ಯೆ ತೀರಾ ಕಮ್ಮಿ. ಚಿಕ್ಕಂದಿನಿಂದಲೇ ಟೆನಿಸ್ ಆಟವನ್ನು ಆರಾಧಿಸಿದವ ಫೆಡ್ರರ್. ಸ್ವಿಜರ್ಲ್ಯಾಂಡ್‌ನ ಬಾಸೆಲ್ ನಗರದ ಟೆನಿಸ್ ಕ್ರೀಡಾಂಗಣದಲ್ಲಿ 'ಬಾಲ್ ಬಾಯ್' (ಚೆಂಡು ಹೆಕ್ಕುವ ಹುಡುಗ) ಆಗಿ ಆರಂಭಿಸಿ, ತನ್ನ ಹದಿನಾರನೆಯ ವಯಸ್ಸಿನಲ್ಲಿ ಪ್ರಥಮ ಅಂತಾರಾಷ್ಟ್ರೀಯ ಪಂದ್ಯ ಆಡಲು ಕಾಲಿಗೆ ಬೂಟು ಕಟ್ಟಿಕೊಂಡವ. ಆಡಿದ ಮೊದಲ ಪಂದ್ಯದಲ್ಲಿ ರೆಟೊ ಶ್ರಿಡ್ಲಿ ವಿರುದ್ಧ ಒಂದೂ ಸೆಟ್ ಗೆಲ್ಲಲಾಗದೇ ಹೀನಾಯವಾಗಿ ಸೋತವ. ಅದರಿಂದ ಕಂಗಾಲಾಗದೆ, ಸತತ ಪರಿಶ್ರಮದಿಂದ ನಂತರದ ಕಾಲು ಶತಮಾನದವರೆಗೆ ಸಾಧನೆಯ ಶಿಖರವನ್ನೇರಿ ಕುಳಿತ ಅಸಾಮಾನ್ಯ ಸಾಹಸಿ ಫೆಡ್ರರ್. ಇಪ್ಪತ್ತೈದು ವರ್ಷದ ಸುದೀರ್ಘ ಟೆನಿಸ್ ಬದುಕಿನಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಸಿಂಗಲ್ಸ್ ಪಂದ್ಯ ಆಡಿ, ಇಪ್ಪತ್ತು ಗ್ರ್ಯಾಂಡ್ ಸ್ಲಾಮ್ ಸೇರಿದಂತೆ ಒಟ್ಟೂ ನೂರಮೂರು ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿ ಗೆದ್ದು, ಟೆನಿಸ್ ಇತಿಹಾಸದಲ್ಲೇ ಅತಿ ಹೆಚ್ಚು ಪ್ರಶಸ್ತಿ ಗೆದ್ದವರ ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿದ್ದ ಫೆಡ್ರರ್, ಬರೀ ಟೆನಿಸ್ ಪ್ರಶಸ್ತಿಯೊಂದಿಗೆ ಗಳಿಸಿದ ಮೊತ್ತವೇ ನೂರ ಮೂವತ್ತು ಮಿಲಿಯನ್ ಡಾಲರ್ (ಸಾವಿರದ ಎಂಬತ್ತೈದು ಕೋಟಿ)ಗೂ ಹೆಚ್ಚು, ಇನ್ನು ಜಾಹೀರಾತು, ಇತರೆ ಉದ್ಯಮದಿಂದ ಗಳಿಸಿದ್ದು ಬೇರೆ. ಸತತ ಇನ್ನೂರ ಮೂವತ್ತೇಳು ವಾರವೂ ಸೇರಿದಂತೆ ಕ್ರೀಡಾ ಪಯಣದಲ್ಲಿ ಒಟ್ಟೂ ಮುನ್ನೂರ ಹತ್ತು ವಾರ, ಐದು ವರ್ಷ ಎಟಿಪಿ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿ ಮೆರೆದವ. ಒಮ್ಮೆ ಮೈದಾನಕ್ಕಿಳಿದರೆ ತನ್ನ ಆಟದಿಂದ, ನಡವಳಿಕೆಯಿಂದ, ಶಿಷ್ಟಾಚಾರದಿಂದ ಪ್ರೇಕ್ಷಕರನ್ನು ಮೋಡಿಮಾಡುವ ಜಾದೂಗಾರ. ಫೆಡ್ರರ್ ಕೇವಲ ಆಟಗಾರ ಮಾತ್ರವಲ್ಲ, ಮಾಟಗಾರನಾಗಿ ಕಾಣಿಸುತ್ತಿದ್ದ.

ಆ ಕಾಲಘಟ್ಟದಲ್ಲಿ ಫೆಡ್ರರ್‌ಗೆ ಟಕ್ಕರ್ ಕೊಡುತ್ತಿದ್ದದ್ದು ರಫಾಲ್ ನಡಾಲ್ ಮಾತ್ರ. ಫೆಡ್ರರ್-ನಡಾಲ್ ಪಂದ್ಯ ಎಂದರೆ ನಮ್ಮ ಕಡೆ ಭಾರತ-ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ಇದ್ದಂತೆ. ನಡಾಲ್‌ನ ಸಾಧನೆಯೂ ಕಮ್ಮಿಯೇನಲ್ಲ, ಇಪ್ಪತ್ತೆರಡು ಗ್ರ್ಯಾಂಡ್ ಸ್ಲಾಮ್ ಸೇರಿದಂತೆ ಒಟ್ಟೂ ತೊಂಬತ್ತೆರಡು ಪ್ರಶಸ್ತಿ ಜಯಿಸಿದವ. ಎರಡುನೂರ ಎಂಬತ್ತು ವಾರ, ಐದು ವರ್ಷ ಎಟಿಪಿ (Association of Tennis Professionals) ಶ್ರೇಯಾಂಕದಲ್ಲಿ ಮೊದಲನೆಯವನಾಗಿದ್ದವ. ಈಗ ನಡಾಲ್ ಸ್ಥಾನ ಇನ್ನೂರ ಅರವತ್ತಕ್ಕಿಂತಲೂ ಕೆಳಗೆ ಇಳಿದಿದೆ. ಎದುರಾಳಿಯಾಗಿ ಫೆಡ್ರರ್ ಇಲ್ಲದಿರುವುದೂ ಅದಕ್ಕೆ ಒಂದು ಕಾರಣವಾಗಿರಬಹುದು ಎಂದು ಎಷ್ಟೋ ಬಾರಿ ಅನ್ನಿಸಿದ್ದಿದೆ. ನಡಾಲ್ ಮತ್ತು ಫೆಡ್ರರ್ ನಡುವಿನ ಟೆನಿಸ್ ಪೈಪೋಟಿಯನ್ನು ಕ್ರೀಡಾ ಕ್ಷೇತ್ರದ ಇತಿಹಾಸದಲ್ಲಿಯೇ ಅತಿಶ್ರೇಷ್ಠ ಎಂದು ಪರಿಗಣಿಸಲಾಗಿದೆ. ಅವರಿಬ್ಬರೂ ತಮ್ಮ ವೃತ್ತಿ ಜೀವನದಲ್ಲಿ ನಲವತ್ತು ಬಾರಿ ಎದುರಾಳಿಗಳಾಗಿ ಆಡಿದ್ದಾರೆ. ಅದರಲ್ಲಿ ನಡಾಲ್ ಇಪ್ಪತ್ನಾಲ್ಕು ಪಂದ್ಯದಲ್ಲಿ, ಫೆಡ್ರರ್ ಹದಿನಾಲ್ಕು ಪಂದ್ಯದಲ್ಲಿ ಜಯಿಸಿದ್ದಾರೆ. ಪ್ರಶಸ್ತಿಗಾಗಿ ಅವರಿಬ್ಬರ ನಡುವೆ ನಡೆದ ಇಪ್ಪತ್ನಾಲ್ಕು ಅಂತಿಮ ಪಂದ್ಯದಲ್ಲಿ, ಫೆಡ್ರರ್ ಹತ್ತು ಬಾರಿ, ನಡಾಲ್ ಹದಿನಾಲ್ಕು ಬಾರಿ ಗೆದ್ದಿದ್ದಾರೆ.

ಟೆನಿಸ್ ಪ್ರಿಯರಾದವರು 2008 ರ ಜುಲೈನಲ್ಲಿ ವಿಂಬಲ್ಡನ್ ಪ್ರಶಸ್ತಿಯ ಅಂತಿಮ ಪಂದ್ಯ ನೋಡುವುದನ್ನು ತಪ್ಪಿಸಿಕೊಂಡಿರಲಿಕ್ಕಿಲ್ಲ. ಅಂದು ವಿಶ್ವದ ಮೊದಲನೆಯ ಸ್ಥಾನದಲ್ಲಿದ್ದ ಫೆಡ್ರರ್ ಮತ್ತು ಎರಡನೆಯ ಸ್ಥಾನದಲ್ಲಿದ್ದ ನಡಾಲ್, ಪ್ರಶಸ್ತಿಗಾಗಿ ಐದು ತಾಸು ಸೆಣೆಸಿದ್ದರು. ಮೊದಲ ಎರಡು ಸೆಟ್ ನಡಾಲ್ ಗೆದ್ದಿದ್ದರೆ, ನಂತರದ ಎರಡು ಸೆಟ್ ಫೆಡ್ರರ್ ಜಯಿಸಿದ್ದರು. ಐದನೆಯ ಮತ್ತು ಅಂತಿಮ ಪಂದ್ಯ ಸಮನಾಗಿ, ನಂತರ ಎರಡು ಪಾಯಿಂಟ್ ಅಂತರದಿಂದ ನಡಾಲ್ ಗೆದ್ದಿದ್ದರು. ಟೆನಿಸ್ ಇತಿಹಾಸದಲ್ಲಿ ದಾಖಲೆ ಮಾಡಿದ ಪ್ರತಿಸ್ಪರ್ಧಿಗಳ ನಡುವೆ ನಡೆದ ಆ ಅಂತಿಮ ಪಂದ್ಯ, ಶ್ರೇಷ್ಠ ಟೆನಿಸ್ ಪಂದ್ಯಗಳಲ್ಲಿ ಒಂದು ಎಂಬ ಕೀರ್ತಿಗೆ ಪಾತ್ರವಾಯಿತು. ಅಂತಹ ಎದುರಾಳಿಗಳಲ್ಲಿ ಯಾರಾದರೂ ಒಬ್ಬರು ಇನ್ನು ಮುಂದೆ ಇರುವುದಿಲ್ಲ ಎಂದರೆ ಇನ್ನೊಬ್ಬರಿಗೆ ಖುಷಿಯಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಫೆಡ್ರರ್ ಇನ್ನು ಟೆನಿಸ್ ಆಡುವುದಿಲ್ಲ ಎಂಬ ಸುದ್ದಿ ಕೇಳಿದಾಗ ಫೆಡ್ರರ್‌ಗಿಂತ ಹೆಚ್ಚು ನೊಂದವ ನಡಾಲ್. ಕ್ರೀಡೆ ಗೆಲ್ಲುವುದು ಇಂಥವರಿಂದ. ಇಂಥ ಆಟಗಾರರು ಇದ್ದರೆ ಕ್ರೀಡೆ ಕ್ರೀಡಾಂಗಣದ ಒಳಗಷ್ಟೇ ಅಲ್ಲ, ಹೊರಗೂ ಗೆಲ್ಲುತ್ತದೆ.

ಆ ನಿರ್ಣಯ ಕೈಗೊಳ್ಳುವಾಗ ಫೆಡ್ರರ್ ವಯಸ್ಸು ನಲವತ್ತೊಂದು ದಾಟಿತ್ತು. ಆಗಲೇ ನಾಲ್ಕು ಬಾರಿ ಶಸ್ತ್ರಚಿಕಿತ್ಸೆಯೂ ಆಗಿತ್ತು. ಆತ ತನ್ನ ಕೊನೆಯ ಪಂದ್ಯ ಆಡುವುದಾಗಿ ನಿರ್ಧರಿಸಿದ್ದ. ಅದಕ್ಕೆ ತಾನೇ ಆರಂಭಿಸಿದ ಲೇವರ್ ಕಪ್ ಪಂದ್ಯಾಟವನ್ನು ಆರಿಸಿಕೊಂಡಿದ್ದ. 2022 ಸೆಪ್ಟೆಂಬರ್ ತಿಂಗಳಿನಲ್ಲಿ ಲಂಡನ್ ನಗರದಲ್ಲಿ ಪಂದ್ಯಾಟ ನಿಗದಿಯಾಗಿತ್ತು. ಮೊದಲ ಬಾರಿ ಪರಸ್ಪರ ಎದುರಾಳಿಗಳಾಗಿದ್ದ ಫೆಡ್ರರ್ ಮತ್ತು ನಡಾಲ್ ಒಂದೇ ತಂಡದಲ್ಲಿ ಆಡುತ್ತಿದ್ದರು. ಅಷ್ಟೇ ಅಲ್ಲ, ಡಬಲ್ಸ್ ಪಂದ್ಯದಲ್ಲಿ ಜೊತೆಯೂ ಆದರು.

ಲೇವರ್ ಕಪ್ ಬಗ್ಗೆ ಸಣ್ಣ ಮಾಹಿತಿ ಹೇಳುವುದಾದರೆ, 2017 ರಲ್ಲಿ ಫೆಡ್ರರ್ ಆರಂಭಿಸಿದ ಪಂದ್ಯಾಟ ಇದು. ಇದರಲ್ಲಿ ಯುರೋಪ್ ದೇಶದ ಖ್ಯಾತ ಆಟಗಾರರದ್ದು ಒಂದು ತಂಡವಾದರೆ ವಿಶ್ವದ ಇತರ ಹೆಸರಾಂತ ಆಟಗಾರರ ಒಂದು ತಂಡ. ಪ್ರತಿ ತಂಡದಲ್ಲೂ ಇಬ್ಬರು ಇತರೆ ಆಟಗಾರರೂ ಸೇರಿದಂತೆ ಎಂಟು ಆಟಗಾರರು. ಸಿಂಗಲ್ಸ್, ಡಬಲ್ಸ್ ಆಟದಲ್ಲಿ ಜಯಿಸಿದ ಅಂಕಗಳ ಮೇಲೆ ವಿಜೇತ ತಂಡದ ನಿರ್ಣಯ. ಇರಲಿ, ಈ ವಿಷಯ ಯಾಕೆ ಹೇಳುತ್ತಿದ್ದೇನೆ ಎಂದರೆ, ಫೆಡ್ರರ್ ಮನಸ್ಸು ಮಾಡಿದ್ದರೆ ಪಂದ್ಯಾಟವನ್ನು ತನ್ನ ಹೆಸರಿನಲ್ಲಿಯೇ ಆರಂಭಿಸಬಹುದಾಗಿತ್ತು. ಬೇಡ ತಂದೆ, ತಾಯಿ, ಅಜ್ಜ, ಮುತ್ತಜ್ಜ, ಕುಟುಂಬದ ಹೆಸರಿನಲ್ಲಿ ಮಾಡಬಹುದಾಗಿತ್ತು. ಅದೂ ಬೇಡ, ತನ್ನ ದೇಶದ ಶ್ರೇಷ್ಠ ಕ್ರೀಡಾಪಟುವಿನ ಹೆಸರಿಡಬಹುದಾಗಿತ್ತು. ಆದರೆ ಫೆಡ್ರರ್ ಕ್ರೀಡಾ ಕ್ಷೇತ್ರದಲ್ಲಿದ್ದವನೇ ಹೊರತು ರಾಜಕೀಯ ಕ್ಷೇತ್ರದಲ್ಲಿದ್ದವನಲ್ಲ, ಆತ ರಾಜಕಾರಣಿಯೂ ಅಲ್ಲ, ಸ್ವಾರ್ಥಿಯೂ ಅಲ್ಲ, ಅವನ ಕ್ಷೇತ್ರ ಟೆನಿಸ್ ಆಟ. ಆ ಕ್ಷೇತ್ರದಲ್ಲಿ ಹನ್ನೊಂದು ಬಾರಿ ಗ್ರ್ಯಾಂಡ್‌ಸ್ಲ್ಯಾಮ್ ಗೆದ್ದ ಆಸ್ಟ್ರೇಲಿಯಾದ ರಾಡ್ ಲೇವರ್ ಹೆಸರನ್ನು ಪಂದ್ಯಾಟಕ್ಕೆ ಇಟ್ಟಿದ್ದ ಫೆಡ್ರರ್. ಮತ್ತೊಮ್ಮೆ ಹೇಳುತ್ತೇನೆ, ಕ್ರೀಡೆ ಗೆಲ್ಲುವುದು ಇಂಥವರಿಂದ.

ಅಂದು ಲೇವರ್ ಕಪ್‌ನ ಮೊದಲದಿನವಾಗಿತ್ತು. ಮೊದಲ ಸೆಟ್ ಗೆದ್ದ ಫೆಡ್ರರ್-ನಡಾಲ್ ಜೋಡಿ ನಂತರದ ಎರಡು ಸೆಟ್‌ಗಳಲ್ಲಿ ಜ್ಯಾಕ್ ಸಾಕ್-ಫ್ರಾನ್ಸಿಸ್ ಟಿಯಾಫೋ ವಿರುದ್ಧ ಸೋತಿತ್ತು. ಪಂದ್ಯಾಟದ ಸಂದರ್ಭದಲ್ಲಿ ನಡಾಲ್ ಹೇಳಿದ ಹೇಳಿದ್ದ, 'ನಾನು ಫೆಡ್ರರ್ ಆತವನ್ನು ಟಿವಿಯಲ್ಲಿ ನೋಡುತ್ತಿದ್ದೆ. ನಂತರದ ದಿನಗಳಲ್ಲಿ ಆತದ ಮೈದಾನಕ್ಕಿಳಿದಾಗ ಅವನನ್ನೇ ಪ್ರತಿಸ್ಪರ್ಧಿಯಾಗಿ ಎದುರಿಸಿದೆ. ಇನ್ನು ಮೈದಾನದಲ್ಲಿ ಅವನೇ ಇರುವುದಿಲ್ಲ ಎಂದರೆ ನಂಬಲಾಗುತ್ತಿಲ್ಲ. ಕೊನೆಯ ಪಂದ್ಯಾಟದಲ್ಲಿ ಅವನ ತಂಡದಲ್ಲಿದ್ದು ಅವನ ಜತೆ ಆಡುತ್ತಿದ್ದೇನೆ ಎಂಬ ಖುಷಿ ಇದ್ದರೂ, ಇನ್ನು ಮುಂದೆ ಮೈದಾನದಲ್ಲಿ ಆತ ಇರುವುದಿಲ್ಲ ಎಂಬ ದುಃಖವೂ ಇದೆ. ಯಾವುದೇ ಕ್ಷೇತ್ರವಾದರೂ ಹೊಸಬರುಬರುತ್ತಾರೆ, ಹಳೆಯವರು ಮರೆಯಾಗುತ್ತಾರೆ. ಆದರೆ ಈ ಆಟದಲ್ಲಿ ಇತಿಹಾಸ ನಿರ್ಮಿಸಿದವ ನಿರ್ಗಮಿಸುತ್ತಿದ್ದಾನೆ ಎಂದಾಗ ನೋವಾಗುತ್ತಿದೆ' ಎಂದು ಗಳಗಳನೆ ಅತ್ತಿದ್ದ. ಅದೊಂದು ಭಾವುಕ ಕ್ಷಣ ಅಂದು ಫೆಡ್ರರ್ ಸೇರಿದಂತೆ ಇತರ ಟೆನಿಸ್ ತಾರೆಗಳು, ಕ್ರೀಡಾಂಗಣದಲ್ಲಿದ್ದವರು, ಎಲ್ಲರ ಕಣ್ಣೂ ಒದ್ದೆಯಾಗಿತ್ತು. ಅಲ್ಲಿಯವರೆಗೂ ಫೆಡ್ರರ್ ಅಷ್ಟು ಭಾವುಕನಾದದ್ದನ್ನು, ಆ ಪರಿ ಅತ್ತಿದ್ದನ್ನು ನಾನಂತೂ ನೋಡಿರಲಿಲ್ಲ.

ಅಂದು ಡ್ರೆಸ್ಸಿಂಗ್ ರೂಮಿಗೆ ಬಂದ ಫೆಡ್ರರ್ ಹೇಳಿದ್ದ, 'ಇನ್ನೂ ಎರಡು ದಿನದ ಆಟ ಬಾಕಿ ಇದೆ. ನಾನು ಆಡುವುದಿಲ್ಲ ನಿಜ, ಆದರೆ ನಾಳೆಯಿಂದ ಎರಡು ದಿನವೂ ನಿಮ್ಮನ್ನು ಹುರುದುಂಬಿಸಲು ಮೈದಾನದಲ್ಲಿ ನಿಮ್ಮ ಜತೆಯೇ ಇರುತ್ತೇನೆ.' ಆದರೆ ತಂಡದಲ್ಲಿ ಫೆಡ್ರರ್, ನಡಾಲ್, ನೋವಾಕ್‌ನಂತಹ ಆಟಗಾರರಿದ್ದರೂ ಯೊರೋಪ್ ತಂಡ ಸೋಲುತ್ತದೆ. ಟೆನಿಸ್ ದಿಗ್ಗಜ ಫೆಡ್ರರ್‌ಗೆ ದುಃಖದ ವಿದಾಯವಾಗುತ್ತದೆಯೇ ವಿನಃ ಸಂತೋಷದ ವಿದಾಯವಾಗುವುದಿಲ್ಲ. ಏನು ಗೊತ್ತೆ? ಫೆಡ್ರರ್ ಇದನ್ನು 'ವಿದಾಯ' ಎಂದು ಹೇಳುವುದಿಲ್ಲ, ಬದಲಾಗಿ ಇದನ್ನು 'ಪದವಿ' ಎಂದು ಕರೆಯುತ್ತಾನೆ.

ಇತ್ತೀಚೆಗೆ ಫೆಡ್ರರ್‌ಗೆ ಆತ ಕಲಿತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಯಿತು. ಟೆನಿಸ್ ಆಡಲು ಕಾಲೇಜು ಬಿಟ್ಟಿದ್ದ ಫೆಡ್ರರ್, ಜೀವನದಲ್ಲಿ ಎರಡನೆಯ ಬಾರಿ ಕಾಲೇಜು ಮೆಟ್ಟಿಲು ಹತ್ತಿದ್ದ, ಅದೂ ಡಾಕ್ಟರೇಟ್ ಪಡೆಯಲು. ಆ ಸಭೆಯಲ್ಲಿ ಆತ ಮೊದಲು ಹೇಳಿದ ಮಾತೇ ಅದು. 'ನಾನು ಟೆನಿಸ್‌ಗೆ ವಿದಾಯ ಹೇಳಿದೆ, ಅದರಿಂದ ನಿವೃತ್ತನಾದೆ ಎಂದು ಹೇಳುವುದಿಲ್ಲ. ಕಾಲೇಜು ಶಿಕ್ಷಣ ಮುಗಿಸಿದ ನಂತರ ನಾವು ''ಪದವೀಧರರು'' ಎಂದು ಕರೆಸಿಕೊಳ್ಳುತ್ತೇವೆಯೇ ವಿನಃ ಕಾಲೇಜಿನಿಂದ ನಿವೃತ್ತರಾದೆವು ಎಂದು ಹೇಳುವುದಿಲ್ಲ. ಹಾಗೆಯೇ ನಾನು ಈಗ ಟೆನಿಸ್ ಪದವೀಧರನಾಗಿದ್ದೇನೆ'.

'ಜನರು ನನ್ನ ಮುಂದಿನ ಯೋಜನೆಗಳ ಬಗ್ಗೆ ಕೇಳುತ್ತಾರೆ. ಸದ್ಯಕ್ಕೆ ಏನೂ ಇಲ್ಲ. ನನ್ನ ಮಕ್ಕಳನ್ನು ಶಾಲೆಗೆ ಬಿಡುತ್ತೇನೆ, ಮನೆಯನ್ನು ಸ್ವಚ್ಛಗೊಳಿಸುತ್ತೇನೆ, ಆಗಂತುಕರೊಂದಿಗೆ ಆನ್‌ಲೈನ್‌ನಲ್ಲಿ ಚೆಸ್ ಆಡುತ್ತೇನೆ. ಇದೆಲ್ಲವೂ ನನಗೆ ಖುಷಿ ಕೊಡುತ್ತಿದೆ. ಜನ ನಾನು ಟೆನಿಸ್ ಆಡುವಾಗ, ಈತ ಹೆಚ್ಚು ಬೆವರು ಸುರಿಸುವುದಿಲ್ಲ, ಶ್ರಮಪಡದೆ ಸಲೀಸಾಗಿ ಟೆನಿಸ್ ಆಡುತ್ತಾನೆ, ಅವನಲ್ಲಿ ಪ್ರತಿಭೆ ಇದೆ ಎನ್ನುತ್ತಿದ್ದರು. ಅದು ಸುಳ್ಳು. ಜೀವನದಲ್ಲಿ ಶ್ರಮಪಡದೆ ಏನೂ ಸಿಗುವುದಿಲ್ಲ. ಆ ಕ್ಷಣದಲ್ಲಿ ನೋಡುವವರಿಗೆ ಸಲೀಸು ಎಂದೆನಿಸಿದರೂ ಅದರ ಹಿಂದೆ ಸಾಕಷ್ಟು ಬೆವರಿನ ಹನಿಗಳು ಭುವಿಗೆ ಬಿದ್ದಿರುತ್ತವೆ. ಪ್ರತಿಭೆಯೊಂದಿಗೆ ಬಹುಮಾನ ಬರುವುದಿಲ್ಲ. ಜೀವನದಲ್ಲಿ ಶಿಸ್ತು, ತಾಳ್ಮೆ, ನಮ್ಮನ್ನು ನಾವು ನಂಬುವುದು, ನಾವು ರೂಪುಗೊಳ್ಳುವ ಪ್ರಕ್ರಿಯೆಯನ್ನು ಇಷ್ಟಪಡುವುದು, ಎಲ್ಲವೂ ಪ್ರತಿಭೆಯೇ. ಬಹುಮಾನ ಬೇಕಾದರೆ ಪ್ರತಿಭೆಯನ್ನು ಹದಗೊಳಿಸಬೇಕು. ನಾವು ಗೆಲ್ಲಬೇಕಾದರೆ ಪ್ರತಿಸ್ಪರ್ಧಿಯೊಂದಿಗೆ ಸೆಣಸಲು ಸಿದ್ಧರಾಗಬೇಕು. ಅದಕ್ಕೆ ನಮ್ಮಲ್ಲಿಯೇ ನಮಗೆ ನಂಬಿಕೆ ಬರಬೇಕು. ನಂಬಿಕೆ ಬರಬೇಕಾದರೆ ಅದಕ್ಕೆ ನಾವು ಸಿದ್ಧರಾಗಬೇಕು'.

'ಕೆಲವೊಮ್ಮೆ ಒಂದು ಅಂಕವೂ ಮಹತ್ವದ್ದಾಗುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆ 2008 ರ ವಿಂಬಲ್ಡನ್ ಅಂತಿಮ ಪದ್ಯ. ಒಂದು ಅಂಕದಿಂದ ನಾನು ನಡಾಲ್ ವಿರುದ್ಧ ಸೋತೆ. ಅದು ಕೇವಲ ಸೋಲಾಗಿರಲಿಲ್ಲ. ಅದರಿಂದ ನಾನು ಸತತ ಆರು ಬಾರಿ ವಿಂಬಲ್ಡನ್ ಜಯಿಸುವುದರಿಂದ ವಂಚಿತನಾದೆ. ಶ್ರೇಯಂಕದಲ್ಲಿ ಅಗ್ರ ಸ್ಥಾನವನ್ನು ಕಳೆದುಕೊಂಡೆ. ನನ್ನ ಟೆನಿಸ್ ವೃತ್ತಿ ಮುಗಿಯಿತು ಎಂದು ಜನ ಮಾತನಾಡಲು ಆರಂಭಿಸಿದರು. ಆದರೆ ನನಗೆ ಭರವಸೆಯಿತ್ತು. ನಾನು ಆಡಿದ ಪಂದ್ಯಗಳಲ್ಲಿ ಶೇಕಡಾ ಎಂಬತ್ತರಷ್ಟನ್ನು ಗೆದ್ದಿದ್ದೇನೆ. ಗೆದ್ದ ಪಂದ್ಯಗಳಲ್ಲಿ ಪಡೆದ ಅಂಕಗಳು (ಪಾಯಿಂಟ್ಸ್) ಶೇಕಡಾ ಐವತ್ತಕ್ಕಿಂತ ಸ್ವಲ್ಪ ಎಚ್ಚು ಅಷ್ಟೇ. ಕೆಲವೊಮ್ಮೆ ಒಂದು ಅಂಕ ಕಳೆದುಕೊಳ್ಳುತ್ತೇವೆ, ಪಂದ್ಯ, ಪಂದ್ಯಾಟ ಕಳೆದುಕೊಳ್ಳುತ್ತೇವೆ. ಕೆಲವೊಮ್ಮೆ ಉದ್ಯೋಗ, ಹಣ, ಪ್ರೀತಿ, ಖುಷಿಯನ್ನೂ ಕಳೆದುಕೊಳ್ಳುತ್ತೇವೆ. ಅದನ್ನೆಲ್ಲ ಪುನಃ ಗಳಿಸುವುದು ಹೇಗೆ ಎಂದು ತಿಳಿದು ಪುನಃ ಗಳಿಸಿಕೊಳ್ಳುತ್ತೇವೆ, ಗೆಲ್ಲುತ್ತೇವೆ. ಆಟದಲ್ಲಿ ಇರುವಂತೆ ಜೀವನದಲ್ಲಿಯೂ ಈ ರೀತಿಯ ಏರಿಳಿತಗಳು ಇದ್ದದ್ದೇ. ನಾವು ಕಳೆದುಕೊಂಡದ್ದನ್ನು ಪುನಃ ಗಳಿಸುವುದು ಹೇಗೆ ಎಂದು ಕಲಿಯಬೇಕು, ಆ ಕಡೆ ಲಕ್ಷ್ಯ ಹರಿಸಬೇಕು'.

ಮುಂದುವರಿದು ಫೆಡ್ರರ್ ಹೇಳುತ್ತಾನೆ, 'ನಮ್ಮ ಬದುಕು ಟೆನಿಸ್ ಮೈದಾನಕ್ಕಿಂತ ದೊಡ್ಡದು. ಟೆನಿಸ್ ನನಗೆ ಜಗತ್ತನ್ನು ತೋರಿಸಿತ್ತು ಆದರೆ ಟೆನಿಸ್ ಆಟವೇ ಜಗತ್ತಾಗಲು ಸಾಧ್ಯವಿಲ್ಲ ಎಂಬುದೂ ನನಗೆ ತಿಳಿದಿತ್ತು. ನೀವೂ ಕೂಡ ಈಗ ಬೇರೆ ಬೇರೆ ಕ್ಷೇತ್ರಕ್ಕೆ ಹೋಗುತ್ತಿದ್ದೀರಿ, ಕ್ಷೇತ್ರ ಯಾವುದೇ ಆದರೂ ನಿಮ್ಮಲ್ಲಿರುವ ಅತ್ಯುತ್ತಮವಾದದ್ದನ್ನು ನೀಡಿ'.

ಕೊನೆಯದಾಗಿ, 'ನಾನು ನಿಮ್ಮ ಸಹಪಾಠಿ ಎನ್ನುವುದನ್ನು ಮರೆಯದಿರಿ. ಎಲ್ಲೇ ಕಂಡರೂ ಮಾತನಾಡಿಸಿ, ನಾನು ಮತ್ತು ನೀವು ಒಟ್ಟಿಗೇ ಪದವಿ ಪಡೆದಿದ್ದೇವೆ ಎಂಬುದನ್ನು ನೆನಪಿಸಿ'. ಫೆಡ್ರರ್ ಬರೀ ಆಟಗಾರ, ಮಾಟಗಾರನಷ್ಟೇ ಅಲ್ಲ, ಮಾತುಗಾರನೂ ಹೌದು ಎಂದೆನಿಸಿತು.

ಮೊನ್ನೆ ಜೂನ್ ಇಪ್ಪತ್ತನೇ ತಾರೀಖು, ಅಮೆಝೂನ್ ಪ್ರೈಮ್ ವಿಡಿಯೋದಲ್ಲಿ ಒಂದೂವರೆ ಗಂಟೆಯ Federer: Twelve final days ಎಂಬ ಕಿರು ಸಾಕ್ಷ್ಯಚಿತ್ರ ಬಿಡುಗಡೆಯಾಗಿದೆ. 2022 ರ ಸೆಪ್ಟೆಂಬರ್ 14 ರಿಂದ ಫೆಡ್ರರ್ ಜೀವನದ ಹನ್ನೆರಡು ದಿನಗಳು ಹೇಗಿದ್ದವು ಎಂದು ಹೇಳುವ ಚಿತ್ರ ಅದು. ಸಾಧ್ಯವಾದರೆ ನೋಡಿ. ಒಂದು ಕೆಟ್ಟ ಸಿನಿಮಾ ನೋಡದ ಸಮಾಧಾನ ನಿಮ್ಮದಾಗುತ್ತದೆ. ಒಬ್ಬ ರಿಯಲ್ ಹೀರೋ ನೋಡಿದ ಖುಷಿ ಸಿಗುತ್ತದೆ. ಇದು 'ಹ್ಯಾಪಿ ಎಂಡಿಂಗ್' ಚಿತ್ರವೋ ಅಥವಾ 'ಸ್ಯಾಡ್ ಎಂಡಿಂಗ್' ಚಿತ್ರವೋ ಎನ್ನುವುದು ನಿಮ್ಮ ನಿರ್ಧಾರಕ್ಕೆ ಬಿಟ್ಟಿದ್ದು.

ಕೊನೆಯದಾಗಿ; 'ಟೆನಿಸ್ ಆಟದಲ್ಲಿ ರೋಜರ್ ಫೆಡ್ರರ್‌ನಷ್ಟು ಲೀಲಾಜಾಲವಾಗಿ, ಸೊಗಸಾಗಿ ಆಡುವ, ಪರಿಪೂರ್ಣ ಆಟಗಾರ ಇನ್ನು ಮುಂದೆ ಬರಲಿಕ್ಕಿಲ್ಲ'. ಇದು ಫೆಡ್ರರ್ ಕುರಿತು ಅವನ ಪ್ರತಿಸ್ಪರ್ಧಿ ನಡಾಲ್ ಹೇಳಿದ ಮಾತು.

ಪ್ರಸ್ತುತ

ಪ್ರೊ.ಪಂಡಿತರಾವ ಚಂದ್ರಶೇಖರ ಧರೆನ್ನವರ

ಹೊರನಾಡು ಕನ್ನಡಿಗರು ಎದುರಿಸುತ್ತಿರುವ ಪ್ರಶ್ನೆಗಳು

ಕರ್ನಾಟಕದಿಂದ ಸಾವಿರಾರು ಮೈಲು ದೂರ ಇರುವ ಹೊರನಾಡು ಕನ್ನಡಿಗರು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಹೆಮ್ಮೆಯಿಂದ ಹಾಡಿ ಹೊಗಳಿ ಹೊರ ರಾಜ್ಯದ ಜನರನ್ನು ಕರ್ನಾಟಕದತ್ತ ಮನಸೆಳೆಯುವ ಕೆಲಸ ಸದಾ ಮಾಡುತ್ತಾ ಇರುತ್ತಾರೆ. ಆದರೆ ಕೆಲವು ದಿನಗಳಿಂದ ಕರ್ನಾಟಕದಲ್ಲಿ ಆದ ಕೆಲವು ಘಟನೆಗಳು ಹೊರನಾಡು ಕನ್ನಡಿಗರನ್ನು ಹೊರ ರಾಜ್ಯದ ಜನರ ಮುಂದೆ ತಲೆತಗ್ಗಿಸುವಂತಾಗಿದೆ. ಐಟಿ-ಬಿಟಿಗೆ ಹೆಸರಾದ ಕರ್ನಾಟಕ ಅದು ಹೇಗೆ ತಾನೇ ತಾಂತ್ರಿಕ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಕೇಳುತ್ತಿರುವ ಹೊರ ರಾಜ್ಯದ ಜನರ ಪ್ರಶ್ನೆಗಳಿಗೆ ಹೊರನಾಡು ಕನ್ನಡಿಗರ ಹತ್ತಿರ ಉತ್ತರವೇ ಇಲ್ಲದಂತಾಗಿದೆ. ಜನಪ್ರತಿನಿಧಿಗಳೇ ವಿಧಾನಸೌಧದಲ್ಲಿ ನಗ್ನ ಚಿತ್ರವನ್ನು ನೋಡುವ ಘಟನೆಗಳಿಂದ ಹಿಡಿದು ಇದೀಗ ನಡೆದ ರೇಣುಕಾಸ್ವಾಮಿ - ಚಿತ್ರನಟ ದರ್ಶನ್ ಘಟನೆಗೆ ತಾಂತ್ರಿಕ ದುರುಪಯೋಗವೇ ಕಾರಣವಲ್ಲವೇ ಎಂದು ಕೇಳುವ ಪ್ರಶ್ನೆಗಳಿಗೆ ಹೊರನಾಡು ಕನ್ನಡಿಗರು ಅದು ಹೇಗೆ ತಾನೇ ಉತ್ತರ ನೀಡುವರು?

ಹೊರ ರಾಜ್ಯದಲ್ಲಿ ವಾಸಿಸುತ್ತಿರುವ ಹೊರನಾಡು ಕನ್ನಡಿಗರಿಗೆ ಕೇಳುವ ಪ್ರಶ್ನೆಗಳು ಇಲ್ಲಿಗೇ ನಿಲ್ಲುವದಿಲ್ಲ. ಹಿರಿಯ ರಾಜಕಾರಣಿ ಪೋಸ್ಕೋ ಕಾನೂನಿನಲ್ಲಿ ಅದು ಹೇಗೆ ತಾನೇ ಬುಕ್ ಆದರು? ಪ್ರೇಮ ಎಂಬ ಭಾವನೆಯಲ್ಲಿ ಹಾಡ ಹಗಲೇ ಹರೆಯದ ಹುಡುಗಿಯೊಬ್ಬಳನ್ನು ಚಾಕುವಿನಿಂದ ಹಲವು ಬಾರಿ ಚುಚ್ಚಿ ಕೊಂದ ಆ ಪ್ರೇಮಿಯ ಹುಚ್ಚುತನ ಅದೆಷ್ಟು ಮಟ್ಟಿಗೆ ಏರಿತ್ತು? ಕನ್ನಡದವರು ಇಂಥವರೇ? ಎಂದು ಕೇಳುವ ಹೊರ ರಾಜ್ಯದ ಜನರ ಪ್ರಶ್ನೆಗಳು ಹೊರನಾಡು ಕನ್ನಡಿಗರ ಹೃದಯದಲ್ಲಿ ದುಃಖ ತರುತ್ತದೆ.

ಸಾಮಾನ್ಯವಾಗಿ ಜಗದ ಎಲ್ಲ ಸ್ಥಳಗಳಲ್ಲಿ ಇಂತಹ ಘಟನೆಗಳು ನಡೆಯುತ್ತವೆ. ಆದರೆ ಕರ್ನಾಟಕದಲ್ಲಿ ಸತತವಾಗಿ ನಡೆಯುತ್ತಿರುವ ಹಿಂಸಾತ್ಮಕ ಮತ್ತು ಅಮೌಲ್ಯಿಕ ಘಟನೆಗಳು ಕರ್ನಾಟಕದಲ್ಲಿ ಮೌಲ್ಯಿಕ ರೂಢಿಗಳು ಕುಗ್ಗುತ್ತಿರುವ ದಿಕ್ಸೂಚಿಯಾಗಿವೆ. ಬಸವನ ನಾಡಿನಲ್ಲಿ ಬುದ್ಧಿ ಇಲ್ಲದಂತೆ ಜೀವನ ನಡೆಸುತ್ತಿರುವ ಕೆಲವರ ಕಾರಣದಿಂದಾಗಿ ಸಂಪೂರ್ಣ ಕರ್ನಾಟಕ ತಲೆತಗ್ಗಿಸುವಂತಾಗುತ್ತಿದೆ. ಸರ್ವಜ್ಞ, ಸಂತ ಶಿಸುನಾಳ ಷರೀಫರ ತತ್ವದ ನುಡಿಗಳನ್ನು ಕೇಳುವ ಕನ್ನಡಿಗರಲ್ಲಿ ಈಗೀಗ ಕೆಲವು ಕನ್ನಡಿಗರು ಅಭದ್ರ, ಅಶ್ಲೀಲ ಗೀತೆಗಳನ್ನು ಕೇಳಿ ಏಕೆ ಕುಣಿಯುತ್ತಿದ್ದಾರೆ? ದಾಸರ ಕೀರ್ತನೆ ಕೇಳಿ ಕಾಣದಾ ದೇವರ ಲೀಲೆಯನ್ನು ಅನುಭವಿಸುತ್ತಿದ್ದ ಕನ್ನಡಿಗರಲ್ಲಿ ಈಗೀಗ ಕೆಲವು ಕನ್ನಡಿಗರು ಹೆಂಡದ ಹಾಡುಗಳನ್ನು ಕೇಳಿ ಕೇಳಿ, ಕಟ್ಟಿಕೊಂಡ ಹೆಂಡತಿಯನ್ನೇ ಬಿಟ್ಟು ಇನ್ನೊಬ್ಬಳ ಜೊತೆ ಜೀವನ ಅದೇಕೆ ನಡೆಸುತ್ತಿದ್ದಾರೆ? ಸ್ವಚ್ಛ ಜೀವನ ನಡೆಸುವ ರೀತಿಯನ್ನು ತಿಳಿಹೇಳುವ ಪವಿತ್ರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ ಆಧುನಿಕತೆಯಲ್ಲಿ ಅದು ಏಕೆ ತಾನೇ ಬದಲಾವಣೆ ಆಗುತ್ತಿದ್ದಾರೆ? ಸಮಾಜದಲ್ಲಿ ಬದಲಾಗುತ್ತಿರುವ ಮೌಲ್ಯಿಕ ಜೀವನವನ್ನು ನಿಯಂತ್ರಿಸುವದು ಪೊಲೀಸ ಮತ್ತು ಕೋರ್ಟಿನ ಕೆಲಸವಲ್ಲ. ಸಮಾಜದಲ್ಲಿ ಕುಗ್ಗುತ್ತಿರುವ ಮೌಲ್ಯಿಕ ಜೀವನವನ್ನು ಸುಧಾರಿಸುವದು ಮಠ, ಮಂದಿರ, ಮಸೀದಿ, ಗುರುದ್ವಾರ ಹಾಗೂ ಚರ್ಚ್‌ಗಳಲ್ಲಿರುವ ಧಾರ್ಮಿಕರ ಆದ್ಯ ಕರ್ತವ್ಯವಾಗಿತ್ತು. ಸಮಾಜದೊಂದಿಗೆ ಜನ ಜಾಗ್ರತಿ ಹೆಚ್ಚಿಸುವ ಕೆಲಸ ಇವರದಾಗಿತ್ತು. ಸರಕಾರದಿಂದ ತುಟ್ಟಿ ಭತ್ತೆಗಾಗಿ ಸದಾ ಕಾಯುವ ಸರಕಾರಿ ನೌಕರರು ಸಮಾಜದಲ್ಲಿ ಮೌಲ್ಯ ರೂಢಿಗಳನ್ನು ಎತ್ತಿ ಹಿಡಿಯಲು ಶ್ರಮಿಸಬೇಕಾಗಿತ್ತು. 6ನೇ ವೇತನ ಆಯೋಗದ ಲಾಭ ಗಿಟ್ಟಿಸಿಕೊಂಡು 7ನೇ ವೇತನ ಆಯೋಗಕ್ಕಾಗಿ ಕಾಯುತ್ತಿರುವ ಪ್ರತಿಯೊಬ್ಬ ಅಧ್ಯಾಪಕರು ಕೇವಲ ಕ್ಲಾಸ್ ರೂಮಿನಲ್ಲಿ ಪಾಠ ಹೇಳದೇ, ಸಮಾಜದ ವಿವಿಧ ಪಂಗಡಗಳಿಗೆ ಪಾಠ ಹೇಳುವ ಕೆಲಸ ಮಾಡಬೇಕಾಗಿತ್ತು. ದುರ್ದೈವವೇನೆಂದರೆ, ಶಿಕ್ಷಕರು ಕ್ಲಾಸ್ರೂಮಿಗೆ ಸೀಮಿತರಾದರು. ನೌಕರರು 9 ರಿಂದ 5ರ ವರೆಗಿನ ಸಮಯಕ್ಕೆ ಸೀಮಿತರಾದರು. ಮಠ, ಮಂದಿರ, ಮಸೀದಿ, ಗುರುದ್ವಾರ ಹಾಗೂ ಚರ್ಚ್ ಧಾರ್ಮಿಕರು ತಮ್ಮದೇ ಆದ ದಿನನಿತ್ಯದ ಚಟುವಟಿಕೆಗಳಲ್ಲಿ ಸೀಮಿತರಾದರು. ಅದಕ್ಕಾಗಿಯೇ ಸಮಾಜದಲ್ಲಿ ಮೌಲ್ಯಿಕ ರೂಢಿಗಳು ಕುಗ್ಗುತ್ತಿವೆ. ಸಮಯದ ಬೇಡಿಕೆಯೇನೆಂದರೆ, ಸಮಾಜದ ಜನಸಾಮಾನ್ಯರನ್ನು ಜಾಗ್ರತಗೊಳಿಸುವದಾಗಿದೆ. ವಚನ, ಕೀರ್ತನೆ, ತತ್ವಸಾರ, ಗೀತಾ ಬೋಧನೆಗಳನ್ನು ಸಾಮಾನ್ಯ ಜನರಿಗೆ ತಿಳಿಹೇಳುವ ಸಮಯ ಇದಾಗಿದೆ. ಹೊರನಾಡು ಕನ್ನಡಿಗರು ಕನ್ನಡೇತರರಿಂದ ಎದುರಿಸುತ್ತಿರುವ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ಜನಜಾಗ್ರತಿ ಹುಟ್ಟಿಸುವುದಾಗಿದೆ. ಸ್ವಾಭಿಮಾನ, ಸತ್ಯ ಹಾಗೂ ನಿಷ್ಠೆಯ ಜೀವನ ನಡೆಸುವ ಕನ್ನಡಿಗರ ಕನ್ನಡ ನಾಡಿನ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಸಮಯ ಇದಾಗಿದೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಸಮಾಜ ಶಾಸ್ತ, ಚಂಡೀಗಢ (ಪಂಜಾಬ್)

ಸೋಲನ್ನೂ ಗೆಲ್ಲುವ ಕಲೆಯಲ್ಲಿ ನಿಸ್ಸೀಮರು ಯಾರು?



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಮೊದಲಿಗೊಂದು ಪ್ರಶ್ನೆ. ಸೋಲನ್ನು ಗೆಲ್ಲಲು ಸಾಧ್ಯವಿದೆಯೇ? ಬಹುಶಃ ಸಾಧ್ಯವಿದೆ. ನೀವು ಗುರಿಯನ್ನೇ ಬಹಳ ಹತ್ತಿರಕ್ಕೆ ನಿಗದಿಪಡಿಸಿಕೊಳ್ಳಿ. ಆಗ ನೀವು ಬಿಟ್ಟ ಬಾಣವು ಗುರಿಯ ಸ್ವಲ್ಪ ದೂರ ಆಚೆ ಹೋಗಿ ಬಿದ್ದರೆ, ಅಯ್ಯೋ ಜಸ್ಟ್ ಮಿಸ್ ಆಗಿಹೋಯಿತು ಎಂದು ಖುಷಿಪಡುವುದಕ್ಕೆ ಏನೂ ಅಡ್ಡಿಯಿಲ್ಲ. ನಾನೇನೂ ವಕ್ರದೃಷ್ಟಿಯನ್ನು ಸಮರ್ಥಿಸಿಕೊಳ್ಳುತ್ತಿಲ್ಲ. ಬದಲಿಗೆ, ನಿರೀಕ್ಷೆಗಳನ್ನು ಕಲಾತ್ಮಕವಾಗಿ ನಿಭಾಯಿಸುವ ಚಾಕಚಕ್ಯತೆಯನ್ನು ಹೊಗಳುತ್ತಿದ್ದೇನೆ. ರಾಜಕೀಯದಲ್ಲಿ ಯಾವಾಗಲೂ ವೇಟಿಂಗ್ ರೂಮ್ ಎಂಬ ಬೇಜಾರಿನ ಸ್ಥಳದಲ್ಲಿ ಕುಳಿತುಕೊಂಡಿರುವವರಿಗೆ ಇಂತಹದ್ದೊಂದು ಜಾಣ್ಮೆ ಇದ್ದರೆ ಒಳ್ಳೆಯದೇ ಬಿಡಿ. ಕಾಂಗ್ರೆಸ್ ಪಕ್ಷ ಈ ಕಲೆಯನ್ನು ಸಿದ್ಧಿಸಿಕೊಂಡಿದೆ. ಹೇಗೆ ಎಂಬುದನ್ನು ನೋಡಲು ಅಂಕಿಅಂಶಗಳನ್ನು ಗಮನಿಸಿದರೆ ಹೆಚ್ಚು ಪ್ರಯೋಜನವಿಲ್ಲ. ಆದರೂ ನೋಡೋಣ ಬನ್ನಿ.

ಕೊನೆಯ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದ್ದು 2009ರ ಚುನಾವಣೆಯಲ್ಲಿ. ಆ ಸಲ ಅದು ಗೆದ್ದಿದ್ದು 206 ಸೀಟುಗಳನ್ನು. ಪಡೆದ ಮತ ಶೇ.28.55ರಷ್ಟು. ಆ ಚುನಾವಣೆಯಲ್ಲಿ ಬಿಜೆಪಿ 116 ಸೀಟು ಗೆದ್ದು, ಶೇ.18.8 ಮತ ಗಳಿಸಿತ್ತು. ಹದಿನೈದು ವರ್ಷಗಳ ಬಳಿಕ ಈಗ ಬಿಜೆಪಿ ಶೇ.36.56 ಮತ ಪಡೆದು 240 ಸೀಟುಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ ಪಕ್ಷ ಶೇ.21.19 ಮತ ಪಡೆದು 99 ಸೀಟುಗಳನ್ನು ಗೆದ್ದಿದೆ. ನೀವು ಏನನ್ನು ಗಮನಿಸಬೇಕು ಎಂಬುದು ಇಲ್ಲೇ ಕಾಣಿಸುತ್ತದೆ. ಈ ಸಲದ ಚುನಾವಣೆಯಲ್ಲಿ ಇಂಡಿಯಾ ಮೈತ್ರಿಕೂಟದ ಅಂಗಪಕ್ಷಗಳ ಸಾಧನೆಗಿಂತ ಕಾಂಗ್ರೆಸ್‌ನ ಸಾಧನೆ ಚೆನ್ನಾಗಿತ್ತು. ಏಕೆಂದರೆ ಅಂಗಪಕ್ಷಗಳ ಬಳಿ ಭರವಸೆ ಕೊಡುವುದಕ್ಕೆ ಹೆಚ್ಚೇನೂ ಇರಲಿಲ್ಲ. ಕಾಂಗ್ರೆಸ್ ಪಕ್ಷಕ್ಕೆ 44 ಸೀಟುಗಳಿಂದ 99 ಸೀಟುಗಳಿಗೆ ಏರಲು 10 ವರ್ಷ ಬೇಕಾಯಿತು ಅಂದರೆ, ಇದೇ ಬೆಳವಣಿಗೆಯ ದರವನ್ನು ಆಧರಿಸಿ ಹೇಳುವುದಾದರೆ, ಅವರು 2034ರ ಚುನಾವಣೆಯಲ್ಲಿ 200 ಸೀಟಿಗೆ ಬರಬಹುದು. ಈ ಎಲ್ಲ ಲೆಕ್ಕಾಚಾರವನ್ನು ಬದಿಗಿಡೋಣ. ಈಗ ಕಾಂಗ್ರೆಸ್ ಪಕ್ಷದ ಮುಂದಿರುವ ಪ್ರಶ್ನೆ ಏನೆಂದರೆ, ನಿಜವಾಗಿಯೂ ಕಾಂಗ್ರೆಸ್ ಎಂಬ ಬ್ರ್ಯಾಂಡ್ ಮತ್ತೆ ಚಾಲ್ತಿಗೆ ಬಂದಿದೆಯೇ ಇಲ್ಲವೇ? ಏನಾದರೂ ಸುಧಾರಣೆ ಆಗಿದೆಯೇ? ಎಲ್ಲಿಯವರೆಗೆ ಕಾಂಗ್ರೆಸ್ ಪಕ್ಷ ದೆಹಲಿಯ ಯಮುನಾ ತಟದಿಂದ ಡೈಮಂಡ್ ಹಾರ್ಬರ್ ಪ್ರದೇಶದ ಗುಂಟ ಬಂಗಾಳದಲ್ಲಿ ಗಂಗಾನದಿ ಸಮುದ್ರವನ್ನು ಸೇರುವ ಸಾಗರ್ ದ್ವೀಪದ ಪ್ರದೇಶದವರೆಗಿನ ಬೆಲ್ಟ್‌ನಲ್ಲಿ 180 ಸೀಟುಗಳ ಆಸಿಪಾಸಿನಲ್ಲೇ ಒದ್ದಾಡುತ್ತದೆಯೋ; ಎಲ್ಲಿಯವರೆಗೆ ಕಾಂಗ್ರೆಸ್ ಪಕ್ಷ ಮಹಾರಾಷ್ಟ್ರ ಹಾಗೂ ಮಧ್ಯ ಭಾರತದಂತಹ ಪ್ರಮುಖ ಸ್ಥಳದಲ್ಲಿ ಗೆಲ್ಲಲು ಹೆಣಗಾಡುತ್ತದೆಯೋ ಅಲ್ಲಿಯವರೆಗೂ ಬಿಜೆಪಿಗೆ ಸಹಜ ಪರ್ಯಾಯವಾಗಲು ಸಾಧ್ಯವಿಲ್ಲ.

ಇತಿಹಾಸವನ್ನು ಗಮನಿಸಿದರೆ ಇದು ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷ ಮೊದಲ ಬಾರಿ ಕುಸಿದಿದ್ದು 1967ರ ಚುನಾವಣೆಯಲ್ಲಿ. ಹೆಚ್ಚು ಕಮ್ಮಿ ಅಸ್ತಿತ್ವದಲ್ಲೇ ಇಲ್ಲದಿದ್ದ ವಿರೋಧ ಪಕ್ಷದ ಎದುರು ಕಾಂಗ್ರೆಸ್ ಪಕ್ಷ ಆ ಚುನಾವಣೆಯಲ್ಲಿ ಬಹಳ ತೆಳುವಾದ ಬಹುಮತದೊಂದಿಗೆ ಗೆದ್ದಿತ್ತು. ನಂತರ 1971ರ ಅವಧಿಪೂರ್ವ ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರು ಪಕ್ಷಕ್ಕೆ ಅದ್ಭುತ ಜಯ ತಂದು ಕೊಟ್ಟರು. 1969ರಲ್ಲಿ ಪಕ್ಷ ಇಬ್ಭಾಗವಾಗಿದ್ದರಿಂದ ಉಂಟಾದ ಹಿನ್ನಡೆಯನ್ನು ಅವರು ಆ ಚುನಾವಣೆಯಲ್ಲಿ ಬಹಳ ಚೆನ್ನಾಗಿ ತುಂಬಿಕೊಂಡಿದ್ದರು. 1969ರ ಬೆಳವಣಿಗೆಯನ್ನು ಅವರ ಉತ್ತರಾಧಿಕಾರಿಗಳು ಪೂರ್ತಿ ಒಪ್ಪುವುದಿಲ್ಲ. ಅದು ಬೇರೆ ವಿಚಾರ.

1960 ಹಾಗೂ 1970ರ ದಶಕದಲ್ಲಿ ವಿರೋಧ ಪಕ್ಷಗಳು 'ನಾವು ಕಾಂಗ್ರೆಸ್ ಅಲ್ಲ, ಹೀಗಾಗಿ ನಮಗೆ ಮತ ಹಾಕಿ' ಎಂದು ದಯನೀಯವಾಗಿ ಕೇಳುತ್ತಿದ್ದವು. ಈಗ ಕಾಂಗ್ರೆಸ್ ಪಕ್ಷ ಇದೇ ದಯನೀಯ ಧಾಟಿಯಲ್ಲಿ ಮತಯಾಚನೆ ಮಾಡುತ್ತಿದೆ. 'ನಾವು ಬಿಜೆಪಿ ಅಲ್ಲ, ಹೀಗಾಗಿ ನಮಗೆ ಮತ ಹಾಕಿ' ಎಂದು ಕಾಂಗ್ರೆಸಿಗರು ಕೇಳುತ್ತಿದ್ದಾರೆ. ಇದು ದೊಡ್ಡರೋಗಕ್ಕೆ ಪೇನ್ ಕಿಲ್ಲರ್ ತೆಗೆದುಕೊಂಡಂತೆ. ಅದರಿಂದ ತಾತ್ಕಾಲಿಕವಾಗಿ ನೋವು ಶಮನವಾಗಬಹುದೇ ಹೊರತು ರೋಗ ವಾಸಿಯಾಗುವುದಿಲ್ಲ. ಕೆಳಗೆ ಬಿದ್ದ ರಾಜಕೀಯ ಪಕ್ಷವೊಂದು ಮತ್ತೆ ಮೇಲೇಳಬೇಕು ಎಂದಾದರೆ ಅದಕ್ಕೆ ರಾಜಕೀಯವಾಗಿ ಬಹಳ ಗಂಭೀರವಾದ ಕ್ರಿಯಾಯೋಜನೆ ಬೇಕಾಗುತ್ತದೆ. ಮತದಾರರಿಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ತಮ್ಮ ಯೋಜನೆಗಳು ಏನು, ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ತಮ್ಮಲ್ಲಿರುವ ಚಿಂತನೆಗಳು ಏನು ಎಂಬುದನ್ನು ಮನದಟ್ಟಾಗುವಂತೆ ಜನರಿಗೆ ವಿವರಿಸಿ ವಿಶ್ವಾಸ ಗಳಿಸಿಕೊಳ್ಳಬೇಕಾಗುತ್ತದೆ. ಪತ್ರಿಕಾಗೋಷ್ಠಿ ನಡೆಸುವುದಕ್ಕಿಂತ ಇದು ತುಂಬಾ ಕಷ್ಟಕರ ಸಂಗತಿ.

★★★

ಋತುಗಳು ಬದಲಾದಂತೆ ಪವಾಡಗಳು ಕೂಡ ಮಂಕಾಗಬಹುದು. ಒಡಿಶಾದಲ್ಲಿ ಆಗಿದ್ದು ಅದೇ. ಭಾರತದ ಪ್ರಜಾಪ್ರಭುತ್ವದಲ್ಲಿ ಈವರೆಗೆ ಘಟಿಸಿದ ರಾಜಕೀಯ ಪವಾಡಗಳಲ್ಲಿ ನವೀನ್ ಪಟ್ನಾಯಕ್ ಅವರ ದಿಢೀರ್ ಬೆಳವಣಿಗೆ ಹಾಗೂ ನಿರಂತರ ಗೆಲುವು ಕೂಡ ಒಂದು. ಬೌದ್ಧಿಕವಾಗಿ ನವೀನ್ ಪಟ್ನಾಯಕ್ ಉದಾರವಾದಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೊಂದುವಂತಹ ರಾಜಕೀಯ ಚಿಂತನೆಗಳನ್ನು ಹೊಂದಿರುವ ವ್ಯಕ್ತಿ. ಒಡಿಶಾದಂತಹ ಹಿಂದುಳಿದ ರಾಜ್ಯದ ಸಂಕಷ್ಟಗಳನ್ನು ನಿವಾರಿಸುವ ಶಕ್ತಿ ಅವರಿಗೆ ಇರಲಿಲ್ಲ. ಆದರೆ ಅವರ ತಂದೆ ಬಿಜು ಪಟ್ನಾಯಕ್ ಬಿಟ್ಟು ಹೋಗಿದ್ದ ಅಸಾಧಾರಣ ಸಾಧನೆಯ ಪರಂಪರೆ ಪುತ್ರ ನವೀನ್ ಪಟ್ನಾಯಕ್ ಅವರ ರಾಜಕೀಯಕ್ಕೆ ಗಟ್ಟಿಯಾದ ಅಡಿಗಲ್ಲಾಗಿ ಒದಗಿಬಂದಿತು. ಆದರೂ ಹೀಗೆ ವಂಶಪಾರಂಪರ್ಯವಾಗಿ ಬಂದ ಯಾವುದೇ ಹೆಚ್ಚುಗಾರಿಕೆ ನಮ್ಮ ದೇಶದ ರಾಜಕೀಯದಲ್ಲಿ ಒಂದು ಅವಧಿಗಿಂತ ಹೆಚ್ಚಿನ ಸಮಯಕ್ಕೆ ಬೆನ್ನಿಗೆ0 ನಿಲ್ಲುವುದಿಲ್ಲ. ಇಲ್ಲಿ ಕೆಲಸ ಮಾಡಿ ತೋರಿಸಬೇಕು, ಗೆಲ್ಲಬೇಕು. ನನಗೆ ಬಿಜು ಪಟ್ನಾಯಕ್ ಅವರ ಆಕರ್ಷಕ ವ್ಯಕ್ತಿತ್ವ ಹತ್ತಿರದಿಂದ ಪರಿಚಯವಿತ್ತು. ಆದರೆ ಮಗನನ್ನು ನಾನು ಯಾವತ್ತೂ ಭೇಟಿಯಾಗಿಲ್ಲ. ಆದರೂ ನವೀನ್ ಪಟ್ನಾಯಕ್ ಅವರ ಸುದೀರ್ಘ ಅವಧಿಯ ಆಳ್ವಿಕೆಯನ್ನು ಇತಿಹಾಸವು ಅವರ ತಂದೆಯ ಅವಧಿಯಂತೆಯೇ ನೆನಪಿಟ್ಟುಕೊಳ್ಳುತ್ತದೆ ಎಂಬುದರಲ್ಲಿ ನನಗೆ ಅನುಮಾನವಿಲ್ಲ. ಒಡಿಶಾ ಎಂಬ ಗುಡ್ಡಗಾಡು ರಾಜ್ಯವನ್ನು ಆಧುನಿಕತೆಯತ್ತ ಕೊಂಡೊಯ್ಯುವ ಸುದೀರ್ಘ ಪ್ರಯಾಣದಲ್ಲಿ ನವೀನ್ ಪಟ್ನಾಯಕ್ ಅವರ ಯುಗದ ಅಧ್ಯಾಯವು ಅಳಿಸಲಾಗದ ಶಾಯಿಯಲ್ಲಿ ಬರೆದಿಡುವಂಥದ್ದಾಗಿದೆ.

ಬರೋಬ್ಬರಿ ಕಾಲು ಶತಮಾನದ ಕಾಲ ನವೀನ್ ಪಟ್ನಾಯಕ್ ಒಡಿಶಾದಲ್ಲಿ ಒನ್ ವೇಯಲ್ಲಿ ವಿರುದ್ಧ ದಿಕ್ಕಿನಿಂದ ಕಾರು ಓಡಿಸಿಕೊಂಡು ಹೋದಂತೆ ರಾಜಕೀಯದ ಬಂಡಿಯನ್ನು ಓಡಿಸಿದ್ದರು. ಬಹಳ ನಾಜೂಕಾಗಿ ಅವರು ವಿರೋಧಿಗಳು ತಲೆಯೆತ್ತದಂತೆ ನೋಡಿಕೊಂಡಿದ್ದರು. ಆದರೆ ವೇಗ ಕೂಡ ಒಂದು ಹಂತದಲ್ಲಿ ಬೇಸರ ತರಿಸುತ್ತದೆ. ಹಾಗಿರುವಾಗ ನವೀನ್ ಪಟ್ನಾಯಕ್ ಅವರ ತೆವಳುವ ರಾಜಕೀಯ ಬೇಸರ ತರಿಸದೇ ಇದ್ದೀತೆ? ಅದೇನಾದರೂ ಇರಲಿ, ಸುದೀರ್ಘ ಎರಡು ದಶಕದ ಕಾಲ ಗೌರವಯುತವಾಗಿ ರಾಜಕೀಯ ನಡೆಸಿದಂತೆಯೇ ಅವರು ತುಂಬಾ ಪ್ರಬುದ್ಧತೆಯಿಂದ ಕುರ್ಚಿಗೆ ವಿದಾಯವನ್ನೂ ಹೇಳಿದ್ದಾರೆ. ದ್ವೇಷವಿಲ್ಲ, ನರಳಾಟ ಇಲ್ಲ, ದೂರು ಇಲ್ಲ, ಸಣ್ಣತನ ಇಲ್ಲ, ನನ್ನ ಹಕ್ಕು ಕಿತ್ತುಕೊಂಡರು ಎನ್ನುವಂತಹ ಕೂಗಾಟ ಇಲ್ಲ, ಗೆದ್ದವರ ಮೇಲೆ ವಿಷಕಾರುವ ಪ್ರವೃತ್ತಿಯೂ ಇಲ್ಲ. ನವೀನ್ ಪಟ್ನಾಯಕ್ ಈಗ ಏನು ಯೋಚಿಸುತ್ತಿರಬಹುದು? 'ಪ್ರಜಾಪ್ರಭುತ್ವ ನನಗೆ ಅಧಿಕಾರ ನೀಡಿತು. ಅದೇ ಪ್ರಜಾಪ್ರಭುತ್ವ ನನಗೀಗ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದೆ'. 2025ರಲ್ಲಿ ಯಾರಿಗಾದರೂ ಭಾರತ ರತ್ನ ನೀಡುವುದಿದ್ದರೆ ಅದಕ್ಕೆ ನವೀನ್ ಪಟ್ನಾಯಕ್ ಅರ್ಹರು.

★★★

ಸಾಮಾನ್ಯವಾಗಿ ಚುನಾವಣೆಯ ಫಲಿತಾಂಶ ಬಂದ ನಂತರ ಚಾಕು ಚೂರಿಗಳು ಹೊರಗೆ ಬರುತ್ತವೆ. ಆದರೆ, ಬ್ರಿಟನ್ನಿನಲ್ಲಿ ಈ ಬಾರಿ ಚುನಾವಣೆಗೂ ಮೊದಲೇ ಕೊಯ್ಯುವ, ಕತ್ತರಿಸುವ ಆಟಗಳು ಶುರುವಾಗಿವೆ. ಜಗತ್ತಿನ ಪ್ರಜಾಪ್ರಭುತ್ವಕ್ಕೆ ತಾನೇ ತಾಯಿ ಎಂದು ಹೇಳಿಕೊಳ್ಳುವ ದೇಶ ಬ್ರಿಟನ್. ಅಲ್ಲಿ ಈ ಸಲದ ಚುನಾವಣೆಯಲ್ಲಿ ಆಡಳಿತಾರೂಢ ಕನ್ಸರ್ವೇಟಿವ್ ಪಕ್ಷ ಶವಾಗಾರಕ್ಕೆ ಹೋಗಿ ಮಲಗುವುದರಲ್ಲಿ ಯಾರಿಗೂ ಅನುಮಾನ ಉಳಿದಿಲ್ಲ. ಆ ಪಕ್ಷದ ಹಾಲಿ ನಾಯಕ ರಿಷಿ ಸುನಕ್ ತಮ್ಮ ಗುರು ಬೋರಿಸ್ ಜಾನ್ಸನ್‌ಗೇ ಮಣ್ಣುಮುಕ್ಕಿಸಿ ಅಧಿಕಾರಕ್ಕೆ ಬಂದವರು. ಆಕರ್ಷಕ ಖಾಸಗಿ ವೃತ್ತಿಯನ್ನು ತ್ಯಾಗ ಮಾಡಿ ಬ್ರಿಟನ್ನಿನ ಜನರ ಸೇವೆಗಾಗಿಯೇ ರಾಜಕೀಯಕ್ಕೆ ಬಂದಿದ್ದೇನೆ ಎಂಬ ಸ್ವಯಂ ನಿರ್ಮಿತ ಇಮೇಜ್‌ನೊಂದಿಗೆ ಅಧಿಕಾರದ ಏಣಿಯಲ್ಲಿ ರಿಷಿ ಸುನಕ್ ಮೇಲೆ ಹತ್ತಿ ಬಂದಿದ್ದರು. ಆದರೆ ರಾಜಕಾರಣದ ನಿಜವಾದ ಅಖಾಡದಲ್ಲಿ ಆ ಇಮೇಜ್ ಬಹುಕಾಲ ಉಳಿದಿಲ್ಲ. ಚಾಣಾಕ್ಷ ಲಾಟರಿ ವಿಜೇತನಂತೆ ಅವರು 10 ಡೌನಿಂಗ್ ಸ್ಟ್ರೀಟ್ ಮನೆಗೆ ಪ್ರವೇಶಿಸಿದ್ದರು. ಅವರ ಅಸಾಧಾರಣ ಬುದ್ಧಿವಂತಿಕೆಗೆ ಅದೃಷ್ಟ ಕೂಡ ಜೊತೆಯಾಗಿದ್ದರಿಂದ ಕೊನೆಗೂ ಅವರಿಗೆ ಯೋಗ್ಯವಾದ ಸ್ಥಾನ ಸಿಕ್ಕಿದೆ ಎಂದು ಬಹಳ ಜನರು ಹಾಡಿ ಹೊಗಳಿದ್ದರು. ಆದರೆ ಅಧಿಕಾರಕ್ಕೇರಿದ ವ ಆ ಹೊಗಳಿಕೆಯ ಸೌಧದ ಇಟ್ಟಿಗೆಗಳು ದಿನೇದಿನೇ ಒಂದೊಂದಾಗಿ ಕಳಚಿ ಬೀಳುತ್ತಿದ್ದವು. ಕೊನೆಗೆ, ಜೂನ್ 6ರಂದು ನಡೆದ ಡಿ-ಡೇ ಸಮಾರಂಭದಿಂದ ಅವರು ಅರ್ಧಕ್ಕೇ ತರಾತುರಿಯಲ್ಲಿ ಎದ್ದುಹೋಗುವುದರೊಂದಿಗೆ ಆ ಸೌಧ ಪೂರ್ತಿ ನೆಲಸಮವಾಯಿತು. 1944ರಲ್ಲಿ ಹಿಟ್ಲರ್‌ನನ್ನು ನಿರ್ನಾಮ ಮಾಡಿ ಬ್ರಿಟನ್ನನ್ನು ರಕ್ಷಿಸಿದ ಹಾಗೂ ಜಗತ್ತನ್ನು ಫ್ಯಾಸಿಸಂನ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಿದ ಮಹಾಯುದ್ಧದ ಆರಂಭದ ಸ್ಮರಣಾರ್ಥ ಡಿ-ಡೇ ಆಚರಿಸಲಾಗುತ್ತದೆ. ಬ್ರಿಟಿಷರಿಗೆ ಈ ದಿನ ಬಹಳ ಮುಖ್ಯವಾದುದು. ಆದರೆ ಅವರ ಈ ಪ್ರಧಾನಿಗೆ ಯಾವತ್ತೂ ಬ್ರಿಟನ್ ಅರ್ಥವೇ ಆಗಿಲ್ಲ. ರಿಷಿಯನ್ನು ನೋಡಿದರೆ ಮುಗ್ಧ ಹಾಗೂ ಗೊಂದಲಗೊಂಡ ವ್ಯಕ್ತಿಯಂತೆ ಕಾಣಿಸುತ್ತಾರೆ. ದೊಡ್ಡವರ ಮ್ಯಾಚ್‌ನಲ್ಲಿ ಮಧ್ಯೆ ತೂರಿಕೊಂಡ ಅನನುಭವಿಯ ರೀತಿಯಲ್ಲಿ ಹೇಗೋ ಇಲ್ಲಿಯವರೆಗೆ ಪ್ರಧಾನಿಯಾಗಿ ಕಾಲಯಾಪನೆ ಮಾಡಿದ್ದಾರೆ. ಈಗ ತಮ್ಮ ನಿಸ್ವಾರ್ಥ ಪ್ರತಿಭೆಗೆ ವೋಟು ನೀಡಲು ನಿರಾಕರಿಸುತ್ತಿರುವ ಪ್ರಜೆಗಳ ಮುಂದೆ ಗೋಳೋ ಎನ್ನುತ್ತಿದ್ದಾರೆ. ಒಳಗಿನ ಗಾಯಕ್ಕೆ ಹೊರಗಿನಿಂದ ಬ್ಯಾಂಡೇಜ್ ಮಾಡಿದರೆ ಏನು ಪ್ರಯೋಜನ?

ರಿಷಿ ಸುನಕ್ ಬಿಟ್ಟ ಬಾಣದಿಂದ ಗಾಯಗೊಂಡ ಚಿರತೆ ಬೋರಿಸ್ ಜಾನ್ಸನ್. ರಾಜಕೀಯದ ಚಾಟಿಯನ್ನು ಹೇಗೆ ಬೀಸಬೇಕು ಎಂಬುದನ್ನು ಬಹಳ ಚೆನ್ನಾಗಿ ಅರಿತಿರುವ ವೃತ್ತಿಪರ ರಾಜಕಾರಣಿ. ಕನ್ಸರ್ವೇಟಿವ್ ಪಕ್ಷದಲ್ಲಿ ರಿಷಿಗೆ ಹಿತಶತ್ರು. ಕೊನೆಗೂ ಅವರು ರಿಷಿಗೆ ಪಾಠ ಕಲಿಸಿದ್ದಾರೆ. ಈಗ ರಿಷಿ ಬಹಿರಂಗವಾಗಿಯೇ ಬೋರಿಸ್ ಜಾನ್ಸನ್‌ರನ್ನು ಹೊಗಳಲು ಆರಂಭಿಸಿದ್ದಾರೆ. 'ಜಾನ್ಸನ್ ಚುನಾವಣಾ ಪ್ರಚಾರ ಮಾಡಿದರೆ ಏನಾದರೂ ಬದಲಾವಣೆ ಆಗಬಹುದು' ಎಂದು ರಿಷಿ ಹೇಳುತ್ತಿದ್ದಾರೆ. ಈ ಬೇಡಿಕೆಗಾಗಿ ಬೋರಿಸ್ ಇಷ್ಟು ದಿನ ಕಾಯುತ್ತಿದ್ದರು. ಕೊನೆಗೆ ಅದೇ ಸುದ್ದಿ ಬಂದಾಗ 'ನಾನು ರಜೆಯಲ್ಲಿದ್ದೇನೆ' ಎಂದು ತಣ್ಣಗೆ ಘೋಷಿಸಿದರು.

ಲಂಡನ್ನಿನಲ್ಲಿ ಮಾತ್ರ ಇಂಥದ್ದು ನಡೆಯಲು ಸಾಧ್ಯ.

ಸದ್ಯದಲ್ಲೇ ನಡೆಯಲಿರುವ ಬ್ರಿಟನ್ನಿನ ಸಂಸತ್ ಚುನಾವಣೆಗೆ ರಿಷಿ ಸುನಕ್ ಅವರ ಪ್ರಚಾರದ ರೀತಿ ಹೇಗಿದೆ ಗೊತ್ತಾ? ಅವರು ಜಯ ಕೇಳುತ್ತಿಲ್ಲ. ಬದಲಿಗೆ, 'ಲೇಬರ್ ಪಕ್ಷಕ್ಕೆ ಅದ್ಭುತ ಗೆಲುವು ನೀಡಬೇಡಿ. ಸರಳ ಬಹುಮತ ನೀಡಿ, ಸಾಕು' ಎನ್ನುತ್ತಿದ್ದಾರೆ.

★★★

ಜಗತ್ತನ್ನು ನಾಶಪಡಿಸಲು ಎಷ್ಟು ಅಣುಬಾಂಬ್‌ಗಳು ಬೇಕು? ಒಂದೇ ಸಾಕು.

ಈಗ ಉಂಟಾಗಿರುವ ಯುದ್ಧದ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆ ನಡೆಸುವ ಹೊತ್ತಿಗೆ ಜಗತ್ತಿನಲ್ಲಿರುವ ಅರ್ಧದಷ್ಟು ಅಣುಬಾಂಬ್‌ಗಳ ಟ್ರಿಗರ್ ಒತ್ತಿ ಆಗಿರುತ್ತದೆ. ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಇಂತಹದ್ದೊಂದು ಆತಂಕ ವ್ಯಕ್ತಪಡಿಸಿದೆ. ಈ ಸಂಸ್ಥೆಯ ಪ್ರಕಾರ ರಷ್ಯಾ ಬಳಿ 4380, ಅಮೆರಿಕದ ಬಳಿ 3708, ಚೀನಾ ಬಳಿ 500, ಫ್ರಾನ್ಸ್ ಬಳಿ 290, ಬ್ರಿಟನ್ ಬಳಿ 225, ಭಾರತದ ಬಳಿ 172, ಪಾಕಿಸ್ತಾನದ ಬಳಿ 170, ಇಸ್ರೇಲ್ ಬಳಿ 90 ಹಾಗೂ ಉತ್ತರ ಕೊರಿಯಾ ಬಳಿ 50 ಪರಮಾಣು ಸಿಡಿತಲೆಗಳಿವೆ. ಇದರಲ್ಲಿ ಬ್ರಿಟಿಷರ ಕೋಟಾವನ್ನು ಬದಿಗಿಡೋಣ. ಏಕೆಂದರೆ, ಈ ವರ್ಷದ ಜನವರಿಯಲ್ಲಿ ಬ್ರಿಟಿಷ್ ರಾಯಲ್ ನೇವಿಯು ಪರೀಕ್ಷಾರ್ಥ ಉಡಾವಣೆ ಮಾಡಿದ ಟ್ರೈಡೆಂಟ್ ಕ್ಷಿಪಣಿ 600 ಕಿ.ಮೀ.ಗಳಷ್ಟು ದೂರ ಹಾರಿ ಅಟ್ಲಾಂಟಿಕ್ ಸಮುದ್ರದಲ್ಲಿ ಬೀಳಬೇಕಿತ್ತು. ಆದರೆ ಅದು ಉಡಾವಣೆಯಾಗುತ್ತಿದ್ದಂತೆ ಅಲ್ಲೇ ಉದುರಿಬಿದ್ದಿತ್ತು. ಒಂದು ವೇಳೆ ಅದು ಉಡಾವಣೆಯಾದ ಜಾಗದಲ್ಲೇ ಬೀಳದೆ ಅರ್ಧದಾರಿ ಕ್ರಮಿಸಿ ಯಾವುದಾದರೂ ಆಫ್ರಿಕನ್ ದೇಶಕ್ಕೆ ಹೋಗಿ ಅಪ್ಪಳಿಸಿದ್ದರೆ ಏನಾಗುತ್ತಿತ್ತು? ಕ್ಷಿಪಣಿ ಪರೀಕ್ಷೆಯ ಬಳಿಕ ರಕ್ಷಣಾ ಸಚಿವ ಗ್ರ್ಯಾಂಟ್ ಶಾಪ್ಸ್ 'ನಮ್ಮದು ಅತ್ಯಂತ ವಿಶ್ವಾಸಾರ್ಹ ಪರೀಕ್ಷೆ ಎಂದು ಹೇಳಿರುವುದು ಬಹಳ ಮಜವಾಗಿದೆ. 2016ರಲ್ಲೂ ಇದೇ ಟ್ರೈಡೆಂಟ್ ಕ್ಷಿಪಣಿಯ ಪರೀಕ್ಷೆ ವಿಫಲಗೊಂಡಿತ್ತು. ಆಗಿನ ರಕ್ಷಣಾ ಸಚಿವರು ಏನು ಹೇಳಿದ್ದರೋ ಗೊತ್ತಿಲ್ಲ.'

ಎರಡು ಸಾವಿರ ವರ್ಷಗಳ ಹಿಂದೆ ರೋಮನ್‌ನ ಪ್ರಸಿದ್ಧ ತತ್ವಶಾಸ್ತ್ರಜ್ಞ ಸೆನೆಕಾ 'ನಿಮಗೆ ಯಾವಾಗ ಬೇಕೋ ಆಗ ಬದುಕನ್ನು ಕೊನೆಗೊಳಿಸಿಕೊಳ್ಳಿ. ಆದರೆ ಆ ಅಂತ್ಯ ಚೆನ್ನಾಗಿರುವಂತೆ ನೋಡಿಕೊಳ್ಳಿ' ಎಂದು ಹೇಳಿದ್ದ. ಸೆನೆಕಾ, ನೀನಿಂದು ಬದುಕಿರಬೇಕಿತ್ತು.

(ಲೇಖಕರು: ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 182

ಉಪಗ್ರಹ ವಾಹಕ ಗಗನ ನೌಕೆ ಪುಷ್ಪಕ್ ಹ್ಯಾಟ್ರಿಕ್ ಸಾಧನೆ | ದೇಶೀ ನಿರ್ಮಿತ ಮರು ಬಳಕೆ ಗಗನ ನೌಕೆ ಬಳಕೆಗೆ ಸಿದ್ಧ

ಪುಷ್ಪಕ್ ಆರ್‌ಎಲ್‌ವಿ ಲ್ಯಾಂಡಿಂಗ್ 3ನೇ ಬಾರಿಯೂ ಯಶಸ್ವಿ

ಪ್ರಯೋಗ ಹೇಗೆ ನಡೆಯಿತು?

ಮೊದಲಿಗೆ ಪುಷ್ಪಕ್ ಆರ್‌ಎಲ್‌ವಿಯನ್ನು ಭಾರತೀಯ ವಾಯುಪಡೆಯ 'ಛಿನೂಕ್' ಹೆಲಿಕಾಪ್ಟರ್‌ನಲ್ಲಿ ಆಕಾಶದಲ್ಲಿ 4.5 ಕಿಮೀ ಎತ್ತರಕ್ಕೆ ಕೊಂಡೊಯ್ಯಲಾಯಿತು. 4500 ಮೀ. ಎತ್ತರದಲ್ಲಿ ಪುಷ್ಪಕ್ ವಾಹಕವನ್ನು ಹೆಲಿಕಾಪ್ಟರ್‌ನಿಂದ ಬಂಧಮುಕ್ತಗೊಳಿಸಲಾಯಿತು. ಅಷ್ಟು ಎತ್ತರದಿಂದ ಭೂಮಿಯತ್ತ ವೇಗವಾಗಿ ಧಾವಿಸಿ ಬಂದ ಪುಷ್ಪಕ್, ಚಳ್ಳಕೆರೆಯ ಕುದಾಪುರ ಗ್ರಾಮದಲ್ಲಿನ ಎಟಿಆರ್ ರನ್‌ವೇನಲ್ಲಿ ಮೊದಲಿಗೆ ಹಿಂಬದಿ ಚಕ್ರವನ್ನೂರಿತು. ಜತೆಗೇ ಹಿಂಬದಿಗೆ ಜೋಡಿಸಿದ್ದ ಪ್ಯಾರಾಚೂಟ್ ಅನ್ನೂ ಯಶಸ್ವಿಯಾಗಿ ತೆರೆದು ವೇಗ ತಗ್ಗಿಸಿಕೊಂಡಿತು. ಹಾಗೇ ರನ್‌ವೇನಲ್ಲಿ ಓಡುತ್ತಲೇ ನಿಧಾನವಾಗಿ ವೇಗ ಕಡಿಮೆ ಮಾಡುತ್ತಾ ಯಾವುದೇ ಅವಘಡವಿಲ್ಲದಂತೆ ಸುರಕ್ಷಿತ ನಿಲುಗಡೆಗೆ ಬಂದಿತು.

ದೆಹಲಿ: ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'(ಇಸ್ರೋ) ಭಾನುವಾರ ಮತ್ತೊಂದು ಮಹತ್ವದ ಮೈಲುಗಲ್ಲು ಸ್ಥಾಪಿಸಿದೆ. ಮರು ಬಳಕೆ ಮಾಡಬಹುದಾದ (ರೀ ಲಾಂಚ್ ವೆಹಿಕಲ್–ಆರ್‌ಎಲ್‌ವಿ) ಉಪಗ್ರಹ ವಾಹಕ ಗಗನ ನೌಕೆಯ ಸುರಕ್ಷಿತ ಲ್ಯಾಂಡಿಂಗ್ ಪರೀಕ್ಷೆಯನ್ನು ಮೂರನೇ ಬಾರಿಗೆ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿರುವ ಏರೋನಾಟಿಕಲ್ ಟೆಸ್ಟ್ ರೇಂಜ್ (ಎಟಿಆರ್)ನಲ್ಲಿ 'ಪುಷ್ಪಕ್' ಮರುಬಳಕೆ ಉಪಗ್ರಹ ವಾಹಕ ಗಗನ ನೌಕೆ(ಆರ್‌ಎಲ್‌ವಿ) ಭಾನುವಾರ ಬೆಳಗ್ಗೆ 7.10ರ ವೇಳೆ ಯಶಸ್ವಿಯಾಗಿ ಲ್ಯಾಂಡ್ ಆಗಿದೆ.

ಆತ್ಮನಿರ್ಭರ ಭಾರತ: ಚಳ್ಳಕೆರೆ ತಾಲೂಕಿನ ಕುದಾಪುರ ಗ್ರಾಮದಲ್ಲಿನ ಎಟಿಆರ್ ರನ್‌ವೇನಲ್ಲಿ ಭಾನುವಾರ ಬೆಳಗ್ಗೆ ಪ್ರಯೋಗ ನಡೆಸಿದ್ದು, ಲ್ಯಾಂಡಿಂಗ್ ಯಶಸ್ವಿಯಾಗಿದೆ. ರಾಕೆಟ್ ಉಡಾವಣೆ ಬಳಿಕ ಸುಮಾರು 4.5 ಕಿಲೋ ಮೀಟರ್ ಎತ್ತರದಲ್ಲಿ ಹಾರಾಟ ನಡೆಸಿದ ರಾಕೆಟ್ ಸುರಕ್ಷಿತವಾಗಿ ಲ್ಯಾಂಡ್ ಆಯಿತು ಎಂದು ಇಸ್ರೋ ಮಾಹಿತಿ ಹಂಚಿಕೊಂಡಿದೆ.

ಗೇಮ್ ಚೇಂಜರ್: ಜೆ.ಮುತ್ತುಪಾಂಡಿಯನ್ ಅವರು ಪುಷ್ಪಕ್ ಆರ್‌ಎಲ್‌ವಿ ಮಿಷನ್ ಡೈರೆಕ್ಟರ್ ಆಗಿದ್ದರೆ, ಬಿ.ಕಾರ್ತಿಕ್ ಅವರು ಆರ್‌ಎಲ್‌ವಿ ವೆಹಿಕಲ್ ಡೈರೆಕ್ಟರ್ ಆಗಿದ್ದಾರೆ. ಇವರಿಬ್ಬರ ನೇತೃತ್ವದ ತಂಡ ಪುಷ್ಪಕ್ ಆರ್‌ಎಲ್‌ವಿ 3 ಹಂತಗಳಲ್ಲಿಯೂ ಯಶಸ್ವಿಯಾಗುವಲ್ಲಿ ಶ್ರಮಿಸಿದೆ.

ಪುಷ್ಪಕ್ ಮೂರನೇ ಬಾರಿಗೆ ಸುರಕ್ಷಿತವಾಗಿ ಲ್ಯಾಂಡ್ ಆಗಿರುವುದು ಇಸ್ರೋಗೆ ಹ್ಯಾಟ್ರಿಕ್ ಜಯ ತಂದುಕೊಟ್ಟಿದೆ. ಮುಂದೆ ಆರ್ಬಿಟಲ್ ಪರೀಕ್ಷೆಗೆ ಅನುಕೂಲಕರವಾಗಿದೆ. ಬಾಹ್ಯಾಕಾಶಕ್ಕೆ ಉಡಾವಣೆ ಬಳಿಕ ಸುರಕ್ಷಿತವಾಗಿ ಭೂಮಿಗೆ ಮರಳುವುದರಿಂದ ಮತ್ತೆ ಮತ್ತೆ ಬಳಸಬಹುದಾಗಿದೆ. ದೇಶದ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ವೆಚ್ಚ ಕಡಿಮೆ ಮಾಡಲು ಪುಷ್ಪಕ್ ಗೇಮ್ ಚೇಂಜರ್ ಆಗಲಿದೆ ಎಂದು ಇಸ್ರೋ ಅಧ್ಯಕ್ಷ ಸೋಮನಾಥ್ ಹರ್ಷ ವ್ಯಕ್ತಪಡಿಸಿದ್ದಾರೆ.

ಅಂತಿಮ ಪ್ರಯೋಗ ಯಶಸ್ವಿ: ಇದು ಆರ್‌ಎಲ್‌ವಿಯ 3ನೇ ಹಾಗೂ ಅಂತಿಮ ಪ್ರಾಯೋಗಿಕ ಪರೀಕ್ಷೆ. ದೇಶೀಯವಾಗಿಯೇ ನಿರ್ಮಿಸಲಾಗಿರುವ 'ಆರ್‌ಎಲ್‌ವಿ' ಸತತ ಮೂರನೇ ಬಾರಿ ಸುರಕ್ಷಿತವಾಗಿ ಲ್ಯಾಂಡಿಂಗ್‌ನ 3ನೇ ಮತ್ತು ಅಂತಿಮ ಹಂತದ ಪರೀಕ್ಷೆಯಲ್ಲಿ ಪೂರ್ಣ ಯಶಸ್ಸು ಸಾಧಿಸಿದೆ ಎಂದು ಇಸ್ರೋ ವಿಜ್ಞಾನಿಗಳ ತಂಡ ಹರ್ಷ ವ್ಯಕ್ತಪಡಿಸಿದೆ.

ವಾಣಿಜ್ಯಕವಾಗಿ ಇಸ್ರೊಗೆ ಉತ್ತಮ ಭವಿಷ್ಯ

ಇದು ಅಂತಿಮ ಹಂತದ ಪ್ರಯೋಗವಾಗಿದ್ದು, ಪೂರ್ಣ ಯಶಸ್ವಿ ಆಗಿರುವುದರಿಂದ ಮುಂಬರುವ ದಿನಗಳಲ್ಲಿ ಉಪಗ್ರಹಗಳ ಉಡ್ಡಯನಕ್ಕೆ ಬಳಸಲು ಸಿದ್ಧವಾಗಿದೆ. ಪುಷ್ಪಕ್ ಮರು ಬಳಕೆ ಉಪಗ್ರಹ ವಾಹಕ ಆಗಿರುವುದರಿಂದ ಉಪಗ್ರಹ ಉಡ್ಡಯನ ಕಾರ್ಯಕ್ಕೆ ಬಹಳಷ್ಟು ಬಾರಿ ಬಳಸಬಹುದಾಗಿದೆ. ಹಾಗಾಗಿ ಇಸ್ರೋ ಇನ್ನು ಮುಂದೆ ಕೈಗೊಳ್ಳುವ ಉಪಗ್ರಹಗಳ ಉಡ್ಡಯನ ಪ್ರಕ್ರಿಯೆ ಬಹಳ ಕಡಿಮೆ ವೆಚ್ಚದ್ದಾಗಲಿದೆ. ಇತರೆ ದೇಶಗಳು, ಸಂಸ್ಥೆಗಳಿಗೆ ಉಪಗ್ರಹವನ್ನು ಕಡಿಮೆ ವೆಚ್ಚದಲ್ಲಿ ಉಡ್ಡಯನ ಮಾಡುವ ಸೇವೆ ಒದಗಿಸುವ ಮೂಲಕ ಇಸ್ರೋ ವಾಣಿಜ್ಯ ರೀತಿಯಲ್ಲಿಯೂ ಯಶಸ್ಸು ಕಾಣಬಹುದಾಗಿದೆ.

ಮಲ್ಟಿ ಸೆನ್ಸರ್‌ಗಳ ಬಳಕೆ

4.5 ಕಿಮೀ ಎತ್ತರದಲ್ಲಿ ಶುರುವಾಗಿ ರನ್ ವೇವರೆಗಿನ ಲ್ಯಾಂಡಿಂಗ್ ಪ್ರಕ್ರಿಯೆಯನ್ನು ಆಧುನಿಕ ಮಾರ್ಗದರ್ಶಕ ಆಲ್ಗಾರಿದಂ ತಂತ್ರಜ್ಞಾನದ ಮೂಲಕ ನಿರ್ವಹಣೆ ಮಾಡಲಾಗಿದೆ. ಈ ಲ್ಯಾಂಡಿಂಗ್ ನಿರ್ವಹಣೆ ಪ್ರಕ್ರಿಯೆಯಲ್ಲಿ ಇನೆರಿಟಿಯಲ್ ಸೆನ್ಸರ್, ರಾಡಾರ್ ಆಲ್ಟಿಮೀಟರ್, ಫ್ಲಶ್ ಏರ್ ಡೇಟಾ ಸಿಸ್ಟಂ, ಸ್ಯೂಡೊ ಸಿಸ್ಟಂ, ನೇವಲ್ ಸಿ ಮೊದಲಾದ ಮಲ್ಟಿ ಸೆನ್ಸಾರ್‌ಗಳು ಬಳಕೆಯಾಗಿವೆ.

ಸಮಾಚಾರ ಸಣ್ಣದಲ್ಲ

ಗರ್ಭಪಾತ ಕಾಯ್ದೆಗೆ ಯುಎಇ ಸಮ್ಮತಿ

ಅಬುಧಾಬಿ: ಇಸ್ಲಾಮಿಕ್ ರಾಷ್ಟ್ರವಾದ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಅತ್ಯಾಚಾರದಂತಹ ಕಠಿಣ ಸನ್ನಿವೇಶಗಳಲ್ಲಿ ಗರ್ಭಪಾತ ಪ್ರಕ್ರಿಯೆಯನ್ನು ಕಾನೂನುಬದ್ಧಗೊಳಿಸಲು ಮುಂದಾಗಿದೆ. ಈ ಸಂಬಂಧ ಮಂಡಿಸಿದ ನಿರ್ಣಯಕ್ಕೆ ಸಂಪುಟ ಸಭೆ ಸಮ್ಮತಿಸಿದೆ. ಅಮೆರಿಕದಂತಹ ಆಧುನಿಕ ಜೀವನಶೈಲಿಯ ರಾಷ್ಟ್ರದಲ್ಲೇ ಗರ್ಭಪಾತ ಕಾನೂನುಬದ್ಧಗೊಂಡಿಲ್ಲ. ಹೀಗಿರುವಾಗ ಯುಎಇ ಕ್ರಮ ಮೆಚ್ಚುಗೆಗೆ ಪಾತ್ರವಾಗಿದೆ. ಪ್ರಸ್ತಾವಿತ ಕಾನೂನು ಪ್ರಕಾರ ಅತ್ಯಾಚಾರ ಬಗ್ಗೆ ತಕ್ಷಣವೇ ದೂರು ನೀಡಿದರೆ ಗರ್ಭ ಧರಿಸಿದ 120 ದಿನಗಳಲ್ಲೇ ಗರ್ಭಪಾತಕ್ಕೆ ಅನುಮತಿ ಸಿಗಲಿದೆ. ಬಲವಂತದ ಲೈಂಗಿಕ ಕ್ರಿಯೆಯಿಂದ ಮಹಿಳೆ ಗರ್ಭ ಧರಿಸಿದರೆ, ಕುಟುಂಬ ಸದಸ್ಯರಿಂದ, ಮದುವೆಗೆ ಅರ್ಹವಲ್ಲದ ಸಂಬಂಧಿಯಿಂದ ಮಹಿಳೆ ಗರ್ಭ ಧರಿಸಿದರೆ ಗರ್ಭಪಾತ ಮಾಡಿಸಿಕೊಳ್ಳಲು ಆಕೆಗೆ ಪ್ರಸ್ತಾವಿತ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ ಎನ್ನಲಾಗಿದೆ.

ಜಾಮೀನು ಕೋರಿ ಕೇಜ್ರಿ ಸುಪ್ರೀಂ ಮೊರೆ

ದೆಹಲಿ: ವಿಚಾರಣಾ ನ್ಯಾಯಾಲಯ ನೀಡಿದ್ದ ಸಾಮಾನ್ಯ ಜಾಮೀನಿಗೆ ದೆಹಲಿ ಹೈಕೋರ್ಟ್ ಹಠಾತ್ ತಡೆ ನೀಡಿದ್ದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ, ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಕೇಜ್ರಿವಾಲ್ ಪರ ವಕೀಲರು ಸೋಮವಾರವೇ ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಪೀಠಕ್ಕೆ ಮನವಿ ಮಾಡಿದ್ದಾರೆ. ಜಾಮೀನು ಆದೇಶ ತಡೆಹಿಡಿದಿರುವ ಹೈಕೋರ್ಟ್ ಕ್ರಮ ಕಾನೂನಿನ ಆದೇಶಕ್ಕೆ ವಿರುದ್ಧವಾಗಿದೆ ಎಂದು ತಕರಾರು ವ್ಯಕ್ತಪಡಿಸಿ ಕೇಜ್ರಿವಾಲ್ ಸುಪ್ರೀಂ ಮೊರೆ ಹೋಗಿದ್ದಾರೆ. ಮದ್ಯ ನೀತಿಯ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೆಲ ತಿಂಗಳಿಂದ ಬಂಧನದಲ್ಲಿರುವ ಕೇಜ್ರಿವಾಲ್‌ಗೆ ದೆಹಲಿ ವಿಚಾರಣಾ ನ್ಯಾಯಾಲಯ ಷರತ್ತಿನ ಜಾಮೀನು ನೀಡಿತ್ತು. ಜಾಮೀನು ಆದೇಶ ಪ್ರತಿ ಪಡೆದು ಜೈಲಿನಿಂದ ಹೊರಬರಬೇಕು ಎನ್ನುವಾಗಲೇ ಹೈಕೋರ್ಟ್ ತಡೆ ನೀಡಿದೆ. ವಿಚಾರಣಾ ನ್ಯಾಯಾಲಯ ಜಾಮೀನು ನೀಡಿದ ಕ್ರಮವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ(ಇ.ಡಿ) ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ತುರ್ತು ವಿಚಾರಣೆಗೆ ಮನವಿ ಮಾಡಿತ್ತು. ಇ.ಡಿ ಅರ್ಜಿ ವಿಚಾರಣೆ ಜೂ.25ಕ್ಕೆ ಮುಂದೂಡಿದ ಹೈಕೋರ್ಟ್, ಜಾಮೀನು ಪ್ರಕ್ರಿಯೆಗೆ ತಡೆ ನೀಡಿದೆ.

ತಮಿಳುನಾಡು 22 ಮೀನುಗಾರರ ಬಂಧನ

ಚೆನ್ನೈ: ಶ್ರೀಲಂಕಾ ನೌಕಾಪಡೆ ತಮಿಳುನಾಡಿನ 22 ಮೀನುಗಾರರನ್ನು ಭಾನುವಾರ ಬಂಧಿಸಿದೆ. ನೆಡುಂತೀವು ಶ್ರೀಲಂಕಾ ಜಲ ವ್ಯಾಪ್ತಿಯಲ್ಲಿ ಮೀನುಗಾರಿಕೆ ನಡೆಸಿದ ಆರೋಪದಡಿ ಬಂಧಿಸಲಾಗಿದೆ. ತಮಿಳುನಾಡಿನ ತಂಗಚಿಮಂಡಂ ಮೀನುಗಾರರ ತಂಡ ಪಲ್ಕ್‌ಬೇ ಸಮುದ್ರ ಪ್ರದೇಶಕ್ಕೆ ಶನಿವಾರ ತೆರಳಿತ್ತು. ಭಾನುವಾರ ಬೆಳಗ್ಗೆ ಶ್ರೀಲಂಕಾ ನೌಕಾಪಡೆ ಗಸ್ತುವೇಳೆ ಮೀನುಗಾರರ 3 ದೋಣಿಗಳನ್ನು ವಶಕ್ಕೆ ಪಡೆದು 22 ಮಂದಿಯನ್ನು ಬಂಧಿಸಿದೆ ಎಂದು ರಾಮೇಶ್ವರಂ ಮೀನುಗಾರರ ಸಂಘ ತಿಳಿಸಿದೆ. ಹಿಂದೆ ಮೀನುಗಾರರ ಬಂಧನವಾದಾಗ ವಿದೇಶಾಂಗ ಸಚಿವ ಜೈಶಂಕರ್‌ಗೆ ಜೂ.19ರಂದು ಪತ್ರ ಬರೆದು ಲಂಕಾ ವಶದಲ್ಲಿರುವ ತಮಿಳುನಾಡಿನ ಮೀನುಗಾರರು ಹಾಗೂ ಅವರ ದೋಣಿಗಳನ್ನು ಬಿಡುಗಡೆ ಮಾಡಿಸುವಂತೆ ಕೋರಲಾಗಿತ್ತು ಎಂದು ತಮಿಳುನಾಡು ಸಿಎಂ ಸ್ಟಾಲಿನ್ ಹೇಳಿದ್ದಾರೆ.

ಜಾಂಬಿಯ: ಪ್ರವಾಸಿ ಮಹಿಳೆ ಕೊಂದ ಆನೆ!

ಜಾಂಬಿಯ: ಆಫ್ರಿಕಾ ಖಂಡದ ಜಾಂಬಿಯಾ ದೇಶದಲ್ಲಿ ವನ್ಯಪ್ರಾಣಿ ವೀಕ್ಷಣೆಗೆ ಬಂದಿದ್ದ ಪ್ರವಾಸಿಗರ ತಂಡದಲ್ಲಿದ್ದ ಮೆಕ್ಸಿಕೊ ಮಹಿಳೆಯನ್ನು ಆನೆಯೊಂದು ಸಫಾರಿ ವಾಹನದಿಂದಲೇ ಹೊರಗೆಳೆದು ನೆಲಕ್ಕೆ ಅಪ್ಪಳಿಸಿ ತುಳಿದು ಕೊಂದಿದೆ. ಜೂಲಿಯಾನಾ ಗ್ಲೆಟೂರ್ನೊ(64) ಮೃತರು. ಲಿವಿಂಗ್ ಸ್ಟೋನ್‌ನ ಮರಾಂಬ ಸಾಂಸ್ಕೃತಿಕ ಸೇತುವೆ ಬಳಿ ಆನೆಗಳು ಹಿಂಡಿನಲ್ಲಿ ಇರುವುದನ್ನು ತೋರಿಸಲು ಸಫಾರಿ ವಾಹನ ನಿಲ್ಲಿಸಿದಾಗ ಸಿಟ್ಟಿಗೆದ್ದ ಆನೆಯೊಂದ ಹಠಾತ್ ದಾಳಿ ನಡೆಸಿತು. ಆನೆ ದಾಳಿಯಿಂದ ಜೂಲಿಯಾನಾ ಅವರ ಬಲ ಭುಜ ಮತ್ತು ತಲೆಗೆ ಪೆಟ್ಟಾಯಿತು. ಎಡಗಾಲು ಮುರಿಯಿತು. ತಕ್ಷಣವೇ ಅವರನ್ನು ಆನೆ ಹಿಡಿತ ದಿಂದ ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದರೂ ಪ್ರಯೋಜನವಾಗಲಿಲ್ಲ. ಈ ವರ್ಷದಲ್ಲಿ ಜಾಂಬಿಯಾದಲ್ಲಿ ವಿದೇಶಿ ಪ್ರವಾಸಿಗರ ಮೇಲಿನ 2ನೇ ಆನೆ ದಾಳಿ ಇದಾಗಿದೆ.

ಅಸ್ಸಾಂನಲ್ಲಿ ಮುಂದುವರಿದ ಪ್ರವಾಹ! | ಕೇರಳದಲ್ಲಿ ರೆಡ್ ಅಲರ್ಟ್

ಅರುಣಾಚಲ ಮೇಘಸ್ಫೋಟ–ಭೂಕುಸಿತ

ದೆಹಲಿ: ಭಾರತದ ಈಶಾನ್ಯ ರಾಜ್ಯಗಳು ಪ್ರಕೃತಿ ವಿಕೋಪಕ್ಕೆ ತತ್ತರಿಸಿವೆ. ಅರುಣಾಚಲದಲ್ಲಿ ಭಾನುವಾರ ಬೆಳಗ್ಗೆ ಮೇಘಸ್ಫೋಟವಾಗಿ ಧಾರಾಕಾರ ಮಳೆ ಸುರಿದಿದ್ದು, ಭೂಕುಸಿತ ಉಂಟಾಗಿದೆ.

ಇಟಾನಗರದ ಹಲವೆಡೆ ಭೂಕುಸಿತ ಹಾಗೂ ಪ್ರವಾಹ ಉಂಟಾಗಿದೆ. ರಾಷ್ಟ್ರೀಯ ಹೆದ್ದಾರಿ 415ರಲ್ಲಿಯೂ ಹಲವೆಡೆ ರಸ್ತೆಯೇ ಕೊಚ್ಚಿ ಹೋಗಿರುವುದರಿಂದ ವಾಹನ ಸಂಚಾರ ಸ್ಥಗಿತಗೊಂಡಿದೆ. ರಾಜ್ಯ ರಾಜಧಾನಿಯನ್ನು ಸಂಪರ್ಕಿಸುವ ಮುಖ್ಯ ಹೆದ್ದಾರಿಯಲ್ಲಿ ವಾಹನಗಳು ಮೈಲುಗಟ್ಟಲೇ ಸಾಲುಗಟ್ಟಿದ್ದು, ಸಂಚಾರ ಪೂರ್ಣ ಅಸ್ತವ್ಯಸ್ತಗೊಂಡಿದೆ. ಭೂಕುಸಿತ ಬಾಧಿತ ಪ್ರದೇಶಗಳಿಗೆ ಜನರು ತೆರಳದಂತೆ, ನೀರಿಗೆ ಇಳಿಯದಂತೆ ಇಟಾನಗರ ಜಿಲ್ಲಾಡಳಿತ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಭಾರಿ ಮಳೆ ಹಿನ್ನೆಲೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಜನರಿಗೆ ಸೂಚನೆ ನೀಡಲಾಗಿದೆ. ಜಿಲ್ಲೆಯ 7 ಕಡೆ ಆಶ್ರಯ ಕೇಂದ್ರ ತೆರೆಯಲಾಗಿದೆ. ರಸ್ತೆ ಮಾರ್ಗದಲ್ಲಿ ಕುಸಿದ ಮಣ್ಣು–ಮರ ಮೊದಲಾದ ಅವಶೇಷಗಳ ತೆರವು ಕಾರ್ಯಾಚರಣೆ ಎನ್‌ಡಿಆರ್‌ಎಫ್–ಎಸ್‌ಟಿಆರ್‌ಎಫ್ ತಂಡಗಳಿಂದ ನಡೆಯುತ್ತಿದೆ.

ಅಸ್ಸಾಂ 968ಗ್ರಾಮ ಮುಳುಗಡೆ: ಕೆಲವು ವಾರಗಳಿಂದ ಅಸ್ಸಾಂನಲ್ಲಿ ಎಡೆಬಿಡದೇ ಮಳೆ ಸುರಿಯುತ್ತಿದೆ. ಪ್ರವಾಹ ಉಂಟಾಗಿದ್ದು, ಲಕ್ಷಾಂತರ ಜನರು ಸಂತ್ರಸ್ತರಾಗಿದ್ದಾರೆ. ರಾಜ್ಯದ 10 ಜಿಲ್ಲೆಗಳ 968 ಗ್ರಾಮಗಳು ಮುಳುಗಡೆಯಾಗಿ 1.17 ಲಕ್ಷ ಜನರು ಪ್ರವಾಹ ಪರಿಸ್ಥಿತಿಯಿಂದ ತೊಂದರೆಗೀಡಾಗಿದ್ದಾರೆ ಎಂದು ಸಿಎಂ ಹಿಮಂತ ಬಿಸ್ವಾ ಮಾಹಿತಿ ನೀಡಿದ್ದಾರೆ.

ರಾಜ್ಯದ ವಿವಿಧೆಡೆ 134 ಆಶ್ರಯ ಕೇಂದ್ರ ಸ್ಥಾಪಿಸಲಾಗಿದೆ. 94 ಕಡೆ ನಿರಾಶ್ರಿತರಿಗೆ ನೆರವು ಒದಗಿಸುವ ಕಾರ್ಯ ನಡೆದಿದೆ. ಕರಿಂಗಂಜ್ ಪ್ರದೇಶದಲ್ಲಿ ಹೆಚ್ಚು ಆಶ್ರಯ ಕೇಂದ್ರ ಸ್ಥಾಪಿಸಲಾಗಿದೆ. ಪ್ರವಾಹ ಪೀಡಿತ ಪ್ರದೇಶಗಳ ಸುಮಾರು 17,661 ಜನರು ಆಶ್ರಯ ಕೇಂದ್ರಗಳಲ್ಲಿದ್ದಾರೆ ಎಂದು ಸಿಎಂ ತಿಳಿಸಿದ್ದಾರೆ.

ಪ್ರವಾಹ, ಭೂಕುಸಿತದಿಂದಾಗಿ ರಾಜ್ಯದಲ್ಲಿ ಈವರೆಗೆ 37 ಮಂದಿ ಸಾವನ್ನಪ್ಪಿದ್ದಾರೆ. 3995.33 ಹೆಕ್ಟೇರ್ ಕೃಷಿ ಭೂಮಿ ಹಾನಿಗೀಡಾಗಿದೆ. 2,20,546 ಪ್ರಾಣಿಗಳು ಪ್ರವಾಹಕ್ಕೆ ಸಿಲುಕಿ ಕೊಚ್ಚಿಹೋಗಿವೆ ಎಂದು ಅಸ್ಸಾಂ ವಿಪತ್ತು ನಿರ್ವಹಣಾ ಸಂಸ್ಥೆ ಮಾಹಿತಿ ಹಂಚಿಕೊಂಡಿದೆ.

ರಾಜ್ಯದ 3 ಮುಖ್ಯ ನದಿಗಳಾದ ಕೊಪಿಲಿ, ಬರಾಕ್, ಕುಶಿಯಾರಾ ಅಪಾಯ ಮಟ್ಟ ಮೀರಿ ಹರಿಯುತ್ತಿವೆ.

ಕೇರಳದಲ್ಲಿ ರೆಡ್ ಅಲರ್ಟ್

ಕೊಚ್ಚಿ: ಕೊಯಿಕ್ಕೋಡ್, ವಯನಾಡ್, ಕುನ್ನೂರ್ ಜಿಲ್ಲೆಗಳಲ್ಲಿ ಜೂ.25ರವರೆಗೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿ ರೆಡ್ ಅಲರ್ಟ್ ಘೋಷಿಸಿದೆ. 3 ಜಿಲ್ಲೆಗಳಲ್ಲಿ 20–24 ಸೆಂ.ಮೀ ಮಳೆ ನಿರೀಕ್ಷಿಸಲಾಗಿದೆ. ಎರ್ನಾಕುಲಂ, ಇಡುಕ್ಕಿ, ತ್ರಿಶೂರ್, ಪಾಲಕ್ಕಾಡ್, ಮಲಪ್ಪುರಂ ಮತ್ತು ಕಾಸರಗೋಡಿನಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕೆಲ ಜಿಲ್ಲೆಗಳಲ್ಲಿ 6–11 ಸೆಂ.ಮೀ ಮಳೆ ನಿರೀಕ್ಷೆಯೊಂದಿಗೆ ಯೆಲ್ಲೋ ಅಲರ್ಟ್ ಘೋಷಣೆಯಾಗಿದೆ.

ಈವರೆಗೆ 18 ಸಾವಿರ ಮಂದಿಗೆ ಅನುಮತಿ

ಇಸ್ರೇಲ್: ಬಂದೂಕಿಗಾಗಿ 42,000 ವನಿತೆಯರ ಅರ್ಜಿ

ಜೆರುಸಲೇಂ: 2023ರ ಅ.7ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ನಡೆಸಿದ ಪೈಶಾಚಿಕ ದಾಳಿ ಯಹೂದಿ ರಾಷ್ಟ್ರದ ಜನಜೀವನ, ಜೀವನಶೈಲಿಯನ್ನೇ ಬದಲಿಸಿಬಿಟ್ಟಿದೆ. ಸಾವಿರಾರು ಇಸ್ರೇಲ್ ಮಹಿಳೆಯರು ಆತ್ಮರಕ್ಷಣೆಗಾಗಿ ಬಂದೂಕು ಖರೀದಿಗೆ ಮುಂದಾಗಿದ್ದಾರೆ.8 ತಿಂಗಳ ಹಿಂದೆ ನಡೆದ ಉಗ್ರ ದಾಳಿಯ ಬಳಿಕ ಈವರೆಗೆ 42 ಸಾವಿರ ಯಹೂದಿ ಮಹಿಳೆಯರು ಸ್ವಂತಕ್ಕೊಂದು ಬಂದೂಕು ಬೇಕಿದೆ ಎಂದು ಪರವಾನಿಗೆಗೆ ಅರ್ಜಿ ಸಲ್ಲಿಸಿದ್ದಾರೆ.

ಬಂದೂಕು ಪರವಾನಗಿಗಾಗಿ ಅರ್ಜಿ ಸಲ್ಲಿಸುವವರ ಪ್ರಮಾಣ ಅ.7ರ ಹಮಾಸ್ ದಾಳಿ ಬಳಿಕ 3 ಪಟ್ಟು ಹೆಚ್ಚಾಗಿದೆ. ಸ್ವಂತ ಬಂದೂಕಿಗಾಗಿ ಅರ್ಜಿ ಸಲ್ಲಿಸಿದ 42,000 ಮಹಿಳೆಯರ ಪೈಕಿ 18 ಸಾವಿರ ಅರ್ಜಿಗಳಿಗೆ ಈವರೆಗೆ ಅನುಮತಿ ನೀಡಲಾಗಿದೆ. ಇಸ್ರೇಲ್ ಹಾಗೂ ಇಸ್ರೇಲ್ ಮಿಲಿಟರಿ ವಶದ ಲ್ಲಿರುವ ಪಶ್ಚಿಮ ದಂಡೆ ಭಾಗದ 15,000 ಮಹಿಳೆಯರು ಬಂದೂಕುಗಳನ್ನು ಹೊಂದಿದ್ದಾರೆ. 10,000 ಮಹಿಳೆಯರು ಬಂದೂಕು ಪರವಾನಗಿ ಕಡ್ಡಾಯವಾಗಿರುವ ತರಬೇತಿ ಪಡೆಯಲು ನೋಂದಾಯಿಸಿಕೊಂಡಿದ್ದಾರೆ. ನಾಗರಿಕರು ಸ್ವಂತಕ್ಕೆ ಬಂದೂಕು ಹೊಂದುವುದನ್ನು ಇಸ್ರೇಲ್ ರಕ್ಷಣಾ ಸಚಿವ ಇತಮಾರ್ ಬೆನ್ ಜೆವಿರ್ ಪ್ರೋತ್ಸಾಹಿಸಿದ್ದರಿಂದ 2022ರಲ್ಲಿ ಬಂದೂಕು ಪರವಾನಿಗೆ ಪಡೆದ ಇಸ್ರೇಲ್ ಪ್ರಜೆಗಳ ಸಂಖ್ಯೆ 1ಲಕ್ಷ ದಾಟಿತ್ತು.

ಗುಂಡಿನ ದಾಳಿ: ಆಂಧ್ರ ವ್ಯಕ್ತಿ ಸೇರಿ 4 ಸಾವು

ಅಮರಾವತಿ: ಅಮೆರಿಕದ ಅರ್ಕಾನ್ಸಾಸ್‌ನಲ್ಲಿ ದಿನಸಿ ಮಾರಾಟದ ದೊಡ್ಡ ಅಂಗಡಿಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಆಂಧ್ರಪ್ರದೇಶದ ಬಾಪಟ್ಲಾ ಜಿಲ್ಲೆಯ ದಾಸರಿ ಗೋಪಿಕೃಷ್ಣ(32) ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ. ಗೋಪಿಕೃಷ್ಣ 8 ತಿಂಗಳ ಹಿಂದೆಯಷ್ಟೇ ಅಮೆರಿಕಕ್ಕೆ ತೆರಳಿದ್ದರು. ಅರ್ಕಾನ್ಸಾಸ್‌ನ ಸಣ್ಣ ಪಟ್ಟಣ ಫೋರ್ಡೈಸ್‌ನಲ್ಲಿರುವ ಮ್ಯಾಡ್ ಬುಚರ್ ಅಂಗಡಿಯಲ್ಲಿ ಬಿಲ್ಲಿಂಗ್ ಕೌಂಟರ್‌ನಲ್ಲಿ ದಾಸರಿ ಕೆಲಸ ಮಾಡುತ್ತಿದ್ದಾಗ ಬಂದೂಕುದಾರಿ ಶುಕ್ರವಾರ ದಾಳಿ ನಡೆಸಿದ. ಅಂಗಡಿಯೊಳಗೆ ಮತ್ತು ಪಾರ್ಕಿಂಗ್ ಸ್ಥಳದಲ್ಲಿ ಗುಂಡು ಹಾರಿಸಿದ. ಕೌಂಟರ್‌ನಲ್ಲಿದ್ದ ದಾಸರಿ ಗಾಯಗೊಂಡರೆ, ಪಾರ್ಕಿಂಗ್ ಸ್ಥಳದಲ್ಲಿ ಮೂವರು ಸಾವನ್ನಪ್ಪಿದರು. 9 ಮಂದಿ ಗಾಯಗೊಂಡರು. ಗಂಭೀರವಾಗಿ ಗಾಯಗೊಂಡಿದ್ದ ದಾಸರಿ ಅವರು ಶನಿವಾರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಬಾಪಟ್ಲಾ ಜಿಲ್ಲೆಯ ಕರ್ಲಪಾಲೆಂ ಮಂಡಲದ ಯಾಜಲಿಯಲ್ಲಿರುವ ದಾಸರಿ ಕುಟುಂಬ ಸದಸ್ಯರು ಆಘಾತಕ್ಕೊಳಗಾಗಿದ್ದಾರೆ. ದಾಸರಿ ಅವರು ಪತ್ನಿ, ಪುತ್ರನನ್ನು ಅಗಲಿದ್ದಾರೆ.

18ನೇ ಲೋಕಸಭೆಯ ಮೊದಲ ಕಲಾಪ | ನೀಟ್–ನೆಟ್ ಚರ್ಚೆಗೆ ಪ್ರತಿಪಕ್ಷಗಳು ಸಜ್ಜು

ಇಂದಿನಿಂದ ಸಂಸತ್ ಅಧಿವೇಶನ

ದೆಹಲಿ: 18ನೇ ಲೋಕಸಭೆಯ ಮೊದಲ ಅಧಿವೇಶನ ಜೂ.24ರಿಂದ ಆರಂಭವಾಗಲಿದ್ದು ಜುಲೈ 3ರವರೆಗೆ ನಡೆಯಲಿದೆ. ಲೋಕಸಭೆಗೆ ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮಹತಾಬ್ ಕಾರ್ಯನಿರ್ವಹಿಸಲಿದ್ದಾರೆ. ಅವರಿಂದ ನೂತನ ಸಂಸದರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಜೂ.26ರಂದು ಲೋಕಸಭಾ ಸ್ಪೀಕರ್ ಚುನಾವಣೆ ನಡೆಯಲಿದೆ. 27ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು 18ನೇ ಲೋಕಸಭೆಯ ಜಂಟಿ ಅಧಿವೇಷನ ಉದ್ದೇಶಿಸಿ ಮಾತನಾಡಲಿದ್ದಾರೆ.

ಎನ್‌ಡಿಎ 3ನೇ ಅವಧಿಯ ಸರಕಾರವನ್ನು ಮೊದಲ ಸಂಸತ್ ಅಧಿವೇಶನದಲ್ಲೇ ಕಟ್ಟಿಹಾಕಲು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಸಿದ್ಧತೆ ನಡೆಸಿವೆ. 'ನೀಟ್–ಯುಜಿ 2024' ಪ್ರಶ್ನೆಪತ್ರಿಕೆ ಸೋರಿಕೆ, 'ಯುಜಿಸಿ ನೆಟ್' ಪರೀಕ್ಷಾ ಅಕ್ರಮ ವಿಚಾರಗಳನ್ನೇ ಮುಂದಿಟ್ಟುಕೊಂಡು ಪ್ರತಿಪಕ್ಷಗಳು ಸದನದಲ್ಲಿ ಭಾರಿ ಸದ್ದು ಮಾಡುವ ನಿರೀಕ್ಷೆ ಇದೆ. ಕಾಂಗ್ರೆಸ್, ಡಿಎಂಕೆ, ಟಿಎಂಸಿ ಸೇರಿ ಇಂಡಿಯ ಒಕ್ಕೂಟದ ಹಲವು ಪಕ್ಷಗಳು ಇದೇ ವಿಚಾರವನ್ನು ಅಧಿವೇಶನದಲ್ಲಿ ಚರ್ಚಿಸುವುದಾಗಿ ಹೇಳಿವೆ. ಹಂಗಾಮಿ ಸ್ಪೀಕರ್ ನೇಮಕ ವಿಚಾರದಲ್ಲೂ ಆಡಳಿತ–ಪ್ರತಿಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಮೂಡಿದೆ. ಈ ವಿಚಾರವೂ ಸದನದಲ್ಲಿ ಜೋರು ಚರ್ಚೆಯಾಗುವ ಸಾಧ್ಯತೆ ಇದೆ. ಬೆಲೆ ಏರಿಕೆ, ಹಣದುಬ್ಬರ, ಉತ್ತರ ಭಾರತದಲ್ಲಿನ ಬಿಸಿಗಾಳಿ ಮತ್ತು ಪ್ರವಾಹ ಪರಿಸ್ಥಿತಿ ನಿರ್ವಹಣೆ ವಿಚಾರ, ಪ್ರಾಕೃತಿಕ ವಿಕೋಪದಿಂದಾದ ಸಾವು ನೋವು ಮೊದಲಾದ ವಿಚಾರಗಳು ಪ್ರತಿಪಕ್ಷಗಳ ಚರ್ಚೆ ಪಟ್ಟಿಯಲ್ಲಿವೆ.

ಜು.3ಕ್ಕೆ ಮೊದಲ ಅಧಿವೇಶನ ಮುಕ್ತಾಯಗೊಂಡ ಬಳಿಕ ಮತ್ತೆ ಜು.22ರಿಂದ ಮಳೆಗಾಲದ ಅಧಿವೇಶನ ಆರಂಭವಾಗಲಿದೆ.

ಪಟನಾಗೆ ತೆರಳಿದ ಸಿಬಿಐ ತನಿಖಾ ತಂಡ | ಮರು ಪರೀಕ್ಷೆಗೆ 750 ವಿದ್ಯಾರ್ಥಿ ಗೈರು

ನೀಟ್–ಎಫ್‌ಐಆರ್: ಸಿಬಿಐ ತನಿಖೆ ಆರಂಭ

ದೆಹಲಿ: ವೈದ್ಯಕೀಯ ಶಿಕ್ಷಣ ಪ್ರವೇಶದ ಪರೀಕ್ಷೆ 'ನೀಟ್–ಯುಜಿ 2024'ದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಬಿಹಾರ ಮೂಲದ ಆರೋಪಿಗಳಲ್ಲಿ ಹಲವರ ಬಂಧನವಾಗಿರುವ ಬೆನ್ನಲ್ಲೇ ಕೇಂದ್ರ ತನಿಖಾ ದಳ(ಸಿಬಿಐ) ಭಾನುವಾರ ತನಿಖೆಯ ಹೊಣೆ ವಹಿಸಿಕೊಂಡಿದೆ.

ಮೊದಲ ಬಾರಿಗೆ ಸಿಬಿಐ ಅಧಿಕಾರಿಗಳು ನೀಟ್–2024ರ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿದ್ದು, ಭಾನುವಾರದಿಂದಲೇ ತನಿಖೆ ಆರಂಭಿಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಬಿಹಾರ ಕೇಂದ್ರಿತವಾಗಿರುವುದರಿಂದ ಪಟನಾಗೆ ತನಿಖಾಧಿಕಾರಿಗಳ ತಂಡವೊಂದನ್ನು ಸಿಬಿಐ ಭಾನುವಾರ ರವಾನಿಸಿದೆ. ನೀಟ್–2024ರ ಅಕ್ರಮದಲ್ಲಿ ದೊಡ್ಡ ಮಟ್ಟದ ಷಡ್ಯಂತ್ರದ ವಾಸನೆ ಹಿಡಿದಿರುವ ಸಿಬಿಐ ತಂಡ, ಬಿಹಾರದ ಜತೆಗೆ ಗುಜರಾತ್‌ಗೂ ಭೇಟಿ ನೀಡಲಿದೆ.

ಟ್ಯೂಟರ್ ವಿಚಾರಣೆ: ಮೊದಲು ಬಿಹಾರದಲ್ಲಿ ನೀಟ್ ಅಕ್ರಮ ವಿಚಾರದ ತನಿಖೆ ಆರಂಭವಾಗಿತ್ತು. ಆದರೆ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರ ಮಹಾರಾಷ್ಟ್ರ ಸೇರಿ ಹಲವು ಕಡೆ ಬೆಸೆದುಕೊಂಡಿರುವ ಮಾಹಿತಿ ಹೊರಬಿದ್ದಿದ್ದು, ನೀಟ್ ಅಕ್ರಮ ಸಂಬಂಧ ಮಹಾರಾಷ್ಟ್ರದ 'ಭಯೋತ್ಪಾದನೆ ನಿಗ್ರಹ ಪಡೆ' (ಎಟಿಎಸ್) ತನಿಖೆ ಆರಂಭಿಸಿದೆ. ಸಂಜಯ್ ತುಕಾರಾಮ್ ಜಾದವ್, ಜಲೀಲ್ ಉಮರ್‌ಖಾನ್ ಪಠಾಣ್ ಎಂಬ ಇಬ್ಬರು ಉಪನ್ಯಾಸಕರನ್ನು ಶನಿವಾರ ಸಂಜೆ ವಶಕ್ಕೆ ಪಡೆದು ವಿಚಾರಣೆ ನಡೆಸಿದೆ. ಇಬ್ಬರೂ ಜಿಲ್ಲಾ ಪರಿಷತ್ ಉಪನ್ಯಾಸಕರಾಗಿದ್ದು ಲಾಥೂರ್‌ನಲ್ಲಿ ಖಾಸಗಿ 'ನೀಟ್' ತರಬೇತಿ ಕೇಂದ್ರವನ್ನೂ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಕೆಲ ಗಂಟೆಗಳ ವಿಚಾರಣೆ ಬಳಿಕ ಇಬ್ಬರನ್ನೂ ಬಿಟ್ಟು ಕಳುಹಿಸಲಾಗಿದೆ.

ಪ್ರತಿಭಟನೆ: ಗುಜರಾತ್‌ನ ರಾಜ್‌ಕೋಟ್‌ನಲ್ಲಿ ವಿದ್ಯಾರ್ಥಿಗಳು ನೀಟ್ ಯುಜಿ ಮರು ಪರೀಕ್ಷೆ ವಿರುದ್ಧ ಭಾರಿ ಪ್ರತಿಭಟನೆ ನಡೆಸಿದ್ದಾರೆ. 600ಕ್ಕಿಂತ ಕಡಿಮೆ ಅಂಕ ಪಡೆದವರು ಮರು ಪರೀಕ್ಷೆಗೆ ಬೇಡಿಕೆ ಇಟ್ಟಿದ್ದಾರೆ. 680 ಅಂಕ ಪಡೆದವರು ಯಾಕೆ ಮರು ಪರೀಕ್ಷೆ ಬರೆಯಬೇಕು? ಮತ್ತೊಮ್ಮೆ ಈ ಅಂಕ ಸಿಗುವುದು ಕಷ್ಟ, ಸಾಕಷ್ಟು ಕಷ್ಟ ಪಟ್ಟು ಪರೀಕ್ಷೆ ಬರೆದಿದ್ದೇವೆ ಎಂದು ವಿದ್ಯಾರ್ಥಿಗಳು ಅಲವತ್ತುಕೊಂಡಿದ್ದಾರೆ. ದೆಹಲಿಯ ಜಂತರ್ ಮಂತರ್‌ನಲ್ಲೂ ವಿದ್ಯಾರ್ಥಿಗಳು–ಪೋಷಕರು ಪ್ರತಿಭಟನೆ ನಡೆಸಿದ್ದಾರೆ. ನೀಟ್ ಅಕ್ರಮ ಮತ್ತು ಮರು ಪರೀಕ್ಷೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಂತರ್‌ಮಂತರ್‌ನಿಂದ ಪ್ರಧಾನಿ ನಿವಾಸದವರೆಗೆ ಮೆರವಣಿಗೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

ಛತ್ತೀಸ್‌ಗಢದ ಪರೀಕ್ಷಾ ಕೇಂದ್ರದಲ್ಲಿ ನೀಟ್ ಮರುಪರೀಕ್ಷೆಗೆ ಬಂದ ವಿದ್ಯಾರ್ಥಿಗಳನ್ನು ತಪಾಸಣೆ ನಡೆಸಿ ಪರೀಕ್ಷಾ ಕೇಂದ್ರದೊಳಕ್ಕೆ ಬಿಡುತ್ತಿದ್ದ ದೃಶ್ಯ.

ಪ್ರಿಯಾಂಕಾ ವಾದ್ರಾ ಟೀಕೆ

ದೆಹಲಿ: ದೇಶದ ಶಿಕ್ಷಣ ವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಮೊದಲು ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ಬಳಿಕ ನೆಟ್ ಪರೀಕ್ಷೆ ಮುಂದೂಡಿಕೆ. ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಮೋದಿ ಸರಕಾರ ಮಾಫಿಯಾಗಳ ಕೈಗೊಪ್ಪಿಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಟೀಕಿಸಿದ್ದಾರೆ.

ನೀಟ್ ಅಕ್ರಮಗಳ ತನಿಖೆ ಹೊಣೆಯನ್ನು ಸಿಬಿಐಗೆ ವಹಿಸಲಾಗಿದೆ. ಸರಕಾರ ವಿದ್ಯಾರ್ಥಿಗಳ ಹಿತ ಕಾಯಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯುವುದಕ್ಕೆ ಸರಕಾರ ಬದ್ಧವಾಗಿದೆ. ಆ ದಿಸೆಯಲ್ಲೇ ಕಠಿಣ ಕಾನೂನು ಜಾರಿ ಮಾಡಲಾಗಿದೆ.

– ಧರ್ಮೇಂದ್ರ ಪ್ರಧಾನ್ ಕೇಂದ್ರ ಮಾನವ ಸಂಪನ್ಮೂಲ ಸಚಿವ

ಸಾಲ್ವರ್ ಗ್ಯಾಂಗ್ ಬೆನ್ನುಹತ್ತಿದ ಪೊಲೀಸ್

ಉತ್ತರಪ್ರದೇಶದ ವಿಶೇಷ ತನಿಖಾ ದಳ (ಎಸ್‌ಟಿಎಫ್) ಗ್ರೇಟರ್ ನೋಯ್ಡಾದ ನೀಮ್ಕಾ ನಿವಾಸಿ ರವಿ ಸತ್ರಿ ಎಂಬಾತನನ್ನು ಬಂಧಿಸಿದೆ. ಈತ ಸಾಲ್ವರ್ ಗ್ಯಾಂಗ್ ಹೆಸರಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ–ನಕಲಿ ಅಭ್ಯರ್ಥಿಗಳ ಮೂಲಕ ಪರೀಕ್ಷೆ ಬರೆಸುವ ಕೆಲಸ ಮಾಡುತ್ತಿದ್ದ. ನೀಟ್, ನೆಟ್ ಪರೀಕ್ಷೆ ಅಕ್ರಮದ ಹಿಂದೆಯೂ ಈತನ ಕೈವಾಡದ ಶಂಕೆ ಇದೆ. ಹಿಂದೆ ಕೂಡ ಉತ್ತರ ಸಮೇತ ಪ್ರಶ್ನೆ ಪತ್ರಿಕೆ ಪಡೆದು ಸಾಮಾಜಿಕ ಜಾಲತಾಣದಲ್ಲಿ ಮಾರಾಟ ಮಾಡುತ್ತಿದ್ದ. ಬಿಹಾರದಲ್ಲೂ ಸಂಜೀವ್ 'ಮುಖಿಯಾ' ಎಂಬಾತನಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಹಿಂದೆ ಕೂಡ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಈತ ಆರೋಪಿ. ಜೈಲು ಶಿಕ್ಷೆ ಅನುಭವಿಸಿದ್ದ. ನೀಟ್ ಅಕ್ರಮದಲ್ಲೂ ಈತನ ಪಾತ್ರವಿದೆ ಎನ್ನಲಾಗಿದೆ.

ಮ.ಪ್ರ: ಸಚಿವ ವಿಜಯ್ ವರ್ಗೀಯ ಆಪ್ತನ ಕೊಲೆ

ಭೋಪಾಲ್: ಮಧ್ಯಪ್ರದೇಶದ ಬಿಜೆಪಿ ಸರಕಾರದ ಸಚಿವ ಕೈಲಾಶ್ ವಿಜಯವರ್ಗಿಯ ಅವರ ಆಪ್ತ, ಸ್ಥಳೀಯ ಬಿಜೆಪಿ ಮುಖಂಡ ಮೋನು ಕಲ್ಯಾಣಿ ಅವರನ್ನು ಇಂದೋರ್‌ನಲ್ಲಿ ದುಷ್ಕರ್ಮಿಗಳಿಬ್ಬರು ಭಾನುವಾರ ಮುಂಜಾನೆ ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳೀಯರೇ ಆದ ಪಿಯೂಷ್ ಮತ್ತು ಅರ್ಜುನ್ ಎಂಬವರು ಗುಂಡು ಹಾರಿಸಿ ಪರಾರಿಯಾಗಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಹಳೆ ದ್ವೇಷದಿಂದ ಕೊಲೆ ಮಾಡಿರಬಹುದೆಂದು ಶಂಕಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಗಳಿಗಾಗಿ ಶೋಧ ನಡೆದಿದೆ. ಮೃತ ಮೋನು ಯುವ ಮೋರ್ಚಾ ನಗರ ಉಪಾಧ್ಯಕ್ಷರಾಗಿದ್ದರು. ಸಚಿವ ವಿಜಯವರ್ಗೀಯ ಮತ್ತು ಅವರ ಮಗ ಮಾಜಿ ಶಾಸಕ ಆಕಾಶ್ ವಿಜಯವರ್ಗೀಯಗೆ ಆಪ್ತರಾಗಿದ್ದರು.

ಆಕಾಶ್ ಆನಂದ್ ಮತ್ತೆ ಮಾಯಾ ಉತ್ತರಾಧಿಕಾರಿ!

ಲಖನೌ: ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ತಮ್ಮ ಸೋದರಳಿಯ ಆಕಾಶ್ ಆನಂದ್ ಅವರನ್ನು ಮತ್ತೆ 'ರಾಜಕೀಯ ಉತ್ತರಾಧಿಕಾರಿ' ಎಂದು ಭಾನುವಾರ ಘೋಷಿಸಿದ್ದಾರೆ. ಆಕಾಶ್ ಬಿಎಸ್‌ಪಿ ರಾಷ್ಟ್ರೀಯ ಸಂಯೋಜನಕಾರಿ ಹುದ್ದೆ ವಹಿಸಿಕೊಳ್ಳಲಿದ್ದಾರೆ. ಜತೆಗೆ ಉತ್ತರಾಖಂಡ ವಿಧಾನ ಸಭಾ ಉಪ ಚುನಾವಣೆಯಲ್ಲಿ ಆಕಾಶ್ ಬಿಎಸ್‌ಪಿ ಪಕ್ಷದಿಂದ ಸ್ಟಾರ್ ಪ್ರಚಾರಕರಾಗಿರಲಿದ್ದಾರೆ. ಲೋಕಸಭಾ ಚುನಾವಣೆ ಪ್ರಚಾರದಲ್ಲೂ ಭಾಗಿಯಾಗಿದ್ದ ಆನಂದ್ ಆಕ್ರಮಣಕಾರಿ ಭಾಷಣ ಮೂಲಕ ಸುದ್ದಿಯಾಗಿದ್ದರು. ಅದೇ ಕಾರಣವಾಗಿ ಎಫ್‌ಐಆರ್ ದಾಖಲಾಗಿದೆ. ಆಕಾಶ್ 2027ರ ಉ.ಪ್ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಪ್ರಚಾರ ತಂಡ ಮುನ್ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಕ್ಸಲ್ ದಾಳಿ: ಇಬ್ಬರು ಯೋಧರು ಹುತಾತ್ಮ

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾದಲ್ಲಿ ಪ್ಯಾರಾಮಿಲಿಟರಿ ಯೋಧರು ಸಂಚರಿಸುತ್ತಿದ್ದ ಟ್ರಕ್ ಮೇಲೆ ನಕ್ಸಲರು ಭಾನುವಾರ ಮಧ್ಯಾಹ್ನ 3ರ ವೇಳೆ ದಾಳಿ ನಡೆಸಿದ್ದು, ಕೇಂದ್ರ ಮೀಸಲು ಪಡೆ ನಕ್ಸಲ್ ನಿಗ್ರಹ ಘಟಕದ 'ಕೋಬ್ರಾ–201' ತಂಡಕ್ಕೆ ಸೇರಿದ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ.

ರಾಜಧಾನಿ ರಾಯಪುರದಿಂದ 400 ಕಿಮೀ ದೂರದ ಟಿಮ್ಮಪುರಂ ಗ್ರಾಮ ಬಳಿ ಯೋಧರ ಟ್ರಕ್ ಸಾಗುವಾಗ ನಕ್ಸಲರು ನೆಲದಲ್ಲಿ ಹುದುಗಿಸಿಟ್ಟಿದ್ದ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಸ್ಫೋಟವಾಗಿದೆ. ಪರಿಣಾಮ ಯೋಧರಾದ ಕಾನ್‌ಸ್ಟೇಬಲ್ ಶೈಲೇಂದ್ರ (29) ಮತ್ತು ಟ್ರಕ್ ಚಾಲಕ ವಿಷ್ಣು(35) ಹುತಾತ್ಮರಾದರು. ಕೋಬ್ರಾ ಪಡೆ ಸಿಲ್ಗೆರ್ ಕ್ಯಾಂಪ್‌ನಿಂದ ತೆಕಲ್ಗುಡೆಮ್‌ವರೆಗೆ ಗಸ್ತು ತಿರುಗುತ್ತಿತ್ತು. ಸ್ಫೋಟ ಸುದ್ದಿ ತಿಳಿದ ಬಳಿಕ ಹೆಚ್ಚಿನ ತುಕಡಿ ಸ್ಥಳಕ್ಕೆ ಧಾವಿಸಿದೆ. ಅಡಗಿರುವ ನಕ್ಸಲರಿಗಾಗಿ ಸ್ಥಳದಲ್ಲಿ ಶೋಧ ನಡೆಸಲಾಗಿದೆ.

ಬಿಹಾರ: ವಾರದಲ್ಲಿ 3ನೇ ಸೇತುವೆ ಕುಸಿತ

ಮೋತಿಹಾರ್: ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ನಿರ್ಮಾಣ ಹಂತದ ಮತ್ತೊಂದು ಸೇತುವೆ ಭಾನುವಾರ ಬೆಳಗ್ಗೆ ಕುಸಿದಿದ್ದು, ರಾಜ್ಯ ದಲ್ಲಿನ ಸರಕಾರಿ ಕಾಮಗಾರಿಗಳ ಗುಣಮಟ್ಟದ ಬಗೆಗೇ ಅನುಮಾನ ವ್ಯಕ್ತವಾಗುತ್ತಿದೆ. ಒಂದೇ ವಾರ ದಲ್ಲಿ ಸೇತುವೆ ಕುಸಿತದ 3ನೇ ಘಟನೆ ಇದಾಗಿದೆ. ಮೋತಿಹಾರ್ ನಗರದ ಘೋರಾಸಹನ್ ಬ್ಲಾಕ್‌ನಲ್ಲಿ 1.50 ಕೋಟಿ ರು. ವೆಚ್ಚದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ನಿರ್ಮಿಸುತ್ತಿದ್ದ 16 ಮೀ. ಉದ್ದದ ಕಿರು ಸೇತುವೆ ಕುಸಿದಿದೆ. ಕಾರ್ಮಿಕರು ಯಾರೂ ಸ್ಥಳದಲ್ಲಿರಲಿಲ್ಲ, ಜನ ಸಂಚಾರವೂ ಇರಲಿಲ್ಲ. ಹಾಗಾಗಿ ಜೀವಹಾನಿ ತಪ್ಪಿದೆ. ಸೇತುವೆ ಕುಸಿತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಇಲಾಖಾ ತನಿಖೆಗೆ ಸೂಚಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಸರಕಾರ ತಿಳಿಸಿದೆ. ಸೇತುವೆ ನಿರ್ಮಾಣಕ್ಕೆ ಸ್ಥಳೀಯರ ವಿರೋಧ ಕೂಡ ಇದ್ದುದರಿಂದ ಪೊಲೀಸರು ಕೂಡ 'ಶಂಕೆ' ಮೇರೆಗೆ ತನಿಖೆ ಕೈಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಗನ ವಿಚಾರಕ್ಕೆ ಜಗಳ ವ್ಯಕ್ತಿಯಿಂದ ಪತ್ನಿ ಕೊಲೆ

ಹಾವೇರಿ : ಜೈಲಿನಲ್ಲಿರುವ ಮಗನ ವಿಚಾರದಲ್ಲಿ ದಂಪತಿ ನಡುವೆ ನಡೆದ ಜಗಳ ಪತ್ನಿಯ ಕೊಲೆಯಲ್ಲಿ ಅಂತ್ಯವಾಗಿದೆ. ಹಾನಗಲ್ ತಾಲ್ಲೂಕಿನ ಶಿವಪುರದಲ್ಲಿ ಸಾವಿತ್ರಿ (54) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಪತಿ ಶೇಖಪ್ಪ (61) ಅವರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಾವಿತ್ರಿ -ಶೇಖಪ್ಪ ದಂಪತಿಗೆ ಮಗನಿದ್ದಾನೆ. ಬಾಲಕಿ ಮೇಲೆ ದೌರ್ಜನ್ಯ ಎಸಗಿದ್ದ ಆರೋಪದಡಿ ಮಗನ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು , ಮಗ ಜೈಲಿನಲ್ಲಿದ್ದಾನೆ. ಮಗನನ್ನು ಜೈಲಿನಿಂದ ಬಿಡಿಸಿಕೊಂಡು ಬರುವ ವಿಚಾರಕ್ಕೆ ದಂಪತಿ ನಡುವೆ ಶನಿವಾರ ಜಗಳ ಶುರುವಾಗಿತ್ತು. ಈ ವೇಳೆ ಆರೋಪಿ ಶೇಖಪ್ಪ, ಬಡಿಗೆಯಿಂದ ಸಾವಿತ್ರಿಗೆ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದಾಗಿ ಸಾವಿತ್ರಿ ಪ್ರಜ್ಞೆತಪ್ಪಿ ಬಿದ್ದಿದ್ದರು. ಗ್ರಾಮಸ್ಥರು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ಸಾವಿತ್ರಿ ಮೃತಪಟ್ಟಿದ್ದಾಗಿ ತಿಳಿಸಿದರು ಎಂದು ಹಾನಗಲ್ ಪೊಲೀಸರು ತಿಳಿಸಿದ್ದಾರೆ.

ಅಕ್ರಮ ಮರಳು ದಂಧೆ ಎಂಟು ಲಾರಿಗಳ ವಶ

ತರೀಕೆರೆ : ಇಲ್ಲಿನ ಕೋಡಿಕ್ಯಾಂಪ್ ಬಳಿ ಸರ್ಕಾರಕ್ಕೆ ತೆರಿಗೆ ಪಾವತಿಸಿದೆ ಅಕ್ರಮವಾಗಿ ಮರಳು ದಂಧೆ ನಡೆಸುತ್ತಿದ್ದ ಲಾರಿಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಮರಳು ತುಂಬಿದ ಎಂಟು ಲಾರಿಗಳನ್ನು ತರೀಕೆರೆ ಉಪವಿಭಾಗಾಧಿಕಾರಿ ಕೆ.ಜೆ. ಕಾಂತರಾಜ್ ನೇತೃತ್ವದ ತಂಡ ದಾಳಿ ನಡೆಸಿ ವಶಕ್ಕೆ ಪಡೆದಿದೆ. ಲಾರಿಗಳಲ್ಲಿ 15ಟನ್‌ಗೂ ಹೆಚ್ಚಿನ ಮರುಳು ತುಂಬಲಾಗಿತ್ತು ಎಂದು ಹೇಳಲಾಗಿದೆ. ಮರಳು ತುಂಬಿದ ಪ್ರತಿ ಲಾರಿಗೆ 50,600 ರು.ಗಳಂತೆ 8 ಲಾರಿಗಳಿಗೆ 4 ಲಕ್ಷಕ್ಕೂ ಅಧಿಕ ದಂಡ ವಿಧಿಸಲಾಗಿದೆ. ಅಲ್ಲದೆ, ನೆಲದ ಮೇಲೆ ಸುರಿದ ಮರಳನ್ನು ಲೋಕೋಪಯೋಗಿ ಇಲಾಖೆ ವಶಕ್ಕೆ ನೀಡಲಾಗಿದೆ ಎಂದು ತಿಳಿದು ಬಂದಿದೆ. ಕಾರ್ಯಾಚರಣೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖಾಧಿಕಾರಿ ದಯಾನಂದ್, ರಾಜಸ್ವ ನಿರೀಕ್ಷಕ ಬಿ.ಎಸ್. ರೇವಣ್ಣ ಪಾಲ್ಗೊಂಡಿದ್ದರು.

ಅಮೆರಿಕದಲ್ಲಿ ಶೂಟೌಟ್ ನಾಲ್ವರ ಸಾವು

ನವದೆಹಲಿ: ಅಮೆರಿಕದ ಅರ್ಕಾನ್ಸಸ್‌ನ ಕಿರಾಣಿ ಅಂಗಡಿಯೊಂದರಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಆಂಧ್ರಪ್ರದೇಶದ 32 ವರ್ಷದ ವ್ಯಕ್ತಿಯೂ ಸೇರಿದಂತೆ ನಾಲ್ವರು ಸಾವನ್ನಪ್ಪಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಆಂಧ್ರಪ್ರದೇಶ ಮೂಲದ ವ್ಯಕ್ತಿಯನ್ನು ದಾಸರಿ ಗೋಪಿಕೃಷ್ಣ ಎಂದು ಗುರುತಿಸಲಾಗಿದೆ. ಬಾಪಟ್ಲ ದವರಾದ ಅವರು ಎಂಟು ತಿಂಗಳ ಹಿಂದೆಯಷ್ಟೇ ಅಮೆರಿಕಕ್ಕೆ ತೆರಳಿದ್ದರು. ಅರ್ಕಾನ್ಸಸ್‌ನ ಸಣ್ಣ ಪಟ್ಟಣವಾದ ಫೋರ್ಡೈಸ್‌ನಲ್ಲಿರುವ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ಜೂನ್ 21 ರಂದು ಬಂದೂಕುಧಾರಿಯ ಗುಂಡಿಗೆ ಬಲಿಯಾಗಿದ್ದರೆ. ಕಿರಾಣಿ ಅಂಗಡಿ ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ಬಂದೂಕುಧಾರಿ ಗುಂಡು ಹಾರಿಸಿದಾಗ ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಇದರಿಂದಾಗಿ ಬಿಲ್ಲಿಂಗ್ ಕೌಂಟರ್‌ನಲ್ಲಿದ್ದ ಗೋಪಿಕೃಷ್ಣ ಗಂಭೀರವಾಗಿ ಗಾಯಗೊಂಡಿದ್ದರು. ಮರುದಿನ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಕಾಶಿನಾಥ್ ಮಿಶ್ರರಿಂದ ಇಂದು ಉಪನ್ಯಾಸ

ಬೆಂಗಳೂರು: ವಿಶ್ವಸನಾತನ ಧರ್ಮ ಟ್ರಸ್ಟ್ ಸೋಮವಾರ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಖ್ಯಾತ ಕಾಲಜ್ಞಾನಿ ಪಂ.ಕಾಶಿನಾಥ್ ಮಿಶ್ರಾ, ಜಾಗತಿಕ ಭವಿಷ್ಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ಬಸವನಗುಡಿಯ ಶಂಕರಪುರಂ ರಸ್ತೆಯಲ್ಲಿನ ಶೃಂಗೇರಿ ಶಂಕರಮಠ ರಸ್ತೆಯಲ್ಲಿನ ಶ್ರೀ ಭಾರತೀ ತೀರ್ಥ ಸಭಾಭವನದಲ್ಲಿ ಪ್ರವಚನ ನಡೆಯಲಿದೆ. ಕಲಿಯುಗದ ಬಳಿಕ ಮನುಕುಲದ ಕತೆ ಏನು ಎಂಬ ವಿಚಾರದ ಕುರಿತು ಶ್ರೀ ಮದ್ಭಾಗವತ ಮಹಾ ಪುರಾಣ ಕಥಾಮೃತ ಪ್ರವಚನ ಭವಿಷ್ಯಮಾಲಿಕಾ ಪುರಾಣದ ಮೂಲಕ ಮಾಹಿತಿ ಹಂಚಿಕೊಳ್ಳಲಿದ್ದಾರೆ. ಈ ಹಿಂದೆ ಪಂ.ಕಾಶಿನಾಥ್ ಮಿಶ್ರಾ ನೀಡಿದ್ದ ಹಲವಾರು ಕಾಲಾತೀತ ಸೂಚನೆ-ಭವಿಷ್ಯ ಮುಂದಿನ 4 ವರ್ಷಗಳಲ್ಲಿ ಈ ಜಗತ್ತಿಗೆ ಕಾದಲಿರುವ ಕಂಟಕಗಳ ಬಗ್ಗೆ ವಿಶ್ಲೇಷಣೆ-ಪರಿಹಾರ ಕ್ರಮಗಳ ಸೂಚನೆ ನಿಜವಾಗುತ್ತಿವೆ ಎಂಬುದರ ಬಗ್ಗೆ ವಿಷಯ ಮಂಡನೆ ಮಾಡಲಿದ್ದಾರೆ.

{ಬಿ.ಕೆ ಚಂದ್ರಶೇಖರ್} ಕಾಂಗ್ರೆಸ್ ನಾಯಕ

ಅಕಾಡೆಮಿ ಮತ್ತು ಪ್ರಾಧಿಕಾರಗಳು ಸ್ವಾಯತ್ತ ಸಂಸ್ಥೆಗಳಾಗಿರಬೇಕೆಂಬ ವಿಚಾರದಲ್ಲಿ ವಿವಾದ ಅನಪೇಕ್ಷಣೀಯ. ಸಾಂಸ್ಕೃತಿಕ ಸಂಸ್ಥೆಗಳಿಗೆ ಸ್ವಾಯತ್ತತೆ ಇರಬೇಕೆಂಬ ಸಂವಿಧಾನದ ಆಶಯವನ್ನು ನಾವು ಮರೆಯಬಾರದು. ಹೀಗಾಗಿ ಸಾಹಿತಿಗಳು ಪಕ್ಷದ ಸಭೆಗೆ ಹಾಜರಾಗುವುದು ಸರಿಯಲ್ಲ.

ಆಂಧ್ರದಲ್ಲೂ ಕನ್ನಡ ಶಿಕ್ಷಣಕ್ಕೆ ಆತಂಕ

ಮುಖ್ಯಮಂತ್ರಿಗೆ ಅಶೋಕ ಚಂದರಗಿ ಪತ್ರ I ಕನ್ನಡಿಗರು ತೆಲುಗು ಕಲಿಯಲು ಸರ್ಕಾರದ ದಬ್ಬಾಳಿಕೆ

ಬೆಳಗಾವಿ: ಮಹಾರಾಷ್ಟ್ರದ ಕನ್ನಡ ಶಾಲೆಗಳಲ್ಲಿ ಮರಾಠಿ ಶಿಕ್ಷಕರನ್ನು ನೇಮಿಸಿ, ಅನ್ಯಾಯ ಮಾಡಿದಂತೆ ಆಂಧ್ರ ಪ್ರದೇಶದಲ್ಲೂ ಕನ್ನಡ ಭಾಷೆ ಮತ್ತು ಕಲಿಕೆಗೆ ಕೊಡಲಿ ಪೆಟ್ಟು ನೀಡುವ ನೀತಿ ಅನುಸರಿಸಲಾಗಿದೆ ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಶೋಕ ಚಂದರಗಿ ದೂರಿದ್ದಾರೆ. ಈ ಈ ಹಿನ್ನೆಲೆಯಲ್ಲಿ ಎರಡೂ ರಾಜ್ಯಗಳಲ್ಲಿನ ಕನ್ನಡ ಮಕ್ಕಳ ಶಿಕ್ಷಣದ ಬಗ್ಗೆ ಸರ್ಕಾರ ಗಮನ ಕೊಡುವಂತೆ ಆಗ್ರಹಿಸಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಚಂದರಗಿ ಪತ್ರ ಬರೆದಿದ್ದಾರೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಆಂಧ್ರಪ್ರದೇಶದ 1,000 ಮಾಧ್ಯಮಿಕ ಶಾಲೆಗಳಲ್ಲಿ ಸಿಬಿಎಸ್‌ಸಿ ಪಠ್ಯಕ್ರಮ ಅನುಷ್ಠಾನಗೊಳಿಸಲು ಅಲ್ಲಿನ ಸರ್ಕಾರ ನಿರ್ಧರಿಸಿದೆ. ಈ ಪಠ್ಯಕ್ರಮದ ಮೊಲನೆಯ ವಿಷಯವಾಗಿ ಇಂಗ್ಲಿಷ್ ಮತ್ತು ಸಾಹಿತ್ಯ, ಎರಡನೇ ವಿಷಯವಾಗಿ ತೆಲುಗು, ಮೂರನೇ ವಿಷಯವಾಗಿ ಗಣಿತ, ನಾಲ್ಕನೇ ವಿಷಯವಾಗಿ ವಿಜ್ಞಾನ, ಐದನೇ ವಿಷಯವಾಗಿ ಸಮಾಜವಿಜ್ಞಾನ, ಆರನೇ ವಿಷಯವಾಗಿ ಮಾಹಿತಿ ತಂತ್ರಜ್ಞಾನ ಅಥವಾ ಕೃತಕ ಬುದ್ದಿಮತ್ತೆ ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಈ ಪಠ್ಯಕ್ರಮದ ಪ್ರಕಾರ ಕನ್ನಡ ಮಕ್ಕಳು ಕನ್ನಡ ಆಯ್ಕೆ ಮಾಡಿಕೊಳ್ಳುವ ಅವಕಾಶವೇ ಇಲ್ಲ ಎಂದು ಅವರು ಮುಖ್ಯಮಂತ್ರಿ ಸಿದ್ದ ರಾಮಯ್ಯನವರ ಗಮನ ಸೆಳೆದಿದ್ದಾರೆ.

ಪತ್ರಕ್ಕೆ ಗಣ್ಯರ ಸಹಿ

ಪತ್ರಕ್ಕೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಮುಖಂಡರಾದ ಶಿವಪ್ಪ ಶಮರಂತ, ಎಂ.ಜಿ. ಮಕಾನದಾರ, ರಮೇಶ ಸೊಂಟಕ್ಕಿ, ಶಂಕರ ಬಾಗೇವಾಡಿ, ಮಲ್ಲಪ್ಪ ಅಕ್ಷರದ, ಸಲೀಮ ಖತೀಬ, ಸಾಗರ ಬೋರಗಲ್ , ರಾಜು ಕುಸೋಜಿ, ಸುಮಾ ಪಾಟೀಲ, ಜಿನೇಶ ಅಪ್ಪನ್ನವರ, ರಜತ ಅಂಕಲೆ ಸಹಿ ಮಾಡಿದ್ದಾರೆ.

ತೆಲುಗು ಕಲಿಯಬೇಕಾದ ಪರಿಸ್ಥಿತಿ

ಕರ್ನೂಲ್ ಜಿಲ್ಲೆಯ ಹೊಳಗುಂದ ಜಿಲ್ಲಾ ಪರಿಷತ್ ಪ್ರೌಢಶಾಲೆ, ದೊಡ್ಡ ಹರಿವಾಣದ ಜಿ.ಪ.ಪೌಢಶಾಲೆ, ಕೌತಾಳಂ ಜಿ.ಪ. ಪ್ರೌಢಶಾಲೆ ಹಾಗೂ ಬದನಹಾಳು ಜಿ.ಪ.ಪ್ರೌಢಶಾಲೆಗಳಲ್ಲಿ ಕನ್ನಡಿಗರ ಮಕ್ಕಳು ಅನಿವಾ ರ್ಯವಾಗಿ ಇಂಗ್ಲಿಷ್ ಅಥವಾ ತೆಲುಗು ಮಾಧ್ಯಮ ದಲ್ಲಿ ಕಲಿಯಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ಈವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ, ಆಂಧ್ರ ಸರ್ಕಾರದ ಆದೇಶ ಕೊಡಲಿ ಪೆಟ್ಟುಹಾಕಿದೆ. ಭಾಷಾ ಅಲ್ಪಸಂಖ್ಯಾ ತಕನ್ನಡಿಗರು ಸರ್ಕಾರದ ಆದೇಶದ ವಿರುದ್ಧ ಆಂದೋ ಲನ ನಡೆಸಿದರೂ ಪ್ರಯೋಜನವಾಗಿಲ್ಲ ಚಂದರಗಿ ಗಡಿಕನ್ನಡಿಗರ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ. ಕರ್ನಾಟದಲ್ಲಿರುವ ತೆಲುಗು ಭಾಷಾ ಅಲ್ಪಸಂಖ್ಯಾತರಿಗೆ ಸರ್ಕಾರ ಹೆಚ್ಚಿನ ಶೈಕ್ಷಣಿಕ ಸೌಲಭ್ಯ ಒದಗಿಸಿದೆ. ಆದರೆ, ಆಂಧ್ರ ಸರಕಾರದ ಈ ರೀತಿ ಧೋರಣೆ ಅನುಸರಿಸುತ್ತಿರುವುದು ಖಂಡನೀಯ ಎಂದು ಅಶೋಕ್ ಚಂದರಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಟ್ಟಣ ಸಹಕಾರ ಬ್ಯಾಂಕ್‌ಗಳ ಕೊಡುಗೆ ಅಪಾರ: ಗೆಹ್ಲೋಟ್

ಸುಬ್ರಮಣ್ಯೇಶ್ವರ ಬ್ಯಾಂಕ್‌ನ ಸುವರ್ಣ ಮಹೋತ್ಸವ

ಬೆಂಗಳೂರು: ಭಾರತ ಐದು ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆ ತಲುಪಲು ಮತ್ತು ಜಗತ್ತಿನ ಮೂರನೇ ಆರ್ಥಿಕ ಸಾಮರ್ಥ್ಯ ಸಾಧಿಸುವಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳ ಕೊಡುಗೆ ಬಹು ದೊಡ್ಡ ಪಾತ್ರವಹಿಸುತ್ತದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತಿಳಿಸಿದ್ದಾರೆ.

ನಗರದ ಅರಮನೆ ಮೈದಾನದಲ್ಲಿ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲೇ ಕರ್ನಾಟಕ ಅಭಿವೃದ್ಧಿ ಹೊಂದಿದ ರಾಜ್ಯವಾಗಿದ್ದು ಮುಂಚೂಣಿಯಲ್ಲಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವುದು ಆನಂದದ ಅನುಭೂತಿಯಾಗಿದೆ ಎಂದರು.

ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಕೃತ ಮತ್ತು ಶೆಡ್ಯೂಲ್ ಬ್ಯಾಂಕ್‌ಗಳಲ್ಲಿ ಎನ್.ಪಿ.ಎ ಹೆಸರಿನಲ್ಲಿ ಹತ್ತು ಲಕ್ಷ ಕೋಟಿ ರು. ಸಾಲಮನ್ನಾ ಮಾಡಲಾಗಿದ್ದು, ಪಟ್ಟಣ ಸಹಕಾರ ಬ್ಯಾಂಕ್ ಗಳಿಗೂ ಹೆಚ್ಚಿನ ನೆರವು, ಪ್ರೋತ್ಸಾಹ ನೀಡಿ ಬಲ ತುಂಬಲು ಆರ್‌ಬಿಐ ಮತ್ತು ಕೇಂದ್ರ ಸರಕಾರಗಳು ನೆರವಿಗೆ ಧಾವಿಸಬೇಕು ಎಂದು ಸಲಹೆ ನೀಡಿದರು.

> ರಾಜ್ಯದಲ್ಲಿ 253 ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಪೈಕಿ ಸುಬ್ರಮಣ್ಯೇಶ್ವರ ಸಹಕಾರಿ ಬ್ಯಾಂಕ್ 426 ಕೋಟಿ ರು. ಲಾಭದಿಂದಾಗಿ ಎಲ್ಲಾ ಬ್ಯಾಂಕ್‌ಗಳಿಗೂ ಮಾದರಿಯಾಗಿದೆ.
> - ಎಚ್.ಕೆ ಪಾಟೀಲ್
> ಕಾನೂನು ಸಚಿವ

ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಸುವರ್ಣ ಮಹೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸಚಿವ ಎಚ್.ಕೆ.ಪಾಟೀಲ್, ಚಿಕ್ಕಪೇಟೆ ಶಾಸಕರಾದ ಉದಯ್ ಬಿ. ಗರುಡಾಚಾರ್, ಬ್ಯಾಂಕ್ ನ ಸಂಸ್ಥಾಪಕ ಡಾ. ಕೆ.ಎಂ.ರಂಗಧಾಮ ಶೆಟ್ಟಿ, ಉಪಾಧ್ಯಕ್ಷ ಡಿ.ಆರ್.ವಿಜಯಸಾರಥಿ ಇದ್ದರು.

ಜಿಲ್ಲಾ ಸಹಕಾರ ಯೂನಿಯನ್ 13 ನಿರ್ದೇಶಕರ ಅವಿರೋಧ ಆಯ್ಕೆ

ಕೊಪ್ಪಳ: ಜಿಲ್ಲಾ ಸಹಕಾರ ಯೂನಿಯನ್‌ನ ಆಡಳಿತ ಮಂಡಳಿಗೆ 13 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೊಪ್ಪಳ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ 'ಕ್ಷೇತ್ರದಿಂದ ಘಟ್ಟಿರೆಡ್ಡಿಹಾಳದ ಅಂದಾನಪ್ಪ ಡಂಬಳ, ಕುಷ್ಟಗಿ ತಾಲ್ಲೂಕು ಕ್ಷೇತ್ರದಿಂದ ಗುಮಗೇರಾದ ಶೇಖರಗೌಡ ಮಾಲಿಪಾಟೀಲ, ಗಂಗಾವತಿ ತಾಲ್ಲೂಕು ಕ್ಷೇತ್ರದಿಂದ ಜಂಗಮರ ಕಲ್ಗುಡಿಯ ಸಿ.ಎಚ್. ಸತ್ಯನಾರಾಯಣ, ಯಲಬುರ್ಗಾ ಹಾಗೂ ಕುಕನೂರು ಕ್ಷೇತ್ರದಿಂದ ಶಂಭುಲಿಂಗಪ್ಪ ಜೋಳದ ನಿರ್ದೇಶಕರಾಗಿ ಆಯ್ಕೆಯಾದರು. ವಿವಿಧ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದ್ದವರಲ್ಲಿ ತಲಾ ಒಬ್ಬರನ್ನು ಹೊರತುಪಡಿಸಿ ಉಳಿದವರು ನಾಮಪತ್ರ ವಾಪಸ್ ಪಡೆದುಕೊಂಡಿದ್ದರಿಂದ ಅವಿರೋಧ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಕೊಪ್ಪಳ, ಗಂಗಾವತಿ, ಕಾರಟಗಿ, ಕನಕಗಿರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಕಿನ್ನಾಳದ ದಾದಾಪೀರ್ ಗೋನೆಗೊಂಡಲ, ಕುಷ್ಟಗಿ, ಯಲಬುರ್ಗಾ, ಕುಕನೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಹನುಮನಾಳದ ಮಹಾಂತೇಶ ಸಜ್ಜನ, ಜಿಲ್ಲೆಯ ಮಹಿಳಾ ಸಂಘಗಳ ಕ್ಷೇತ್ರದಿಂದ ಕೊಪ್ಪಳದ ಶಕುಂತಲಾ ಹುಡೇಜಾಲಿ, ಪಟ್ಟಣ ಪತ್ತಿನ ನೌಕರರ ಸಹಕಾರ ಸಂಘದ ಕ್ಷೇತ್ರದಿಂದ ಮುದ್ದಾಬಳ್ಳಿಯ ರಾಜೀವ್ ಮಾದಿನೂರು, ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಕ್ಷೇತ್ರದಿಂದ ಕುಕನೂರಿನ ಭೀಮರಡ್ಡಿ ಶ್ಯಾಡ್ಲಗೇರಿ, ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟಗಾರರ ಸಹಕಾರ ಸಂಘದಿಂದ ಗಾವರಾಳದ ಮಾರುತಿ ಹೊಸಮನಿ, ಜಿಲ್ಲೆಯ ಕೃಷಿ ಸಂಸ್ಕರಣ ಸಹಕಾರ ಸಂಘಗಳ ಕ್ಷೇತ್ರದ ಕುಷ್ಟಗಿ ತಾಲ್ಲೂಕಿನ ಗುಮಗೇರಿಯ ವೆಂಕಟೇಶ ದಾಸಪ್ಪ ಶೆಟ್ಟರ್, ಜಿಲ್ಲೆಯ ಕೈಗಾರಿಕಾ ಸಹಕಾರ ಸಂಘಗಳ ಕ್ಷೇತ್ರದಿಂದ ಕೊಪ್ಪಳದ ಹಾಲಯ್ಯ ಹುಡೇಜಾಲಿ ಮತ್ತು ಜಿಲ್ಲೆಯ ಇತರ ಸಹಕಾರ ಸಂಘಗಳ ಕ್ಷೇತ್ರದಿಂದ ಕೊಪ್ಪಳ ತಾಲ್ಲೂಕು ಹ್ಯಾಟಿ ಗ್ರಾಮದ ತೋಟಪ್ಪ ಕಾಮನೂರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ

14 ನಿರ್ದೇಶಕ ಸ್ಥಾನಗಳ ಪೈಕಿ ಶೇಖರಗೌಡ ಮಾಲಿಪಾಟೀಲ ಗುಂಪಿನ 13 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾರಟಗಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಒಂದು ನಿರ್ದೇಶಕ ಸ್ಥಾನಕ್ಕೆ ಜೂ.28ರಂದು ಚುನಾವಣೆ ನಡೆಯಲಿದೆ.ಈ ಪ್ರಕ್ರಿಯೆ ಮುಗಿದ 15 ದಿನದಲ್ಲಿ ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಿಗದಿಯಾಗಲಿದೆ.

ಅವಳಿ ನವಜಾತ ಹೆಣ್ಣು ಶಿಶು ಹತ್ಯೆ!

ದೆಹಲಿ: ಹೆಣ್ಣು ಮಗು ಎಂಬ ಕಾರಣಕ್ಕೆ ಅವಳಿ ನವಜಾತ ಶಿಶುಗಳನ್ನು ತಂದೆ ಮತ್ತು ಕುಟುಂಬದವರು ಸೇರಿ ಹತ್ಯೆ ಮಾಡಿರುವ ಘಟನೆ ದೆಹಲಿಯಲ್ಲಿ ನಡೆದಿದೆ. ವಳಿ ಮಕ್ಕಳು ಹುಟ್ಟಿದ ಬಳಿಕ ತಾಯಿಯಿಂದ ಬೇರೆ ಮಾಡಲಾಗಿದ್ದು ಮಹಿಳೆಯ ಗಂಡ ಹಾಗೂ ಕುಟುಂಬಸ್ಥರು ನವಜಾತ ಹೆಣ್ಣು ಶಿಶುಗಳನ್ನು ಹತ್ಯೆ ಮಾಡಿದ್ದಾರೆ .

ಈ ಬಗ್ಗೆ ದೆಹಲಿ ಪೊಲೀಸರಿಗೆ ದೂರು ನೀಡಲಾಗಿದ್ದು ಮಕ್ಕಳ ಮೃತದೇಹಗಳನ್ನು ಪತ್ತೆಹಚ್ಚಿದ್ದಾರೆ. ಮಕ್ಕಳಿಗೆ ಆರೈಕೆ ಮಾಡುವ ನೆಪದಲ್ಲಿ ಬೇರೆಡೆ ತೆಗೆದುಕೊಂಡು ಹೋಗಿ ಕೊಲೆ ಮಾಡಲಾಗಿದೆ. ಬಳಿಕ ಮಕ್ಕಳ ಬಗ್ಗೆ ವಿಚಾರಿಸಿದಾಗ ಅನಾರೋಗ್ಯದಿಂದ ಸಾವನ್ನಪ್ಪಿರುವುದಾಗಿ ಹೇಳಿದ್ದಾರೆ. ಇದರಿಂದ ಅನುಮಾನಗೊಂಡ ಮಹಿಳೆ ಮತ್ತವರ ಪೋಷಕರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ತನಿಖೆ ಕೈಗೊಂಡ ಪೊಲೀಸರು ಮಕ್ಕಳ ಶವವನ್ನು ಪತ್ತೆಹಚ್ಚಿ ಮರಣೋತ್ತರ ಪರೀಕ್ಷೆಗೆ ನೀಡಿದ್ದಾರೆ. 2022ರಲ್ಲಿ ಹರಿಯಾಣ ಮೂಲದ ಮಹಿಳೆಯನ್ನು ದೆಹಲಿಯ ಯುವಕನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮದುವೆಯಾದ ಬಳಿಕ ನಿತ್ಯ ಪತಿಯ ಮನೆಯವರು ವರದಕ್ಷಿಣೆ ಕಿರುಕುಳ ನೀಡಿದ್ದಲ್ಲದೇ ಗಂಡು ಮಗುವಿಗೆ ಜನ್ಮ ನೀಡುವಂತೆ ಒತ್ತಡ ಹೇರುತ್ತಿದ್ದರು ಜತೆಗೆ ಗರ್ಭಿಣಿಯಾದ ಬಳಿಕ ಮಗುವಿನ ಲಿಂಗ ಪರೀಕ್ಷೆಗೆ ಒತ್ತಾಯಿಸಿದ್ದರೂ ಎಂದು ಮಹಿಳೆ ಆರೋಪಿಸಿದ್ದಾರೆ.

ಮಕ್ಕಳನ್ನು ಹತ್ಯೆಗೈದ ಆರೋಪಿಗಳಿಗಾಗಿ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಅವಳಿ ಮಕ್ಕಳನ್ನು ಕಳೆದುಕೊಂಡ ತಾಯಿಯ ರೋಧನೆ ಮುಗಿಲು ಮುಟ್ಟಿದೆ.

ಸಾವಿರ ರು.ಗೆ 1 ಎಕರೆಯಂತೆ 42 ಎಕರೆ ಭೂಮಿ ಪಡೆದ ಜಗನ್ ಪಕ್ಷ

ಅಮರಾವತಿ: ಆಂಧ್ರ ಪ್ರದೇಶದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ವೈ.ಎಸ್. ಜಗನ್ಮೋಹನ ರೆಡ್ಡಿ ನೇತೃತ್ವದ ಸರ್ಕಾರ ವೈಎಸ್‌ಆರ್‌ಸಿಪಿ ಪಕ್ಷದ ಕಚೇರಿಗಳನ್ನು ನಿರ್ಮಿಸಲು 26 ಜಿಲ್ಲೆಗಳಲ್ಲಿ 42 ಎಕರೆ ಮಂಜೂರು ಮಾಡಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಸಚಿವ ನಾರಾ ಲೋಕೇಶ್ ಆರೋಪಿಸಿದ್ದಾರೆ.



ಭಾನುವಾರ ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ಹಾಕಿರುವ ಲೋಕೇಶ್, ಈ ಭೂಮಿಯನ್ನು ಎಕರೆಗೆ ಸಾಂಕೇತಿಕ ಬೆಲೆ 1,000 ರು.ಗಳಂತೆ 33 ವರ್ಷಕ್ಕೆ ಗುತ್ತಿಗೆಗೆ ಕೊಡಲಾಗಿದೆ ಎಂದು ದೂರಿದ್ದಾರೆ. ತಮ್ಮ ಆರೋಪಕ್ಕೆ ಪುಷ್ಟಿ ನೀಡುವಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವೈಎಸ್‌ಆರ್‌ಸಿಪಿಕಚೇರಿಯ ನಿರ್ಮಾಣ ಹಂತದ ಕಟ್ಟಡಗಳ ಚಿತ್ರಗಳನ್ನೂ ಆಂಧ್ರ ಸಚಿವರು ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ತಾಡೇಪಲ್ಲಿಯಲ್ಲಿ ನಿರ್ಮಿಸಲಾಗುತ್ತಿದ್ದ ವೈಎಸ್‌ಆರ್‌ಸಿಪಿಯ ಕೇಂದ್ರ ಕಚೇರಿ ಕಟ್ಟಡವನ್ನು ಕೆಡವಲಾಗಿದ್ದು, ವಿಶಾಖಪಟ್ಟಣದ ರಿಷಿಕೊಂಡದಲ್ಲಿ ಜಗನ್‌ಗಾಗಿ 500 ಕೋಟಿ ರು. ವೆಚ್ಚದಲ್ಲಿ ಅರಮನೆಯಂತಹ ಭವ್ಯ ಭವನ ನಿರ್ಮಿಸಲಾಗಿದೆ ಎಂಬ ವಿಷಯ ಬಹಿರಂಗಗೊಂಡ ಬೆನ್ನಲ್ಲೇ ಈ ಮಾಹಿತಿ ಹೊರಬಿದ್ದಿರುವುದು ಗಮನಾರ್ಹ. ಸಮುದ್ರದ ಬಳಿ ಇರುವ ಈ ಭವನದಲ್ಲಿ ಇಟಾಲಿಯನ್ ಮಾರ್ಬಲ್, 200 ಅಲಂಕಾರಿಕ ಐಷಾರಾಮಿ ವಿದ್ಯುತ್ ದೀಪಗಳು, 12 ಬೆಡ್‌ರೂಮ್‌ಗಳು ಸೇರಿದಂತೆ ಇತರೆ ಐಷಾರಾಮಿ ಸೌಲಭ್ಯಗಳಿವೆ. ಸೀ ವ್ಯೂ ಭವನ ಮಾಜಿ ಸಿಎಂ ಜಗನ್‌ರ ನಿವಾಸವಾಗಿದೆ ಎಂಬ ಆರೋಪವಿದೆ. ವೈಎಸ್‌ಆರ್‌ಸಿಪಿ ಸರ್ಕಾರ ಅಧಿಕಾರ ಕಳೆದು ಕೊಂಡು ಟಿಡಿಪಿ ಅಧಿಕಾರಕ್ಕೆ ಬಂದ ಬಳಿಕ ಈ ಭವನವು ರಾಷ್ಟ್ರೀಯ ಮಟ್ಟದಲ್ಲಿ ಗಮನ ಕೇಂದ್ರೀಕರಿಸಿದೆ.

ಸುಮಾರು ₹600 ಕೋಟಿ ಬೆಲೆಬಾಳುವ 42 ಎಕರೆ ಭೂಮಿಯ ಹಣದಲ್ಲಿ 4,200 ಬಡ ರೈತರಿಗೆ ಭೂಮಿ ಖರೀದಿಸಿ ನೀಡಬಹುದಿತ್ತು. ರುಶಿಕೊಂಡ ಭವನಕ್ಕೆ ಖರ್ಚು ಮಾಡಿರುವ ಹಣದಲ್ಲಿ 25,000 ಬಡವರಿಗೆ ಮನೆ ಕಟ್ಟಿಸಿಕೊಡಬಹುದಿತ್ತು ಎಂದು ಲೋಕೇಶ್ ಹೇಳಿದ್ದಾರೆ.

ವೈಎಸ್ ಆರ್‌ಸಿಪಿ ತಿರುಗೇಟು

ರಿಷಿಕೊಂಡಾದ ಭವನದ ವಿಷಯ ಹೊರಬಿದ್ದ ಬೆನ್ನಲ್ಲೇ ವೈಎಸ್‌ಆರ್‌ಸಿಪಿ ವಕ್ತಾರರು ಪ್ರತಿಕ್ರಿಯೆ ನೀಡಿ, ಈ ಭವನವನ್ನು ಜಗನ್ಮೋಹನ ರೆಡ್ಡಿ ತಮ್ಮ ಸ್ವಂತಕ್ಕೆ ನಿರ್ಮಿಸಿಕೊಂಡಿಲ್ಲ. ಅದು ಸರ್ಕಾರಿ ಬಂಗಲೆ. ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಗಣ್ಯಾತಿ ಗಣ್ಯರು ಆಂಧ್ರಕ್ಕೆ ಭೇಟಿ ನೀಡಿದ ವೇಳೆ ವಾಸ್ತವ್ಯಕ್ಕಾಗಿ ನಿರ್ಮಿಸಲಾಗಿದೆ. ಇದನ್ನು ಈಗ ಸರ್ಕಾರಿ ಉದ್ದೇಶಗಳಿಗಾಗಿ ಬಳಸಿಕೊಳ್ಳಬೇಕಾದ ಜವಾಬ್ದಾರಿ ಚಂದ್ರಬಾಬು ನಾಯ್ಡು ಆಡಳಿತದ ಮೇಲಿದೆ ಎಂದು ಸ್ಪಷ್ಟಪಡಿಸಿದ್ದರು. ಆದರೆ ಇದು ಸರ್ಕಾರಿ ಬಂಗಲೆಯೋ ಅಥವಾ ಜಗನ್‌ರ ಖಾಸಗಿ ಆಸ್ತಿಯೋ ಎಂಬ ವಿಷಯದ ಬಗ್ಗೆ ಸ್ಪಷ್ಟನೆ ಹೊರಬಿದ್ದಿಲ್ಲ

ಹೂತ ಹೆಣ ತೆಗೆದು ಮರಣೋತ್ತರ ಪರೀಕ್ಷೆ

ಚೆನ್ನೈ: ಕಲ್ಲಕುರಿಚಿ ಗ್ರಾಮದಲ್ಲಿ ನಕಲಿ ಮದ್ಯ ಸೇವಿಸಿ ಸಾವನಪ್ಪಿದ ಪ್ರಕರಣ ಸಂಬಂಧ ಅಂತ್ಯಸಂಸ್ಕಾರ ನಡೆಸಿ ಹೂಳಲಾದ ಹೆಣಗಳನ್ನು ತೆಗೆದು ಅಧಿಕಾರಿಗಳು ಮರಣೋತ್ತರ ಪರಿಕ್ಷೆ ನಡೆಸಿದ್ದಾರೆ. ಸಾವಿಗೆ ನಕಲಿ ಮದ್ಯವೇ ಕಾರಣವೋ ಎಂಬ ಬಗ್ಗೆ ತನಿಖೆ ನಡೆಸುವ ಸಲುವಾಗಿ ಮರಣೋತ್ತರ ಪರೀಕ್ಷೆ ನಡೆಯದ ಹೆಣಗಳನ್ನು ಮೇಲೆತ್ತಿ ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.

ನಕಲಿ ಮದ್ಯ ಸೇವಿಸಿ ಸಾವನ್ನಪ್ಪಿದವರ ಸಂಖ್ಯೆ 56ಕ್ಕೆ ಏರಿಕೆಯಾಗಿದ್ದು ಒಟ್ಟು 216 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜವಾಹರಲಾಲ್ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಯಲ್ಲಿ 3 ಮಂದಿ, ವಿಲುಪುರಂ ಮೆಡಿಕಲ್ ಕಾಲೇಜಿನಲ್ಲಿ 4 ಮಂದಿ, ಕಲ್ಲಕುರಿಚಿ ಮೆಡಿಕಲ್ ಕಾಲೇಜಿನಲ್ಲಿ 31 ಮಂದಿ , ಸಲೇಂ ಮೆಡಿಕಲ್ ಕಾಲೇಜುಗಳಲ್ಲಿ 18 ಮಂದಿ ಚಿಕಿತ್ಸೆಗಾಗಿ ಬಂದವರು ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಮದ್ಯಪಾನದ ಬಗ್ಗೆ ನಿರ್ಲಕ್ಷ್ಯ ಬೇಡ- ಕಮಲ್

ನಟ, ಮಕ್ಕಳ ನಿಧಿ ಮೈಯಮ್ ಮುಖ್ಯಸ್ಥ ಕಮಲ್ ಹಾಸನ್ ಭಾನುವಾರ ಕಲ್ಲಕುರಿಚಿ ಮದ್ಯ ಸೇವನೆ ದುರಂತದ ಸಂತ್ರಸ್ತರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದ್ದಾರೆ. ಬಳಿಕ ಮಾತನಾಡಿದ ಅವರು 'ಸಂತ್ರಸ್ತರು ಕುಡಿತದ ವಿಚಾರದಲ್ಲಿ ನಿರ್ಲಕ್ಷ್ಯ ತೋರಿದ್ದಾರೆ. ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಉತ್ತಮ ಕೌನ್ಸಿಲಿಂಗ್ ನೀಡುವ ಮಾನಸಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವಂತೆ ಸರಕಾರಕ್ಕೆ ಮನವಿ ಮಾಡುತ್ತೇನೆ ' ಎಂದರು. ಮಿತಿಮೀರಿ ಕುಡಿಯುವುದು ಅರೋಗ್ಯಕ್ಕೆ ಹಾನಿಕಾರರ ಎಂಬುದನ್ನು ಜನ ಅರಿತು ಕೊಳ್ಳಬೇಕು ಎಂದು ಕಮಲ್ ಹಾಸನ್ ಹೇಳಿದ್ದಾರೆ.

ಚುನಾವಣೋತ್ತರ ಸಮೀಕ್ಷೆ ನಷ್ಟದ ವ್ಯವಹಾರ

ಆಕ್ಸಿಸ್ ಮೈ ಇಂಡಿಯಾ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಚ್ಚರಿಯ ಹೇಳಿಕೆ

ನವದೆಹಲಿ: ಚುನಾವಣೋತ್ತರ ಸಮೀಕ್ಷೆ ನಡೆಸುವುದು ನಷ್ಟದ ವ್ಯವಹಾರ ಎಂದು ಆಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಸುದ್ದಿ ಸಂಸ್ಥೆಯ ಸಂವಾದದಲ್ಲಿ ಪಾಲ್ಗೊಂಡ ಗುಪ್ತಾ, ಚುನಾವಣಾ ಸಮೀಕ್ಷೆಗಳಿಂದ ಲಾಭವಾಗುವ ಬದಲು ನಷ್ಟವಾಗುವುದೇ ಹೆಚ್ಚು ಎಂದಿದ್ದಾರೆ. ಸಮೀಕ್ಷೆ ನಡೆಸುವ ಸಂಸ್ಥೆಗೆ ಒಂದಿಷ್ಟು ಪ್ರಚಾರ ಸಿಗುತ್ತದೆ ಎನ್ನುವುದು ಬಿಟ್ಟರೆ, ಬೇರೆ ಲಾಭವಿಲ್ಲ. ನಮ್ಮ ಗ್ರಾಹಕರ ಪೈಕಿ ಶೇ. 70 ರಷ್ಟು ಮಂದಿ ಕಾರ್ಪೊರೇಟ್ ವಲಯದವರಾಗಿದ್ದು, ಅವರೇ ಆದಾಯದ ಮೂಲ ಎಂದರು.

3605 ಕ್ಷೇತ್ರಗಳಲ್ಲಿ ಸಮೀಕ್ಷೆ

ಕಳೆದ ಲೋಕಸಭಾ ಚುನಾವಣೆ ವೇಳೆ, 3605 ಕ್ಷೇತ್ರಗಳಲ್ಲಿ ಸಮೀಕ್ಷೆ ಕೈಗೊಂಡು ಫಲಿತಾಂಶಗಳ ನಿಖರತೆ ಅರಿಯಲು ಪ್ರಯತ್ನಿಸಿದೆವು ಎಂದ ಅವರು, ಕಳೆದ 65 ಚುನಾವಣೆಗಳಲ್ಲಿ 60ರಲ್ಲಿ ಫಲಿತಾಂಶವನ್ನು ನಿಖರವಾಗಿ ಊಹಿಸಿದ್ದೇವೆ ಎಂದರು.

ಹುಸಿಯಾದ ಭವಿಷ್ಯ

ಕಳೆದ ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾಗು ವವರೆಗೂ ಆಕ್ಸಿಸ್ ಮೈ ಇಂಡಿಯಾ ಮುಖ್ಯಸ್ಥ ಪ್ರದೀಪ್ ಗುಪ್ತಾ ಜನಪ್ರಿಯತೆ ಹೆಚ್ಚಿತ್ತು. ಆದರೆ,ಬಿಜೆಪಿಗೆ ಹೆಚ್ಚಿನ ಲಾಭವಾಗುತ್ತದೆ. ಕಾಂಗ್ರೆಸ್ ಸಾಧನೆ ಹೇಳಿಕೊಳ್ಳುವ ಮಟ್ಟಕ್ಕಿಲ್ಲ ಎಂಬ ಸಮೀಕ್ಷೆ ಜೂ. 4 ರಂದು ಸುಳ್ಳಾದ ಬೆನ್ನಲ್ಲೇ ಜನಪ್ರಿಯತೆ ಕುಸಿಯಿತು. ಇದು ಸಮೀಕ್ಷಾ ಸಂಸ್ಥೆಗಳ ವಿಶ್ವಾಸಾರ್ಹತೆಗೆ ದೊಡ್ಡ ಪೆಟ್ಟು ನೀಡಿತು.

ಹಣ ವಾಪಸ್ ಬರದು

ನಾವು ಸಮೀಕ್ಷೆಗಾಗಿ ಮಾಡುವ ಇತರ ಖರ್ಚುಗಳನ್ನು ಹೊರತುಪಡಿಸಿ ನಿಖರ ಮಾಹಿತಿ ಪಡೆಯಲು ಸಮೀಕ್ಷೆಯಲ್ಲಿ ಪಾಲ್ಗೊಂಡ ಪರತಿಯೊಬ್ಬರಿಗೂ 500 ರು. ನೀಡುತ್ತೇವೆ. ನಮ್ಮ ಸಮೀಕ್ಷೆಗಳು ನಿಖರವಾಗಿದ್ದರೂ ಅದಕ್ಕಾಗಿ ಖರ್ಚು ಮಾಡಿದ ಹಣವೇನೂ ವಾಪಸ್ ಬರುವುದಿಲ್ಲ. ಹಣಕಾಸಿನ ರೂಪದಲ್ಲಿ ನಷ್ಟ ಅನುಭವಿಸಿದರೂ ಪ್ರಚಾರದ ವಿಷಯದಲ್ಲಿ ಉತ್ತಮ ಲಾಭವನ್ನೇ ಪಡೆಯುತ್ತೇವೆ . ನಮ್ಮ ಬ್ರ್ಯಾಂಡ್ ಮೌಲ್ಯ ಹೆಚ್ಚುತ್ತದೆ ಎಂದು ಪ್ರದೀಪ್ ಗುಪ್ತಾ ವಿಶ್ಲೇಷಿಸಿದರು.

ಪ್ರವಾಸಿಗರ ಮೇಲೆ ಹಲ್ಲೆ ಚಿನ್ನದ ಸರ ಎಗರಿಸಿ ಪರಾರಿ

ಮಡಿಕೇರಿ: ಕೋಟೆಬೆಟ್ಟ ಪ್ರವಾಸಕ್ಕೆಂದು ಆಗಮಿಸಿದ ಪ್ರವಾಸಿಗರ ಮೇಲೆ ಬೈಕಿನಲ್ಲಿ ಬಂದ ಇಬ್ಬರು ಹಲ್ಲೆ ಮಾಡಿ ದೌರ್ಜನ್ಯ ಎಸಗಿರುವ ಘಟನೆ ಕೊಡಗು ಜಿಲ್ಲೆಯಲ್ಲಿ ನಡೆದಿದೆ.

ಮಕ್ಕಳು, ಮಹಿಳೆಯರು ಸೇರಿದಂತೆ ಪುತ್ತೂರಿನಿಂದ ಕುಟುಂಬವೊಂದು ಕೋಟೆಬೆಟ್ಟ ಪ್ರವಾಸಿ ತಾಣಕ್ಕೆ ಆಗಮಿಸಿದ ಸಂದರ್ಭ ಬೈಕಿನಲ್ಲಿ ಬಂದ ಇಬ್ಬರು ಪುಂಡರು ಹಲ್ಲೆ ನಡೆಸಿ, ಚಿನ್ನದ ಸರ ಎಗರಿಸಿ ಬೈಕನ್ನು ಬಿಟ್ಟು ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಇಬ್ಬರು ಆರೋಪಿಗಳು ಮಾದಾಪುರ ಸಮೀಪದ ನಿವಾಸಿಗಳು ಎಂಬ ವಿಚಾರ ತಿಳಿದು ಬಂದಿದೆ. ದೌರ್ಜನ್ಯಕ್ಕೆ ಒಳಗಾದವರು ಮಾದಾಪುರ ಉಪ ಠಾಣಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪ್ರಕರಣ ಸೋಮವಾರಪೇಟೆ ಪೊಲೀಸ್ ಠಾಣಾ ಮೆಟ್ಟಿಲೇರಿದೆ.

ಯೂಟ್ಯೂಬರ್ ವಿರುದ್ಧ ಪ್ರಕರಣ

ನವದೆಹಲಿ: ಪಂಜಾಬ್‌ನ ಅಮೃತಸರದ ಲ್ಲಿರುವ ಸಿಖ್ ಸಮುದಾಯದ ಪರಮೋಚ್ಚ ಧಾರ್ಮಿಕ ಶ್ರದ್ಧಾ ಕೇಂದ್ರ, ಸ್ವರ್ಣಮಂದಿರದ ಆವರಣದಲ್ಲಿ ಜೂ. 21ರಂದು ಯೋಗ ಪ್ರದರ್ಶನ ಮಾಡುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಯೂಟ್ಯೂಬರ್ ಇನ್‌ಫ್ಲೂಯೆನ್ಸರ್ ಅರ್ಚನಾ ಮಕ್ವಾನಾ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಶಿರೋಮಣಿ ಪ್ರಬಂಧಕ ಸಮಿತಿ ನೀಡಿದ ದೂರಿನ ಮೇರೆಗೆ ಸೆಕ್ಷನ್ 295ರ ಅಡಿ ಮೊಕದ್ದಮೆ ದಾಖಲಾಗಿದೆ. ಧಾರ್ಮಿಕ ನಂಬಿಕೆ ಅಥವಾ ಧರ್ಮಕ್ಕೆ ಅಪಚಾರ ಬಗೆದ ಆರೋಪವನ್ನು ಮಕ್ವಾನಾ ಮೇಲೆ ಹೊರಿಸಲಾಗಿದೆ.

ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡ ಅರ್ಚನಾ ನಂತರ ಸ್ವರ್ಣಮಂದಿರಕ್ಕೆ ಭೇಟಿನೀಡಿ ಭಕ್ತಿ ಸಮರ್ಪಿಸದೆಯೇ ತೆರಳಿದ್ದಾರೆ ಎಂದು ದೇಶಾದ್ಯಂತ ಗುರುದ್ವಾರಗಳನ್ನು ನಿರ್ವಹಿಸುವ ಎಸ್ ಜಿಪಿಸಿಯ ಹರ್ಜಿಂದರ್ ಸಿಂಗ್ ಧಾಮಿ ಆರೋಪಿಸಿದ್ದಾರೆ.



ಪ್ರಕರಣ ದಾಖಲಾಗುತ್ತಿದ್ದಂತೇ ಅರ್ಚನಾ ಮಕ್ವಾನಾ, ಸ್ವರ್ಣಮಂದಿರದ ಯೋಗ ಕಾರ್ಯಕ್ರಮದ ವಿಡಿಯೋವನ್ನು ಇನ್‌ಸ್ಟಾಗ್ರಾಮ್‌ನಿಂದ ತೆಗೆದುಹಾಕಿದ್ದು, ಸಿಖ್ ಸಮುದಾಯದ ಕ್ಷಮೆಯಾಚಿಸಿದ್ದಾರೆ.

ಕಾಡುಹಂದಿ ಬೇಟೆ; ಇಬ್ಬರ ಬಂಧನ

ಚಿತ್ತಾಪುರ: ಅರಣ್ಯ ಪ್ರದೇಶದಲ್ಲಿ ಕಾಡು ಹಂದಿಯನ್ನು ಬೇಟೆಯಾಡಿದ ಇಬ್ಬರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ಘಟನೆ ನಡೆದಿದೆ. ರಾಯಚೂರು ಜಿಲ್ಲೆಯ ಲಿಂಗಸೂ ಗೂರು ತಾಲೂಕಿನವರು ಎನ್ನಲಾದ ಸೋಮೇಶ್ ಮತ್ತು ಅಂಬರೀಶ್ ಎಂಬು ವವರು ಚಿತ್ತಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮುಡಬೂಳ್ ಗ್ರಾಮದ ಹತ್ತಿರ ಕಾಡು ಹಂದಿ ಭೇಟೆಯಾಡಿ ಬೊಲೆರೊ ವಾಹನದಲ್ಲಿ ರಾಯಚೂರು ಕಡೆಗೆ ತೆಗೆದುಕೊಂಡು ಹೋಗುತ್ತಿರುವಾಗ ಕರ್ತವ್ಯ ನಿರತರಾಗಿದ್ದ ಬೀಟ್ ಪೊಲೀಸರು ತಪಾಸಣೆ ನಡೆಸಿದರು. ನಂತರ ಇಬ್ಬರು ಆರೋಪಿಗಳನ್ನು ಠಾಣೆಗೆ ಕರೆತಂದಾಗ ಪಿಎಸ್‌ಐ ಶ್ರೀಶೈಲ್ ಅಂಬಾಟಿ ಅವರು ವಿಚಾರಣೆ ನಡೆಸಿ, ವಲಯ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಿದರು. ಅರಣ್ಯ ಇಲಾ ಖೆಯ ಡಿಸಿಎಫ್ ಸುಮಿತ್ ಪಾಟೀಲ್ ಅವರ ಮಾರ್ಗ ದರ್ಶನದಲ್ಲಿ ಎಸಿಎಫ್ ಎಂ.ಡಿ ಮುನೀರ್ ಅಹಮದ, ಆರ್‌ಎಫ್‌ಒ ವಿಜಯಕುಮಾರ್ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನ ವಿಧಿಸಿದ್ದಾರೆ.

ಅನೈತಿಕ ಸಂಬಂಧ ಡಿಸಿಪಿಗೆ ಹಿಂಬಡ್ತಿ

ಲಖನೌ ; ಉತ್ತರ ಪ್ರದೇಶದಲ್ಲಿ ಹೋಟೆಲ್ ರೂಂನಲ್ಲಿ ಮಹಿಳಾ ಪೇದೆ ಜೊತೆ ಆಕ್ಷೇಪಾರ್ಹ ಸ್ಥಿತಿಯಲ್ಲಿ ಸಿಕ್ಕಿಬಿದ್ದ ಪೊಲೀಸ್ ಉಪಅಧೀಕ್ಷಕನಿಗೆ ಏಕಾಏಕಿಯಾಗಿ ಪೇದೆಯಾಗಿ ಹಿಂಬಡ್ತಿ ನೀಡಲಾಗಿದೆ. ' ಪೊಲೀಸ್ ಉಪ ಅಧೀಕ್ಷಕ ಕೃಪಾ ಶಂಕರ್ ಕನೌಜಿಯಾಗೆ ಶಿಕ್ಷೆಗೆ ಒಳಗಾದ ಅಧಿಕಾರಿ.

ಹೋಟೆಲ್‌ನಲ್ಲಿ ಮಹಿಳಾ ಪೇದೆ ಜೊತೆ ಲ್ಲಿ ಸಿಕ್ಕಿಬಿದ್ದ ಮೂರು ವರ್ಷಗಳ ನಂತರ ಅವರಿಗೆ ಸಾಧಾರಣ ಪೇದೆ ಹುದ್ದೆ ನೀಡಲಾಗಿದೆ. ಕೃಪಾ ಶಂಕರ್ ಕನೋಜಿಯಾ ಅವರು ಈ ಹಿಂದೆ ಉನ್ನಾವೋದ ಬಿಘಾಪುರ್ ಸರ್ಕಲ್ ಆಫೀಸರ್ (ಸಿಒ) ಆಗಿ ನೇಮಕಗೊಂಡಿದ್ದರು. ಈಗ ಅವರನ್ನು ಗೋರಖ್‌ಪುರದ 26ನೇ ಪ್ರಾಂತೀಯ ಸಶಸ್ತ್ರ ಪಡೆಗಳ (ಪಿಎಸಿ) ಬೆಟಾಲಿಯನ್‌ಗೆ ನಿಯೋಜಿಸಲಾಗಿದೆ.

2021ರ ಜುಲೈನಲ್ಲಿ ಕೌಟುಂಬಿಕ ಕಾರಣ ನೀಡಿ ರಜೆ ತೆಗೆದುಕೊಂಡ ನಂತರ ಕೃಪಾ ಶಂಕರ್ ಕನೌಜಿಯಾ ನಾಪತ್ತೆಯಾಗಿದ್ದರು. ಆದರೆ ಮನೆಗೆ ಹೋಗುವ ಬದಲು ಕಾನ್ಪುರದ ಹೋಟೆಲ್‌ನಲ್ಲಿ ಮಹಿಳಾ ಪೇದೆಯೊಂದಿಗೆ ತಂಗಿದ್ದರು. ಈ ವೇಳೆ ಅವರು ತಮ್ಮ ವೈಯಕ್ತಿಕ ಹಾಗೂ ಅಧಿಕೃತ ಮೊಬೈಲ್ ಸಂಖ್ಯೆಗಳನ್ನು ಸ್ವಿಚ್ ಆಫ್ ಮಾಡಿದ್ದು ಜಅನುಮಾನ ಮೂಡಿಸಿತ್ತು. ಕೊನೆಗೆ ಪತ್ನಿ ದೂರಿನ ಮೇರೆಗೆ ಪೊಲೀಸರು ಮೊಬೈಲ್ ನೆಟ್‌ವರ್ಕ್ ಜಾಡುಹಿಡಿದಾಗ ಹೋಟೆಲ್ ದಾರಿ ತೋರಿಸಿತು. ಪೊಲೀಸ್ ಅಧಿಕಾರಿ ಮತ್ತು ಮಹಿಳಾ ಪೇದೆ ಸಿಕ್ಕಿಬಿದ್ದರು. ಅವರ ವಿರುದ್ಧ ಇಲಾಖಾ ತನಿಖೆ ನಡೆಸಲಾಗಿತ್ತು. ಇಲಾಖೆಯ ಹಿರಿಯ ಅಧಿಕಾರಿಗಳ ಶಿಫಾರಸಿನ ಮೇರೆಗೆ ಕನೌಜಿಯಾಗೆ ಹಿಂಬಡ್ತಿ ನೀಡಿ ಪೊಲೀಸ್ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.



ಟಿಟಿ: ಅಥರ್ವ, ತನಿಷ್ಕಾಗೆ ಗೆಲುವು

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 15 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಅಥರ್ವ ನವರಂಗ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ವಿವಿ ಪುರಂನ ಮ್ಯಾಚ್ ಪಾಯಿಂಟ್‌ನಲ್ಲಿ ನಡೆದ ಬಾಲಕರ ಫೈನಲ್‌ನಲ್ಲಿ ಅಥರ್ವ 11-8, 11-8, 11-8ರಿಂದ ಅರ್ನವ್ ಎನ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅವರು ಸಿದ್ಧಾಂತ್ ಧರಿವಾಲ್, ಅರ್ನವ್ ಅವರು ಗೌರವ್ ಗೌಡ ವಿರುದ್ಧ ಗೆಲುವು ಸಾಧಿಸಿದ್ದರು. ಇನ್ನು ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 11-8, 11-6, 11-6ರಿಂದ ಹಿಯಾ ಸಿಂಗ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಆಯುಷಿ ಬಿ. ಗೋಡ್ಸೆ, ಹಿಯಾ ಅವರು ಕೈರಾ ಬಾಳಿಗ ವಿರುದ್ಧ ಗೆಲುವು ಸಾಧಿಸಿದ್ದರು.

ಕೆಕೆಆರ್ ತಂಡದ ಮೆಂಟರ್ ಆಗಿರುವ ಜವಾಬ್ದಾರಿಯನ್ನು ಆನಂದಿಸುತ್ತಿದ್ದೇನೆ. ಈಗಷ್ಟೇ ಐಪಿಎಲ್‌ನಲ್ಲಿ ಕೆಕೆಆರ್ 3ನೇ ಬಾರಿಗೆ ಚಾಂಪಿಯನ್ ಆಗಿದೆ. ಈ ಕ್ಷಣವನ್ನು ಆನಂದಿಸೋಣ. ಭವಿಷ್ಯದಲ್ಲಿ ಏನು ನಡೆಯಬೇಕೋ ಅದು ನಡೆಯಲಿದೆ. ಸದ್ಯ ತುಂಬಾ ಖುಷಿಯಲ್ಲಿದ್ದೇನೆ. ಕೋಲ್ಕತ್ತಾ ಜನರನ್ನು ಖುಷಿಪಡಿಸುವುದೇ ನನ್ನ ಕೆಲಸ. ನೀವು ಖುಷಿಪಟ್ಟರೆ ನನಗೂ ಖುಷಿಯಾಗುತ್ತದೆ.

– **ಗೌತಮ್ ಗಂಭೀರ್,** ಮಾಜಿ ಕ್ರಿಕೆಟಿಗ

ಅದ್ಧೂರಿ ಒಲಿಂಪಿಕ್ ದಿನ

ಮುಂಬಯಿ: ಐಒಸಿಯ 'ಲೆಟ್ಸ್ ಮೂವ್ ಇಂಡಿಯಾ' ಅಭಿಯಾನದ ಅಂಗವಾಗಿ ರಿಲಯನ್ಸ್ ಫೌಂಡೇಶನ್ ಒಲಿಂಪಿಕ್ ದಿನವನ್ನು ಆಯೋಜಿಸಿದದು, 900 ಮಕ್ಕಳು ಪಾಲ್ಗೊಂಡಿದ್ದರು.

ಮುಂಬೈನ ರಿಲಯನ್ಸ್ ಕಾರ್ಪೊರೇಟ್ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಂಬೈನಲ್ಲಿ ಇರುವ ಆರ್ಥಿಕವಾಗಿ ಅಶಕ್ತರಾಗಿರುವ ಸಮುದಾಯಗಳ ಮಕ್ಕಳಿಗೆ ವಿನೋದ, ಕ್ರೀಡೆ ಮತ್ತು ಸ್ನೇಹದಂತಹ ಒಲಿಂಪಿಕ್ ಮೌಲ್ಯಗಳನ್ನು ಹೊಂದಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಆರು ಬಾರಿ ಒಲಿಂಪಿಯನ್ ಶಿವ ಕೇಶವನ್ ಅವರೊಂದಿಗೆ 'ಮೀಟ್ ಆಯಂಡ್ ಗ್ರೀಟ್' ಸೆಷನ್ ಸಹ ಹಮ್ಮಿಕೊಳ್ಳಲಾಗಿತ್ತು. ಅವರು ತಮ್ಮ ಒಲಿಂಪಿಕ್ಸ್ ಅನುಭವಗಳನ್ನುಹಂಚಿಕೊಂಡರು.

ಪಂತ್‌ಗೆ ನೂತನ ಹೆಸರಿಟ್ಟ ರಿಚರ್ಡ್ಸ್

ಆಂಟಿಗುವಾ: ಕ್ರಿಕೆಟ್ ದಂತಕಥೆ ವಿವಿಯನ್ ರಿಚರ್ಡ್ಸ್ ಭಾರತದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರಿಗೆ ನೂತನ ಹೆಸರೊಂದನ್ನು ಇಟ್ಟಿದ್ದಾರೆ. ಶನಿವಾರ ನಡೆದ ಸೂಪರ್-8 ಪಂದ್ಯದಲ್ಲಿ ಭಾರತ ತಂಡ ಬಾಂಗ್ಲಾ ವಿರುದ್ಧ 50 ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಈ ಪಂದ್ಯದ ಅತ್ಯುತ್ತಮ ಫೀಲ್ಡಿಂಗ್ ಪ್ರಶಸ್ತಿಗೆ ನೀಡಲು ವೆಸ್ಟ್ ಇಂಡೀಸ್‌ನ ಕ್ರಿಕೆಟ್ ದಂತಕಥೆ ವಿವಿಯನ್ ರಿಚರ್ಡ್ಸ್ ಅವರು ವಿಶೇಷ ಅತಿಥಿಯಾಗಿ ಡ್ರೆಸ್ಸಿಂಗ್ ರೂಮ್‌ಗೆ ಬಂದಿದ್ದರು. ಈ ವೇಳೆ ರಿಷಭ್ ಪಂತ್ ಅವನ್ನು ನೋಡಿ ಗ್ರೇಟ್ ಟು ಸೀ ಯು ಬ್ಯಾಕ್ ಮ್ಯಾನ್ ಎಂದಿದ್ದು, ಪಂತ್‌ಗೆ ಪ್ಯಾಕೇಟ್ ರಾಕೆಟ್ ಎಂದು ಹೆಸರಿಸಿದ್ದಾರೆ. ಈ ಬಗ್ಗೆ ಸಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದು, ಎಲ್ಲರೂ ಪಂತ್ ಅವರನ್ನು ಹೊಗಳುತ್ತಿದ್ದಾರೆ.

ಅಂತ್ಯಗೊಂಡ ಎನ್.ಯು ಟೂರ್ನಿ

ಬೆಂಗಳೂರು: ಎನ್.ಯು ಆಸ್ಪತ್ರೆಯು 25 ವರ್ಷಗಳನ್ನ ಪೂರೈಸಿರುವ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಸಂಭ್ರಮಾಚರಣೆಗೆ ನಗರದ ಪ್ರತಿಷ್ಠಿತ ಆಸ್ಪತ್ರೆಗಳ ನಡುವೆ ಆಯೋಜಿಸಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಯಶಸ್ವಿಯಾಗಿ ಪೂರ್ಣಗೊಂಡಿತು. ಎರಡು ದಿನಗಳ ಕಾಲ ನಡೆದ ಈ ಪಂದ್ಯಾವಳಿಯು ಅನೇಕ ರೋಚಕ ಪಂದ್ಯಗಳಿಗೆ ಸಾಕ್ಷಿಯಾಯಿತು. ಭಾನುವಾರ ನಡೆದ ಅಂತಿಮ ಫೈನಲ್ ಪಂದ್ಯದಲ್ಲಿ ಸಂಘಟಿತ ಆಟ ಪ್ರದರ್ಶಿಸುವ ಮೂಲಕ ಪುಜಿತ್ ವೈ ವಿ ನಾಯಕತ್ವದ ಮಜುಮ್‌ದಾರ್ ಶಾ ಮಲ್ಟಿಸ್ಪೆಷಾಲಿಟಿ ಸೆಂಟರ್ ತಂಡವು ಭರ್ಜರಿ ಜಯಭೇರಿ ಬಾರಿಸಿತು. ನಾರಾಯಣ ನೇತ್ರಾಲಯ ರಾಜಾಜಿನಗರ ತಂಡವು ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿತು. ಟೂರ್ನಿಯಲ್ಲಿ ನಗರದ 16 ಪ್ರತಿಷ್ಠಿತ ಆಸ್ಪತ್ರೆಗಳು ಭಾಗವಹಿಸಿದ್ದವು. ಬಿಐಪಿಎಸ್ ಮೈದಾನದಲ್ಲಿ ನಡೆದ ಪ್ರತಿ ಪಂದ್ಯಗಳು ಅತ್ಯಂತ ರೋಚಕ ಕ್ಷಣಗಳಿಗೆ ಸಾಕ್ಷಿಯಾದವು. ಆಸ್ಪತ್ರೆಯು ಪ್ರತಿ ಪಂದ್ಯಗಳನ್ನ ಯೂಟೂಬ್ ಮೂಲಕ ವೀಕ್ಷಿಸಲು ನೇರಪ್ರಸಾರದ ವ್ಯವಸ್ಥೆ ಮಾಡಿತ್ತು.

ಮತ್ತೊಂದು ಇತಿಹಾಸ ನಿರ್ಮಿಸಿದ ರಶೀದ್ ಪಡೆ | ಸೆಮಿಸ್ ಆಸೆ ಜೀವಂತ

ಆಸ್ಟ್ರೇಲಿಯಾಗೆ ಆಫ್ಘನ್ ಶಾಕ್

ಕಿಂಗ್‌ಟೌನ್: ಟಿ20 ವಿಶ್ವಕಪ್ ಟೂರ್ನಿಯ ಸೂಪರ್-8 ಪಂದ್ಯದಲ್ಲಿ ಅಫ್ಘಾನಿಸ್ತಾನ ದಾಖಲೆ ಬರೆದಿದ್ದು, ಬಲಿಷ್ಠ ಆಸ್ಟ್ರೇಲಿಯಾಕ್ಕೆ 21 ರನ್ ಅಂತರದ ಸೋಲಿನ ಆಘಾತವಿಕ್ಕಿದೆ. ಈ ಬಾರಿ ವಿಶ್ವಕಪ್‌ನಲ್ಲಿ ಅಚ್ಚರಿ ಫಲಿತಾಂಶಗಳು ಬರುತ್ತಿದ್ದು, ನ್ಯೂಜಿಲೆಂಡ್ ಸೋಲಿಸಿದ ನಂತರ ಇದೆ ಟೂರ್ನಿಯಲ್ಲಿ ಅಫ್ಘಾನಿಸ್ತಾನ ಹೊಸ ದಾಖಲೆ ಬರೆದಿದೆ. ವಿಶ್ವಚಾಂಪಿಯನ್ ಎನ್ನಿಸಿಕೊಳ್ಳುವ ಆಸ್ಟ್ರೇಲಿಯಾ ವಿರುದ್ಧ ಆಫ್ಘನ್ನರು ಭರ್ಜರಿ ಗೆಲುವು ಸಾಧಿಸಿದ್ದು, ಆ ಮೂಲಕ ತನ್ನ ಸೆಮ್ ಆಸೆ ಜೀವಂತ ಉಳಿಸಿಕೊಂಡಿದೆ.

ಆರ್ನಸ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಗುರ್ಬಾಜ್ ಅವರ ಬ್ಯಾಟಿಂಗ್ ಹಾಗೂ ಅಫ್ಘಾನಿಸ್ತಾನ ಬೌಲರ್‌ಗಳ ಸಾಂಘಿಕ ಬೌಲಿಂಗ್ ದಾಳಿಗೆ ಆಸಿಸ್ ತತ್ತರಿಸಿದ್ದು, ಹೀನಾಯ ಸೋಲನುಭವಿಸಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಡಿದ ಅಫ್ಘಾನಿಸ್ತಾನ 6 ವಿಕೆಟ್ ಕಳೆದುಕೊಂಡು 146 ರನ್ ಗಳಿಸಿತು. ಸ್ಪರ್ಧಾತ್ಮಕ ಮೊತ್ತವನ್ನು ಬೆನ್ನುಹತ್ತಿದ ಆಸ್ಟ್ರೇಲಿಯಾ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಅರ್ಧಶತಕದ ಹೊರತಾಗಿಯೂ 127 ರನ್‌ಗೆ ಸರ್ವಪತನ ಕಂಡು ಸೋಲಿಗೆ ತುತ್ತಾಯಿತು.

ಸ್ಫೋಟಕ ಆರಂಭ ನೀಡಿದ ಆರಂಭಿಕರು: ಬ್ಯಾಟಿಂಗ್ ಆಹ್ವಾನ ಪಡೆದ ರಶೀದ್ ಪಡೆಗೆ ಭರ್ಜರಿ ಆರಂಭ ಸಿಕ್ಕಿತು. ಆರಂಭಿಕ ಗುರ್ಬಾಜ್, ಇಬ್ರಾಹಿಂ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಪವರ್‌ಪ್ಲೇನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಇವರು, ಮೊದಲ ವಿಕೆಟ್‌ಗೆ 100ರ ಗಡಿ ದಾಟಿಸಿದರು. ಆದರೆ ಈ ವೇಳೆ ಇಬ್ರಾಹಿಂ 51 ಅರ್ಧಶತಕ ಸಿಡಿಸಿ ಔಟಾದರು. ಅವರು ಔಟಾಗಿದ್ದೇ ಸರಿ ಉಳಿದ ಎಲ್ಲ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ಶುರು ಮಾಡಿದರು. ಅಜ್ಮತ್ತುಲ್ಲಾ 2 ರನ್ ಗಳಿಸಿ ವಿಕೆಟ್ ನೀಡಿದರೆ, ಕರೀಮ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇದೇ ವೇಳೆ ಪ್ಯಾಟ್ ಕಮ್ಮಿನ್ಸ್ ಮತ್ತೊಂದು ಹ್ಯಾಟ್ರಿಕ್ ಸಾಧಿಸಿದರು. ನಾಯಕ ರಶೀದ್ ಖಾನ್ 2 ರನ್ ಗಳಿಸಿ ಆಟ ನಿಲ್ಲಿಸಿದರೆ, ನಬಿ 10 ರನ್ ಗಳಿಸಿ ಔಟಾದರು. ಆರಂಭದಿಂದಲೂ ಸ್ಫೋಟಕ ಬಾಟಿಂಗ್ ಮಾಡಿದ ಗುರ್ಬಾಜ್ 49 ಎಸೆತದಲ್ಲಿ 60 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಖಾರೋಟೆ 1 ರನ್ ಗಳಿಸಿದರು. ಗುರ್ಬಾಜ್ ಹಾಗೂ ಇಬ್ರಾಹಿಂ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಅಫ್ಘಾನಿಸ್ತಾನ 146 ರನ್ ಗಳಿಸಿತು.

ಮ್ಯಾಕ್ಸ್‌ವೆಲ್ ಏಕಾಂಗಿ ಹೋರಾಟ: ಸ್ಪರ್ಧಾತ್ಮಕ ಮೊತ್ತವನ್ನು ಬೆನ್ನಟ್ಟಿದ ಆಸ್ಟ್ರೇಲಿಯಾಕ್ಕೆ ನವೀನ್ ಉಲ್ ಹಕ್ ಮೊದಲ ಎಸೆತದಲ್ಲೇ ಆಘಾತವಿಕ್ಕಿದರು. ಟ್ರಾವಿಸ್ ಹೆಡ್(0) ಅವರನ್ನು ಬೌಲ್ಡ್ ಮಾಡಿದರು. 16 ರನ್ ಒಟ್ಟುಗೂಡುವಷ್ಟರಲ್ಲಿ ಡೇವಿಡ್ ವಾರ್ನರ್(3) ವಿಕೆಟ್ ಕೂಡ ಪತನಗೊಂಡಿತು. ಇಲ್ಲಿಂದ ಆಸೀಸ್ ಪತನ ಕೂಡ ಆರಂಭವಾಯಿತು. ನಾಯಕ ಮಿಚೆಲ್ ಮಾರ್ಷ್(12), ಮಾರ್ಕಸ್ ಸ್ಟೋಯಿನಿಸ್(11), ಟಿಮ್ ಡೇವಿಡ್(2), ಮ್ಯಾಥ್ಯೂ ವೇಡ್(5) ಸತತವಾಗಿ ವಿಕೆಟ್ ಕಳೆದುಕೊಂಡರು. ಆದರೆ ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದು ತುದಿಯಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಮಾತ್ರ ಬಿರುಸಿನ ಬ್ಯಾಟಿಂಗ್ ನಡೆಸಿ ತಂಡದ ಗೆಲುವಿಗಾಗಿ ಶಕ್ತಿ ಮೀರಿ ಪ್ರಯತ್ನಪಟ್ಟರು. ಅವರ ಬ್ಯಾಟಿಂಗ್ ಗಮನಿಸುವಾಗ ಕಳೆದ ವರ್ಷದ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯ ಮತ್ತೆ ಮರುಕಳಿಸುವಂತೆ ಭಾಸವಾಯಿತು. ಆದರೆ ಈ ಬಾರಿ ಅರ್ಧಶತಕ ಬಾರಿಸಿ ವಿಕೆಟ್ ಕಳೆದುಕೊಂಡರು. ಇವರ ವಿಕೆಟ್ ಪತನಗೊಳ್ಳುತ್ತಿದ್ದಂತೆ ಆಸೀಸ್ ಸೋಲು ಕೂಡ ಖಚಿತಗೊಂಡಿತು. ಅಂತಿಮವಾಗಿ ಮ್ಯಾಕ್ಸ್‌ವೆಲ್ 59 ರನ್ ಬಾರಿಸಿದರು. ಒಟ್ಟಾರೆ ಆಸೀಸ್ ಪರ ಇಬ್ಬರು ಮಾತ್ರ ಎರಡಂಕಿ ಮೊತ್ತ ದಾಖಲಿಸಿದರು.

ಬಲಿಷ್ಠ ಆಸ್ಟ್ರೇಲಿಯಾವನ್ನು ಸೋಲಿಸಿದ ನಂತರ ಸಂಭ್ರಮಿಸಿದ ಅಫ್ಘಾನಿಸ್ತಾನ ತಂಡ.

ಕಮ್ಮಿನ್ಸ್‌ಗೆ ಸತತ ಎರಡನೇ ಬಾರಿ ಹ್ಯಾಟ್ರಿಕ್ ಸಾಧನೆ

ಅಫ್ಘಾನಿಸ್ತಾನ ವಿರುದ್ಧ ಹೀನಾಯ ಸೋಲಿನ ಹೊರತಾಗಿಯೂ, ಆಸ್ಟ್ರೇಲಿಯಾದ ಪ್ಯಾಟ್ ಕಮ್ಮಿನ್ಸ್ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಸತತ ಎರಡನೇ ಬಾರಿಗೆ ಹ್ಯಾಟ್ರಿಕ್ ವಿಕೆಟ್ ಪಡೆಯುವ ಮೂಲಕ ಅಸಾಧಾರಣ ಮೈಲಿಗಲ್ಲು ನಿರ್ಮಿಸಿದರು. ಸತತ ಮೂರು ಎಸೆತಗಳಲ್ಲಿ ರಶೀದ್ ಖಾನ್, ಕರೀಮ್ ಜನತ್ ಮತ್ತು ಗುಲ್ಬದಿನ್ ನೈಬ್ ಅವರ ವಿಕೆಟ್‌ಗಳನ್ನು ಪಡೆಯುವ ಮೂಲಕ, ಟಿ20 ವಿಶ್ವಕಪ್‌ನ ಸತತ ಎರಡು ಪಂದ್ಯಗಳಲ್ಲಿ ಹ್ಯಾಟ್ರಿಕ್ ಸಾಧಿಸಿದ ವಿಶ್ವದ ಮೊದಲ ಬೌಲರ್ ಎನಿಸಿಕೊಂಡರು. ಹಿಂದಿನ ಸೂಪರ್ 8ರ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಪ್ಯಾಟ್ ಕಮ್ಮಿನ್ಸ್ ಟಿ20 ಸ್ವರೂಪದಲ್ಲಿ ತಮ್ಮ ಮೊದಲ ಹ್ಯಾಟ್ರಿಕ್ ಸಾಧಿಸಿದರು. ಎರಡು ದಿನಗಳ ನಂತರ, ಟಿ20 ಕ್ರಿಕೆಟ್ ಇತಿಹಾಸದಲ್ಲಿ ಸತತ ಹ್ಯಾಟ್ರಿಕ್‌ಗಳನ್ನು ದಾಖಲಿಸಿದ ಮೊದಲ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅಲ್ಲದೆ ಇದೀಗ ಲಸಿತ್ ಮಾಲಿಂಗ, ಟಿಮ್ ಸೌಥಿ, ಮಾರ್ಕ್ ಪಾವ್ಲೋವಿಕ್ ಮತ್ತು ವಸೀಮ್ ಅಬ್ಬಾಸ್ ಸೇರಿದಂತೆ ಟಿ20 ಪಂದ್ಯಗಳಲ್ಲಿ ಎರಡು ಹ್ಯಾಟ್ರಿಕ್‌ಗಳನ್ನು ಪಡೆದಿರುವ ಬೌಲರ್‌ಗಳ ಗುಂಪಿಗೆ ಪ್ಯಾಟ್ ಕಮ್ಮಿನ್ ಸೇರಿದ್ದಾರೆ.

ಮೂರನೇ ಅಚ್ಚರಿ ಫಲಿತಾಂಶ

ಈ ಬಾರಿಯ ವಿಶ್ವಕಪ್‌ನಲ್ಲಿ ಅಚ್ಚರಿ ಫಲಿತಾಂಶಗಳು ಬರುತ್ತಿದ್ದು, ಎಲ್ಲರ ಚಿತ್ತ ಜಗ್ಗುತ್ತಿದೆ. ವಿಶ್ವಕಪ್‌ನ ಲೀಗ್ ಹಂತದ ಪಂದ್ಯದಲ್ಲಿ ಇದೇ ಮೊದಲು ಬಾರಿಗೆ ಆಡುತ್ತಿರುವ ಅಮರಿಕ ಪಾಕಿಸ್ತಾನಕ್ಕೆ ಸೋಲಿಸಿ ಇತಿಹಾಸ ನಿರ್ಮಿಸಿತ್ತು, ಅದಾದಮೇಲೆ ಅಫ್ಘಾನಿಸ್ತಾನ ಬಲಿಷ್ಠ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತ್ತು. ಇದೀಗ ಅಫ್ಘಾನಿಸ್ತಾನವು ಮತ್ತೊಮ್ಮೆ ಐತಿಹಾಸಿಕ ಗೆಲುವು ಸಾಧಿಸಿದ್ದು, ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾವನ್ನು ಸೋಲಿಸಿದೆ.

ಸೆಮಿಸ್‌ಗೆ ಆಂಗ್ಲರು | ಶಿಶುಗಳ ಪ್ರವಾಸ ಬಹುತೇಕ ಅಂತ್ಯ

ಬಟ್ಲರ್ ಆಟಕ್ಕೆ ಬೆಚ್ಚಿದ ಅಮೆರಿಕ

ಬ್ರಿಡ್ಜ್‌ಟೌನ್: ಜಾಸ್ ಬಟ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಇಂಗ್ಲೆಂಡ್ ಬೌಲರ್‌ಗಳ ಸಾಂಘಿಕ ಬೌಲಿಂಗ್ ದಾಳಿಗೆ ಅಮೆರಿಕ ತತ್ತರಿಸಿದ್ದು, ತನ್ನ ಮೊದಲ ವಿಶ್ವಕಪ್‌ನಿಂದ ಬಹುತೇಕ ಹೊರಬಿದ್ದಿದೆ. ಆ ಮೂಲಕ ಇಂಗ್ಲೆಂಡ್ 10 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸುವುದರೊಂದಿಗೆ ಸೆಮಿಫೈನಲ್ ಟಿಕೆಟ್ ಪಡೆದುಕೊಂಡಿದೆ. ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ 115 ರನ್‌ಗಳಿಗೆ ಸರ್ವಪತನ ಕಂಡಿತು. ಅದನ್ನು ಬೆನ್ನುಹತ್ತಿದ ಆಂಗ್ಲರು ಯಾವುದೇ ವಿಕೆಟ್ ಕಳೆದುಕೊಳ್ಳದೆ, 9.4 ಓವರ್‌ಗಳಲ್ಲೇ ಪಂದ್ಯ ಗೆದ್ದುಕೊಂಡಿತು.

ಆರಂಭದಲ್ಲೇ ಕುಸಿದ ಅಮೆರಿಕ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ ತಂಡಕ್ಕೆ ಆರಂಭಿಕ ಆಘಾತ ಉಂಟಾಯಿತು. ಟೇಲರ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅದರಂತೆ ಗೌಸ್ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಸ್ಫೋಟಕ ಬ್ಯಾಟರ್ ಆ್ಯರೋನ್ ಸಹ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜತೆಗೂಡಿದ ಅನುಭವಿ ಕೋರಿ ಆ್ಯಂಡರ್ಸನ್ ಹಾಗೂ ನಿತೀಶ್ ಕುಮಾರ್ ನಿಧಾನಗತಿಯಾಟ ಪ್ರದರ್ಶಿಸಿದರು. ಆದರೆ ಆ್ಯಂಡರ್ಸನ್ 29 ರನ್ ಗಳಿಸಿ ವಿಕೆಟ್ ನೀಡಿದರು.

ಅಮೆರಿಕ 115/10, ನಿತೀಶ್ ಕುಮಾರ್ 30, ಆ್ಯಂಡರ್ಸನ್ 29, ಜಾರ್ಡನ್ 10/4
ಇಂಗ್ಲೆಂಡ್: 9.4 ಓವರ್‌ಗಲಲ್ಲಿ 117/0 ಬಟ್ಲರ್ 83★, ಸಾಲ್ಟ್ 25★

ಮಿಲಿಂದ್ ಕುಮಾರ್ 4 ರನ್ ಗಳಿಸಿ ವಿಕೆಟ್ ನೀಡಿದರು. ಹರ್ಮೀತ್ ಸಿಂಗ್ 21 ರನ್ ಗಳಿಸಿ ವಿಕೆಟ್ ನೀಡಿದರು. ನಿತೀಶ್ ಕುಮಾರ್ 30 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಎಲ್ಲರೂ ಶೂನ್ಯಕ್ಕೆ ಆಟ ನಿಲ್ಲಿಸದರು.

ಮಿಂಚಿದ ಜಾಸ್ ಬಟ್ಲರ್: ಅದನ್ನು ಬೆನ್ನುಹತ್ತಿದ ಇಂಗ್ಲೆಂಡ್ ತಂಡವು ಯಾವುದೇ ವಿಕೆಟ್ ಇಲ್ಲದೆ ಗೆಲುವು ಸಾಧಿಸಿತು. ಆರಂಭಿಕ ಜಾಸ್ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಅಮೆರಿಕ ಬೌಲರ್‌ಗಳನ್ನು ಮನ ಬಂದಂತೆ ದಂಡಿಸಿದ ಅವರು, ಪವರ್‌ಪ್ಲೇನಲ್ಲೇ ಪಂದ್ಯ ತಮ್ಮೆಡೆಗೆ ಕಸಿದುಕೊಂಡರು. ಬರೋಬ್ಬರಿ 7 ಸಿಕ್ಸ್ ಹಾಗೂ 6 ಬೌಂಡರಿ ಸಿಡಿಸಿದ ಅವರು, 38 ಎಸೆತಗಳಲ್ಲಿ ಅಜೇಯ 83 ರನ್ ಗಳಿಸಿದರು. ಮತ್ತೊಂದೆಡೆ ಕ್ರೀಜ್‌ನಲ್ಲಿ ನಿಂತಿದ್ದ ಸಾಲ್ಟ್, 25 ರನ್ ಗಳಿಸಿ ಅಜೇಯರಾಗಿ ಉಳಿದರು.

ಫುಟ್‌ಬಾಲ್: ಬೆಲ್ಜಿಯಂಗೆ 2 ಗೋಲಿನಿಂದ ಗೆಲುವು

ದೆಹಲಿ: 73 ಸೆಕೆಂಡುಗಳ ನಂತರ ಯುರಿ ಟೈಲೆಮನ್ಸ್ ಗಳಿಸಿದ ಗೋಲು ಮತ್ತು ಕೆವಿನ್ ಡಿ ಬ್ರುಯೆನ್ ಗಳಿಸಿದ ಗೋಲಿನಿಂದ ಬೆಲ್ಜಿಯಂ ರೊಮೇನಿಯಾ ವಿರುದ್ಧ 2-0 ಗೋಲಿನಿಂದ ಭರ್ಜರಿ ಗೆಲುವು ಸಾಧಿಸಿದೆ.

ಈ ಗೆಲುವಿನೊಂದಿಗೆ ಫುಟ್‌ಬಾಲ್ ಇತಿಹಾಸದಲ್ಲಿ ವಿಚಿತ್ರ ಫಲಿತಾಂಶ ಬಂದಿದ್ದು, ಯುರೋಪಿಯನ್ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ಬಾರಿಗೆ, ಗುಂಪಿನ ಎಲ್ಲಾ ನಾಲ್ಕು ತಂಡಗಳು ಎರಡು ಸುತ್ತುಗಳ ನಂತರ ಸಮಾನ ಅಂಕಗಳನ್ನು ಹೊಂದಿವೆ, ಶುಕ್ರವಾರ ಸ್ಲೋವಾಕಿಯಾ ವಿರುದ್ಧ ಉಕ್ರೇನ್ 2-1 ಗೋಲುಗಳಿಂದ ಜಯಗಳಿಸಿದ ನಂತರ.

ಬೆಲ್ಜಿಯಂ ಉಕ್ರೇನ್ ವಿರುದ್ಧ ಮತ್ತು ಸ್ಲೋವಾಕಿಯಾ ರೊಮೇನಿಯಾವನ್ನು ಎದುರಿಸುವಾಗ ಎಲ್ಲಾ ಫಲಿತಾಂಶಗಳು ಈಗ ಲಭ್ಯವಿವೆ, ಅಲ್ಲಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಲು ನಾಲ್ಕು ಅಂಕಗಳು ಸಾಕಾಗಬಹುದು ಆದರೆ ತಂಡವು ಹೊರಗುಳಿಯಬಹುದು.

ಪ್ರಿಕ್ವಾರ್ಟರ್ ಫೈನಲ್‌ಗೆ ರೊನಾಲ್ಡೊ ತಂಡ

ರೊನಾಲ್ಡೊ ನೇತೃತ್ವದ ಪೋರ್ಚುಗಲ್ ಟರ್ಕಿ ವಿರುದ್ಧದ ಪಂದ್ಯದಲ್ಲಿ 3-0 ಗೋಲುಗಳ ಸುಲಭ ಜಯ ಸಾಧಿಸಿದ್ದು, ಪ್ರಿ ಕ್ವಾರ್ಟರ್ ಫೈನಲ್ ಹಂತ ತಲುಪಿದೆ. ಟರ್ಕಿಯ ಸಮೆಟ್ ಅಕಯ್ದೀನ್ ಗೊಂದಲದಿಂದ ತಮ್ಮ ಗೋಲು ಪೆಟ್ಟಿಗೆಯಲ್ಲೇ ಹೊಡೆದ ಗೋಲಿನ ನೆರವಿನಿಂದ ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿದ ಪೋರ್ಚುಗಲ್, ಎಫ್ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡವೆನಿಸಿದ ಪೋರ್ಚುಗಲ್ ತಂಡದ ನಾಯಕ ರೊನಾಲ್ಡೊ ಗೋಲು ಹೊಡೆಯುವ ಅವಕಾಶ ಹೊಂದಿದ್ದರೂ, ಗೋಲು ಹೊಡೆಯಲು ಅತ್ಯಂತ ಸೂಕ್ತ ಸ್ಥಾನದಲ್ಲಿದ್ದ ಬ್ರೂನೊ ಅವರಿಗೆ ಚೆಂಡ್ ಪಾಸ್ ಮಾಡುವ ಮೂಲಕ ಶ್ಲಾಘನೆಗೆ ಪಾತ್ರರಾದರು. ಪಂದ್ಯದುದ್ದಕ್ಕೂ ಪ್ರಾಬಲ್ಯ ಮೆರೆದ ಪೋರ್ಚುಗಲ್ ಆಟಗಾರರಿಗೆ ಟರ್ಕಿ ಯಾವ ಹಂತದಲ್ಲೂ ಸವಾಲಾಗಲಿಲ್ಲ.

ದ.ಆಫ್ರಿಕಾಗೆ 3ನೇ ಏಕದಿನದಲ್ಲೂ ಸೋಲು | ಮಿಂಚಿದ ಮಂದಾನ

ಕ್ಲೀನ್‌ಸ್ವಿಪ್ ಮಾಡಿದ ವನಿತೆಯರು

ಬೆಂಗಳೂರು: ಭಾರತ ಮಹಿಳಾ ತಂಡ ಹಾಗೂ ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳ ನಡುವಿನ ಮೂರನೇ ಮತ್ತು ಕೊನೆಯ ಏಕದಿನ ಪಂದ್ಯದಲ್ಲಿ ಭಾರತೀಯ ವನಿತೆಯರು 6 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದ್ದು, ದ.ಆಫ್ರಿಕಾ ವಿರುದ್ಧದ ಸರಣಿಯನ್ನು ಕ್ಲೀನ್‌ಸ್ವಿಪ್ ಮಾಡಿದೆ. ಇದರೊಂದಿಗೆ ಮೂರು ಪಂದ್ಯಗಳ ಏಕದಿನ ಸರಣಿಯನ್ನು 3-0 ಅಂತರದಿಂದ ವಶಪಡಿಸಿಕೊಂಡಿದೆ.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಭಾರತ ಮಹಿಳಾ ತಂಡ ಹಾಗೂ ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳ ನಡುವಿನ ಮೂರನೇ ಹಾಗೂ ಕೊನೆಯ ಏಕದಿನ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದ. ಆಫ್ರಿಕಾ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಭಾರತ 40.4 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 220 ರನ್ ಗಳಿಸಿ ಭರ್ಜರಿ ಗೆಲುವು ಸಾಧಿಸಿತು.

ದ.ಆಫ್ರಿಕಾಗೆ ವೊಲ್ವಾರ್ಡ್ಟ್ ಆಸರೆ: ಟಾಸ್ ಗೆದ್ದು ಮೊಲು ಬ್ಯಾಟಿಂಗ್ ಮಾಡಿದ ದ.ಆಫ್ರಿಕಾಗೆ ಭರ್ಜರಿ ಆರಂಭ ಸಿಕ್ಕಿತು. ಭಾರೀ ಬ್ಯಾಟಿಂಗ್ ಮಾಡಿದ ನಾಯಕಿ ವೊಲ್ವಾರ್ಡ್ಟ್ ಟಿ20ಯಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಅವರೊಂದಿಗೆ ಬ್ರಿಟ್ಸ್ ಸಹ ಉತ್ತಮ ಬ್ಯಾಟಿಂಗ್ ಮಾಡಿದರು ಆದರೆ, ಈ ವೇಳೆ ಬ್ರಿಟ್ಸ್ ರನ್ ಔಟ್ ಆದರು. ಈ ಬಳಿಕ ಕಾಪ್ ಸಹ 7 ರನ್ ಗಳಿಸಿ ವಿಕೆಟ್ ನೀಡಿದರು. ಬೋಶ್ 5 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಕ್ಲೆರ್ಕ್ 26 ರನ್ ಗಳಿಸಿ ಅಲ್ಪ ಹೊತ್ತು ನಿಂತರು. ವೊಲ್ವಾರ್ಡ್ಟ್ 67 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಶಾಂಗೇಸ್ 16, ರಿಡ್ಡರ್ 26★ರನ್ ಗಳಿಸಿದರು.

ಮಿಂಚಿದ ಸ್ಮೃತಿ, ಕೌರ್: ಅದನ್ನು ಬೆನ್ನುಹತ್ತಿದ ಭಾರತಕ್ಕೆ ಭರ್ಜರಿ ಆರಂಭ ಸಿಕ್ಕಿತು. ಆರಂಭದಲ್ಲೇ ಸ್ಮೃತಿ ಮಂದಾನ ತಮ್ಮ ಭರ್ಜರಿ ಫಾರ್ಮ್ ಅನ್ನು ಮುಂದುವರಿಸಿದರು. ಅವರೊಂದಿಗೆ ಶಿಫಾಲಿ ಸಹ ಕೈಜೋಡಿಸಿದರು. ಆದರೆ ಈ ವೇಳೆ ವರ್ಮಾ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಪ್ರೀಯಾ 28 ರನ್ ಗಳಿಸಿ ಔಟಾದರು. ಈ ವೇಳೆ ಜತೆಗೂಡಿದ ಮಂದಾನ ಹಾಗೂ ನಾಯಕಿ ಕೌರ್ ಗೆಲುವಿನತ್ತ ಪಂದ್ಯ ಕೊಂಡೊಯ್ದಿರು. ಸ್ಮೃತಿ ಮಂದಾನ 90 ರನ್ ಗಳಿಸಿ ಶತಕ ವಂಚಿತರಾದರು. ಕೌರ್ 42 ರನ್ ಗಳಿಸಿ ರನೌಟ್‌ಗೆ ಬಲಿಯಾದರು. ಕೊನೆಯಲ್ಲಿ ರಾಡ್ರಿಗಸ್ 19 ರನ್ ಗಳಿಸಿ ಪಂದ್ಯವನ್ನು ಗೆಲ್ಲಿಸಿದರು.

ದ.ಆಫ್ರಕಾ: 215/8 ವೊಲ್ವಾರ್ಡ್ಟ್ 67, ಬ್ರಿಟ್ಸ್ 38, ದೀಪ್ತಿ 27/2, ರೆಡ್ಡಿ 26/2
ಭಾರತ: 40.4 ಓವರ್‌ಗಳಲ್ಲಿ 220/4 ಸ್ಮೃತಿ 90, ಕೌರ್ 42, ಅಯಾಬೊಂಗಾ 38/1

ಸೇಡಿನ ತವಕದಲ್ಲಿ ರೋಹಿತ್ ಪಡೆ

ಲೂಸಿಯಾ: ಸೂಪರ್ 8 ಈಗಾಗಲೇ ಚಾಲ್ತಿಯಲ್ಲಿ ಇದ್ದು, ವಿಶ್ವಕಪ್ ಸೆಮಿಫೈನಲ್ ಪ್ರವೇಶ ಪಡೆಯಲು ಮಾರಾಮಾರಿ ನಡೆಯುತ್ತಿದೆ. ಈ ಹಂತಕ್ಕೆ ತಲುಪಿರುವ 8 ತಂಡಗಳ ಪೈಕಿ 4 ತಂಡಗಳು ಮಾತ್ರ ಸೆಮಿಸ್ ತಲುಪಲಿದ್ದು, ಪ್ರತಿಯೊಂದು ತಂಡಕ್ಕೆ ತಲಾ ಮೂರು ಪಂದ್ಯಗಳನ್ನು ಆಡಿಸಲಾಗುತ್ತಿದೆ. ಆ ನಿಟ್ಟಿನಲ್ಲಿ ಭಾರತವು ಎ ಗುಂಪಿನ ಮೊದಲ ಎರಡು ಪಂದ್ಯಗಳನ್ನು ಗೆದ್ದಿದ್ದು, ಈಗಾಗಲೇ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಮೊದಲ ಗುಂಪಿನ ಅಗ್ರ ಸ್ಥಾನದಲ್ಲಿ ಇರುವ ಭಾರತ ಕಳೆದ ಎರಡು ಪಂದ್ಯಗಳಲ್ಲಿ ಬಾಂಗ್ಲಾ ಹಾಗೂ ಅಫ್ಘಾನಿಸ್ತಾನದ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಇದೀಗ ಸೋಮವಾರದ ಪಂದ್ಯದಲ್ಲಿ ಭಾರತ ಆಸ್ಟ್ರೇಲಿಯಾವನ್ನು ಎದುರಿಸಲಿದೆ. ಈ ನಿಟ್ಟಿನಲ್ಲಿ ಎಂಟರ ಘಟ್ಟದ ಎಲ್ಲ ಪಂದ್ಯಗಳನ್ನು ಗೆಲ್ಲುವ ಮೂಲಕ ಸೆಮಿಫೈನಲ್ ಪ್ರವೇಶಿಸುವ ಮೊದಲ ತಂಡವಾಗಲು ಭಾರತ ಕಣ್ಣಿಟ್ಟಿದೆ. ಮತ್ತೊಂದೆಡೆ ಏಕದಿನ ವಿಶ್ವಕಪ್‌ನ ಸೇಡು ತೀರಿಸಿಕೊಳ್ಳುವ ತವಕದಲ್ಲಿ ಭಾರತ ಇದೆ.

ಆತ್ಮವಿಶ್ವಾಸದಲ್ಲಿ ಭಾರತ: ಟಿ20 ವಿಶ್ವಕಪ್‌ನಲ್ಲಿ ಭಾರತ ಮಳೆಯಿಂದ ಒಂದು ಪಂದ್ಯ ಡ್ರಾ ಬಿಟ್ಟರೆ ಆಡಿದ ಎಲ್ಲ ಪಂದ್ಯವೂ ಗೆದ್ದಿದೆ. ಪ್ರಮುಖವಾಗಿ ಬೌಲಿಂಗ್ ವಿಭಾಗ ಭರ್ಜರಿ ಕಾರ್ಯನಿರ್ವಹಿಸುತ್ತಿದ್ದು, ಎಷ್ಟೇ ಅಲ್ಪ ಮೊತ್ತ ಇದ್ದರೂ, ತಡಿಯುವ ಸಾಮ ರ್ಥ್ಯ ಹೊಂದಿದೆ. ಆದರೆ ಬ್ಯಾಟಿಂಗ್ ವಿಭಾ ಗದಲ್ಲಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ಎಡವುತ್ತಿ ದ್ದು, ಕೊಹ್ಲಿ, ರೋಹಿತ್ ಫಾರ್ಮ್ ಚಿಂತೆಯಲ್ಲಿ ಇದ್ದಾರೆ.

ಆಸಿಸ್‌ಗೆ ಗೆಲುವು ಅನಿವಾರ್ಯ: ಇನ್ನು ಆಸ್ಟ್ರೇಲಿಯಾ ತಂಡವು ಅಫ್ಘಾನಿಸ್ತಾನದ ವಿರುದ್ಧ ಸೋಲನುಭವಿಸಿದ್ದು, ಸೆಮಿಸ್‌ಗೆ ತಲುಪಲು ಗೆಲುವು ಅನಿವಾರ್ಯವಾಗಿದೆ. ಸೂಪರ್ 8ರಲ್ಲಿ ಆಡಿರುವ 2 ಪಂದ್ಯಗಳಲ್ಲಿ 1 ಗೆದ್ದು ಎರಡನೇ ಸ್ಥಾನದಲ್ಲಿ ಇರುವ ಆಸಿಸ್‌ಗೆ ಭಾರತದ ಸವಾಲು ಅಗ್ನಿ ಪರೀಕ್ಷೆಯಾಗಲಿದೆ.

ತಲೆಕೆಡಿಸಿದ ಸಾನಿಯಾ ಮಿರ್ಜಾ ಪೋಸ್ಟ್



ದುಬೈ: ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಜಾ ಮತ್ತು ಕ್ರಿಕಟಿಗ ಮೊಹಮ್ಮದ್ ಶಮಿ ಗುಟ್ಟಾಗಿ ನಿಶ್ಚಿತಾರ್ಥ ಮಾಡಿ ಕೋಂಡಿದ್ದು, ಶೀಘ್ರದಲ್ಲೇ ಮದುವೆಯಾಗಲಿದ್ದಾರೆ ಎಂಬ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡು ತ್ತಿದ್ದು, ಇದೀಗ ಸಾನಿಯಾ ಮಿರ್ಜಾ ಹಾಕಿರುವ ಸ್ಟೋರಿಯೊಂದು ಚರ್ಚೆಗೆ ವೇದಿಕೆ ಮಾಡಿಕೊಟ್ಟಿದೆ. ಇತ್ತೀಚಿಗಷ್ಟೇ ಶಮಿ ತಮ್ಮ ದಾಂಪತ್ಯ ಜೀವನಕ್ಕೆ ಂತ್ಯ ಹಾಡಿದ್ದರು. ಈ ಹಿನ್ನಲೆಯಲ್ಲಿ ಪಾಕ್ ಕ್ರಿಕೆಟಿಗನೊಂದಿಗೆ ಮದು ವೆಯಾಗಿ ಬೇರೆಯಾಗಿರುವ ಸಾನಿಯಾ ಮಿರ್ಜಾ ಮದುವೆಯಾಗಲಿದ್ದಾರೆ ಎಂಬ ವಿಷಯ ಎಲ್ಲೆಡೆ ಹರಿದಾಡುತ್ತಿತ್ತು. ಆದರೆ ಸಾನಿಯಾ ತಂದೆ ಇಮ್ರಾನ್ ಮಿರ್ಜಾ ಇದು ಸುಳ್ಳು ಸುದ್ದಿ. ಇದೆಲ್ಲವೂ ಮೂರ್ಖತನ, ಅವಳು ಶಮಿಯನ್ನೂ ಭೇಟಿಯೂ ಮಾಡಿಲ್ಲ ಎಂದು ಹೇಳಿ ಸುದ್ದಿಯನ್ನು ಅಲ್ಲಗಳೆದಿದ್ದರು. ಆದರೆ, ಇದೀಗ ಸಾಮಿಯಾ ಮಿರ್ಜಾ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಾಕಿದ ಸ್ಟೋರಿಯು ಮತ್ತೆ ಚರ್ಚೆಗೆ ವೇದಿಕೆ ಮಾಡಿಕೊಟ್ಟಿದೆ. ಇತ್ತೀಚಿನ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಅಭಿಮಾನಿಗಳಿಗೆ 'ಸಬರ್ ಕರೋ ಆಲ್ವೇಸ್ ಸಬರ್ ಕರೋ ಎಂದು ಬರೆದುಕೊಂಡಿದ್ದಾರೆ. ಅವರ ಈ ಮಾರ್ಮಿಕ ಪೋಸ್ಟ್ ಕಂಡು ನೆಟ್ಟಿಗರು ಸಾನಿಯಾ ಅವರು ಶಮಿ ಜತೆ ಹಸೆಮಣೆ ಏರುವುದು ಪಕ್ಕಾ ಎಂದು ಎಂದು ಕತೆ ಕಟ್ಟಲಾಗುತ್ತಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
24.06.2024 ಸೋಮವಾರ
vishwavani.news

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಉ.ಷಾಢ, ತದಿಗೆ, ಯೋಗ ಐಂದ್ರ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಹಲ್ಲುನೋವು ಕಾಡುತ್ತಿದ್ದರೆ, ಹೀಗೆ ಮಾಡಿ. ಒಣಶುಂಠಿಯನ್ನು ಕೆಂಡದ ಮೇಲೆ ಸುಟ್ಟು, ಪುಡಿ ಮಾಡಿ, ಅದಕ್ಕೆ ಉಪ್ಪಿನಪುಡಿ ಬೆರೆಸಿ, ದಿನವೂ ಹಲ್ಲುಜ್ಜುವುದರಿಂದ ಹಲ್ಲುನೋವು ಮಾಯವಾಗುತ್ತದೆ.

ಸೌಂದರ್ಯ ಸೂತ್ರ

ತುಟಿಗಳ ಸೌಂದರ್ಯ ಹೆಚ್ಚಿಸಲು, ಕಡಲೆ ಎಣ್ಣೆಯನ್ನು ಸ್ವಲ್ಪ ಬಿಸಿಮಾಡಿ ಪ್ರತಿದಿನ ಸ್ನಾನಕ್ಕೆ ಮುನ್ನ ತುಟಿಗಳಿಗೆ ಲೇಪಿಸಿ. ಇದರಿಂದ ತುಟಿಗಳು ಒಡೆಯುವ ಸಮಸ್ಯೆ ನಿವಾರಣೆಯಾಗುವುದು. ಜತೆಗೆ ತುಟಿಗಳು ಮೃದುವಾಗಿ, ಕೆಂಪಾಗಿ ಕಾಣುತ್ತವೆ.

ದಿನ ಭವಿಷ್ಯ

ಮೇಷ ಆತ್ಮೀಯರನ್ನು ಭೇಟಿ ಆಗುವಿರಿ. ಇದರಿಂದ ನಿಮಗೆ ಪ್ರಯೋಜನವಾಗಲಿದೆ. ಸಾಮಾಜಿಕ ಮಟ್ಟದಲ್ಲಿ ನೀವು ಹೊಸ ಗುರುತನ್ನು ಪಡೆಯುವಿರಿ.

ವೃಷಭ ನಿಮ್ಮ ಯಶಸ್ಸನ್ನು ಹೆಚ್ಚು ಪ್ರದರ್ಶಿಸಲು ಹೋಗ ಬೇಡಿ. ಇದು ನಿಮ್ಮ ಜತೆಗಾರರಲ್ಲಿ ಅಸೂಯೆಯ ಭಾವನೆಯನ್ನು ಉಂಟುಮಾಡಬಹುದು.

ಮಿಥುನ ಇಂದಿನ ಸ್ವಲ್ಪ ಸಮಯವನ್ನು ಮಕ್ಕಳ ಸಮಸ್ಯೆಗಳ ಪರಿಹಾರಕ್ಕೆ ವ್ಯಯಿಸುವುದು ಒಳಿತು. ಕೀಲುಗಳಲ್ಲಿ ಯಾವುದೇ ರೀತಿಯ ನೋವು ಹೆಚ್ಚಾಗಬಹುದು.

ಕಟಕ ಬಹಳ ದಿನಗಳ ನಂತರ ಮನೆಗೆ ಅತಿಥಿಗಳ ಆಗಮನದಿಂದ ಮನಸ್ಸಿಗೆ ಸಂತೋಷ. ಕೌಟುಂಬಿಕ ವಿವಾದ ಪರಿಹಾರವಾಗುವುದು.

ಸಿಂಹ ಮಗುವಿನ ಸಕಾರಾತ್ಮಕ ಚಟುವಟಿಕೆಯು ನಿಮಗೆ ಶಾಂತಿಯನ್ನು ನೀಡು ತ್ತದೆ. ನಿಮ್ಮ ಮೊಂಡು ತನದ ನಡವಳಿಕೆ ಯಿಂದಾಗಿ, ತಾಯಿ ಯೊಂದಿಗಿನ ಸಂಬಂಧ ಕೆಡಬಹುದು.

ಕನ್ಯಾ ನಕಾರಾತ್ಮಕ ಚಟುವಟಿಕೆ ಹೊಂದಿರುವ ಜನರೊಂದಿಗೆ ಸಂಪರ್ಕ ಹೊಂದುವುದರಿಂದ ಯಾವುದೇ ಪ್ರಯೋಜನ ದಕ್ಕದು.

ತುಲಾ ವ್ಯಾಪಾರ ವಿಷಯಗಳು ನಿಮ್ಮ ಮನೆಯ ಮೇಲೆ ಪರಿಣಾಮ ಬೀರಲು ಬಿಡಬೇಡಿ. ಮಾತಾ ಸರಸ್ವತಿಯನ್ನು ಆರಾಧಿಸಿ.

ವೃಶ್ಚಿಕ ಕೆಲಸದ ಬಗ್ಗೆ ನೀವು ಗಮನ ಹರಿಸುತ್ತೀರಿ. ಇದರಿಂದಾಗಿ ಕೆಲಸದಲ್ಲಿ ಸ್ಥಗಿತಗೊಂಡಿದ್ದ ವೇಗವು ಹಿಂತಿರುಗುತ್ತದೆ ಮತ್ತು ನಿಮಗೆ ಲಾಭವಾಗುತ್ತದೆ.

ಧನು ಇಂದು ನಿಮಗೆ ನಿಮ್ಮ ಮೇಲೆ ವಿಚಿತ್ರವಾದ ದುರಹಂಕಾರ ಉಂಟಾಗಬಹುದು. ಅದನ್ನು ತಪ್ಪಿಸುವುದು ಉತ್ತಮ. ಇತರರಿಗೂ ಪ್ರಾಮುಖ್ಯತೆ ನೀಡಿ.

ಮಕರ ಸಮಾಜದಲ್ಲಿ ಜನಪ್ರಿಯತೆ ಹೆಚ್ಚುತ್ತದೆ ಮತ್ತು ಗೌರವ ಸಿಗುತ್ತದೆ. ಒಳ್ಳೆಯ ಆಹಾರ ಸಿಗಲಿದೆ. ಹೊಸ ಬಟ್ಟೆಗಳನ್ನು ಖರೀದಿಸಲು ಯೋಚಿಸಬಹುದು.

ಕುಂಭ ಇಂದು ಪ್ರಯಾಣಕ್ಕೆ ಅನುಕೂಲಕರ ದಿನವಲ್ಲ. ವ್ಯಾಪಾರದಲ್ಲಿ ಹೊಸ ಒಪ್ಪಂದಕ್ಕೆ ಪ್ರಯತ್ನಿಸುವಿರಿ. ಪ್ರೇಮ ಜೀವನ ಸಾಮಾನ್ಯವಾಗಿರುತ್ತದೆ.

ಮೀನ ವೈವಾಹಿಕ ಜೀವನವನ್ನು ನಡೆಸುತ್ತಿರುವ ಜನರು ಸಂಗಾತಿಯೊಂದಿಗೆ ಭಿನ್ನಾಭಿಪ್ರಾಯಗಳಿರುವುದರಿಂದ ಒತ್ತಡಕ್ಕೆ ಒಳಗಾಗಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1564 – ರಜಪೂತ ರಾಣಿ ದುರ್ಗಾವತಿ ಮೊಘಲರೊಂದಿಗಿನ ಯುದ್ಧದ ಸಮಯದಲ್ಲಿ ಹುತಾತ್ಮರಾದರು.
- 1961 – ಭಾರತದ ಮೊದಲ ಸ್ವದೇಶಿ ಹೆಚ್‌ಎಫ್24 ಸೂಪರ್ ಸಾನಿಕ್ ಯುದ್ಧ ವಿಮಾನ ಹಾರಾಟ ನಡೆಸಿತು.
- 1986 –ಭಾರತ ಸರ್ಕಾರವು ಅವಿವಾಹಿತ ಮಹಿಳೆಯರಿಗೆ ಹೆರಿಗೆ ಪ್ರಯೋಜನವನ್ನು ಅನುಮೋದಿಸಿತು.

ಚಿತ್ರಸ್ಫೂರ್ತಿ

ಹಂಪಿಯ ಹೇಮಕೂಟದಲ್ಲಿರುವ ಪುರಾತನ ದೇವಾಲಯದ ಹಿಂದಿರುವ ಹಳೆಯ ಒಂಟಿ ಮರ, ದೇಗುಲಕ್ಕೆ ರಕ್ಷೆಯಾಗಿ ನಿಂತಂತಿದೆ. ಚಿತ್ರಕೃಪೆ; ಪ್ರತಾಪ್ ಜೆ

ದುರ್ಯೋಧನನ ಅಂತಕರಣ ಶುದ್ಧಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಕುರುಕ್ಷೇತ್ರ ರಣರಂಗ, ಪಾಂಡವರು ಐದು ಜನ. ಉಳಿದಿದ್ದು ಮಾತ್ರ ದುರ್ಯೋಧನ ತೊಡೆ ಮುರಿದು ನರಳುತ್ತಾ ಬಿದ್ದಿದ್ದಾನೆ. ಶ್ರೀಕೃಷ್ಣನು, ಇವನು ನನ್ನಿಂದ ಸಾಯುತ್ತಾನೆ, ಇವನಿಗೇನಾದರೂ ಉಪಕಾರ ಮಾಡಬೇಕೆಂದು ಒಬ್ಬನೇ ಬಂದು ನರಳುತ್ತಾ ಬಿದ್ದಿರುವ ದುರ್ಯೋಧನನ ಮುಂದೆ ನಿಲ್ಲುತ್ತಾನೆ. ದುರ್ಯೋಧನ ಶ್ರೀಕೃಷ್ಣನನ್ನು ನೋಡಿದ. ಆಗ ಶ್ರೀಕೃಷ್ಣನಿಗೆ ದುರ್ಯೋಧನನ ಅಂತಃಕರಣ ಶುದ್ಧವಾಯಿತು. ತೊಡೆ ಮುರಿದ ನೋವು ಇಲ್ಲ. ಸೋತ ಸಂಕಟ ಇಲ್ಲ. ಎಲ್ಲರನ್ನು ಕಳೆದುಕೊಂಡ ದುಃಖ ಇಲ್ಲ. ಶ್ರೀಕೃಷ್ಣನನ್ನು ನೋಡಿದ ಆ ನೋಟ ಎಲ್ಲರಿಗೂ ಸಿಕ್ಕುವುದಿಲ್ಲ. ನೋವಿಲ್ಲದ ನೋಟ. ದುರ್ಯೋಧನ ನೀನು ಸಾಯುತ್ತೀಯ. 'ಏನಾದರೂ ವರವನ್ನು ಬೇಡು ಕೊಡುತ್ತೇನೆ. ನೀನು ಧರ್ಮಹೀನನಾಗಿ ಪಾಂಡವರ ಮೇಲೆ ವೈರ ಮಾಡಿ ಕೊಂಡು ಎರಡೂ ಕಡೆ ನಷ್ಟವಾಯಿತು' ಎಂದ ಶ್ರೀಕೃಷ್ಣ. ಆಗ ದುರ್ಯೋಧನನಿಗೆ ಅಂತಃಕರಣ ಶುದ್ಧಿಯಾಯಿತು. ನೋವು ನಿವಾರಣೆ ಆಯಿತು. ರಾಜ್ಯ ಕಳೆದುಕೊಂಡಿದ್ದು ಮರೆತುಹೋಯಿತು.

ಆಗ ದುರ್ಯೋಧನ ಹೇಳುತ್ತಾನೆ.

ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಂ
ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಂ ।
ನೇ ಕೇ ಪಿ ದೇವೇನ ಹೃದಿಸ್ಥಿತೇನ ಯಥಾ
ಕರೋತಿ ತಥಾ ಕರೋಮಿ ॥

ಭಗವಂತ ನನಗೆ ಧರ್ಮ ಗೊತ್ತಿದೆ. ಆದರೆ ಆಚರಣೆ ಮಾಡಲಾಗಲಿಲ್ಲ. ಪಾಂಡವರನ್ನು ನೋಯಿಸುವುದು, ದ್ರೌಪದಿ ವಸ್ತ್ರಾಪಹರಣ ಮಾಡುವುದು ಅಧರ್ಮ ಎಂಬುದು ತಿಳಿದಿದೆ. ಆದರೆ ಅದನ್ನು ಬಿಡಲಾಗಲಿಲ್ಲ. ಏಕೆಂದರೆ ಯಾವುದೋ ಒಂದು ದೇವತೆಯು ನನ್ನ ಹೃದಯದಲ್ಲಿ ಕುಳಿತು ಹಾಗೆ ಮಾಡಿಸಿತು ಅಷ್ಟೆ. ನಾನು ಮಾಡಿದವನಲ್ಲ. ಆ ದೇವತೆ ಮತ್ತಾರೂ ಅಲ್ಲ ಆ ದೇವತೆ ನೀನೇ. ಆ ಪಾಪ ಪುಣ್ಯ ನನಗೆ ಸಂಬಂಧವಿಲ್ಲ. ಆ ಪಾಪ ಪುಣ್ಯ ಎಲ್ಲಾ ನಿನ್ನದೇ ಎಂದು ಆ ಪಾಪದಿಂದ ನಿವೃತ್ತಿ ಹೊಂದಿದನು.

ನಿಜವಾಗಿ ನೋಡಿದರೆ ಯಾವ ಪಾಪ ಪುಣ್ಯವು ನಮ್ಮದಲ್ಲ. ನಾವು ಮಾಡುವವರಲ್ಲ. ಯಾರೋ ದೇವತೆ ಮಾಡಿಸುತ್ತದೆ. ಹೀಗೆ ನಾವು ಏನನ್ನಾದರೂ ಮಾಡುವಾಗ ಎಲ್ಲವನ್ನೂ ಪರಮಾತ್ಮನೆ ಮಾಡುತ್ತಾನೆ, ನನಗೆ ಸಂಬಂಧವಿಲ್ಲ ಎಂದರೆ ಆ ಪಾಪ ನಿನಗೆ ಬರುವುದಿಲ್ಲ. ಆದ್ದರಿಂದ ಎಲ್ಲವನ್ನು ಭಗವಂತನ ಮೇಲೆ ಹಾಕುವ ಭಕ್ತರಾದರೆ ನೀವು ಮುಕ್ತರಾಗುತ್ತೀರ. ಸ್ವಪ್ನದಲ್ಲಿ ಮಾಡಿದ ಪಾಪ ಸ್ವಪ್ನ ಇರುವವರೆಗೆ ಮಾತ್ರ ಇರುತ್ತದೆ. ಸ್ವಪ್ನ ಹೋದ ಮೇಲೆ ಆ ಪಾಪ ಪುಣ್ಯ ಯಾವುದು ಇಲ್ಲ. ಹಾಗೆಯೇ ಜಗತ್ತಿನಲ್ಲಿ ಮಾಡಿದ ಪಾಪವಾಗಲೀ, ಪುಣ್ಯವಾಗಲೀ ಸ್ವಪ್ನಕ್ಕೆ ಹೋದರೆ ಅಲ್ಲಿ ಏನೂ ಇಲ್ಲ. ಸುಷುಪ್ತಿಗೆ ಹೋದರೆ ಯಾವುದು ಇಲ್ಲ. ಹೀಗೆ ನಮ್ಮ ತಿಳುವಳಿಕೆಯಿಂದಲೇ ಈ ಮಿಥ್ಯವಾದ ಪಾಪಪುಣ್ಯಗಳು ಇಲ್ಲವೇ ಇಲ್ಲ. ಆದರೆ ನಮ್ಮ ತಿಳುವಳಿಕೆ ದೃಢವಾಗಿರಬೇಕು.

ದುರ್ಯೋಧನಿಗೇನೋ ಸಾಯುವ ಕ್ಷಣದಲ್ಲಿ ಕೃಷ್ಣನ ಕೃಪಾಕಟಾಕ್ಷ ದೊರಕಿ, ನೋವು ಹಿಂಸೆ ಪಾಪ ಪ್ರಜ್ಞೆಯಿಂದ ಮುಕ್ತನಾಗಿ ಸಾವನ್ನು ಸ್ವೀಕರಿಸಿದ. ಆದರೆ ಮನುಷ್ಯರಾದ ನಾವು ಇಂತಹ ಸ್ಥಿತಿಗೆ ತಲುಪಲು ಕೊನೆಯ ಕ್ಷಣಗಳಿಗೆ ಕಾಯಬೇಕೆಂದೇನೂ ಇಲ್ಲ. ಬದುಕಿದ್ದಾಗಲೇ ನಾವು ಮಾಡುವ ಎಲ್ಲಾ ಒಳ್ಳೆಯ, ಹಾಗೂ ಕೆಟ್ಟ ಕೆಲಸಗಳಿಗೆ ರೊಟ್ಟಿ ತಿರುಗಿ ಹಾಕಿದಂತೆ ಅಲ್ಲಲ್ಲೇ ಫಲಿತಾಂಶ ಸಿಗುತ್ತಾ ಹೋಗುತ್ತದೆ. ಇಂದು ಮತ್ತೊಬ್ಬರನ್ನು ನೋಯಿಸಿ ನಕ್ಕಿದ್ದರೆ ನಾಳೆ ಅದೇ ನೋವು ನಮಗೆ ಆ ನೋಯಿಸಿದ ಕ್ಷಣಗಳನ್ನು ನೆನಪು ಮಾಡಿ ಕೊಳ್ಳುವಂತೆ, ಕಾಡಿಸಿ ಹೈರಾಣಾಗಿಸುತ್ತದೆ. ಆದ್ದರಿಂದ ಇದು ಕಲಿಯುಗ ಕೆಟ್ಟದ್ದು ಮಾಡುವುದಿರಲಿ ಯೋಚಿಸುವ ಮುನ್ನವೇ ಜಾಗೃತರಾಗಿರಿ, ಆ ಯೋಚನೆಗಳು ಕೂಡ ನಮಗೆ ಮತ್ತೆ ಕೆಟ್ಟದ್ದನ್ನೇ ಮಾಡುತ್ತವೆ. ಅಷ್ಟೇ ಅಲ್ಲ ನಮ್ಮ ಎದುರುಗಿರುವವರಿಗಿಂತ ಹೆಚ್ಚಾಗಿ ನಮ್ಮನ್ನು ಸುಡುತ್ತದೆ. ಈ ಅನುಭವ ಈಗಾಗಲೇ ಅನೇಕರಿಗೆ ಆಗಿರಬಹುದು. ಸ್ವರ್ಗ ನರಕ ಮೇಲೆ ಎಲ್ಲೋ ಇಲ್ಲ, ಅವು ಭೂಮಿಯಲ್ಲೇ ದಿನ ದಿನವೂ ನಮಗೆ ಬದುಕಿನ ಪಾಠ ಕಲಿಸುತ್ತದೆ.

ಪದಬಂಧ



ಎಡದಿಂದ ಬಲಕ್ಕೆ:

1. ಕೆಸರಿನಲ್ಲಿ ಹುಟ್ಟಿದ ತಾವರೆ (3)
3. ನೀರಿನ ಚಿಲುಮೆ (3)
6. ವಿಧಿ ಬರಹ ಬರೆಯುವ ಹಣೆ (3)
7. ನಮ್ಮ ರಾಷ್ಟ್ರೀಯ ಪಕ್ಷಿ (3)
10. ಮದುವೆಯ ಗಂಡಿನೊಂದಿಗೆ ಬಂದಿರುವ ಒಂದು ಲೋಹ (3)
12. ದೃಷ್ಟಿ ದೋಷವಿದ್ದವರು ಧರಿಸಬೇಕಾಗುವುದು (4)
13. ಅತಿಯಾದ ದುಃಖವನ್ನು ಹೀಗೆನ್ನಬಹುದು (3)
14. ಪತ್ರಿಕೆಗಳಲ್ಲಿ ಸುದ್ದಿಗಳನ್ನು ಪರಿಷ್ಕರಿಸುವವನು (4)
15. ಮನದ ಮಧ್ಯೆಯೇ ಇರುವನು ಮನ್ಮಥ (3)
17. ನೂಲನ್ನು ತೆಗೆಯುವ ಸಾಧನ (3)
19. ಗಣಪತಿಯ ವಾಹನ (3)
20. ಶಿವನ ಧನುಸ್ಸಿನ ಹೆಸರು (3)
21. ರಸಗಳನ್ನು ಆಸ್ವಾದಿಸುವವನು (3)

ಎಡದಿಂದ ಬಲಕ್ಕೆ:

1. ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆಗಳ ಮಿಶ್ರಣ (4)
2. ಜಾಡಮಾಲಿಗೆ ಮತ್ತೊಂದು ಹೆಸರು (4)
3. ತೊಂದರೆಗೆ ಪರ್ಯಾಯ ಪದ (2)
4. ಇಂದ್ರ್ಯಗಳನ್ನು ಗೆದ್ದವನು (2)
5. ಇಡಿಯಲ್ಲ, ಬರಿಯ ಭಾಗ (2)
8. ಅಸಂಬದ್ಧವಾದ ಚರ್ಚೆ (5)
9. ಹೂವಿನ ಎಸಳು ತಲೆಕೆಳಗಾಗಿದೆ (3)
11. ಕಾಡನ್ನು ರಕ್ಷಿಸುವವನು (5)
13. ಕಷ್ಟ ಅಥವಾ ನೋವಿಗೆ ಮತ್ತೊಂದು ಹೆಸರು (3)
15. ಜೇನು ಸಂಗ್ರಹಿಸುವ ಭ್ರಮರ (4)
16. ದಮಯಂತಿಯ ಪತಿ ತಯಾರಿಸಿದ ರುಚಿಕರ ಅಡುಗೆ (4)
17. ದೇಹದ ಮೇಲ್ಭಾಗದಲ್ಲಿರುವ ಶಿರ (2)
18. ಬರಹದ ಚಿನ್ಹೆ (2)
19. ಮಾತು ಬಾರದವನು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತಳಪಾಯ 3. ಪಂಗನಾಮ 5. ಶತಕ 7. ರಿಪು 9. ಹಾಕಟ 11. ಅರ 12. ರಾಕ್ಷಸ 13. ಗದ್ಯಾಣ 14. ಕಣ 15. ನಜರು 17. ಕವಿ 19. ಕಡಿತ 21. ಗರಗಸ 22. ಮಹೀಧರ

ಮೇಲಿನಿಂದ ಕೆಳಕ್ಕೆ: 1. ತರಾತುರಿ 2. ಯಶ 3. ಪಂಕ 4. ಮಧುಕರ 6. ತವಕ 8. ಪುರಾಣ 9. ಹಾಸನ 10. ಟಗರು 11. ಅಣಕ 14. ಕಲಿಯುಗ 16. ಜರಡಿ 18. ವಿಘ್ನೇಶ್ವರ 19. ಕಸ 20. ತಮ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಹಂದಿ ಆಕಾಶ ನೋಡಲಾರದು

ಸದಾ ಕೆಳಗೆ ಏನಿದೆ ಎಂದು ನೋಡದೆ ಸಾಗುತ್ತಿರುವವರನ್ನು ಕಣ್ಣು ನೆತ್ತಿ ಮೇಲಿದೆಯೇ ಎಂದು ಹೀಗೆಳೆವುದು ಮಾಮೂಲು. ಆದರೆ ಆಕಾಶವನ್ನೇ ನೋಡಲಾಗದ ಪ್ರಾಣಿ ಒಂದಿದೆ ಎಂದರೆ ನಂಬುತ್ತೀರಾ..? ನಂಬಲೇ ಬೇಕು. ಹಂದಿಗಳು ಆಕಾಶದತ್ತ ನೋಡುವುದು ಭೌತಿಕವಾಗಿ ಅಸಾಧ್ಯ. ಅವುಗಳ ಕತ್ತಿನ ಸ್ನಾಯುಗಳು ಮತ್ತು ಬೆನ್ನುಮೂಳೆಯ ಅಂಗರಚನಾಶಾಸ್ತ್ರದಿಂದಾಗಿ, ತಲೆಯ ಚಲನೆಗೆ ಕೆಲವು ಮಿತಿಗಳನ್ನು ಹೊಂದಿದೆ. ಹಾಗಾಗಿ ಮೇಲ್ಮುಖವಾಗಿ ನೋಡುವುದು ಅವುಗಳಿಗೆ ಸಾಧ್ಯವಿಲ್ಲ. ಇದರಿಂದಾಗಿ ಹಂದಿಗಳು ಎಂದೂ ಆಕಾಶ ನೋಡಲಾರವು.

ಪುಸ್ತಕ ಲೋಕ

ಹನುಕಿಯಾ

ಲೇಖಕ ವಿಠ್ಠಲ ಶೆಣೈ ಬರೆದಿರುವ ಕಾದಂಬರಿ, ಹನುಕಿಯಾ. ಕನ್ನಡದಲ್ಲಿ ಯುದ್ಧ ಕಥಾನಕದ ಇತಿಹಾಸವನ್ನು ಬಳಸಿ ಸಾಹಿತ್ಯ ರಚನೆಯ ಕೆಲಸಕ್ಕೆ ಕೈ ಹಾಕಿದವರು ತುಂಬ ಕಡಿಮೆ. ಆದರೆ ಈ ಕೃತಿಯಲ್ಲಿ ಲೇಖಕರು ಓದುಗರನ್ನು ನೇರವಾಗಿ ಎರಡನೇ ಮಹಾಯುದ್ಧದ ರಣಾಂಗಣಕ್ಕೆ ಕೊಂಡೊಯ್ಯುತ್ತಾರೆ. ಯುದ್ಧಾನುಭವದ ಕಥಾನಕ ಬಿಚ್ಚಿಡುವ, ಈ ಕಾದಂಬರಿ ಓದುಗನ ಮನಸ್ಸಿನಲ್ಲಿ ಕಿಚ್ಚು ಹೊತ್ತಿಸುವಂತಿದೆ. ಎಲ್ಲ ಪಾತ್ರಗಳು ಕಾದಂಬರಿಯ ಅಗತ್ಯಕ್ಕೆ ತಕ್ಕಂತೆ ಕಾದಂಬರಿಕಾರನ ಕಲ್ಪನೆಯಲ್ಲಿ ಮೂಡಿದ್ದರೂ, ನಮ್ಮನ್ನು ಎಂಟು ದಶಕಗಳ ಹಿಂದಕ್ಕೆ ಕರೆದೊಯ್ಯುವಲ್ಲಿ ಸಫಲವಾಗುತ್ತವೆ. ಕಥನ ಭಾಗವಾಗಿ ಭಾಷೆಯನ್ನು ಶಕ್ತಿಯುತವಾಗಿ ಬಳಸಿಕೊಂಡಿರುವ ಲೇಖಕರು, ಅಲ್ಲಲ್ಲಿ ನಿರೂಪಕನಾಗಿ ಇಣುಕುವ ಪರಿ ಕೆಲವೊಮ್ಮೆ ಓದುಗನನ್ನು ಮುಖ್ಯವಾಹಿನಿಯ ಆಚೆಗೆ ಎಳೆದೊಯ್ಯುತ್ತದೆ.

ಟ್ವೀಟ್‌ಮೆಂಟ್

ಪ್ರಮೇಯ ಪ್ರತೀನ್

61% ಮುಸ್ಲಿಂ ಜನಸಂಖ್ಯೆ ಹೊಂದಿರುವ ಮಲೇಷ್ಯಾವನ್ನು ಮುಸ್ಲಿಂ ರಾಷ್ಟ್ರವೆಂದು ಘೋಷಿಸಬಹುದು !
ಆದರೆ, 80% ಹಿಂದೂ ಜನಸಂಖ್ಯೆ ಹೊಂದಿರುವ ಭಾರತವನ್ನು ಏಕೆ ಹಿಂದೂರಾಷ್ಟ್ರವೆಂದು ಘೋಷಿಸಬಾರದು ?

ದೀಪು

ಮುಂದಿನ 20 ವರ್ಷಗಳ ಅಷ್ಟೇ, ಆಮೇಲೆ ಭಾರತ ಮುಂದಿನ ಯೆಮೆನ್, ಅಫ್ಘಾನಿಸ್ತಾನ್, ಸಿರಿಯಾ ಆಗ್ಬಿಡುತ್ತೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಪಾಕಿಸ್ತಾನವು ಇತ್ತೀಚಿಗೆ ತನ್ನ ಮೊಟ್ಟಮೊದಲ ಚಂದ್ರನ ಮಿಷನ್, iCube&Qamar ಅನ್ನು ಯಾವ ದೇಶದ ಸಹಯೋಗದೊಂದಿಗೆ ಪ್ರಾರಂಭಿಸಿತು?

- ಎ. ಇರಾಕ್
- ಬಿ. ಶ್ರೀಲಂಕಾ
- ಸಿ. ಭಾರತ
- ಡಿ. ಚೀನಾ

ಉತ್ತರ: ಡಿ. ಚೀನಾ

ಮಾಹಿತಿ

ಪಾಕಿಸ್ತಾನ ಮತ್ತು ಚೀನಾ ಜಂಟಿಯಾಗಿ iCube&Qamar ಅನ್ನು ಪ್ರಾರಂಭಿಸಿದವು. ಪಾಕಿಸ್ತಾನದ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಟೆಕ್ನಾಲಜಿ (ಐಎಸ್‌ಟಿ), SUPARCO ಮತ್ತು ಚೀನಾದ SJTU ಅಭಿವೃದ್ಧಿಪಡಿಸಿದ 7 ಕೆಜಿ ಭಾರದ ಈ ಉಪಗ್ರಹವು ಚೀನಾದ ಚಾಂಗ್'ಇ-6 ಮಿಷನ್ನ ಭಾಗವಾಗಿದೆ. ಇದು ಎರಡು ಆಪ್ಟಿಕಲ್ ಕ್ಯಾಮೆರಾಗಳನ್ನು ಒಳಗೊಂಡಿದ್ದು, ಚಂದ್ರನ ಸುತ್ತ ಸುತ್ತುತ್ತದೆ, ಚಂದ್ರನ ಮೇಲ್ಮೈ ಚಿತ್ರಣದ ಮೇಲೆ ಸ್ವತಂತ್ರವಾಗಿ ಉಪಗ್ರಹ ಆಧಾರಿತ ಸಂಶೋಧನೆ ನಡೆಸಲು ಪಾಕಿಸ್ತಾನಕ್ಕೆ ಅನುವು ಮಾಡಿಕೊಡುತ್ತದೆ.

ಬೆಲ್ಲದ ಚಹಾ, ಆರೋಗ್ಯ ಸದಾ!

ಆಹಾರವೇ ವೈದ್ಯ

ಹಿಂದೆಲ್ಲಾ ಕಾಫಿ, ಚಹಾಕ್ಕೆ ಸಕ್ಕರೆಯ ಬದಲು ಬೆಲ್ಲವನ್ನೇ ಬಳಸುತ್ತಿದ್ದರು. ಆಗೆಲ್ಲಾ ಸಕ್ಕರೆಯ ಬಳಕೆ ಕಡಿಮೆ ಇದ್ದುದ್ದೇ ಇದಕ್ಕೆ ಕಾರಣ. ಆದರೆ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಕ್ಕರೆಗಿಂತ ಬೆಲ್ಲವೇ ಅತ್ಯುತ್ತಮ. ಬೆಲ್ಲವು ಕಬ್ಬಿಣ, ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್‌ನಂತಹ ಖನಿಜಗಳಿಂದ ಸಮೃದ್ಧವಾಗಿದೆ ಮತ್ತು ಇದು ಉತ್ಕರ್ಷಣ ನಿರೋಧಕಗಳನ್ನು ಸಹ ಹೊಂದಿದೆ. ಚಳಿಗಾಲದಲ್ಲಿ ಬೆಲ್ಲದ ಚಹಾವನ್ನು ಕುಡಿಯುವುದು ಪ್ರಯೋಜನಕಾರಿ. ಇದು ಶೀತ ವಾತಾವರಣದಲ್ಲಿ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಆರೋಗ್ಯಕರ ಅಂಶಗಳು

- **ರೋಗನಿರೋಧಕ ಶಕ್ತಿಯ ವೃದ್ಧಿ;** ಬೆಲ್ಲದ ಚಹಾವು ಸತು ಮತ್ತು ಸೆಲೆನಿಯಂನಂತಹ ಅಗತ್ಯವಾದ ಖನಿಜಗಳನ್ನು ಹೊಂದಿರುತ್ತದೆ, ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಬಲವಾದ ಪ್ರತಿರಕ್ಷಣಾ ವ್ಯವಸ್ಥೆಯು ದೇಹವನ್ನು ವಿವಿಧ ಸೋಂಕುಗಳು ಮತ್ತು ರೋಗಗಳಿಂದ ರಕ್ಷಿಸುತ್ತದೆ.
- **ದೇಹದ ಉಷ್ಣತೆ ಕಾಪಾಡುವುದು;** ಬೆಲ್ಲದ ಚಹಾವು ಚಳಿಗಾಲದಲ್ಲಿ ಸೇವಿಸಲು ಅತ್ಯುತ್ತಮ ಪಾನೀಯವಾಗಿದೆ. ಇದು ದೇಹವನ್ನು ಬೆಚ್ಚಗಿಡಲು ಸಹಾಯ ಮಾಡುತ್ತದೆ ಮತ್ತು ಶೀತ ಮತ್ತು ಕೆಮ್ಮಿನಿಂದ ತ್ವರಿತ ಪರಿಹಾರವನ್ನು ನೀಡುತ್ತದೆ.
- **ಉಸಿರಾಟದ ತೊಂದರೆಯ ನಿವಾರಣೆ;** ಬೆಲ್ಲದ ಚಹಾವು ಕಫ ನಿವಾರಣಾ ಗುಣಗಳಿಗೆ ಹೆಸರುವಾಸಿಯಾಗಿದೆ, ಇದು ಗಂಟಲಿನಲ್ಲಿರುವ ಕಫವನ್ನು ನಿವಾರಿಸಲಿದೆ. ಆಸ್ತಮಾ, ಬ್ರಾಂಕೈಟಿಸ್ ಮತ್ತು ಕೆಮ್ಮಿನಂತಹ ಉಸಿರಾಟದ ಸಮಸ್ಯೆಗಳಿಂದ ಪರಿಹಾರ ನೀಡುತ್ತದೆ.
- **ದೇಹವನ್ನು ನಿರ್ವಿಷಗೊಳಿಸುತ್ತದೆ;** ಬೆಲ್ಲದ ಚಹಾದಲ್ಲಿರುವ ಉತ್ಕರ್ಷಣ ನಿರೋಧಕಗಳು ವಿಷ ಮತ್ತು ಕಲ್ಮಶಗಳನ್ನು ತೆಗೆದುಹಾಕುವ ಮೂಲಕ ದೇಹವನ್ನು ನಿರ್ವಿಷಗೊಳಿಸಲು ಸಹಾಯ ಮಾಡುತ್ತದೆ. ಇದು ಯಕೃತ್ತನ್ನು ಶುದ್ಧೀಕರಿಸುತ್ತದೆ ಮತ್ತು ಒಟ್ಟಾರೆ ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.
- **ರಕ್ತದೊತ್ತಡದ ನಿಯಂತ್ರಣ;** ಇದು ಪೊಟ್ಯಾಸಿಯಮ್ ಅನ್ನು ಹೊಂದಿರುತ್ತದೆ, ಇದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಆರೋಗ್ಯಕರ ರಕ್ತದೊತ್ತಡವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಮಧುಮೇಹಿಗಳಿಗೂ ಬೆಲ್ಲದ ಚಹ ಒಗ್ಗಿಕೊಳ್ಳುತ್ತದೆ.
- **ಜೀರ್ಣಕ್ರಿಯೆಯ ಸುಧಾರಣೆ;** ಜೀರ್ಣಕಾರಿ ಕಿಣ್ವಗಳನ್ನು ಉತ್ತೇಜಿಸುತ್ತದೆ, ಉತ್ತಮ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಮಲಬದ್ಧತೆ, ಹೊಟ್ಟೆ ಉಬ್ಬುವುದು ಮತ್ತು ಅಜೀರ್ಣದಂತಹ ಜೀರ್ಣಕಾರಿ ಅಸ್ವಸ್ಥತೆಗಳನ್ನು ತಡೆಯುತ್ತದೆ. ★ ಕಬ್ಬಿಣಾಂಶ ಸಮೃದ್ಧ; ಬೆಲ್ಲದ ಚಹಾವು ಕಬ್ಬಿಣಾಂಶದ ಅತ್ಯುತ್ತಮ ಮೂಲ. ಇದು ಕೆಂಪು ರಕ್ತ ಕಣಗಳ ಉತ್ಪಾದನೆಗೆ ಸಹಾಯ ಮಾಡುತ್ತದೆ. ನಿಯಮಿತವಾಗಿ ಸೇವಿಸುವುದರಿಂದ ಕಬ್ಬಿಣದ ಕೊರತೆಯ ರಕ್ತಹೀನತೆಯನ್ನು ತಡೆಯಬಹುದು.
- **ತೂಕ ಇಳಿಸಲು ಸಹಕಾರಿ;** ಬೆಲ್ಲ ನೈಸರ್ಗಿಕ ಸಿಹಿಕಾರಕವಾಗಿದ್ದು ಅದು ಅನಾರೋಗ್ಯಕರ ಸಕ್ಕರೆ ತಿಂಡಿಗಳ ಕಡುಬಯಕೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಚಯಾಪಚಯವನ್ನು ಸುಧಾರಿಸುತ್ತದೆ ಮತ್ತು ತೂಕವನ್ನು ಇಳಿಸಲು ಸಹಾಯ ಮಾಡುತ್ತದೆ.
- **ಕೀಲು ನೋವಿನ ನಿವಾರಣೆ;** ಬೆಲ್ಲದ ಚಹಾವು ಉರಿಯೂತ ನಿವಾರಣಾ ಗುಣಲಕ್ಷಣಗಳನ್ನು ಹೊಂದಿದೆ, ಇದು ಕೀಲು ನೋವು ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ನಿಯಮಿತ ಸೇವನೆಯು ಸಂಧಿವಾತ ಮತ್ತು ಇತರ ಜಂಟಿ-ಸಂಬಂಧಿತ ಸಮಸ್ಯೆಗಳಿಂದ ಪರಿಹಾರವನ್ನು ನೀಡುತ್ತದೆ.
- **ನೈಸರ್ಗಿಕ ಎನರ್ಜಿ ಬೂಸ್ಟರ್;** ಕಾರ್ಬೋಹೈಡ್ರೇಟ್‌ಗಳಿಂದ ತುಂಬಿದ್ದು ದೇಹಕ್ಕೆ ತ್ವರಿತ ಶಕ್ತಿಯನ್ನು ನೀಡುತ್ತದೆ. ಇದು ಅತ್ಯುತ್ತಮ ನೈಸರ್ಗಿಕ ಶಕ್ತಿ ಬೂಸ್ಟರ್ ಆಗಿದೆ. ವಿಶೇಷವಾಗಿ ಚಳಿಗಾಲದಲ್ಲಿ ದೇಹಕ್ಕೆ ಹೆಚ್ಚಿನ ಉಷ್ಣತೆ ಮತ್ತು ಶಕ್ತಿಯ ಅಗತ್ಯವಿರುವಾಗ ಇದು ಔಷಧಿಯಂತೆ ಕೆಲಸ ಮಾಡುತ್ತದೆ.

ವಿನಾಶದ ಅಂಚಿನಲ್ಲಿ ಕಡಲಾಮೆಗಳು

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಇಂದಿನ ಪೀಳಿಗೆಯ ಎಷ್ಟೋ ಮಕ್ಕಳು ಆಮೆ ಎಂಬ ಪ್ರಾಣಿಯನ್ನು ನೋಡಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಇನ್ನು ಕೆಲವೇ ದಿನಗಳಲ್ಲಿ ಈ ಆಮೆಯೆಂಬ ಪ್ರಾಣಿ ವಿನಾಶದ ಅಂಚಿಗೆ ತೆರಳಲಿದೆ. ಮುಂದೊಂದು ದಿನ ಈ ಪ್ರಾಣಿಯನ್ನು ಕೇವಲ ಚಿತ್ರಗಳಿಂದ ಮಾತ್ರ ಗುರುತಿಸಬೇಕಾದ ಪರಿಸ್ಥಿತಿ ಬರಬಹುದು.

ಈ ಆಮೆ ಮುದ್ದು-ಮೊದ್ದು ಪ್ರಾಣಿ. ಜತೆಗೆ ಇದರಿಂದ ಯಾರಿಗೂ ಅಪಾಯವಿಲ್ಲ. ಇವು ಬೆನ್ನೆಲುಬನ್ನು ಹೊಂದಿದ್ದು ಗಟ್ಟಿಯಾದ ಚಿಪ್ಪಿನ ಹೊರಕವಚವನ್ನು ಹೊಂದಿವೆ. ಇದು ಬಹುಪಾಲು ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಒಂದು ತಂತ್ರಕ್ಕೆ ಸಹಕಾರಿಯಾಗಿದೆ. ಆಮೆಗಳನ್ನು ಪ್ರಮುಖವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅವೆಂದರೆ ಭೂಮಿಯ ಮೇಲೆ ವಾಸಿಸುವ ಆಮೆಗಳು ಮತ್ತು ಸಮುದ್ರಗಳಲ್ಲಿ ವಾಸಿಸುವ ಆಮೆಗಳು, ಆದರೆ ಹೆಚ್ಚಿನ ಆಮೆಗಳು ಸಮುದ್ರವಾಸಿಗಳು. ಬನ್ನಿ, ಇಂಥ ಅಪರೂಪದ ಕಡಲಾಮೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ.

- ಈ ಆಮೆಗಳು 'ಡೈನೋಸಾರ್' ಸಂತತಿಯ ಸಮಕಾಲೀನ ಪ್ರಾಣಿಗಳಾಗಿದ್ದು, 1500 ವರ್ಷಗಳ ಇತಿಹಾಸವನ್ನು ಹೊಂದಿವೆ.
- ಹೆಣ್ಣು ಆಮೆ ಒಂದು ಸಲಕ್ಕೆ ಅಬ್ಬಬ್ಬಾ ಎಂದರೆ 30 ಮೊಟ್ಟೆಗಳನ್ನಿಡುತ್ತದೆ. ಆದರೆ, ಆಮೆಗಳು ನೀರಿನಲ್ಲಿ ಮೊಟ್ಟೆಗಳನ್ನು ಇಡುವುದಿಲ್ಲ. ಸಾಮಾನ್ಯವಾಗಿ ಆಮೆ ರಾತ್ರಿ ಹೊತ್ತೇ ಮೊಟ್ಟೆ ಇಡುತ್ತದೆ. ಮೊಟ್ಟೆಗಳನ್ನು ಸಮುದ್ರದ ದಂಡೆಯ ಮರಳಿನಲ್ಲಿ ಇಟ್ಟ ನಂತರ ಮರಳಿನಿಂದ ಮತ್ತು ಇತರೆ ಸಾವಯವ ವಸ್ತುಗಳಿಂದ ಅದನ್ನು ಮುಚ್ಚಿಬಿಡುತ್ತದೆ. ಆಮೆ ಇಟ್ಟ ಮೊಟ್ಟೆಗಳು ಮರಿಯಾಗಿ ಹೊರಬರಲು ಕನಿಷ್ಠ ಆರು ದಿನದಿಂದ ಹಿಡಿದು ಗರಿಷ್ಠ 120 ದಿನಗಳು ಹಿಡಿಯುತ್ತವೆ. ಈ ಕಡಲಾಮೆಗಳ ಮೊಟ್ಟೆಗಳು ಇಂದಿಗೂ ಅನೇಕ ದೇಶಗಳಲ್ಲಿ ಅತ್ಯಂತ ರುಚಿಕರ ಖಾದ್ಯ! ಇದರಿಂದ ಇವುಗಳ ಲೂಟಿ ನಿರಂತರವಾಗಿ ನಡೆದಿದೆ.
- ಇವು ಚಿಕ್ಕ ಮರಿಗಳಾಗಿದ್ದಾಗ ಸಸ್ಯಾಹಾರಿಗಳಾಗಿದ್ದು ಪ್ರಾಯಕ್ಕೆ ಬಂದ ನಂತರ ಮಾಂಸಾಹಾರಿಗಳಾಗುತ್ತವೆ. ಇವುಗಳ ಆಹಾರವೆಂದರೆ ಹುಳು ಹುಪ್ಪಟೆ, ಲಾರ್ವಾ ಇತ್ಯಾದಿ.
- ಈ ಆಮೆಗಳ ಜೀವಿತಾವಧಿ ಸುಮಾರು ಮನುಷ್ಯನ ಜೀವಿತಾವಧಿಗೆ ಸರಿ ಹೊಂದುತ್ತದೆ. ಅಂದರೆ ಇವು ಸುಮಾರು 100 ರಿಂದ 150 ವರ್ಷ ಬದುಕಬಲ್ಲವು.
- ನೆಲದ ಮೇಲಿನ ಕೆಲವು ಬೃಹತ್ ಆಮೆಗಳು 300 ಕೆ.ಜಿ. ಇರುವುದೂ ಉಂಟು. ಇವುಗಳ ಚಲನೆ ಗಂಟೆಗೆ 0.27 ಕಿ.ಮೀ!
- ಆಮೆಗಳು ಇಟ್ಟ ಸುಮಾರು 1000 ಮೊಟ್ಟೆಗಳಲ್ಲಿ ಕೇವಲ ಒಂದು ಅಥವಾ ಎರಡು ಮಾತ್ರ ಮರಿಗಳಾಗಿ ಪ್ರಾಯದ ಹಂತವನ್ನು ತಲುಪುತ್ತವೆ. ಉಳಿದವು ಶಾರ್ಕ್, ಸಮುದ್ರ ಮೀನುಗಳಿಗೆ ಆಹಾರವಾಗಿ ಬಿಡುತ್ತವೆ.
- ಕಡಲಾಮೆಗಳು ಒಮ್ಮೆ ಹೊರಬಂದು ಗಾಳಿಯನ್ನು ಸೇವಿಸಿ ಬಿಟ್ಟರೆ ಸುಮಾರು ಐದು ಗಂಟೆಗಳ ಕಾಲ ಸಾಗರದಲ್ಲಿ ಸಂಚರಿಸಿಕೊಂಡು ಇರಬಲ್ಲವು !
- ಇವು ನೀರಿನಲ್ಲಿ 'ಡೈವಿಂಗ್' ಮಾಡುವಾಗ ತಮ್ಮ ಹೃದಯದ ಬಡಿತವನ್ನು ಸುಮಾರು ನಿಮಿಷಗಳ ಹಾಗೆಯೇ ಹಿಡಿದಿಟ್ಟುಕೊಳ್ಳಬಲ್ಲವು. ಜತೆಗೆ ಸಾಗರದಲ್ಲಿ ಸಾವಿರಾರು ಕಿ.ಮೀ ದೂರ ವಿಹಾರ ನಡೆಸಬಲ್ಲವು. ಹೆಣ್ಣು ಕಡಲಾಮೆಗಳು ಸಾವಿರಾರು ಮೈಲಿಗಳವರೆಗೆ ತಮ್ಮ ವಿನೋದ-ವಿಹಾರಗಳನ್ನು ನಡೆಸಿ ಕೊನೆಗೆ ತಮ್ಮ ಸ್ವಸ್ಥಾನ ತಲುಪಿ ಅಲ್ಲಿ ಮೊಟ್ಟೆಗಳನ್ನುಇಡುತ್ತವೆ.

ವಿನಾಶದ ಅಂಚಿನಲ್ಲಿ **ಕಡಲಾಮೆಗಳು**

ಪುಟ 11

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಸೋಮವಾರ
24 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ದುರ್ಯೋಧನನ ಅಂತಕರಣ ಶುದ್ಧಿ

ಒಂದೊಳ್ಳೆ ಮಾತು

ಪುಟ 11

ಬಿ ಪಾಸಿಟಿವ್

ಅವರಿವರ ಚಿಂತೆ ಬಿಡಿ!

ನಮ್ಮ ಜೀವನವೇ ಹಾಗೇ ಮತ್ತೊಬ್ಬರು ಏನು ಅಂದುಕೊಳ್ಳುತ್ತಾರೊ ಅಥವಾ ಏನು ಅಂದು ಬಿಡುತ್ತಾರೆ ಎನ್ನುವ ಎರಡು ಯೋಚನೆಯೊಂದಿಗೆ ಪ್ರತಿ ಕೆಲಸವನ್ನೊ, ಪ್ರಯತ್ನವನ್ನೊ ಮಾಡಲು ಹಿಂದೇಟು ಹಾಕುತ್ತೇವೆ. ಯಾವುದೇ ಒಳ್ಳೆಯ ಕೆಲಸವನ್ನಾಗಲಿ ಪ್ರಯತ್ನಿಸುವ ಮುನ್ನ ಅದರಿಂದ ನಮ್ಮ ಒಳಿತಿಗೆ ಹಾಗೂ ಉನ್ನತಿಗೆ ಯೋಗ್ಯವಾಗಿದ್ದರೆ ಅದನ್ನ ಕೈಗೂಡಿಸುವುದರಲ್ಲಿ ಯಾವುದೇ ನಕಾರಾತ್ಮಕ ಚಿಂತನೆ ಬರಬಾರದು. ಎಲ್ಲರ ಅಭಿಪ್ರಾಯಗಳನ್ನ ಲೆಕ್ಕ ಹಾಕುತ್ತ ಕುಳಿತರೆ ನಮ್ಮ ಹಸಿವ ತುಂಬುವುದೇ ಕಷ್ಟವಾಗುತ್ತದೆ. ಪ್ರಯತ್ನದಲ್ಲಾಗಲಿ, ಕೆಲಸದಲ್ಲಾಗಲಿ ಕಿರಿದೆಂಬ ಕೀಳರಿಮೆ ಇರಲೇ ಬಾರದು.

ನಮ್ಮ ಕೆಲಸ ಎಂಥದ್ದೇ ಆಗಿರಲಿ ಅದನ್ನು ಗೌರವಿಸಬೇಕು. ಮತ್ತೊಬ್ಬರು ನನ್ನ ಕೆಲಸವನ್ನ ನೋಡಿ ಏನೆಂದಾರೋ ಎಂಬುದು ಅವಶ್ಯವಲ್ಲ. ಪ್ರಯತ್ನದಲ್ಲಿ ಸೋತಾಗ ಕೂಡ ಮನಸ್ಥಿತಿ ಕುಗ್ಗಬಾರದು. ಏಕೆಂದರೆ ಎಲ್ಲರೂ ಗೆದ್ದವರನ್ನಷ್ಟೆ ಹೊಗಳುವುದು ಹಾಗೂ ಗೆದ್ದವರ ಮಾತಿಗಷ್ಟೆ ಕಿವಿಗೊಡುತ್ತಾರೆ. ಅಲ್ಲಿ ಅವರಿಂದ ಉಪಯೋಗವೆಂಬ ಮನಸ್ಥಿತಿ ಇರುತ್ತದೆ. ಸೋಲು ಎಂಬುದು ಜೀವನದಲ್ಲಿ ತುಂಬಾ ಪ್ರಮುಖವಾದದ್ದು. ಕಾರಣವೆಂದರೆ ಆವಾಗಲೇ ನಮ್ಮ ಸುತ್ತ ನೆರೆದಿರುವ ಬಂಧನಗಳ ಬಿರುಸು ಮನಗಾಣುವುದು. ಸೋತಾಗ ಮೊದಲು ನಮ್ಮ ಸೋಲಿಗೆ ಕಾರಣಗಳೇನು ಎಂದು ಮನಗಾಣಬೇಕು, ಮತ್ತೆ ಅವುಗಳು ನಮ್ಮನ್ನ ಎಡವದಂತೆ ಪ್ರಯತ್ನಿಸಬೇಕು. ಸೋತಾಗ ಏಕಾಂಗಿತನವು ಕಾಡುತ್ತದೆ. ಆ ಸಮಯ ನಮಗೆ ಬದುಕಿನ ಯಾನಕೆ ಇಂಧನವಿದ್ದಂತೆ, ಎಲ್ಲದರ ಮೌಲ್ಯವನ್ನು ಅದು ತಿಳಿಸುತ್ತದೆ. ಏಕಾಂಗಿತನವು ಕಾಡತೊಡಗಿದಾಗ ಒಂದೊಳ್ಳೆ ಸ್ಪೂರ್ತಿದಾಯಕ ಪುಸ್ತಕದ ಮೊರೆ ಹೋದರೆ ನಮ್ಮ ಮನದ ಚೈತನ್ಯ ಹಿಮ್ಮಡಿಗೊಳ್ಳುತ್ತದೆ. ಜೀವನದಲ್ಲಿ ಎಂತಹ ಕೆಟ್ಟ ಪರಿಸ್ಥಿತಿ ಬಂದರು ಧೃತಿಗೆಡದೆ ನಮ್ಮತನವನ್ನ ಬಿಟ್ಟುಕೊಡದೆ ಪ್ರಯತ್ನಿಸಿದರೆ ಎಲ್ಲವೂ ನಮ್ಮ ಪಾಲಿಗೆ ದಕ್ಕಿಯೇ ತೀರುತ್ತವೆ.

● **ಮಂಜೇಶ್ ದೇವಗಲ್ಲಿ**

ಲವ್ಎವೆರಿ ಬಾಡಿ

ತೊದಲುವಿಕೆ ನಮ್ಮ ಆತಂಕದ ಒಂದು ವ್ಯಕ್ತತೆಯೇ ವಿನಃ ಇದು ರೋಗವಲ್ಲ, ಗಾಬರಿ ಅಥವಾ ಅಂಜಿಕೆಯಾದಾಗ ಅದನ್ನು ವ್ಯಕ್ತಪಡಿಸದಿದ್ದಾಗ, ಆಗ ನಮ್ಮ ಆತಂಕ ಹಾಗೂ ದುಗುಡಗಳು ನಡುಕ, ತಲೆನೋವು, ವಿಸರ್ಜನೆ, ಸ್ನಾಯುಸೆಳೆತ ಹಾಗೂ ಇತರೆ ಅಂಗಾಂಗಗಳ ಪ್ರತಿಸ್ಪಂದನದ ಮೂಲಕವೂ ವ್ಯಕ್ತವಾಗುತ್ತದೆ. ಅದು ಗಂಟಲಿನ ಸ್ನಾಯುಗಳ ಮೂಲಕ ಪ್ರಕಟವಾದಾಗ ಅದನ್ನೇ ನಾವು ಗುಕ್ಕು ಅಥವಾ ಬಿಕ್ಕುವಿಕೆ ಅಥವಾ ತೊದಲುವಿಕೆ ಎಂದು ಕರೆಯುತ್ತೇವೆ. ಇದು ಹಲವಾರು ರೀತಿಯಲ್ಲಿ ಪ್ರಕಟವಾಗುತ್ತದೆ. ಮಾತು ಪ್ರಾರಂಭಿಸುವಾಗ ತೊಡಕಾಗುವುದು, ಸಂಭಾಷಿಸುವಾಗ ಮಧ್ಯೆ ಮಧ್ಯೆ ಉಚ್ಚಾರಣೆಗೆ ತೊಡಕಾಗುವುದು,ಕೆಲವೊಂದು ಕಠಿಣ ಶಬ್ದಗಳ ಉಚ್ಚಾರಣೆಗೆ ತೊಂದರೆಯಾಗುವುದು, ಸಂಭಾಷಣೆಯ ಗತಿಯನ್ನು ಮುಂದುವರಿಸಲು ತೊಡಕಾಗುವುದು ಹೀಗೆ ವಿವಿಧ ತೊದಲುವಿಕೆಯಿಂದಾಗಿ ವ್ಯಕ್ತಿ ನರಳಿ, ಖಿನ್ನತೆ ಅಥವಾ ಕೀಳರಿಮೆಯಿಂದ, ಚಿತ್ತಚಾಂಚಲತೆಯನ್ನು ಹೊಂದುತ್ತಾನೆ.

● **ದೇಹಾಭಿ'ಮಾಣಿ'**

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಟ್ರೆಕ್ಕಿಂಗ್ ಮಾಡ್ಬೇಡಿ, ಪ್ಲೀಸ್!



ಶ್ವೇತವರ್ಣ
● **ಶ್ವೇತಾ ಭಿಡೆ**

ಟ್ರೆಕ್ಕಿಂಗ್! ಈ ಪದ ಕೇಳಿದ ಕೂಡಲೇ ಏನೆಲ್ಲಾ ಮನಸ್ಸಿನಲ್ಲಿ ಹಾದು ಹೋಗುತ್ತದೆ ಹೇಳಿ? ವಿಶಾಲವಾದ ಬಯಲು, ಎತ್ತರವಾದ ಬೆಟ್ಟ, ಕಲ್ಲು ಮುಳ್ಳುಗಳ ಹಾದಿ, ಇದ್ದಕ್ಕಿದ್ದ ಹಾಗೆ ಎದುರಾಗುವ ಕಣಿವೆ, ಇಳಿಜಾರು, ಉಬ್ಬುಗಳು, ಮರಗಳು ಗಿಡಗಳು ಇನ್ನೂ ಮುಂತಾದವು. ಆದರೆ ಇತ್ತೀಚಿನ ದಿನಗಳಲ್ಲಿ ಚಾರಣದ ವ್ಯಾಪ್ತಿ ವಿಸ್ತಾರವಾಗಿದೆ. ಅದರ ಪರಿಧಿ ಇಷ್ಟೇ ಆಗಿ ಉಳಿದಿಲ್ಲ. ಕೈ ಬೆರಳ ತುದಿಯಲ್ಲಿ ಕಾಣುವ ಪ್ರಪಂಚ. ಕಣ್ಮನ ಸೆಳೆಯುವ ಥರಾವರಿ ಫೋಟೋಗಳು, ವಿಡಿಯೋಗಳು ಮತ್ತು ರೀಲ್ಸ್. ಪ್ರಕೃತಿಯ ಬಗ್ಗೆ ಸ್ವಲ್ಪವೇ ಆಸೆ, ಪ್ರೀತಿಯಿದ್ದವರು ಎದ್ದು ಹೊರಡದೆ ಇರಲು ಹೇಗೆ ಸಾಧ್ಯ? ಐಟಿ-ಬಿಟಿ ಎಂದೆಲ್ಲಾ ಕೆಲಸ ಮಾಡುವವರ ವೀಕೆಂಡ್, ಆಗಾಗ ಬರುವ ಲಾಂಗ್ ವೀಕೆಂಡ್, ಬಳಸದೇ ಉಳಿದ ರಜೆಗಳು ಎಲ್ಲವೂ ಸೇರಿ ಜನರು ಪ್ರಯಾಣಕ್ಕೆ ಹಿಂದು ಮುಂದು ನೋಡದೇ ಹೊರಡಲು ಅನುವಾಗುತ್ತಾರೆ. ಇನ್ನು ಕೈ ಅಳತೆಯಲ್ಲಿ ಕಾಣುವ ವಿವಿಧ ಪ್ಯಾಕೇಜ್‌ಗಳು ಚಾರಣಿಗರ ಕೆಲಸವನ್ನು ಸಲೀಸು ಮಾಡುತ್ತವೆ. ಹಾಂ. ಹಾಗೆಂದು ನೀವೂ ಚಾರಣಕ್ಕೆ ಹೊರಟು ನಿಂತಿದ್ದೀರಾ? ಅದಕ್ಕೂ ಮೊದಲು ಮುಖ್ಯವಾದ ಕೆಲವು ವಿಷಯಗಳು ಇಲ್ಲಿವೆ.

ಟ್ರೆಕ್ಕಿಂಗ್ ಎನ್ನುವುದು ಯಾತ್ರಾ ಸ್ಥಳವಲ್ಲ

ಲಾಂಗ್ ವೀಕ್ ಎಂಡ್ ಸಮಯದಲ್ಲಂತೂ ಇನ್ಸ್ಟಾ ತುಂಬಾ ಆಫರ್‌ಗಳ ಹಾವಳಿ. ಅತೀ ಕಡಿಮೆ ಬೆಲೆಯಲ್ಲಿ ಬೇರೆ ಬೇರೆ ಜಾಗಗಳಿಗೆ ಕರೆದುಕೊಂಡು ಹೋಗುವ ಪ್ಲಾನ್ ಜನರನ್ನು ಆಕರ್ಷಿಸುವುದು ಸುಳ್ಳಲ್ಲ. ಅದೂ ಅಲ್ಲದೆ ಎಲ್ಲಿಗಾದರೂ ಹೋಗೋಣ ಎನ್ನುವ ಆಸೆ ಇರುವವರಿಗಂತೂ ಇದು ಹಬ್ಬವೇ! ಸೋಮವಾರ ಬೆಳಗ್ಗೆ ಸೋಶಿಯಲ್ ಮೀಡಿಯಾದಲ್ಲೆಲ್ಲಾ ಅದೇ ಸುದ್ದಿ , ವಿಡಿಯೋಗಳು. ಇತ್ತಿಚೆಗಷ್ಟೇ ಎತ್ತಿನಭುಜ ಎಂಬಲ್ಲಿ, ಗಿಜಿಗಿಜಿ ಎನ್ನುವ ಜನ ಬಂದಿದ್ದು ಎಲ್ಲಿಗೆ, ಹೋಗುತ್ತಿದ್ದದ್ದು ಎಲ್ಲಿಗೆ ಎಂದೂ ತಿಳಿಯದವರಂತೆ ನುಗ್ಗುತ್ತಿದ್ದ ವಿಡಿಯೋ ಗಾಬರಿ ಉಂಟುಮಾಡುವ ಹಾಗಿತ್ತು. ಹಾಗೆಯೇ ಕುಮಾರ ಪರ್ವತದ ಬಳಿ ಹೀಗೆಯೇ ಜನ ಸಮೂಹ ತುಂಬಿ ಆದ ಅನಾಹುತವನ್ನು ನಾವಿಲ್ಲಿ ನೆನೆಯಬಹುದು. ಸುಮ್ಮನೇ ಎಲ್ಲೂ ಚೆನ್ನಾಗಿದೆ ಎಂದುಕೊಂಡು ಹೇಗ್ಹೇಗೋ ಹೋಗುವ ಪ್ರಯತ್ನವನ್ನು ಕೈಬಿಡಿ.

ಕಣ್ಣಿಗೆ ಕಂಡದ್ದು ಸತ್ಯವಲ್ಲ!

ಈಗಿನ ಹೈಫೈ ಜಮಾನಾದಲ್ಲಿ ವೈಭವೀಕರಿಸಿದ ಅನೇಕ ದೃಶ್ಯಗಳು ಸಿಗುತ್ತವೆ. ಕ್ಯಾಮರಾ ಬಳಸುವ ಚತುರತೆ, ಬರೀ ಮೊಬೈಲ್ ಬಳಸಿಯೇ ವಾಹ್ ಎನ್ನಿಸಬಹುದಾದ ವಿಡಿಯೋಗಳು, ಫೋಟೋಗಳು ಚಿತ್ತಾಕರ್ಷಕವಾಗಿರುವುದು ಸುಳ್ಳಲ್ಲ. ಅದಕ್ಕೂ ಮೀರಿ ಡ್ರೋನ್ ನಂತಹ ಉಪಕರಣಗಳನ್ನು ಬಳಸಿ ತೆಗೆದ ವಿಡಿಯೋಗಳಂತೂ ಉತ್ಕೃಷ್ಟ ಎನಿಸುತ್ತದೆ. ಆದರೆ ಅಲ್ಲಿನ ವಸ್ತುಸ್ಥಿತಿ ಅದಕ್ಕಿಂತಾ ಭಿನ್ನವಾಗಿರುತ್ತದೆ. ಹಾಗಾಗಿ ಸರಿಯಾದ ಮಾಹಿತಿ ಇಲ್ಲದೇ ಏನೇನೋ ನಿರೀಕ್ಷೆಗಳನ್ನು ಇಟ್ಟುಕೊಂಡು ಹೋಗುವ ಬದಲು ಅದಕ್ಕೂ ಮೊದಲು ಸಾಮಾನ್ಯ ಮಾಹಿತಿಗಳನ್ನು ಕಲೆಹಾಕಿ.

ರೆಕ್ಕಿ ಮಾಡದ ಟ್ರೆಕ್ ಅಪಾಯಕ್ಕೆ ಆಹ್ವಾನ

ಕೆಲವೊಮ್ಮೆ ಯಾರದ್ದೋ ಮಾತು ಕೇಳಿ ಎಲ್ಲಿಗೋ ಹೋಗೋಣ ಎಂದು ಸಿದ್ಧತೆ ಮಾಡಿಕೊಳ್ಳುತ್ತೇವೆ. ಅಲ್ಲಿಗೆ ತಲುಪುವ ಮಾಹಿತಿ ಬಿಟ್ಟು ಸರಿಯಾದ ಮಾಹಿತಿ ನಿಮಗೆ ಇಲ್ಲದಿದ್ದರೂ ಹೇಳಿದವರ ಮಾತಿನ ಅಂದಾಜಿನ ಲೆಕ್ಕ ಹಾಕಿಕೊಂಡು ಹೋರಾಡುತ್ತೇವೆ. ಮುಂದೆ? ಅಲ್ಲಿನ ದಾರಿ, ಎಷ್ಟು ಪ್ರಮಾಣದಲ್ಲಿ ಅದನ್ನು ಹತ್ತಿ ಇಳಿಯಬಹುದು, ಮಕ್ಕಳಿಗೆ ಸಾಧ್ಯವೇ ಎಂದೆಲ್ಲಾ ಗೊತ್ತೇ ಇಲ್ಲದೆ ಸುಮ್ಮನೇ ರಿಸ್ಕ್ ತೆಗೆದುಕೊಳ್ಳುವುದು ಖಂಡಿತಾ ಒಳ್ಳೆಯದಲ್ಲ.

ಉಡುಪಿನ ಬಗ್ಗೆ ಉಡಾಫೆ ಬೇಡ

ಎಷ್ಟು ಎತ್ತರ ಹತ್ತಬೇಕಾಗುತ್ತದೆ ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಸಾದಾ ಚಪ್ಪಲಿ, ಚಡ್ಡಿ, ಜೀನ್ಸ್, ಫ್ಯಾಷನೇಬಲ್ ಮತ್ತು ಫೋಟೋಜೆನಿಕ್ ಇರುವ ಬಟ್ಟೆಗಳನ್ನು ಹಾಕಿಕೊಂಡು ಹೋಗಬೇಡಿ. ಟ್ರೆಕ್ಕಿಂಗ್‌ಗೆ ಎಂದೇ ಸಿಗುವ ಪ್ಯಾಂಟ್, ಶೂಸ್, ಮತ್ತು ಬೇಗ ಒಣಗುವ ಟೀ ಶರ್ಟ್, ಮಳೆ ಬಂದರೆ ಬೇಕಾಗುವ ರೈನ್ ಕೋಟ್, ಮತ್ತು ಟ್ರೆಕ್ಕಿಂಗ್ ಗೇರ್ಸ್ ಇಲ್ಲದೆ ಟ್ರೆಕ್ಕಿಂಗ್ ಮಾಡಬೇಡಿ. ಟ್ರೆಕ್ಕಿಂಗ್ ಪೋಲ್ ಕೂಡ ಮಿಸ್ ಮಾಡಬೇಡಿ.

ಮದ್ಯಪಾನ, ಮೋಜು ಮಸ್ತಿ, ನೋ..ನೋ...!

ಅನೇಕ ಯುವಕ ಯುವತಿಯ ಪ್ರಕಾರ ಅದೊಂದು ಮಸ್ತಿ. ಹಿಂದಿನ ದಿನ ಅಲ್ಲೆಲ್ಲೋ ಉಳ್ಕೊಂಡು, ರಾತ್ರಿ ಇಡೀ ಪಾರ್ಟಿ ಮಾಡಿ ಮಾರನೇ ದಿನ ಟ್ರೆಕ್ಕಿಂಗ್ ಮಾಡಿದ್ರಾಯ್ತು ಎನ್ನುವ ಭಾವನೆ. ಎಲ್ಲರೂ ಅಂತಹವರಲ್ಲವಾದರೂ, ಇಂಥವರೂ ಇದ್ದಾರೆ. ಇನ್ನೂ ಕೆಲವರು ಮದ್ಯಪಾನದ ಬಾಟಲಿಗಳನ್ನು ಮೇಲೆ ತೆಗೆದುಕೊಂಡು ಅಲ್ಲೇ ಪಾರ್ಟಿ ಮಾಡುವ ಇರಾದೆ ಹೊಂದಿರುತ್ತಾರೆ. ದೈಹಿಕವಾಗಿ ಫಿಟ್ ಇದ್ದರಷ್ಟೇ ಟ್ರೆಕ್ಕಿಂಗ್ ಒಳ್ಳೆಯದು. ಮದ್ಯಪಾನದಿಂದ ದೇಹ ನಿರ್ಜಲೀಕರಣವಾಗಿ ಸಮಸ್ಯೆಯಾಗುತ್ತದೆ. ಧೂಮಪಾನ ಅತಿಯಾಗಿ ಮಾಡುವವರಿಗೂ ಉಸಿರಾಟದ ಸಮಸ್ಯೆಯಾಗಬಹುದು. ಕೆಲವರಂತೂ ದಾರಿ ತುಂಬಾ ಚಾಕೊಲೇಟ್ ಸಿಪ್ಪೆಗಳು, ಜ್ಯೂಸ್ ಬಾಟಲಿಗಳು, ಪ್ಲಾಸ್ಟಿಕ್ ಡಬ್ಬಗಳು ಎಲ್ಲವನ್ನೂ ಎಲ್ಲೆಂದರಲ್ಲಿ ಎಸೆದು ಜಾಗವನ್ನು ಗೊಬ್ಬರದಗುಂಡಿ ಮಾಡಿ ಹೋಗುತ್ತಾರೆ. ಪರಿಸರ ಶುಚಿಯಾಗಿಡುವುದು ನಮ್ಮ ಆದ್ಯ ಕರ್ತವ್ಯ.

ಅರಣ್ಯ ಇಲಾಖೆಯ ಒಪ್ಪಿಗೆ ತೆಗೆದುಕೊಳ್ಳಿ

ಗೊತ್ತೇ ಇಲ್ಲದ ಜಾಗಕ್ಕೆ ಸಣ್ಣ ಗುಂಪು ಅಥವಾ ಒಬ್ಬರೇ ಹೋಗುವುದು ಅಪಾಯಕ್ಕೆ ನೀವೇ ಆಹ್ವಾನ ಕೊಟ್ಟಹಾಗೆ. ನೀವು ಹೊರಡುವ ಮೊದಲು ಆನ್‌ಲೈನ್ ಬುಕಿಂಗ್ ಅಥವಾ ಅಲ್ಲಿಯೇ ಆಫ್‌ಲೈನ್ ಟಿಕೆಟ್ ಪಡೆದುಕೊಳ್ಳಿ. ಅಲ್ಲಿ ಗಾರ್ಡ್ಸ್ ಮತ್ತು ಸೆಕ್ಯುರಿಟಿಯ ಸಮಸ್ಯೆ ಬರುವುದಿಲ್ಲ.

ಫಿಟ್ನೆಸ್

ಟ್ರೆಕ್ಕಿಂಗ್ ಫಿಟ್ನೆಸ್ ಬೇಡುತ್ತದೆ. ಹೆಚ್ಚು ದೂರವಿರುವ, ಎತ್ತರದ ಜಾಗಗಳಿಗೆ ಹೋಗಲು ಫಿಟ್ನೆಸ್ ಅತ್ಯಗತ್ಯ. ಇನ್ನು ಹಿಮಾಲಯದ ಸುತ್ತ ಮುತ್ತ, ಕಾಶ್ಮೀರ ಮುಂತಾದ ಬೇರೆ ಪ್ರದೇಶಗಳಲ್ಲಿ ನೀವು ಟ್ರೆಕ್ ಮಾಡುತ್ತೀರಾದರೆ ಅದಕ್ಕೆ ಪೂರ್ವ ತಯಾರಿ ಬೇಕು. ದಿನಕ್ಕೆ ನಿಗದಿತ ದೂರ ಕ್ರಮಿಸಲು ಇಲ್ಲಿ ನಿತ್ಯವೂ ರನ್ನಿಂಗ್, ಜಾಗಿಂಗ್ ಮತ್ತು ಸ್ಟ್ರೆಂಥ್ ವರ್ಕೌಟ್ ಕೂಡ ಮಾಡಿಕೊಂಡು ಫಿಟ್ ಇರಬೇಕು, ದೇಹ ಅತೀವ ಚಳಿ ತಡೆಯುವ, ಮತ್ತು ಅಲ್ಲಿನ ಹವಾಮಾನಕ್ಕೆ ಒಗ್ಗುವಷ್ಟು ಆರೋಗ್ಯ ಸರಿ ಇರಬೇಕು. ಎಲ್ಲರೂ ಮಾಡುವಂತೆ ಟ್ಯಾಗ್ ಅಡಿಯಲ್ಲಿ ಅನೇಕ ಜಾಗಗಳು ಒಗ್ಗಲಾರವು.

ನೀರು ಮತ್ತು ಆಹಾರ

ದೀರ್ಘಕಾಲದ ಚಟುವಟಿಕೆಯನ್ನು ಹೊಂದಿರುವ ಟ್ರೆಕ್ಕಿಂಗ್ ನೀವು ಮಾಡುವಾಗ ಸರಿಯಾದ ಪ್ರಮಾಣದಲ್ಲಿ ನೀರನ್ನು ಕುಡಿಯುವುದು ಅತ್ಯಗತ್ಯ. ಇಲ್ಲದೆ ಹೋದಲ್ಲಿ ಕ್ರಾಂಪ್ ಆಗುವ ಸಾಧ್ಯತೆ ಹೆಚ್ಚು. ಅಗತ್ಯಕ್ಕಿಂತ ಒಂದು ಬಾಟಲ್ ಹೆಚ್ಚೇ ನೀತು ತೆಗೆದುಕೊಂಡು ಹೋಗಿ. ಖಾರದ, ಮಸಾಲೆಯುಕ್ತ ಆಹಾರಗಳ ಬದಲು ಸರಳ ಆಹಾರ, ಹಣ್ಣುಗಳು, ಡ್ರೈ ಫ್ರೂಟ್ ಮುಂತಾದವುಗಳನ್ನು ತೆಗೆದುಕೊಂಡು ಹೋಗಬೇಕು. ಸುಸ್ತು ಕಡಿಮೆಯಾಗಲು ಎನರ್ಜಿ ಬಾರ್, ಚಿಕ್ಕಿ, ಮತ್ತು ನೀರಿನಲ್ಲಿ ಹಾಕಿ ಕುಡಿಯಲು ಒಆರ್‌ಎಸ್, ಸಾಲ್ಟ್ ಟ್ಯಾಬ್ಲೆಟ್ ಎಲ್ಲವೂ ಅಗತ್ಯ.

ಕೊನೆ ಮಾತು: ಬೆಟ್ಟದ ತುದಿಯ ಕಡೆ ಗುರಿ ನೆಟ್ಟು ನಡೆಯುವಾಗೆಲ್ಲಾ ಮನುಷ್ಯನಿಗೆ ಪ್ರಕೃತಿ ಎಷ್ಟು ದೊಡ್ಡದು ಮತ್ತು ನಾವೆಷ್ಟು ಚಿಕ್ಕವರು ಎನ್ನುವುದು ಅರ್ಥವಾಗಬೇಕು. ಬೆಟ್ಟ ಹತ್ತುವಾಗ ನಮ್ಮೊಳಗಿನ ಅಹಂ ಸತ್ತು, ವಿಶಾಲ ಆಕಾಶದಷ್ಟು ವಿಶಾಲ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು, ಮತ್ತು ಎಲ್ಲವನ್ನೂ ಕೊಟ್ಟ ಪ್ರಕೃತಿಯನ್ನು ಉಳಿಸಬೇಕು,

ಪಿನಾಕಿನಿ ನದಿಯ ಮೂಲ ಅರಸುತ್ತಾ!



ಇನಿ ದನಿ
● **ವಿನುತಾ ಕಿರಣ್**

ನದಿ ಮೂಲ, ಋಷಿ ಮೂಲ, ಸ್ತ್ರೀ ಮೂಲ ಹುಡುಕಬಾರದು ಎನ್ನುತ್ತಾರೆ. ಆದರೆ ನಾವು ಹುಟ್ಟಿ ಬೆಳೆದ ಊರಿನಲ್ಲಿ ಹರಿಯುತ್ತಿದ್ದ ನದಿ ಎಲ್ಲಿಂದ ಬರುತ್ತದೆ ಎಂಬ ಕುತೂಹಲ ಚಿಕ್ಕಂದಿನಿಂದಲೂ ಇತ್ತು. ಅದನ್ನು ಹುಡುಕಿ ಹೋದ ಕತೆ ಇದು.

ನಮ್ಮ ಗೌರಿಬಿದನೂರಿನಲ್ಲಿ ಹರಿಯುವ ನದಿಯ ಹೆಸರು ಉತ್ತರ ಪಿನಾಕಿನಿ. ಇದೇನು ಜೀವನದಿಯಲ್ಲ. ನಮ್ಮ ಗೌರಿಬಿದನೂರಿನಲ್ಲಿ ಹರಿಯುವ ನದಿಯ ಹೆಸರು ಉತ್ತರ ಪಿನಾಕಿನಿ. ಇದೇನು ಜೀವನದಿಯಲ್ಲ. ಮಳೆಗಾಲದಲ್ಲಿ ಮಾತ್ರ ಹರಿಯುವ ಈ ನದಿ, ಮಳೆಗಾಲದಿಂದ ಶುರುವಾಗಿ ದೀಪಾವಳಿಯ ವರೆಗೂ ಹರಿಯುತ್ತದೆ. ನಮ್ಮ ತಾಲೂಕಿನ ಜೀವಜಲವಿದು ಎಂದರೆ ತಪ್ಪಾಗಲಾರದು. ಇಡೀ ತಾಲೂಕಿನ ಜನ ಪಿನಾಕಿನಿ ನದಿಯ ನೀರಿನಲ್ಲಿ ಬೆಳೆದ ಬತ್ತ ರಾಗಿ, ಜೋಳ, ಹಣ್ಣು ತರಕಾರಿಗಳನ್ನು ತಿಂದು, ನದಿಯ ನೀರಿನಲ್ಲಿ ಆಟವಾಡಿಕೊಂಡು ಬೆಳೆದವರು. ಮಳೆಗಾಲದಲ್ಲಿ ಊರಿನ ಜನರೆಲ್ಲ ಸಂಭ್ರಮದಿಂದ ಕೆಂಪಗೆ ಉಕ್ಕಿ ಹರಿಯುವ ನದಿಯನ್ನು ನೋಡಲು ಹೊರಡುತ್ತಿದ್ದರು. ಮನೆಯ ಹಿರಿಯರು ನಮ್ಮನ್ನೆಲ್ಲ, ಮೊದಲ ಕೆಂಪು ನೀರು ಬಲಿ ತೆಗೆದುಕೊಳ್ಳುತ್ತದೆ ಎಂದು ನದಿಯ ಹತ್ತಿರ ಹೋಗಲು ಬಿಡುತ್ತಿರಲಿಲ್ಲ. ನಾವು ಬಲು ಖದೀಮರು. ಶಾಲೆಯ ಸಮೀಪವೇ ಹರಿಯುತ್ತಿದ್ದ ಪಿನಾಕಿನಿ ನದಿಯಲ್ಲಿ ಮನ ತೃಪ್ತಿಯಾಗಿ ಆಟವಾಡಿ, ಶಾಲೆಯ ಗಂಟೆ ಬಾರಿಸುವುದರ ಒಳಗೆ ಮರಳಿ ಬರುತ್ತಿದ್ದೆವು.

ಉತ್ತರ ಪಿನಾಕಿನಿ ನದಿಯು ನಂದಿ ಬೆಟ್ಟದಲ್ಲಿ ಹುಟ್ಟುತ್ತದೆ ಎಂದು ಚಿಕ್ಕಂದಿನಿಂದ ಕೇಳಿದ್ದೆವು. ಇತ್ತೀಚೆಗೆ ನಮ್ಮ ಪತಿಯ ಮಿತ್ರರಾದ ಹಾಗೂ ಶಾಸನ ತಜ್ಞರಾದ ಶ್ರೀಯುತ ಧನಪಾಲ್ ಅವರು, ಪಿನಾಕಿನಿ ನದಿಯ ಉಗಮ ಸ್ಥಾನ ನೋಡಿಕೊಂಡು ಬಂದು ಅದರ ಬಗ್ಗೆ ವಿವರಿಸಿದರು. ಅಂದಿನಿಂದ ಅಲ್ಲಿಗೆ ಹೋಗಬೇಕು, ನದಿ ಹುಟ್ಟುವ ಜಾಗ ನೋಡಬೇಕು ಬಾಲ್ಯದ ನೆನಪುಗಳನ್ನು ಮೆಲುಕು ಹಾಕಬೇಕು ಎಂದು ಕಾಯುತ್ತಿದ್ದೆ.

ಧನಪಾಲ್ ಅವರ ಮಾರ್ಗದರ್ಶನದಲ್ಲಿ ನಂದಿ ಬೆಟ್ಟದ ತಪ್ಪಲಿಗೆ ಹೊರಟಿದ್ದಾಯಿತು. ಗೌರಿಬಿದನೂರಿನಿಂದ ಚಿಕ್ಕಬಳ್ಳಾಪುರಕ್ಕೆ ಹೋಗುವ ದಾರಿಯಲ್ಲಿ ವೀರತಿಮ್ಮಮ್ಮನ ಕಣಿವೆ ಎಂಬ ಕಣಿವೆ ಸಿಗುತ್ತದೆ. ಈ ಕಣಿವೆಯಲ್ಲಿ ಸಾಗುತ್ತಿರುವಾಗ ಬಲಗಡೆಯಲ್ಲಿ ಆದಿಚುಂಚನಗಿರಿ ಮಠದವರು ಹಾಕಿರುವ ಒಂದು ಆರ್ಚ್ ಕಾಣಿಸುತ್ತದೆ. ಅದರ ಒಳಗೆ ಒಂದು ಕಿ.ಮೀ ದೂರ ಹೋದರೆ ವಿಷ್ಣು ಗಿರಿ ಬೆಟ್ಟದ ಸಾಲಿನಲ್ಲಿ ಕೇತಭೈರೇಶ್ವರ ದೇವಸ್ಥಾನ ಸಿಗುತ್ತದೆ.

ಕಲ್ಯಾಣಿಯ ತುಂಬಾ ತಂಪಾದ ನೀರು

ಇದುವೇ ಪಿನಾಕಿನಿ ನದಿಯ ಉಗಮ ಸ್ಥಳ. ಸುತ್ತಲೂ ಬೆಟ್ಟಗಳು. ಮಧ್ಯದಲ್ಲಿ ದೇವಸ್ಥಾನ, ಅದರ ಮುಂದೆ ಒಂದು ದೊಡ್ಡ ಮರ ಹಾಗೂ ಒಂದು ಕಲ್ಯಾಣಿ. ನಾವು ಈ ನದಿ ಮೂಲವನ್ನು ಹುಡುಕಿ ಹೊರಟಿದ್ದು ಬಿರುಬೇಸಿಗೆಯಲ್ಲಿ. ಇಡೀ ರಾಜ್ಯದಲ್ಲಿ ರಣ ಬಿಸಿಲು. ಕೆರೆ ಬಾವಿಗಳೆಲ್ಲ ಬತ್ತಿ ಹೋಗಿ ನೀರಿಗೆ ಪರದಾಡುವ ಸಮಯದಲ್ಲಿ ನದಿ ಮೂಲವನ್ನು ಹುಡುಕಿ ಹೊರಟದ್ದ ನಮಗೆ ಅಲ್ಲಿ ನೀರಿರುವ ಬಗ್ಗೆ ಯಾವ ಸಣ್ಣ ಆಸೆಯೂ ಇರಲಿಲ್ಲ. ಆದರೆ ಬಿರುಬೇಸಿಗೆಯಲ್ಲಿ ಕಾದ ಹಂಚಿನಂತೆ ಸುಡುತ್ತಿರುವ ಈ ಬೆಟ್ಟಗಳ ಮಧ್ಯದಲ್ಲಿ, ಭೈರವೇಶ್ವರನ ದೇವಾಲಯದ ಮುಂದೆ ಕಲ್ಯಾಣಿಯ ತುಂಬಾ ತಂಪಾದ ನೀರು. ಅಲ್ಲೇ ಅರಳಿ ಮರದ ಬುಡದಿಂದ ಸಣ್ಣಗೆ ನೀರು ಜಿನುಗಿ, ಕಲ್ಯಾಣಿಯಲ್ಲಿ ಶೇಖರಗೊಳ್ಳುತ್ತಿದೆ. ಈ ಮರದ ಕೆಳಗಿನಿಂದ ಬರುವ ಈ ನೀರು ಎಲ್ಲಿಂದ ಬರುತ್ತದೆ ಎಂದು ಇದುವರೆಗೂ ಯಾರು ಕಂಡು



ಹಿಡಿಯಲು ಆಗಿಲ್ಲ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಕಾಲಭೈರವನು ಚತುರ್ಭುಜದಾರಿಯಾಗಿದ್ದು ಬಲಗೈಯಲ್ಲಿ ಗಂಟೆ ಮತ್ತು ತ್ರಿಶೂಲ, ಎಡಗೈಯಲ್ಲಿ ಡಮರುಗ ಮತ್ತು ಕಪಾಲವನ್ನು ಹಿಡಿದಿದ್ದಾನೆ. ಪೊದೆಗೂದಲಿನ ಈ ಭೈರವ ಕೌಪೀನದ ಹೊರತಾಗಿ ದಿಗಂಬರನಾಗಿದ್ದಾನೆ. ಶ್ವಾನವೂ ಸಹ ಕಾಣಸಿಗುತ್ತದೆ. ಇಲ್ಲಿ ಈ ದೇವರ ಜತೆ ವಿನಾಯಕನನ್ನು ಸಹ ಪ್ರತಿಷ್ಠಾಪನೆ ಮಾಡಲಾಗಿದೆ. ಮಾರ್ಕಂಡೇಯರ ತಂದೆ ಮೃಕಂಡು ಮುನಿಯ ಧ್ಯಾನಬಂಗಿಯ ಮೂರ್ತಿ ಯನ್ನು ಕೂಡ ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಉತ್ತರ ಪಿನಾಕಿನಿ ನದಿಯು ವಿಷ್ಣು ಗಿರಿಯಲ್ಲಿ ಉಗಮಿಸುತ್ತದೆ ಎಂದು ಹೇಳುವುದಿದ್ದರೂ ಗುಪ್ತಗಾಮಿನಿ ಯಾಗಿರುವ ಈ ಜಲಧಾರೆ ಇಲ್ಲಿನ ಕಲ್ಯಾಣಿಯಲ್ಲಿ ಕಾಣಿಸಿಕೊಳ್ಳುತ್ತಾಳೆ ಎಂಬ ಪ್ರತೀತಿ ಇದೆ. ಇಲ್ಲೇ ದೇವಾಲಯದ ಆವರಣದಲ್ಲಿ ಒಂದು ಆತ್ಮ ಬಲಿದಾನದ ವೀರಗಲ್ಲು ಸಹ ಇದೆ. ಈ ದೇವಸ್ಥಾನ ಮತ್ತು ವೀರಗಲ್ಲು ಒಂದು ಸಾವಿರ ವರುಷ ಹಳೆಯದು ಎಂದು ಧನಪಾಲ್ ಅವರು ತಿಳಿಸಿದರು.

ಪಿನಾಕಿನಿಯ ಉಗಮ ಸ್ಥಳ

ಇದನ್ನೆಲ್ಲಾ ನೋಡಿದ ನಂತರ ನಾವು ಪಕ್ಕದಲ್ಲಿ ಇದ್ದ ವಿಷ್ಣುಗಿರಿ ಬೆಟ್ಟದ ಸಾಲಿಗೆ ಹೋದೆವು. ಈ ಬೇಸಿಗೆಯಲ್ಲಿ ಸಹ ದಾರಿಯುದ್ದಕ್ಕೂ ನೀರು ಜಿನುಗುತ್ತಿತ್ತು. ಸ್ವಲ್ಪ ದೂರ ನಡೆದು ಹೋಗುವಷ್ಟರಲ್ಲಿ ಪಿನಾಕಿನಿ ನದಿಯ ಉಗಮ ಸ್ಥಳ ಕಾಣಿಸಿತು. ಈ ಬೇಸಿಗೆಯಲ್ಲಿ ಸಹ ಅಲ್ಲಿ ಕೈಗೆಟುಕುವಷ್ಟು ಎತ್ತರದಲ್ಲಿ ಶುಭ್ರವಾದ ನೀರು. ಉತ್ತರಕ್ಕೆ ಹರಿಯುವ ನದಿಯನ್ನು ಉತ್ತರ ಪಿನಾಕಿನಿ ಎಂದು ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಇದಕ್ಕೆ ಪೆನ್ನಾರ್ ನದಿ ಎನ್ನುತ್ತಾರೆ. ನಂದಿ ಬೆಟ್ಟದ ತಪ್ಪಲಲ್ಲಿ ಹುಟ್ಟಿ ಗೌರಿಬಿದನೂರು, ವಿದುರಾಶ್ವತ್ಥದ ಮಾರ್ಗವಾಗಿ ಹರಿದು ಪರಿಗೀ ಎಂಬಲ್ಲಿ ಆಂಧ್ರಪ್ರದೇಶವನ್ನು ತಲುಪುತ್ತದೆ. ಅಲ್ಲಿಂದ ಅನಂತಪುರ, ಕಡಪ ಜಿಲ್ಲೆ ಮಾರ್ಗವಾಗಿ ನೆಲ್ಲೂರಿನಲ್ಲಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಪಿನಾಕಿನಿಯು ಒಟ್ಟು 597 ಕಿ.ಮೀ ಹರಿಯುತ್ತದೆ. ಈ ನದಿಯ ನೀರಿನಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ಸೇರಿ 69 ಸಾವಿರ ಎಕರೆಯಲ್ಲಿ ಬೆಳೆಯನ್ನು ಬೆಳೆಯುತ್ತಾರೆ.

ಒಂದು ನದಿಯ ಹಿಂದೆ ಎಷ್ಟೆಲ್ಲಾ ಕತೆಗಳು ಇರುತ್ತದೆ ಎಂಬ ವಿಷಯದಿಂದ ಹಿಡಿದು, ಬಾಲ್ಯದ ನೆನಪುಗಳನ್ನೆಲ್ಲ ಬಾವಿಯ ಪಕ್ಕದಲ್ಲಿ ಕುಳಿತು ಮೆಲುಕು ಹಾಕಿದೆವು. ಬಾವಿಯಲ್ಲಿದ್ದ ಶುಭ್ರವಾದ ನೀರನ್ನು ಮತ್ತೆ ಮತ್ತೆ ಕುಡಿದು ತೃಪ್ತರಾಗಿ ಊರಿಗೆ ವಾಪಸ್ಸು ಮರಳಿದೆವು.

ನಿತ್ಯ ಬೆರೆಯುವವರ ಬಗ್ಗೆ ಇರಲಿ ಎಚ್ಚರ

ಜಗ ಹೃದಯ
● **ವಿರೇಶ್ ಎಸ್ ಅಬ್ಬಿಗೇರಿ, ನಾಗರಹಳ್ಳಿ**

ನೀವು ಒಳ್ಳೆಯವರಾಗಿರಲಿ ಅಥವಾ ಕೆಟ್ಟವರಾಗಿರಲಿ, ನೀವು ಯಾರ ಜತೆ ಬೆರೆಯುತ್ತಿದ್ದೀರಿ ಎನ್ನುವುದು ತುಂಬಾ ಮುಖ್ಯ. ನಿಮ್ಮ ಜತೆಗಿರುವವರು ನಿಮ್ಮನ್ನು ಬಹುವಾಗಿ ಪ್ರಭಾವಿಸುತ್ತಾರೆ. ನೀವು ಒಳ್ಳೆಯವರಾಗಿರಲಿ, ಕೆಟ್ಟವರಾಗಿರಲಿ, ಯಶಸ್ವಿಯಾಗಿರಲಿ, ಅದರಲ್ಲಿ ನಿಮ್ಮ ಶ್ರಮ, ಬುದ್ಧಿವಂತಿಕೆ ಎಷ್ಟಿರುತ್ತದೆಯೋ ಅಷ್ಟೇ ಪಾಲು, ನೀವು ನಿತ್ಯ ಬೆರೆಯುವ ಪರಿಸರದ್ದೂ ಇರುತ್ತದೆ. ನಿಮ್ಮ ಮನೆಯ ವಾತಾವರಣ ಮಾತ್ರವಲ್ಲ ನಿಮ್ಮ ಸ್ನೇಹಿತರ ವಲಯವೂ ನಿಮ್ಮ ನಡವಳಿಕೆಯನ್ನು ರೂಪಿಸುತ್ತದೆ. ನಿಮ್ಮ ಸ್ನೇಹಿತರ ಬಗ್ಗೆ ಹೇಳು, ನಾನು ನಿನ್ನ ಬಗ್ಗೆ ಹೇಳುತ್ತೇನೆ ಎನ್ನುತ್ತಾನೆ ತತ್ವಜ್ಞಾನಿಯೊಬ್ಬ. ಮನೆ ಬಿಟ್ಟರೆ ನೀವು ಹೆಚ್ಚಿನ ಸಮಯ ನಿಮ್ಮ ಸ್ನೇಹಿತರೊಡನೆ ಕಳೆಯುತ್ತೀರಿ, ಆಗ ಗೊತ್ತೋ, ಗೊತ್ತಿಲ್ಲದೆಯೋ ನಿಮ್ಮ ಮೇಲೆ ನೀವು ನಿತ್ಯ ಬೆರೆಯುವ ಸ್ನೇಹಿತರ ವಲಯದ ಪ್ರಭಾವ ಹೆಚ್ಚಿರುತ್ತದೆ.

ಸಹವಾಸ ದೋಷ!

ನೀವು ಹೆಚ್ಚಾಗಿ ಸಮಯ ಕಳೆಯುವ, ನಿಮ್ಮ ಹತ್ತಿರದ 5 ಜನ ಸ್ನೇಹಿತರಂತೆ ಆಗುತ್ತೀರಿ ಎನ್ನುತ್ತಾನೆ ಪ್ರಸಿದ್ಧ ಲೇಖಕ ಜಿಮ್ ರಾನ್. ನಿಮಗೆ ಇಷ್ಟವಿದೆಯೋ ಇಲ್ಲವೋ, ಅವರ ಜತೆ ಹೆಚ್ಚು ಹೆಚ್ಚು ಸಮಯ ಕಳೆದಂತೆಲ್ಲಾ ನೀವು ಅವರಂತೆ ಬದಲಾಗಲು ಆರಂಭಿಸುತ್ತೀರಿ. ಕ್ರಮೇಣ ನಿಮ್ಮ ಆಸೆ, ಗುರಿ, ನಡವಳಿಕೆ, ಭಾಷೆ, ಎಲ್ಲದರಲ್ಲಿಯೂ ಅವರ ಪ್ರಭಾವ ಹೆಚ್ಚುತ್ತಾ ಹೋಗುತ್ತದೆ. ಕಾಲಾ ನಂತರದಲ್ಲಿ ನೀವೂ ಅವರಂತೆ ಆಗುತ್ತೀರಿ. ನಿಮ್ಮ ಸ್ನೇಹಿತರ ವಲಯದಲ್ಲಿ ಇರುವ ಹೆಚ್ಚು ಜನರು ಜೀವನದಲ್ಲಿ ಹತಾಶೆಗೊಂಡವರು, ನಿರಾಸೆ ಅನುಭವಿಸಿದವರು ಜೀವನದ ವಿವಿಧ ಹಂತಗಳಲ್ಲಿ ಸೋಲನ್ನು ಅನುಭವಿಸಿದವರೇ ಇದ್ದರೆ ಅವರು ವರ್ತನೆಗಳು ಪ್ರೇರಣೆಯಿಂದ ಕೂಡಿರಲಾರವು. ಅವರ ಮಾತು, ವರ್ತನೆ ಎಲ್ಲವೂ ಒಂದು ರೀತಿಯ ಸಿನಿಕತೆಯಿಂದ ತುಂಬಿರುತ್ತವೆ. ಏನು, ಮಾಡಿದರೂ ಈ ಜೀವನ ಇಷ್ಟೇ ಬಿಡು ಅನ್ನುವಂತಿರುತ್ತವೆ. ನೀವು ಹೆಚ್ಚು ಇವರ ಜತೆ ಬೆರೆತಂತೆಲ್ಲ ಅವರ ವರ್ತನೆಗಳು ನಿಮ್ಮನ್ನೂ ಆವರಿಸಿಕೊಳ್ಳುತ್ತವೆ.

ದುಷ್ಟರ ಕೂಟದಿಂದ ಹೊರಬನ್ನಿ

ಆದರೆ ಇದಕ್ಕೂ ಮೀರಿದ ಗುಂಪೊಂದು ಇರುತ್ತದೆ. ಆದರೆ ನಿಮ್ಮ ಸಂಗಡಿಗರು ಬರಿ ದುಷ್ಟ ಚಟಗಳಲ್ಲಿ ಬಿದ್ದಿರುವವರು, ಅಕ್ರಮ ಅನೈತಿಕ ಚಟುವಟಿಕೆಗಳಲ್ಲಿ ಭಾಗಿಯಾದವರಿದ್ದರೆ ಮಾತ್ರ ಅದು ಸಜ್ಜನರ ಸಂಗ ಖಂಡಿತ ಆಗಿರಲಿಕ್ಕೆ ಸಾಧ್ಯವಿಲ್ಲ. ದುಷ್ಟರ ಕೂಟ ಅಂದರೂ ತಪ್ಪಾಗಲಿಕ್ಕಿಲ್ಲ. ಅವರು ಎಂದಿಗೂ ಸಮಾಜಕ್ಕೆ ಮಾದರಿಯಾಗಲಾರರು. ಉದ್ದೇಶ

ಒಳ್ಳೆಯದಾಗಿರಲಿ ಅತವಾ ಕೆಟ್ಟದ್ದಾಗಿರಲಿ, ಇಂತಹ ಗುಣಗಳು ಎಂದಿಗೂ ಶೋಭೆಯಲ್ಲ. ಹಾಗಾಗಿ ನೀವೇನಾದರೂ ಒಂತಹ ಗುಂಪಿನಲ್ಲಿದ್ದರೆ ಶೀಘ್ರವೇ ಅದರಿಂದ ಹೊರಬರು ಪ್ರಯತ್ನಿಸಿ. ಯಾಕೆಂದರೆ ಒಂದಲ್ಲ ಒಂದು ದಿನ ನಿಮಗೂ ಕೂಡ ಅವರ ಸಂಗದಿಂದ ಅಪಾಯ ತಪ್ಪಿದ್ದಲ್ಲ. ಅದೇ ನಿಮ್ಮ ಸುತ್ತ ಮುತ್ತ ಸಾಧಕರು, ಜೀವನದಲ್ಲಿ ಏನನ್ನಾ ದರೂ ಸಾಧಿಸಿಯೇ ತೀರುತ್ತೇನೆ ಎನ್ನುವರು ಇದ್ದರೆ, ಅದರ ಹುರುಪೇ ಬೇರೆ. ನಿಮಗೇ ಗೊತ್ತಿಲ್ಲದೆ ನೀವು ಯಾವಾಗಲೂ ಚಟುವಟಿಕೆ ಯಿಂದಿರುತ್ತೀರಿ, ನಿಮಗೆ ಅರಿವಿಲ್ಲದೇ ನಿಮ್ಮಲ್ಲೊಂದು ಸಾಧಿಸುವ ಕಿಚ್ಚು ಹತ್ತಿಕೊಳ್ಳುತ್ತದೆ. ಕನಿಷ್ಠ ಪಕ್ಷ ನಿಮ್ಮ ಸ್ನೇಹಿತರ ಮಾತುಗಳನ್ನು ಕೇಳಿ ಯಾದರೂ ನೀವು ಸಾಧನೆಯ ದಾರಿ ಹಿಡಿಯುತ್ತೀರಿ. ಮನೆಯಿಂದ ಹೊರಗೆ ಕಾಲಿಡುವಾಗ ನಮ್ಮ ತಂದೆ ತಾಯಿಗಳು ನಾವು ಯಾರ ಜತೆ ಬೆರೆಯುತ್ತಿದ್ದೇವೆ, ಯಾರ ಜತೆ ತಿರುಗಾಡುತ್ತೇವೆ ಎನ್ನುವುದರ ಮೇಲೆ ಒಂದು ಕಣ್ಣಿಟ್ಟಿರುತ್ತಾರೆ. ನಮ್ಮ ಸ್ನೇಹಿತರ ಬಗ್ಗೆ, ಆಪ್ತರ ಬಗ್ಗೆ ಆಗಾಗ ವಿಚಾರಿಸುತ್ತಿರುತ್ತಾರೆ. ಸಮಾಜದಲ್ಲಿ ನಿತ್ಯ ನಡೆಯುವ ಘಟನೆಗಳು, ಬೆಳಕಿಗೆ ಬರುವ ಸುದ್ದಿಗಳನ್ನು ನೋಡಿದಾಗ ಅವರ ಅರಿವಿಗೆ ಬಂದಿರು ತ್ತದೆ, ಯಾವ ಘಟನೆಗಳಿಗೆ ಯಾವ ವಿಷಯಗಳು ಕಾರಣವೆಂದು. ಯಾಕೆಂದರೆ, ಹಿರಿಯರು ಹೇಳಿಲ್ಲವೇ, ಸಜ್ಜನರ ಸಂಗ ಹೆಜ್ಜೇನು ಸವಿದಂತೆ ಎಂದು?